| **ಮೋಡ್ಯೂಲ್ 1 ಪೀರಿಯಡ್ 6**<br>• ಪರಮಾಣುವಿನಲ್ಲಿ ಇಲೆಕ್ಟ್ರೋನುಗಳ ವಿವಿಧ ವಲಯಗಳಲ್ಲಿ/ ಶೆಲ್ಲುಗಳಲ್ಲಿ ಕ್ರಮೀಕರಿಸಲ್ಪಟ್ಟಿವೆ.<br>• ಶೆಲ್‌ಗಳಲ್ಲಿ s, p, d, f ಎಂಬೀ ಸಬ್‌ಶೆಲ್ಲುಗಳಿವೆ.<br>• ಶೆಲ್‌ಗಳಲ್ಲಿ ಅಡಕವಾಗಿರುವ ಸಬ್‌ಶೆಲ್‌ಗಳ ಸಂಖ್ಯೆಯು ಪ್ರತಿಯೊಂದು ಶೆಲ್‌ನ ಕ್ರಮ ಸಂಖ್ಯೆಗೆ ಸಮಾನವಾಗಿದೆ.<br>• ಇಲೆಕ್ಟ್ರಾನುಗಳು ಸಬ್‌ಶೆಲ್‌ಗಳಲ್ಲಿ ತುಂಬಲ್ಪಡುತ್ತವೆ.<br>• ನ್ಯೂಕ್ಲಿಯಸ್ಸಿನಿಂದ ದೂರ ಸರಿದಂತೆ ವಲಯಗಳಲ್ಲಿ ಮತ್ತು ಸಬ್‌ಶೆಲ್‌ಗಳಲ್ಲಿರುವ ಇಲೆಕ್ಟ್ರೋನುಗಳ ಚೈತನ್ಯದಲ್ಲಿ ಬದಲಾವಣೆ ಉಂಟಾಗುವುದು.<br>• ಪ್ರತಿಯೊಂದು ಆವೃತ್ತಿಯಲ್ಲೂ ಇರುವ ಮೂಲವಸ್ತು ಪರಮಾಣುವಿನ ಇಲೆಕ್ಟ್ರೋನುಗಳನ್ನು ಚೈತನ್ಯದ ಆರೋಹಣ ಕ್ರಮದಲ್ಲಿ ಸಬ್‌ಶೆಲ್‌ಗಳಲ್ಲಿ ತುಂಬಲ್ಪಡುತ್ತದೆ.<br>• ಪರಮಾಣು ಸಂಖ್ಯೆಯ ಆಧಾರದಲ್ಲಿ ಪ್ರತಿಯೊಂದು ಮೂಲವಸ್ತುವಿನಿಂದ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಲು ಸಾಧ್ಯವಾಗುವುದು. | • ಬೋರ್ ಮಾದರಿಯ ವಿಶ್ಲೇಷಣೆ ಐಸಿಟಿ, ಪಟ್ಟಿಯ ವಿಶ್ಲೇಷಣೆ, ವರ್ಕ್‌ಶೀಟ್ ಚರ್ಚೆ ಎಂಬಿವುಗಳನ್ನು ಅಳವಡಿಸಿಕೊಂಡು ಸಬ್‌ಶೆಲ್ಲುಗಳ ಕುರಿತಿರುವ ತಿಳುವಳಿಕೆಯನ್ನು ಗಳಿಸುವರು.<br>• ಪಟ್ಟಿಯ ವಿಶ್ಲೇಷಣೆ, ಪಟ್ಟಿಯ ಪೂರ್ತಿಗೊಳಿಸುವಿಕೆ, ಚರ್ಚೆ ಐಸಿಟಿ ಎಂಬಿವುಗಳ ಮೂಲಕ ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯುವರು.<br>• ಐ.ಸಿ.ಟಿ., ಪಟ್ಟಿಯನ್ನು ಪೂರ್ತಿಗೊಳಿಸುವಿಕೆ, ವರ್ಕ್‌ಶೀಟ್, ಚರ್ಚೆ ............... | • ಪರಮಾಣುವಿನಲ್ಲಿ ಇಲೆಕ್ಟ್ರೋನುಗಳು ಯಾವ ಯಾವ ಶೆಲ್ಲುಗಳಲ್ಲಿ ಕ್ರಮೀಕರಿಸಲ್ಪಟ್ಟಿವೆ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.<br>• ಪ್ರತಿಯೊಂದು ವಲಯಗಳಲ್ಲಿರುವ ಸಬ್‌ಶೆಲ್‌ಗಳು ಯಾವುದೆಂದು ಕಂಡುಹಿಡಿಯಲು ಸಾಧ್ಯವಾಗುವುದು.<br>• ಸಬ್‌ಶೆಲ್‌ಗಳ ಚೈತನ್ಯ ಕ್ರಮವನ್ನು ತಿಳಿದುಕೊಂಡು ಕ್ರಮೀಕರಿಸಲು ಸಾಧ್ಯವಾಗುವುದು.<br>• ಪ್ರತಿಯೊಂದು ಸಬ್‌ಶೆಲ್ಲುಗಳಲ್ಲೂ ಹಿಡಿಯಬಹುದಾದ ಇಲೆಕ್ಟ್ರೋನುಗಳ ಸಂಖ್ಯೆಯನ್ನು ಕಂಡುಹಿಡಿಯಲು ಸಾಧ್ಯವಾಗುವುದು.<br>• ಮೂಲವಸ್ತುಗಳ ಪರಮಾಣು ಸಂಖ್ಯೆಯ ಆಧಾರದಲ್ಲಿ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಲು ಸಾಧ್ಯವಾಗುವುದು. |

ಯೂನಿಟ್ ಫ್ರೇಂ | 10 ಪೀರಿಯಡ್

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯ | ಕಲಿಕೆಯ ಚಟುವಟಿಕೆ/ಕಲಿಕೆಯ ಸಾಧನೆಗಳು | ತಂತ್ರಗಳು |
|---|---|---|
| **ಮೊಡ್ಯೂಲ್ –2** **ಪೀರಿಯಡ್ 4**<br>• ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಬ್ಲೋಕ್, ಪಿರೇಡ್ ಗುಂಪಿನ ಸಂಖ್ಯೆ<br>• ಪರಮಾಣುವಿನ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಆವರ್ತಕ ಪಟ್ಟಿಯಲ್ಲಿ ಮೂಲವಸ್ತುಗಳನ್ನು s, p, d, f ಎಂಬೀ ಬ್ಲೋಕ್‌ಗಳಾಗಿ ವರ್ಗೀಕರಿಸಬಹುದು.<br>• ಕೊನೆಯ ಇಲೆಕ್ಟ್ರೋನು ತುಂಬಲ್ಪಡುವ ಸಬ್‌ಶೆಲ್‌ನ ಆಧಾರದಲ್ಲಿ ಬ್ಲೋಕ್ ನಿರ್ಣಯಿಸಲ್ಪಡುವುದು.<br>• ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ವಿಶ್ಲೇಷಿಸಿ ಗುಂಪಿನ ಸಂಖ್ಯೆ ಆವೃತ್ತಿ ಎಂಬಿವುಗಳನ್ನು ಕಂಡುಹಿಡಿಯಲು ಸಾಧ್ಯವಿದೆ.<br>• s, p ಬ್ಲೋಕ್ ಮೂಲವಸ್ತುಗಳು ಪ್ರತಿನಿಧೀಕರಿಸುವ ಮೂಲವಸ್ತುಗಳೆಂದು ತಿಳಿಯಲ್ಪಡುವುದು ಇವುಗಳು ಗುಂಪಿನಲ್ಲಿ ಸಾಮ್ಯವನ್ನು ತೋರಿಸುವುದು.<br>• d ಬ್ಲೋಕ್ ಮೂಲವಸ್ತುಗಳು ಮಧ್ಯಸ್ಥ ಮೂಲವಸ್ತುಗಳೆಂದು ಕರೆಯಲ್ಪಡುವುವು.<br>– ವಿಭಿನ್ನ ಉತ್ಕರ್ಷಣಾ ಸ್ಥಿತಿಯನ್ನು ಪ್ರದರ್ಶಿಸುವುದು.<br>– ಬಣ್ಣದ ಯೌಗಿಕಗಳನ್ನು ಉಂಟುಮಾಡುವುದು.<br>• f ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳು. | • ಆವರ್ತಕ ಪಟ್ಟಿಯನ್ನು ಉಪಯೋಗಿಸಿಕೊಂಡು ಚರ್ಚೆ, ಪಟ್ಟಿಯ ವಿಶ್ಲೇಷಣೆ<br>• ವರ್ಕ್‌ಶೀಟ್ ಐಸಿಟಿ ಆವರ್ತಕ ಪಟ್ಟಿಯನ್ನು ಪೂರ್ತಿಗೊಳಿಸುವುದು ಎಂಬಿವುಗಳಿಂದ ವಿವಿಧ ಬ್ಲೋಕ್‌ಗಳು, ಗುಂಪಿನ ಸಂಖ್ಯೆ ಆವೃತ್ತಿಯ ಸಂಖ್ಯೆಗಳನ್ನು ಗುರುತಿಸಿ ಕಂಡುಹಿಡಿಯುವರು.<br>• ಚರ್ಚೆ ಪಟ್ಟಿಯ ವಿಶ್ಲೇಷಣೆ ವರ್ಕ್‌ಶೀಟ್ ಎಂಬಿವುಗಳಿಂದ ಗುಂಪುಗಳಲ್ಲಿ ಪ್ರತಿನಿಧೀಕರಿಸುವ ಮೂಲವಸ್ತುಗಳ ಸಾಮ್ಯವನ್ನು ವಿವರಿಸುವರು.<br>• ಐಸಿಟಿ, ಚರ್ಚೆ, ಪ್ರಯೋಗಾಲಯದಲ್ಲಿರುವ ರಾಸಾಯನಿಕ ವಸ್ತುಗಳ ನಿರೀಕ್ಷಣೆ ಪಟ್ಟಿಯನ್ನು ಪೂರ್ತಿಗೊಳಿಸುವುದು.<br>• ಪಟ್ಟಿಯ ವಿಶ್ಲೇಷಣೆ, ಆವರ್ತಕ ಪಟ್ಟಿಯ ವಿಶ್ಲೇಷಣೆ | • ಮೂಲವಸ್ತುಗಳು ಒಳಗೊಂಡಿರುವ ಬ್ಲೋಕುಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.<br>• ಮೂಲವಸ್ತುಗಳ ಗುಂಪಿನ ಸಂಖ್ಯೆ ಆವೃತ್ತಿಯ ಸಂಖ್ಯೆ ಎಂಬಿವುಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.<br>• d ಬ್ಲೋಕ್ ಮೂಲವಸ್ತುಗಳ ಯೌಗಿಕಗಳಿಂದ ಅವುಗಳ ಸಂಯೋಜಕತೆ, ಉತ್ಕರ್ಷಣಾ ಸ್ಥಿತಿ, ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಎಂಬಿವುಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.<br>• f ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು. |

## ಪೂರ್ವ ಜ್ಞಾನ

- 8ನೇ ತರಗತಿಯಲ್ಲಿ ಪರಮಾಣು, ಅಣು ಎಂಬಿವುಗಳ ಕುರಿತು ತಿಳುವಳಿಕೆ ಗಳಿಸಿರುವರು.
- 9ನೇ ತರಗತಿಯಲ್ಲಿ ಪರಮಾಣುವಿನ ಮೂಲಭೂತ ಕಣಗಳು, ಪರಮಾಣು ರಚನೆ ಮೂಲವಸ್ತುಗಳ ವರ್ಗೀಕರಣದ ಪ್ರಾಧಾನ್ಯ, ವರ್ಗೀಕರಣದ ಪ್ರಯತ್ನಗಳು, ಆಧುನಿಕ ಆವರ್ತಕ ಪಟ್ಟಿ, ಗುಂಪು ಆವೃತ್ತಿ ಆವರ್ತನ ಸ್ವಭಾವ, ಇಲೆಕ್ಟ್ರೋನೆಗೆಟಿವಿಟಿ, ಅಯೋನೀಕರಣ ಚೈತನ್ಯ ಎಂಬಿವುಗಳ ಕುರಿತು ತಿಳುವಳಿಕೆಯನ್ನು ಗಳಿಸಿರುವರು.

## ಪ್ರಧಾನ ಚಟುವಟಿಕಾ ವಿಧಾನಗಳು

ಈ ಯೂನಿಟಿನಲ್ಲಿ ಪ್ರಯೋಗ ಚಟುವಟಿಕೆಗಳ ಸಾಧ್ಯತೆ ಕಡಿಮೆ. ಮಕ್ಕಳಿಗೆ ದ್ವಿಮಾನ ತಲದಲ್ಲಿರುವ ಪರಮಾಣು ಮಾದರಿಗಳು ಮತ್ತು ಶೆಲ್‌ಗಳ ಕುರಿತು ಕಲ್ಪನೆ ಇದೆ. ಇದರಿಂದ ತ್ರಿಮಾನ ತಲದಲ್ಲಿರುವ ಸಬ್‌ಶೆಲ್ ರೀತಿಗೆ ಮಗುವಿನ ಯೋಚನೆಯನ್ನು ಬದಲಾಯಿಸಬೇಕು. ಇದಕ್ಕಾಗಿ ಐಸಿಟಿಯನ್ನು ಸಾಕಷ್ಟು ಉಪಯೋಗಿಸಬೇಕು.

ಪಾಠಪುಸ್ತಕದ ಪಟ್ಟಿಯನ್ನೂ ಇದೇ ರೀತಿಯಲ್ಲಿರುವ ವಿವಿಧ ವರ್ಕ್‌ಶೀಟ್‌ಗಳನ್ನು ಗರಿಷ್ಠ ಬಳಸಿಕೊಂಡು ಮಕ್ಕಳಿಗೆ ಸ್ವಯಂ ತಿಳುವಳಿಕೆ ಗಳಿಸಲಿರುವ ಸಂದರ್ಭವನ್ನು ಒದಗಿಸುವ ರೀತಿಗಳು ಬಹಳ ಪ್ರಯೋಜನಕರವಾಗಬಹುದು.

## ಯೂನಿಟಿನ ಕಡೆಗೆ

### ಮೊಡ್ಯೂಲ್ – 1

ಶೆಲ್ ಎಂಬ ಕಲ್ಪನೆಯಿಂದ ಸಬ್‌ಶೆಲ್ ಎಂಬ ಕಲ್ಪನೆಗೆ ಮಗುವನ್ನು ತಲುಪಿಸುವುದು ಪ್ರಧಾನ ಉದ್ದೇಶ, ಇದಕ್ಕಾಗಿ ಪೂರ್ವಜ್ಞಾನವನ್ನೂ ಮಗು ಗಳಿಸಿದೆ ಎಂಬುದನ್ನು ದೃಢೀಕರಿಸಬೇಕು. ಪೂರ್ವಜ್ಞಾನ ಇಲ್ಲದಿದ್ದರೆ ಈ ಯೂನಿಟಿನ ಆಶಯಗಳನ್ನು ಮಗುವಿಗೆ ಗಳಿಸಲು ಅಸಾಧ್ಯ.

**ಪೂರ್ವಜ್ಞಾನವನ್ನು ಪರೀಕ್ಷಿಸಲಿರುವ ಕೆಲವು ವಿಧಾನಗಳು**

- ಪರಮಾಣು ಸಂಖ್ಯೆ 11 ಆಗಿರುವ ಮೂಲವಸ್ತುವಿನ ಹೆಸರೇನು?
- ಇದರ ವಲಯ ರೀತಿಯ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ.
- ಗುಂಪಿನ ಸಂಖ್ಯೆಯನ್ನು ಕಂಡುಹಿಡಿಯಿರಿ.
- ಈ ಮೂಲವಸ್ತುವನ್ನು ಯಾವ ಆವೃತ್ತಿಯಲ್ಲಿ ಕ್ರಮೀಕರಿಸಲಾಗಿದೆ.

ಇದೇ ರೀತಿಯ ವೈಯಕ್ತಿಕ ಚಟುವಟಿಕೆಗಳನ್ನು ನೀಡುವುದರಿಂದಲೊ, ವರ್ಕ್‌ಶೀಟ್‌ನ್ನು ನೀಡುವುದರಿಂದಲೋ ಪೂರ್ವಜ್ಞಾನವನ್ನೂ ಅಳೆಯಬಹುದು.

ಪೂರ್ವಜ್ಞಾನ ಲಭಿಸದವರಿಗಾಗಿ ಆವಶ್ಯಕವಾದ ಚಟುವಟಿಕೆಗಳನ್ನು ಆಯೋಜಿಸಬೇಕು.

ವಿವಿಧ ಮೂಲವಸ್ತುಗಳ ಬೋರ್ ಮಾದರಿಗಳನ್ನು ಚರ್ಚೆಗೆ ಒಳಪಡಿಸಬಹುದು.

ನ್ಯೂಕ್ಲಿಯಸ್, ಶೆಲ್ ಆಕೃತಿ ವಿವಿಧ ವಲಯಗಳು, ಪ್ರತಿಯೊಂದು ವಲಯಗಳಲ್ಲಿ ಹಿಡಿಯಬಹುದಾದ ಗರಿಷ್ಠ ಇಲೆಕ್ಟ್ರೋನುಗಳ ಸಂಖ್ಯೆ, ಇಲೆಕ್ಟ್ರೋನ್ ವಿನ್ಯಾಸ ಮುಂತಾದ ಚರ್ಚೆಗಳನ್ನು ಅಳವಡಿಸಬೇಕು.

## ಹೆಚ್ಚಿನ ಮಾಹಿತಿಗಾಗಿ

### ಬೋರ್ ಪರಮಾಣು ಮಾದರಿ

ರೂಥರ್‌ಫೋರ್ಡಿನ ಪರಮಾಣು ಮಾದರಿಯ ಕೊರತೆಗಳನ್ನು ನೀಗಿಸಲು ನೀಲ್ಸ್‌ಬೋರ್ ಎಂಬ ಡೇನಿಸ್ ವಿಜ್ಞಾನಿಯು (1885–1962) ಪ್ರಸಿದ್ಧವಾದ 'ಬೋರ್ ಪರಮಾಣು ಮಾದರಿ'ಯನ್ನು ಮುಂದಿರಿಸಿದನು.

ಕ್ಲಾಸಿಕಲ್ ಇಲೆಕ್ಟ್ರೋಮೇಗ್ನೆಟಿಕ್ ನಿಯಮದ ಪ್ರಕಾರ ನ್ಯೂಕ್ಲಿಯಸ್‌ನ ಸುತ್ತಲೂ ಚಲಿಸುತ್ತಿರುವ ಇಲೆಕ್ಟ್ರೋನುಗಳು ಚೈತನ್ಯವನ್ನು ನಿರಂತರವಾಗಿ ವಿಕಿರಣ ರೂಪದಲ್ಲಿ ಹೊರಸೂಸುವುದು. ಹೀಗೆ ಚೈತನ್ಯ ನಷ್ಟಗೊಂಡ ಇಲೆಕ್ಟ್ರೋನುಗಳು ನ್ಯೂಕ್ಲಿಯಸ್‌ಗೆ ಪತನವಾಗಬೇಕು. ಆದರೆ ಹೀಗೆ ಜರಗುವುದಿಲ್ಲ. ಇದಕ್ಕೆ ತೃಪ್ತಿಕರವಾದ ವಿವರಣೆಯು ಮೇಕ್ಸ್‌ಪ್ಲೇಂಕ್ ಆವಿಷ್ಕರಿಸಿದ 'ಕ್ವಾಂಟಂ' ಸಿದ್ಧಾಂತದಿಂದ ಲಭಿಸಿತು. ಇದರ ಆಧಾರದಲ್ಲಿ ನೀಲ್ಸ್‌ಬೋರ್ ತನ್ನ ಹೊಸ ಪರಮಾಣು ಮಾದರಿಯನ್ನು ಮಂಡಿಸಿದುದು.

ಕ್ವಾಂಟಂ ಸಿದ್ಧಾಂತದ ಪ್ರಕಾರ ವಿದ್ಯುತ್ಕಾಂತೀಯ ವಿಕಿರಣಗಳು (*electro magnetic radiation*) ವಿಸರ್ಜಿಸುವುದಾಗಲಿ, ಹೀರುವುದಾಗಲಿ, ಪಸರಿಸುವುದಾಗಲಿ ಚೈತನ್ಯದ ಒಂದು ನಿರಂತರ ಪ್ರವಾಹದ ರೂಪದಲ್ಲಿ ಅಲ್ಲ. ಬದಲಾಗಿ ಚೈತನ್ಯ ಸಣ್ಣ ಸಣ್ಣ ಪೇಕೆಟ್‌ಗಳಾಗಿ ಅಥವಾ ಕ್ವಾಂಟಂಗಳಾಗಿ (*quanta*) ಹೊರಹಾಕಲ್ಪಡುವುದು.

*[Radiant energy is not emitted or absorbed continuously but discontinuously in the form of tiny bundles of energy known as quanta]*

ಇದರ ಪ್ರಕಾರ ನ್ಯೂಕ್ಲಿಯಸ್ಸಿನ ಸುತ್ತಲೂ ಚಲಿಸುತ್ತಿರುವ ಇಲೆಕ್ಟ್ರೋನುಗಳು ಒಂದು ನಿರ್ದಿಷ್ಟ ಪಥದಲ್ಲೆ ಸಂಚರಿಸುವುವು. ಅವುಗಳಲ್ಲಿ ಸೂಕ್ತವಾದ ಒಂದು ಸಂಚಾರಪಥವಿದೆ. ಅವುಗಳ ಮೂಲಕ ಮಾತ್ರವೇ ಸಂಚರಿಸಲು ಸಾಧ್ಯವಾಗುವುದು. ಈ ಪಥವನ್ನು ಓರ್ಬಿಟ್ ಅಥವಾ ಶೆಲ್‌ಗಳೆಂದು ಕರೆಯುವರು. ಪ್ರತಿಯೊಂದು ಓರ್ಬಿಟಿಗೂ ಒಂದು ನಿರ್ದಿಷ್ಟ ಪ್ರಮಾಣದ ಚೈತನ್ಯವಿರುವುದು. ಅದರ ಮೂಲಕ ಚಲಿಸುವ ಇಲೆಕ್ಟ್ರೋನುಗಳಿಗೂ ನಿರ್ದಿಷ್ಟ ಪ್ರಮಾಣದ ಚೈತನ್ಯವಿದೆ ಎಂದರ್ಥ. ಆದುದರಿಂದ ಓರ್ಬಿಟ್‌ಗಳನ್ನು ಚೈತನ್ಯ ಮಟ್ಟ (*energy levels*) ಗಳೆಂದು ಕರೆಯುವರು. ಈ ಚೈತನ್ಯ ಮಟ್ಟಗಳ ಚೈತನ್ಯವು ಕ್ವಾಂಟಂ ಪ್ರಮಾಣದಲ್ಲಿ ವ್ಯತ್ಯಾಸವಿರುವುದರಿಂದ ಇವುಗಳನ್ನು *quantised energy level* ಎಂದೂ ಕರೆಯಬಹುದು.

ಒಂದು ಓರ್ಬಿಟಿನ ಚೈತನ್ಯವು ಯಾವಾಗಲೂ ಸ್ಥಿರವಾಗಿರುವುದು. ಆದರೆ ಪ್ರತಿಯೊಂದು ಓರ್ಬಿಟಿನ ಚೈತನ್ಯವು ವಿಭಿನ್ನವಾಗಿದೆ. ಇಂತಹ ನಿಶ್ಚಿತ ಓರ್ಬಿಟ್‌ನ ಮೂಲಕ ಇಲೆಕ್ಟ್ರೋನ್ ಸಂಚರಿಸುವಾಗ ಅವುಗಳಿಗೆ ಚೈತನ್ಯ ಲಭಿಸುವುದಾಗಲೀ ನಷ್ಟವಾಗುವುದಾಗಲೀ ಸಂಭವಿಸುವುದಿಲ್ಲ. ಆದರೆ ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ಒಂದು ಓರ್ಬಿಟಿನಿಂದ ಇನ್ನೊಂದು ಓರ್ಬಿಟಿಗೆ ಇಲೆಕ್ಟ್ರೋನು ಹೋಗಬಹುದು. ಇಂತಹ ಸಂದರ್ಭದಲ್ಲಿ ಪರಮಾಣು ಚೈತನ್ಯವನ್ನು ಹೀರುವುದು ಅಥವಾ ಹೊರ ಹಾಕುವುದು. ಉದಾಹರಣೆಗಾಗಿ ಒಂದು ಪರಮಾಣುವಿಗೆ ಚೈತನ್ಯವನ್ನು ನೀಡುವುದೆಂದಿರಲಿ. ಆಗ ಪರಮಾಣುವಿನ ಇಲೆಕ್ಟ್ರೋನ್ ಒಂದು ನಿರ್ದಿಷ್ಟ ಕ್ವಾಂಟಂ ಚೈತನ್ಯವನ್ನು ಹೀರಿಕೊಂಡು ಅದು ಇರುವ ಓರ್ಬಿಟಿನಿಂದ ಉನ್ನತ ಚೈತನ್ಯ ಮಟ್ಟವಿರುವ ಓರ್ಬಿಟಿಗೆ (*excited state*) ನೆಗೆಯುವುದು.

ಕೆಳಗಿನ ಚೈತನ್ಯ ಮಟ್ಟಕ್ಕೆ ಇಲೆಕ್ಟ್ರೋನು ಹಿಂತಿರುಗುವುದಾದರೆ ಮೊದಲು ಹೀರಲ್ಪಟ್ಟ ಚೈತನ್ಯ ವಿಕಿರಣ ರೂಪದಲ್ಲಿ ವಿಸರ್ಜಿಸಲ್ಪಡುವುದು *(emit)*. ಕೆಳಗಿನ ಚೈತನ್ಯ ಮಟ್ಟದಿಂದ ಉನ್ನತ ಚೈತನ್ಯ ಮಟ್ಟಕ್ಕೆ ಹೋಗುವಾಗ ಚೈತನ್ಯವನ್ನು ನೀಡಬೇಕಾಗಿರುವುದರಿಂದಲೇ ನ್ಯೂಕ್ಲಿಯಸ್ಸಿನಿಂದ ದೂರ ಹೋದಂತೆ ಚಿತ್ರ ಇಲೆಕ್ಟ್ರೋನುಗಳ ಚೈತನ್ಯವು ಹೆಚ್ಚುವುದು.




ಹೈಡ್ರಜನಿನ ಪರಮಾಣುವಿನ ವಿವಿಧ ಚೈತನ್ಯ ಮಟ್ಟಗಳ ಚೈತನ್ಯವನ್ನು ಬೋರ್ ಮಾದರಿಯ ಪ್ರಕಾರ ಚಿತ್ರಿಸಿರುವುದನ್ನು ಗಮನಿಸಿರಿ.

**ಕೆಲವು ಮಾದರಿಗಳು**

${}^{35}_{17}Cl$ - ಪರಮಾಣು ಮಾದರಿಯನ್ನು ಚಿತ್ರಿಸಿರಿ.

- ಈ ಮೂಲವಸ್ತುವಿನ ನ್ಯೂಕ್ಲಿಯೋನ್‌ಗಳಾವುವು? ಎಷ್ಟು ವಿಧ?
- ಎಷ್ಟು ವಲಯಗಳು? ಯಾವುವು? ಚೈತನ್ಯ ಕ್ರಮ.

ತಿಳುವಳಿಕೆಯನ್ನು ಗಳಿಸದವರಿಗೆ ಹೆಚ್ಚಿನ ಚಟುವಟಿಕೆಗಳನ್ನು ಆಯೋಜಿಸಿ ನಿರ್ವಹಿಸಿರಿ.

ಪಟ್ಟಿ 1.1 ಭರ್ತಿಗೊಳಿಸಿರಿ.

| **ಮೂಲವಸ್ತು** | **ವಲಯಗಳು** | | |
|---|---|---|---|
| | *K* | *L* | *M* |
| $_{11}Na$ | 2 | 8 | 1 |
| $_{18}Ar$ | 2 | 8 | 8 |

ಅನಂತರ $_{19}K$ or $_{20}Ca$ - ನ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಲು ಮಕ್ಕಳಿಗೆ ಸಂದರ್ಭವನ್ನು ಒದಗಿಸಬೇಕು.

$_{19}K$ ನ ಇಲೆಕ್ಟ್ರೋನ್ ವಿನ್ಯಾಸ 2,8,8,1 ಆಗಿದೆ ಎಂದು ಮಕ್ಕಳಿಗೆ ತಿಳಿದಿದೆ.

ಈ ಸಂದರ್ಭದಲ್ಲಿ ಸಬ್‌ಶೆಲ್ ಎಂಬ ಆಶಯವನ್ನು ಚರ್ಚೆಗೆ ಒಳಪಡಿಸಬಹುದು.

**ಹೆಚ್ಚಿನ ಮಾಹಿತಿಗಾಗಿ**

## ವೇವ್ ಮೆಕಾನಿಕ್ಸ್

ಪರಮಾಣುವಿನ ರಚನೆಗೆ ಸಂಬಂಧಿಸಿ ಆಧುನಿಕ ಸಿದ್ಧಾಂತಗಳಿಂದ ಬೋರ್ ಮುಂದಿಸಿದ 'ನಿರ್ದಿಷ್ಟ ಓರ್ಬಿಟ್' ಎಂಬ ಕಲ್ಪನೆಯು ತಿರಸ್ಕರಿಸಲ್ಪಟ್ಟಿತು. ಆದರೆ ಚೈತನ್ಯ ಮಟ್ಟ *(energy level)* ಎಂಬ ಆಶಯವು ಅಂಗೀಕರಿಸಲ್ಪಟ್ಟಿತು. ಬೋರ್ ಮಾದರಿಯ ನಂತರ ವೇವ್ ಮೆಕಾನಿಕಲ್ ಮಾದರಿ ಎಂಬ ಹೆಸರಿನ ಹೊಸ ಪರಮಾಣು ಮಾದರಿಯು ಮುಂದಿರಿಸಲ್ಪಟ್ಟಿತು. ಇರ್ವಿನ್ ಶ್ರೋಡಿಂಗರ್ (Erwin Schrodinger) ಎಂಬ Austrian ಎಂಬ ಅಸ್ಟ್ರಿಯದ ವಿಜ್ಞಾನಿಯು ಇದರ ಪ್ರತಿಪಾದಕ. ವೇವ್ ಮೆಕಾನಿಕ್ಸ್ ತತ್ವಕ್ಕೆ ಆಧಾರವಾದ ಕೆಲವು ಸತ್ಯಾಂಶಗಳನ್ನು ಕೆಳಗೆ ನೀಡಲಾಗಿದೆ.

### *1.* ಇಲೆಕ್ಟ್ರೋನುಗಳ ದ್ವಂದ ಸ್ವಭಾವ *(Dual Nature of electrons)*

ಇಲೆಕ್ಟ್ರೋನುಗಳು ಕಣಗಳ ಸ್ವಭಾವವನ್ನು ಪ್ರದರ್ಶಿಸುವುದೆಂದು ಆರಂಭ ಕಾಲದ ಸಂಶೋಧನೆಗಳು ಸೂಚಿಸಿದ್ದವು. 1924ರಲ್ಲಿ ಫ್ರೆಂಚ್ ವಿಜ್ಞಾನಿಯಾದ ಲೂಯಿಸ್ ಡಿ ಬ್ರೋಗ್ಲಿ *(Lewis de Broglie)* ಯು ಇಲೆಕ್ಟ್ರೋನುಗಳು ಏಕಕಾಲಕ್ಕೆ ಕಣಗಳ ಸ್ವಭಾವವನ್ನೂ ತರಂಗ ಸ್ವಭಾವವನ್ನು ಪ್ರದರ್ಶಿಸುತ್ತವೆಯೆಂದು ತಿಳಿಸಿದನು. ಇಲೆಕ್ಟ್ರೋನ್ ಪ್ರವಾಹವನ್ನು ನಿಕ್ಕೆಲ್ ಲೋಹ ಸ್ಪಟಿಕದ ಸಹಾಯದಿಂದ ಪ್ರತಿಫಲಿಸುವುದರೊಂದಿಗೆ *(reflection)* ವಕ್ರವಿಯೋಜನೆ *(diffraction)* ಯನ್ನು ಜರಗಿಸುವಾಗ ಅದು ಬೆಳಕಿನಂತೆ ತರಂಗ ಸ್ವಭಾವ ಪ್ರದರ್ಶಿಸುವುದೆಂದು ಸಿಜೆ ಡೇವಿಸನ್, ಎನ್ಎಚ್ ಜರ್ಮರ್ ಎಂಬೀ ವಿಜ್ಞಾನಿಗಳು ಪ್ರಯೋಗದ ಮೂಲಕ ಮುಂದೆ ಸಾಧಿಸಿದರು. ಈ ಪ್ರಯೋಗದ ಇಲೆಕ್ಟ್ರೋನುಗಳ ತರಂಗ ದೂರವನ್ನು ಕಂಡುಹಿಡಿಯಲಿ ($1.67\ \overset{0}{A}$) ಅವರಿಗೆ ಸಾಧ್ಯವಾಯಿತು.

$$(1\ \overset{0}{A} = 10^{-10} m)$$

### *2.* ಹೈಸನ್‌ಬರ್ಗ್‌ನ ಅನಿಶ್ಚಿತತೆಯ ತತ್ವ *(Heisenberg's Uncertainty Principle)*

ಇಲೆಕ್ಟ್ರೋನ್ ಸಮೇತ ಎಲ್ಲ ಸಬ್ ಎಟೋಮಿಕ್ ಕಣಗಳಿಗೆ ತರಂಗ ಸ್ವಭಾವವೂ ಇದೆ ಎಂದು ಅಂಗೀಕರಿಸಿರುವುದರೊಂದಿಗೆ ಜರ್ಮನ್ ವಿಜ್ಞಾನಿಯಾದ ಹೈಸನ್‌ಬರ್ಗ್ (1927) ಇನ್ನೊಂದು ಸಿದ್ಧಾಂತವನ್ನೂ ಆವಿಷ್ಕರಿಸಿದನು.

ಚಲಿಸುವ ಸಬ್ ಎಟೋಮಿಕ್ ಕಣದ (ಇಲೆಕ್ಟ್ರೋನಿನಂತಹ ಕಣ) ಸ್ಥಾನ ಮತ್ತು ವೇಗವನ್ನು ಏಕಕಾಲಕ್ಕೆ ಒಟ್ಟಿಗೆ ಸ್ಪಷ್ಟವಾಗಿ ಕಂಡುಹಿಡಿಯಲು ಸಾಧ್ಯವಿಲ್ಲ ಎಂಬುದನ್ನು ಹೈಸನ್‌ಬರ್ಗ್‌ನು ಕಂಡುಹಿಡಿದನು. ಇದುವೇ ಅನಿಶ್ಚಿತತೆಯ ತತ್ವ.

*(It is not possible to determine simultaneously and precisely both the position and the momentum (or velocity) of a microscopic moving particle).*

ಇಲೆಕ್ಟ್ರೋನಿಗೂ ಇದು ಬಾಧಕವಾಗಿದೆ. ಆದುದರಿಂದ ಇಲೆಕ್ಟ್ರೋನುಗಳ ಸ್ಥಾನವನ್ನೂ ಕಂಡುಹಿಡಿಯಲು ಪ್ರಯತ್ನಿಸಿದರೆ ವೇಗ ಅನಿಶ್ಚಿತವಾಗಿರುವುದು. ವೇಗ ಅನಿಶ್ಚಿತವಾದರೆ ಚೈತನ್ಯ ಅನಿಶ್ಚಿತವಾಗಿರುವುದು. ಅದೇ ರೀತಿಯಲ್ಲಿ ವೇಗವನ್ನು ಸರಿಯಾಗಿ ಕಂಡುಹಿಡಿಯಲು ಪ್ರಯತ್ನಿಸುವುದಾದರೆ ಅದರ ಸ್ಥಾನ ಅನಿಶ್ಚಿತವಾಗಿರುವುದು. ಆದುದರಿಂದ ಏಕಕಾಲಕ್ಕೆ ಇಲೆಕ್ಟ್ರೋನಿನ ವೇಗ ಮತ್ತು ಸ್ಥಾನವನ್ನು ಸ್ಪಷ್ಟವಾಗಿ ನಿರ್ಣಯಿಸುವುದು ಅಸಾಧ್ಯ.

## ಓರ್ಬಿಟಲ್ಲುಗಳು (Orbitals)

ಇಲೆಕ್ಟ್ರೋನಿನ ದ್ವಂದ್ವ ಸ್ವಭಾವ ಮತ್ತು ಅನಿಶ್ಚಿತ ತತ್ವದ ಆಧಾರದಲ್ಲಿ ನ್ಯೂಕ್ಲಿಯಸ್ಸಿನ ಸುತ್ತಲೂ ಇಲೆಕ್ಟ್ರೋನುಗಳು ಕಂಡುಬರುವ ಸಾಧ್ಯವಿರುವ ಪ್ರದೇಶದ ಕುರಿತು ಮಾತ್ರವೇ ಹೇಳಲು ಸಾಧ್ಯ. ಇಲೆಕ್ಟ್ರೋನುಗಳು ಅತಿಹೆಚ್ಚಾಗಿ ಕಾಣಲು ಸಾಧ್ಯವಿರುವ ಇಂತಹ ಪ್ರದೇಶಗಳೇ ಓರ್ಬಿಟಲುಗಳು. ಓರ್ಬಿಟಲುಗಳ ಗುಂಪುಗಳೇ ಸಬ್‌ಶೆಲ್‌ಗಳೆಂದು ಹೇಳಬಹುದು. ಪ್ರತಿಯೊಂದು ಪ್ರಧಾನ ಚೈತನ್ಯ ಮಟ್ಟಗಳಲ್ಲೂ ಉಪಚೈತನ್ಯ ಮಟ್ಟಗಳಾದ ಸಬ್‌ಶೆಲ್‌ಗಳಿವೆ.*s, p, d, f* ಎಂದು ಸಬ್‌ಶೆಲ್‌ಗಳಿಗೆ ಹೆಸರುಗಳನ್ನು ನೀಡಲಾಗಿದೆ. ಪ್ರತಿಯೊಂದು ಸಬ್‌ಶೆಲ್ಲಿನಲ್ಲೂ ನಿರ್ದಿಷ್ಟ ಆಕೃತಿಯ ಓರ್ಬಿಟಲ್‌ಗಳಿವೆ. *s subshell* ಸಬ್‌ಶೆಲ್‌ನಲ್ಲಿ ಒಂದು, *p* ಸಬ್‌ಶೆಲ್‌ನಲ್ಲಿ ಮೂರು, *d* ಸಬ್‌ಶೆಲ್‌ನಲ್ಲಿ ಐದು ಹಾಗೂ *f* ಸಬ್‌ಶೆಲ್‌ನಲ್ಲಿ ಏಳು ಓರ್ಬಿಟಲ್‌ಗಳಿವೆ. *s* ಸಬ್‌ಶೆಲ್ಲಿನ ಓರ್ಬಿಟಲುಗಳನ್ನು *s* ಓರ್ಬಿಟಲ್ ಎಂದೂ, *p* ಸಬ್‌ಶೆಲ್‌ನ ಓರ್ಬಿಟಲುಗಳನ್ನು *p* ಓರ್ಬಿಟಲ್ ಎಂದೂ ಕರೆಯುವುದಿದೆ.

| Sub Shell | Spectroscopic Term |
|---|---|
| s | Sharp |
| p | Prinicipal |
| d | Diffuse |
| f | Fundamental |

ಶ್ರೋಡಿಂಗರ್ ವೇವ್ ಸಮೀಕರಣವನ್ನು ನಿರ್ಧರಿಸುವಾಗ ಲಭಿಸಲು ಸಾಧ್ಯವಿರುವ ಕ್ವಾಂಟಂ ನಂಬರುಗಳನ್ನೂ ಉಪಯೋಗಿಸಿ ಪ್ರತಿಯೊಂದು ಇಲೆಕ್ಟ್ರೋನುಗಳ ಶೆಲ್, ಸಬ್‌ಶೆಲ್, ಓರ್ಬಿಟಲ್ ಎಂಬಿವುಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.

Quantum number ಗಳು. ನಾಲ್ಕು ವಿಧ

**1) Principal Quantum number (n) :**

ಇದು ಪ್ರಧಾನ ಚೈತನ್ಯ ಮಟ್ಟದ ಚೈತನ್ಯವನ್ನೂ ಸೂಚಿಸುವುದು, *n* ನ ಬೆಲೆಗಳು 1, 2, 3 ... ಎಂದಾಗಿದೆ.

n = 1 [K shell or First shell] n = 2, [L shell or second shell]

**2) Subsidiary azimnthal quantum number (*l*) or orbital angular momentum quantum number**

azimnthal quantum number ಬೆಲೆಗಳು ಸಬ್‌ಶೆಲ್ಲುಗಳನ್ನು ಸೂಚಿಸುವುದು. *l* ಗೆ 0 ಯಿಂದ n-1 ವರೆಗಿರುವ ಬೆಲೆಗಳಿರಲು ಸಾಧ್ಯವಿದೆ.

ಉದಾ: K shell ನ n ನ ಬೆಲೆ 1.

ಆದುದರಿಂದ *l* ನ ಬೆಲೆ (0 to n - 1) ಬೆಲೆ ಸೊನ್ನೆಯಾಗಿರುವುದು.

ಎಂದರೆ *l* ಗೆ ಒಂದೇ ಬೆಲೆ ಇರುವುದರಿಂದ K shell ಶೆಲ್ಲಿನಲ್ಲಿ ಒಂದು ಸಬ್‌ಶೆಲ್ ಮಾತ್ರವಿರುವುದು.

ಇದನ್ನು 1s ಸಬ್‌ಶೆಲ್ ಎಂದು ಕರೆಯುತ್ತಾರೆ. L shell ನಲ್ಲಿ 2s, 2p ಎಂಬೀ ಎರಡು ಸಬ್‌ಶೆಲ್‌ಗಳಿವೆ.
M shell ನಲ್ಲಿ 3s, 3p, 3d ಎಂಬೀ ಮೂರು ಸಬ್‌ಶೆಲ್‌ಗಳಿವೆ.

### 3) Magentic quantum number (m)

ಪ್ರತಿಯೊಂದು ಶೆಲ್‌ಗಳ ಸಬ್‌ಶೆಲ್‌ಗಳಲ್ಲಿ ಎಷ್ಟು ಓರ್ಬಿಟಲ್‌ಗಳಿವೆಯೆಂದುMagentic quantum number ನ ಬೆಲೆಗಳು ವಿವರಿಸುವುದು.

m ಗೆ $(2l+1)$ ಬೆಲೆಗಳಿವೆ.

ಇದು $-l$ to $+l$ ಎಂದು ಪರಿಗಣಿಸಲಾಗಿದೆ (ಸೊನ್ನೆಯನ್ನೊಳಗೊಂಡು) s ಸಬ್‌ಶೆಲ್ಲಿನ $l$ನ ಬೆಲೆ 0 ಆಗಿದೆ. ಆದುದರಿಂದ m ಬೆಲೆಯು 0 ಆಗಿದೆ. ಆದುದರಿಂದ s ಸಬ್‌ಶೆಲ್ಲಿನಲ್ಲಿ ಒಂದು ಓರ್ಬಿಟಲ್ ಮಾತ್ರವಿರುವುದು.

p ಸಬ್‌ಶೆಲ್ಲಿಗೆ $l$ ನ ಬೆಲೆ 1 ಆಗಿದೆ.

p subshell ನ m ನ ಬೆಲೆಗಳು -1, 0, 1 ಎಂಬೀವುಗಳಾಗಿದೆ.

ಆದುದರಿಂದ p subshell ನಲ್ಲಿ ಮೂರು ಓರ್ಬಿಟಲುಗಳಿವೆ. ಇವುಗಳು $p_x$, $p_y$, $p_z$ ಎಂಬಿವುಗಳಾಗಿವೆ.

### 4) Spin Quantum number (s) :

ಒಂದು ಓರ್ಬಿಟಲಿನ Spin ಆಗಿದೆSpin Quantum number ಬೆಲೆಗಳನ್ನು ನೀಡುವುದು. 's' ಗೆ +½ - ½ ಎಂಬೀ ಎರಡು ಬೆಲೆಗಳಿವೆ.

ಉದಾಹರಣೆಗಾಗಿ M shell ನಲ್ಲಿ n = 3

$l$ value 0, 1, 2

| | | | |
|---|---|---|---|
| $l = 0$ | s subshell | m = 0 | one orbital (3s) |
| $l = 1$ | p subshell | m = -1, 0, 1 | $p_x$, $p_y$, $p_z$ orbital ($3p_x$, $3p_y$, $3p_z$) |
| $l = 2$ | d subshell | m = -2, -1, 0,1, 2 | $3d_{xy}$, $3d_{xz}$, $3d_{zx}$, $3d_{(x^2-y^2)}$, $3d_{z^2}$ |

ಓರ್ಬಿಟಲುಗಳಲ್ಲಿ ಇಲೆಕ್ಟ್ರೋನುಗಳು ತುಂಬಲ್ಪಡುವ ಕ್ರಮವನ್ನು ವಿವಿಧ ತತ್ವಗಳ ಆಧಾರದಲ್ಲಿ ಹೇಳಲು ಸಾಧ್ಯವಿದೆ. **"ಒಂದು ಓರ್ಬಿಟಲಿನಲ್ಲಿ ಎರಡು ಇಲೆಕ್ಟ್ರೋನುಗಳಿಗಿಂತ ಹೆಚ್ಚು ಇಲೆಕ್ಟ್ರೋನುಗಳು ಇರಲು ಸಾಧ್ಯವಿಲ್ಲ" ಎಂಬುದು ಇದರಲ್ಲಿ ಪ್ರಧಾನವಾದ ಒಂದು ತತ್ವವಾಗಿದೆ. ಇದುವೆ *Pauli's exclusion principle.***

*(Pauli's exclusion principle states that it is impossible for any two electrons in the same atom to have all the four quantum numbers identical. Based on this it can be proved that an orbital can have only 2 electrons).*

ಎಂದರೆ ಒಂದು ಓರ್ಬಿಟಲ್‌ನಲ್ಲಿ ಇರಬಹುದಾದ ಗರಿಷ್ಠ ಇಲೆಕ್ಟ್ರೋನುಗಳ ಸಂಖ್ಯೆ 2 ಆಗಿದೆ. ಒಂದನೇ *K* ಶೆಲ್ಲಿನಲ್ಲಿ ಎರಡು ಇಲೆಕ್ಟ್ರೋನುಗಳು ಇರುವುದರಿಂದ ಇದರಲ್ಲಿ ಒಂದು ಓರ್ಬಿಟಲ್ ಮಾತ್ರವೇ ಕಂಡುಬರುವುದು. ಎರಡನೇ ಪ್ರಧಾನ ಚೈತನ್ಯ ಮಟ್ಟದಲ್ಲಿ 8 ಇಲೆಕ್ಟ್ರೋನುಗಳಲ್ಲವೇ ತುಂಬಲ್ಪಡುವುದು. ಇದರಲ್ಲಿ ನಾಲ್ಕು ಓರ್ಬಿಟಲ್‌ಗಳಿವೆ. 3, 4,5 ಎಂಬೀ ಚೈತನ್ಯ ಮಟ್ಟಗಳಲ್ಲಾಗಿ ಕ್ರಮವಾಗಿ 9, 16,25 ಓರ್ಬಿಟಲುಗಳು ಅಡಕವಾಗಿರುವುದೆಂದು ಲೆಕ್ಕಹಾಕಬಹುದಲ್ಲವೆ.

ಒಂದು ಸಬ್‌ಶೆಲ್ಲಿನಲ್ಲಿ ಓರ್ಬಿಟಲುಗಳೊಳಗೆ ಚೈತನ್ಯ ಮಟ್ಟದಲ್ಲಿ ವ್ಯತ್ಯಾಸವಿಲ್ಲ. ಆದರೆ ಅದು ಇರುವ ದಿಕ್ಕಿನಲ್ಲೂ ಆಕೃತಿಯಲ್ಲೂ *(shape)* ವ್ಯತ್ಯಾಸವಿರಬಹುದು. ಪ್ರತಿಯೊಂದು ಸಬ್‌ಶೆಲ್ಲಿನಲ್ಲೂ *s, p, d, f* ಓರ್ಬಿಟಲುಗಳಲ್ಲಿ ಇರಬಹುದಾದ ಓರ್ಬಿಟಲುಗಳ ಸಂಖ್ಯೆಯು ಕ್ರಮವಾಗಿ 1, 3, 5, 7 ಎಂಬ ರೀತಿಯಲ್ಲಿ. ಆದುದರಿಂದ *s* ಸಬ್ ಶೆಲ್ಲಿನಲ್ಲಿ ಎರಡು ಇಲೆಕ್ಟ್ರೋನುಗಳಿಗೆ $(1\times2 = 2)$ ಸ್ಥಳಾವಕಾಶವಿರಬಹುದು. *p* ಸಬ್ ಶೆಲ್ಲಿನಲ್ಲಿ 6




ಇಲೆಕ್ಟ್ರೋನಿಗೂ (3×2 = 6), *d* ಸಬ್‌ಶೆಲ್ಲಿನಲ್ಲಿ 10 ಇಲೆಕ್ಟ್ರೋನಿಗೂ (5×2 = 10) *f* ಸಬ್‌ಶೆಲ್ಲಿನಲ್ಲಿ 14 ಇಲೆಕ್ಟ್ರೋನುಗಳಿಗೂ (7×2 = 14) ಸ್ಥಳಾವಕಾಶವಿರುವುದು.

ಪ್ರತಿಯೊಂದು ಚೈತನ್ಯಮಟ್ಟದಲ್ಲೂ ಅತಿ ಕಡಿಮೆ ಚೈತನ್ಯವಿರುವ ಸಬ್‌ಶೆಲ್ *s* ಆಗಿರಬಹುದು. ನಂತರ *p, d, f* ಎಂಬ ಕ್ರಮದಲ್ಲಿ ಹೆಚ್ಚುವುದು. ($s < p < d < f$) ಒಂದು ಸಬ್‌ಶೆಲ್ಲಿನ ಓರ್ಬಿಟಲುಗಳನ್ನು ಪ್ರತ್ಯೇಕವಾಗಿ ಸೂಚಿಸಬೇಕಾದರೆ ಅದಕ್ಕಿರುವ ಸೂಚನೆಗಳಿವೆ. ಉದಾಹರಣೆಗಾಗಿ, *p* ಸಬ್‌ಶೆಲ್ಲಿನಲ್ಲಿ ಮೂರು ಓರ್ಬಿಟುಗಳಾಗಿವೆಯಲ್ಲವೇ ಇರುವುದು. ಇವುಗಳನ್ನು $p_x, p_y, p_z$ ಎಂದು ಸೂಚಿಸಬಹುದು. ಓರ್ಬಿಟಲುಗಳಲ್ಲಿ ಇಲೆಕ್ಟ್ರೋನ್ ತುಂಬುವುದಕ್ಕೆ ಸಂಬಂಧಿಸಿ ಮತ್ತೊಂದು ಪ್ರಧಾನ ತತ್ವವು ಆಫ್ಬಾ ತತ್ವವಾಗಿದೆ (*Aufbau principle*). ಚೈತನ್ಯವು ಹೆಚ್ಚುವುದಕ್ಕೆ ಅನುಸರಿಸಿ ಸಬ್‌ಶೆಲ್‌ಗಳಲ್ಲಿ ಇಲೆಕ್ಟ್ರೋನುಗಳು ತುಂಬಲ್ಪಡುವುದು ಎಂದು ಆಫ್ಬಾ ತತ್ವವು ಪ್ರತಿಪಾದಿಸುವುದು.

*(The Aufbau principle states that in the ground state of an atom, the orbital with a lower energy is filled up first before the filling of the orbital with a higher energy commences.*

*(Aufbau means building up) (German word)*

ಇದು ಸ್ಪಷ್ಟವಾಗುವ ಚಿತ್ರವನ್ನು ಪಾಠ ಪುಸ್ತಕದಲ್ಲಿ ನೀಡಲಾಗಿದೆ.

### ಸಬ್‌ಶೆಲ್‌ನ ಕುರಿತು ಚರ್ಚೆ–ಸೂಚಕಗಳು

- ಪ್ರಧಾನ ಚೈತನ್ಯ ಮಟ್ಟಗಳು : K, L, M, N etc.
- ಬೋರ್ ಮಾದರಿ; ಪರಿಮಿತಿ (ಮಕ್ಕಳ ಆಧಾರದಲ್ಲಿ)
- ತ್ರಿಮಾನ ಕ್ಷೇತ್ರದಲ್ಲಿ ಇಲೆಕ್ಟ್ರೋನ್‌ಗಳ ಸಂಚಾರ
- Orbitals
- Sub shells

ಪಟ್ಟಿ 1.2, 1.3 ಭರ್ತಿಗೊಳಿಸಿ ಪ್ರತಿಯೊಂದು ಶೆಲ್‌ಗಳಲ್ಲಿರುವ ಸಬ್‌ಶೆಲ್‌ಗಳು ಯಾವುದೆಂದು ಕಂಡುಹಿಡಿಯಬಹುದು.

**ಕ್ರೋಡೀಕರಿಸಬೇಕಾದುದು**

*ಪರಮಾಣುವಿನ ಒಂದನೇ ಶೆಲ್ಲಿನಲ್ಲಿ s ಸಬ್‌ಶೆಲ್ ಎರಡನೇ ಶೆಲ್ಲಿನಲ್ಲಿ s, p ಸಬ್‌ಶೆಲ್ಲೂ ಮೂರನೇ ಶೆಲ್ಲಿನಲ್ಲಿ s, p, d ಸಬ್‌ಶೆಲ್ಲುಗಳು ನಾಲ್ಕನೇ ಶೆಲ್ಲಿನಲ್ಲಿ , p, d, f ಸಬ್‌ಶೆಲ್ಲುಗಳೂ ಇರುವುದು. ಪ್ರತಿಯೊಂದು ಸಬ್‌ಶೆಲ್ಲಿನಲ್ಲೂ ಇರಬಹುದಾದ ಗರಿಷ್ಠ ಇಲೆಕ್ಟ್ರೋನ್‌ಗಳ ಸಂಖ್ಯೆ*

$s \rightarrow 2,\ p \rightarrow 6,\ d \rightarrow 10,\ f \rightarrow 14$

### ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ

ಪ್ರತಿಯೊಂದು ಶೆಲ್ಲಿನ ಚೈತನ್ಯದಲ್ಲಿ ವ್ಯತ್ಯಾಸವಿರುವುದರಿಂದ ಇವುಗಳ ಸಬ್‌ಶೆಲ್ಲುಗಳ ಚೈತನ್ಯದಲ್ಲೂ ವ್ಯತ್ಯಾಸವಿರುವುದು.

ಪರಮಾಣುವಿನ ಇಲೆಕ್ಟ್ರೋನ್‌ಗಳು ಸಬ್‌ಶೆಲ್‌ಗಳಲ್ಲಿ ತುಂಬಲ್ಪಡುವಾಗ ಚೈತನ್ಯ ಕಡಿಮೆಯಾಗಿರುವ ಸಬ್‌ಶೆಲ್ಲಿನಿಂದ ಹೆಚ್ಚಿರುವ ಕಡೆಗೆ ಅನುಕ್ರಮವಾಗಿ ತುಂಬುವುದು ಎಂಬ ತಿಳುವಳಿಕೆ ಮಕ್ಕಳಿಗೆ ಲಭಿಸಬೇಕು. ಇದಕ್ಕಾಗಿ ಟೆಕ್ಸ್ಟ್‌ಬುಕ್

1s < 2s < 2p < 3s < 3p < 4s < 3d < 4p < 5s < ... ....

ಪ್ರತಿಯೊಂದು ಸಬ್‌ಶೆಲ್‌ಗಳಲ್ಲೂ ಹಿಡಿಯಬಹುದಾದ ಇಲೆಕ್ಟ್ರೋನುಗಳ ಸಂಖ್ಯೆಯನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ವರ್ಕ್‌ಶೀಟ್‌ಗಳನ್ನು ಕೊಡಬಹುದು. ಅಥವಾ ಪಟ್ಟಿ 1.4 ಪೂರ್ತಿಗೊಳಿಸಬಹುದು.

ಪ್ರತಿಯೊಂದು ಶೆಲ್ಲುಗಳ ಸಬ್‌ಶೆಲ್ಲುಗಳನ್ನು ತಿಳಿಯಲು ಟೆಕ್ಸ್ಟ್‌ಬುಕ್ಕಿನ ಹೊರತಾಗಿ ವರ್ಕ್‌ಶೀಟ್‌ಗಳನ್ನೂ ನೀಡಬಹುದಲ್ಲವೆ?

ಉದಾ:

- 2s ಎಂದರೆ ಸಿಗಬಹುದಾದ ಆಶಯಗಳು ಯಾವುವು?

  (ಎರಡನೇ ಶೆಲ್ಲಿನ (ಎರಡನೇ ಚೈತನ್ಯಮಟ್ಟದ) s ಸಬ್‌ಶೆಲ್)

- 3p - ಯಲ್ಲಿ ಗರಿಷ್ಠ ಎಷ್ಟು ಇಲೆಕ್ಟ್ರೋನ್‌ಗಳು ಇರಲು ಸಾಧ್ಯವಿದೆ.
- ಈ ಸಬ್‌ಶೆಲ್ಲಿನೊಂದಿಗೆ ಮೂರನೇ ಶೆಲ್ಲಿನಲ್ಲಿ ಕಾಣಲ್ಪಡುವ ಇತರ ಸಬ್‌ಶೆಲ್ಲುಗಳು ಯಾವುದಾಗಿರಬಹುದು?

## ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ

$_{3}$Li ಯ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯುವ ಮೂಲಕ ಚರ್ಚಿಸಿರಿ. ಇಲೆಕ್ಟ್ರೋನ್ ವಿನ್ಯಾಸವನ್ನು ಓದುವ ರೀತಿಯಲ್ಲಿ ಪರಿಚಯಿಸಿರಿ.

ಮುಂದೆ ಪಟ್ಟಿ 1.5 ಭರ್ತಿಗೊಳಿಸಲು ಗುಂಪಿನ ಆಧಾರದಲ್ಲಿ ಮಕ್ಕಳಿಗೆ ಸಾಧ್ಯವಾಗಬಹುದಲ್ಲವೇ.

ಐ.ಸಿ.ಟಿ. ಸಾಧ್ಯತೆಯಲ್ಲಿ ಇಲ್ಲಿ ಉಪಯೋಗಿಸಬಹುದು.

IT @ School KALZIUM

ಇಲ್ಲಿ ಗುಂಪು ಚಟುವಟಿಕೆಯಾಗಿ ಒಂದು ಸ್ಪರ್ಧೆಯನ್ನು ನಡೆಸಿದರೆ?

- ಅಟೋಮಿಕ್ ನಂಬರ್ ನೀಡಿ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆದು ಓದುವುದು.
- ತಪ್ಪಾದ ಸಬ್‌ಶೆಲ್ ವಿನ್ಯಾಸವನ್ನು ಕಂಡುಹಿಡಿಯುವುದು
- ತಪ್ಪಾದ ಇಲೆಕ್ಟ್ರೋನ್ ವಿನ್ಯಾಸವನ್ನು ಸರಿಮಾಡುವುದು.
- ಸಂಪೂರ್ಣವಿಲ್ಲದ ಇಲೆಕ್ಟ್ರೋನ್ ವಿನ್ಯಾಸವನ್ನು ಪೂರ್ತಿಗೊಳಿಸುವುದು.

ಈ ರೀತಿಯ ಚಟುವಟಿಕೆಗಳನ್ನು ಗುಂಪು ಸ್ಪರ್ಧೆಗೆ ಉಪಯೋಗಿಸಬಹುದು.

$_{19}$K ನ ವಲಯ ರೀತ್ಯಾ ಇಲೆಕ್ಟ್ರೋನ್ ವಿನ್ಯಾಸ 2,8,9 ಆಗಿರದೆ 2,8,8,1 ಆಗಿರುವುದು ಯಾಕೆ ಎಂದು ಸಬ್‌ಶೆಲ್ಲುಗಳ ಚೈತನ್ಯದ ಮತ್ತು ಚಿತ್ರ 1.2ನ್ನೂ ಆಧಾರವಾಗಿ ಗುಂಪಿನಲ್ಲಿ ಚರ್ಚಿಸಿ ಕಂಡುಹಿಡಿಯಲು ಸಾಧ್ಯವಿಲ್ಲವೇ?

ಹೆಚ್ಚಿನ ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯುವ ಚಟುವಟಿಕೆಗಳನ್ನು ನೀಡಬಹುದು.

$_{21}Sc$ $_{23}V$ etc.

ಇಲ್ಲಿ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯುವುದರ ವೈಶಿಷ್ಟ್ಯವನ್ನು ಚರ್ಚಿಸಬೇಕಾಗಿದೆ.

$_{21}Sc$ ನ ಶೆಲ್ ಇಲೆಕ್ಟ್ರೋನ್ ವಿನ್ಯಾಸ 2,8,9,2 ಆಗಿರುವುದನ್ನು ಚರ್ಚೆಗೆ ಒಳಪಡಿಸಬಹುದು. ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಸಂಕ್ಷಿಪ್ತವಾಗಿ ಬರೆಯುವ ರೀತಿಯನ್ನು ಪರಿಶೀಲಿಸಿರಿ.

$_{21}Sc \rightarrow [Ar]\ 3d^1\ 4s^2$

$_{20}Ca \rightarrow [Ar]\ 4s^2$

$_{12}Mg \rightarrow [Ne]\ 3s^2$

$_{27}Co \rightarrow [Ar]\ 3d^7\ 4s^2$

ಈ ರೀತಿ ತರಗತಿ ಕೋಣೆಗಳಲ್ಲಿ ವಿಶ್ಲೇಷಿಸಬಹುದಲ್ಲವೇ.

## ಕ್ರೋಮಿಯಂ ಮತ್ತು ಕೋಪರ್‌ನ ಇಲೆಕ್ಟ್ರೋನ್ ವಿನ್ಯಾಸದ ವಿಶೇಷತೆಗಳು

ಅರ್ಧ ತುಂಬಿದ ಸಬ್‌ಶೆಲ್‌ಗಳಿಗೂ ಪೂರ್ತಿ ತುಂಬಿದ ಸಬ್‌ಶೆಲ್‌ಗಳಿಗೂ ಕಡಿಮೆ ಚೈತನ್ಯವೂ ಹೆಚ್ಚು ಸ್ಥಿರತೆಯೂ ಇರುವುದು.

4ನೇ ಆವೃತ್ತಿಯಲ್ಲಿ ಕೆಲವು ಮೂಲವಸ್ತುವಿನ 4s ನಿಂದ ಒಂದು ಇಲೆಕ್ಟ್ರೋನ್ 3d ಗೆ ವರ್ಗಾಯಿಸಲ್ಪಟ್ಟು $3d^5$ or $3\ d^{10}$ ಕ್ರಮೀಕರಣ ಸಾಧ್ಯವಿದ್ದರೆ ಆ ಕ್ರಮೀಕರಣವನ್ನು ಸ್ವೀಕರಿಸಲಾಗುವುದು.

ಉದಾ : $_{24}Cr \rightarrow [Ar]\ 3d^5\ 4s^2$

$_{29}Cu \rightarrow [Ar]\ 3d^{10}\ 4s^1$

ಪೇಜ್ 13ರ ಪ್ರಶ್ನೆಯ ಉತ್ತರಗಳು

- 3 ಶೆಲ್‌ಗಳು
- 1ನೇ ಶೆಲ್ಲಿನಲ್ಲಿ 1s

2ನೇ ಶೆಲ್ಲಿನಲ್ಲಿ 2s, 2p

3ನೇ ಶೆಲ್ಲಿನಲ್ಲಿ 3s, 3p, 3d ಎಂದಾದರೆ ಇಲ್ಲಿ 3s ನಲ್ಲಿ ಮಾತ್ರವೇ ಇಲೆಕ್ಟ್ರೋನ್ ತುಂಬಲ್ಪಡುವುದು.

ಒಟ್ಟು ಇಲೆಕ್ಟ್ರೋನುಗಳ ಸಂಖ್ಯೆ 12

ಅಟೋಮಿಕ್ ನಂಬರ್ 12

$[Ne]\ 3s^2$ ಎಂದು ಸಂಕ್ಷಿಪ್ತವಾಗಿ ಬರೆಯಬಹುದು.

IT @ KALZIUM, TB ಮತ್ತು ಪೀರಿಯೋಡಿಕ್ ಟೇಬಲ್ ಎಂಬಿವುಗಳ ಸಹಾಯದೊಂದಿಗೆ s, p, d, f ಬ್ಲೋಕ್‌ಗಳನ್ನು ಪರಿಚಯಿಸಬಹುದಲ್ಲವೇ, ಈ ಬ್ಲೋಕ್‌ನ ಮೂಲವಸ್ತುಗಳನ್ನು ಕಂಡುಹಿಡಿಯುವುದಕ್ಕಾಗಿ ಪಟ್ಟಿ 1.7 ನ್ನು ಮಕ್ಕಳು ಭರ್ತಿಗೊಳಿಸಲಿ.

| ಮೂಲವಸ್ತು | ಅಟೋಮಿಕ್ ನಂಬರ್ | ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ | ಕೊನೆಯ ಇಲೆಕ್ಟ್ರೋನ್‌ಗಳು ತುಂಬಲ್ಪಡುವ ಸಬ್‌ಶೆಲ್ | ಬ್ಲೋಕ್ |
|---|---|---|---|---|
| Li | 3 | $1s^2\ 2s^1$ | s | s |
| Mg | 12 | $1s\ ...\ 3s^2$ | s | s |
| N | 7 | $...\ 2p^3$ | p | p |
| Sc | 21 | $[Ar]\ 3d^1 4s^2$ | d | d |

ಆವರ್ತಕ ಪಟ್ಟಿಯನ್ನು ನೋಡಿ ಬ್ಲೋಕ್ ಕಂಡುಹಿಡಿದುದರಿಂದ ಕೊನೆಯ ಇಲೆಕ್ಟ್ರೋನ್ ತುಂಬಲ್ಪಟ್ಟ ಸಬ್‌ಶೆಲ್ಲೂ ಆ ಮೂಲವಸ್ತು ಒಳಗೊಂಡ ಬ್ಲೋಕುಗಳೊಳಗಿರುವ ಸಂಬಂಧವನ್ನು ಮಕ್ಕಳು ಕಂಡುಹಿಡಿಯಲಿ. ಹೆಚ್ಚಿನ ಮೂಲವಸ್ತುಗಳನ್ನು ನೀಡಿ ಗ್ರೂಪ್‌ನಲ್ಲಿ ಮಕ್ಕಳು ಕಂಡುಹಿಡಿಯುವ ಬ್ಲೋಕುಗಳು ಸರಿಯಾಗಿದೆಯೋ ಎಂದು IT, TB ಎಂಬಿವುಗಳ ಸಹಾಯದಿಂದ ಅವರು ದೃಢೀಕರಿಸಲಿ.

ಹೆಚ್ಚು ಪ್ರಶ್ನೆಗಳ ಅಥವಾ ವರ್ಕ್‌ಶೀಟ್‌ಗಳ ಆಧಾರದಲ್ಲಿ ಆಶಯಗಳನ್ನು ಕ್ರೋಡೀಕರಿಸಬಹುದು.

ಕೆಲವು ಪ್ರಶ್ನೆಗಳು :

- ಮೂಲವಸ್ತುಗಳ ಕೊನೆಯ ಇಲೆಕ್ಟ್ರೋನ್‌ಗಳು ತುಂಬಲ್ಪಡುವ ಸಬ್‌ಶೆಲ್ಲುಗಳು ಮತ್ತು ಬ್ಲೋಕ್‌ಗಳೊಳಗಿನ ಸಂಬಂಧ ಯಾವುದು?
- s ಬ್ಲೋಕ್ ಮೂಲವಸ್ತುಗಳು ಕಂಡುಬರುವ ಗುಂಪುಗಳು ಯಾವುವು?
- s ಬ್ಲೋಕ್ ಮೂಲವಸ್ತುಗಳು ಯಾವ ಯಾವ ಸಂಯೋಜಕತೆಗಳನ್ನು ತೋರಿಸಬಹುದು.
- p, d ಬ್ಲೋಕ್ ಮೂಲವಸ್ತುಗಳು ಯಾವ ಯಾವ ಗುಂಪುಗಳಲ್ಲಿ ಕಂಡುಬರುವುದು?

## ಮೋಡ್ಯೂಲ್ 2

ಸಮಯ : 3 ಪೀರಿಯಡ್

**ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಆವೃತ್ತಿಯ ಸಂಖ್ಯೆಯನ್ನು ಕಂಡು ಹಿಡಿಯುವ ರೀತಿ.**

ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದಲ್ಲಿ ಅತೀ ದೊಡ್ಡ ಶೆಲ್‌ನ ಸಂಖ್ಯೆಯೇ ಆವೃತ್ತಿಯ ಸಂಖ್ಯೆ.

ಈ ಆಶಯ ಗಳಿಸಲು ಪಟ್ಟಿ 1.8ನ್ನು ಮಕ್ಕಳು ಭರ್ತಿಗೊಳಿಸಲಿ. ಅವರು ಕಂಡುಹಿಡಿದ ಪೀರಿಯಡ್ ನಂಬರ್ ಸರಿಯಾಗಿದೆಯೇ ಎಂದು ಆವರ್ತಕ ಪಟ್ಟಿಯನ್ನು ನೋಡಿ ದೃಢೀಕರಿಸಲು ಅವಕಾಶವನ್ನು ನೀಡುವಿರಲ್ಲವೇ.

ಹೆಚ್ಚಿನ ಮೂಲವಸ್ತುವನ್ನು ನೀಡಿ ಪಟ್ಟಿಯನ್ನು ವಿಸ್ತರಿಸಲು ಪ್ರಯತ್ನಿಸಬೇಕಾಗಿದೆ.

**s ಬ್ಲೋಕ್ ಮೂಲವಸ್ತುಗಳ ಗ್ರೂಪ್ ನಂಬರ್**

s ಬ್ಲೋಕ್ ಮೂಲವಸ್ತುಗಳ ಬಾಹ್ಯ s ಸಬ್‌ಶೆಲ್‌ನ ಇಲೆಕ್ಟ್ರೋನ್‌ಗಳ ಸಂಖ್ಯೆಯೇ ಗುಂಪಿನ ನಂಬರ್.

s ಸಬ್‌ಶೆಲ್‌ನಲ್ಲಿ ಇಲೆಕ್ಟ್ರೋನ್ ತುಂಬಲ್ಪಡುವ ಮೂಲವಸ್ತುಗಳನ್ನು s ಬ್ಲೋಕ್ ಮೂಲವಸ್ತುಗಳೆಂದು ಮಕ್ಕಳು ತಿಳಿದಿರುವರು.

ಯಾಂತ್ರಿಕವಾಗಿ ಪಟ್ಟಿ ಭರ್ತಿಗೊಳಿಸದೆ s ಬ್ಲೋಕ್‌ನಲ್ಲಿ ಎಷ್ಟು ಗುಂಪುಗಳು ಕಂಡುಬರಬಹುದೆಂಬುದು, ಹೇಗೆ ಅವುಗಳನ್ನು ಗುರುತಿಸಬಹುದೆಂಬ ಎಂಬೀ ಸೂಚನೆಗಳನ್ನೊಳಗೊಂಡ ಸಣ್ಣ ಚರ್ಚೆಗಳ ನಂತರ ಪಟ್ಟಿ 1.9ನ್ನು ಭರ್ತಿಗೊಳಿಸಿದರೆ s ಬ್ಲೋಕ್ ಮೂಲವಸ್ತುಗಳ ಗುಂಪು ನಂಬರ್ ಕಂಡುಹಿಡಿಯುವ ಕೌಶಲ್ಯವು ಮಗುವಿಗೆ ತಿಳಿಯಬಹುದಲ್ಲವೇ.

1ನೇ ಗುಂಪು ಮೂಲವಸ್ತುಗಳಾದ ಕ್ಷಾರೀಯ ಲೋಹಗಳು +1 ಉತ್ಕರ್ಷಣಾ ಸ್ಥಿತಿಯನ್ನೂ ಎರಡನೇ ಗ್ರೂಪ್ ಮೂಲವಸ್ತುಗಳು ಕ್ಷಾರೀಯ ಮೃತ್ತಿಕಾ ಲೋಹಗಳು +2 ಉತ್ಕರ್ಷಣಾ ಸ್ಥಿತಿಯನ್ನು ಗಳಿಸಲಿರುವ ಕಾರಣವನ್ನು ಪೂರ್ವಜ್ಞಾನದ ಆಧಾರದಲ್ಲಿ ಚರ್ಚಿಸಿ ಕ್ರೋಡೀಕರಿಸಬಹುದಲ್ಲವೇ.

ಟಿ.ಬಿ. ನ ಪ್ರಶ್ನೆಗಳನ್ನೂ, ವರ್ಕ್‌ಶೀಟ್‌ಗಳನ್ನೂ ಉಪಯೋಗಿಸಬಹುದು.

ಲ್ಯಾಬ್‌ನಲ್ಲಿ ಲಭಿಸುವ ಆಲ್ಕಲಿಗಳ ಲಿಟ್ಮಸ್ ಟೆಸ್ಟ್ ನಡೆಸಲು ಮಕ್ಕಳಿಗೆ ಅವಕಾಶವನ್ನು ನೀಡಬೇಕು.

ಪಾಠಪುಸ್ತಕದಲ್ಲಿ s ಬ್ಲೋಕ್ ಮೂಲವಸ್ತುಗಳ ಕೆಲವು ವಿಶೇಷತೆಗಳನ್ನು ನೀಡಲಾಗಿದೆ. 9ನೇ ತರಗತಿಯಲ್ಲಿ ಆವರ್ತನ ಒಲವು ಮಕ್ಕಳು ತಿಳಿದಿರುತ್ತಾರೆ. ಅವುಗಳನ್ನು ಹೊಸ ಸಂದರ್ಭದಲ್ಲಿ s ಬ್ಲೋಕ್ ಮೂಲವಸ್ತುಗಳ ಆಧಾರದಲ್ಲಿ ಪುನಃ ಚರ್ಚಿಸಿ ಪ್ರತಿಯೊಂದು ವಿಶೇಷತೆಯ ಕಾರಣವನ್ನು ಕಂಡುಹಿಡಿಯಲು ಸಾಧ್ಯವಿದೆ.

## p ಬ್ಲೋಕ್ ಮೂಲವಸ್ತುಗಳ ಗುಂಪಿನ ಸಂಖ್ಯೆ

s, p ಬ್ಲೋಕ್ ಮೂಲವಸ್ತುಗಳು 13 ರಿಂದ 18 ನೇ ಗುಂಪಿನ ಮೂಲವಸ್ತುಗಳು ಪ್ರತಿನಿಧಿಸುವ ಮೂಲವಸ್ತುಗಳಾಗಿವೆ. 13ರಿಂದ 18ರ ವರೆಗಿನ ಗುಂಪುಗಳ ಮೂಲವಸ್ತುಗಳು p ಬ್ಲೋಕಿನಲ್ಲಿರುವುದು.

ಆವರ್ತಕ ಪಟ್ಟಿಯಲ್ಲಿ s ಬ್ಲೋಕ್ ಮೂಲವಸ್ತುಗಳು ಮತ್ತು d ಬ್ಲೋಕ್ ಮೂಲವಸ್ತುಗಳ ನಂತರ ಬಲಭಾಗದಲ್ಲಿ p ಬ್ಲೋಕ್ ಮೂಲವಸ್ತುಗಳು ಕಂಡುಬರುತ್ತವೆ. s ಮತ್ತು d ಸಬ್‌ಶೆಲ್ಲುಗಳಲ್ಲಿ ತುಂಬಬಹುದಾದ ಗರಿಷ್ಠ ಇಲೆಕ್ಟ್ರೋನುಗಳ ಸಂಖ್ಯೆಯು ಕ್ರಮವಾಗಿ 2 ಮತ್ತು 10. ಇದರ ಆಧಾರದಲ್ಲಿ p ಬ್ಲೋಕ್ ಮೂಲವಸ್ತುಗಳ ಗುಂಪನ್ನು ನಿರ್ಧರಿಸುವುದು ಹೆಚ್ಚು ಸಮರ್ಪಕವಾಗುವುದು. ಈ ಚರ್ಚೆಯ ನಂತರ ಪಟ್ಟಿ 1.10ನ್ನು ವಿಶ್ಲೇಷಿಸಿದರೆ ಆಶಯ ರೂಪೀಕರಣ ಸರಳವಾಗಬಹುದು.

p ಬ್ಲೋಕ್ ಮೂಲವಸ್ತುಗಳ ವಿಶೇಷತೆಗಳನ್ನು ಐಸಿಟಿಯ ಸಹಾಯದಿಂದ ಮಕ್ಕಳು ಸ್ವತಃ ಕಂಡುಹಿಡಿದು ಪಟ್ಟಿ 1.11ನ್ನು ಭರ್ತಿಗೊಳಿಸಲಿ.

ಇತರ ವೈಶಿಷ್ಟ್ಯಗಳನ್ನು ಚರ್ಚಿಸಬಹುದು.

- p ಬ್ಲೋಕ್ ಮೂಲವಸ್ತುಗಳಲ್ಲಿ ಅತೀ ಹೆಚ್ಚು ಕ್ರಿಯಾಶೀಲತೆ 17ನೇ ಗುಂಪಿನ ಮೂಲವಸ್ತುಗಳಿಗಿರುವುದೆಂದು ಬಾಹ್ಯ ಸಬ್‌ಶೆಲ್‌ನ ಇಲೆಕ್ಟ್ರೋನ್ ಸಂಖ್ಯೆಯನ್ನು ಆಧಾರವಾಗಿರಿಸಿ ಕಂಡುಹಿಡಿಯಬಹುದಲ್ಲವೆ. ಇವುಗಳು p ಸಬ್‌ಶೆಲ್ ಪೂರ್ತಿಗೊಳಿಸಿ ಅಷ್ಟಕ ವ್ಯವಸ್ಥೆಯನ್ನು ಗಳಿಸಲು ಪ್ರಯತ್ನಿಸುವುದರಿಂದ ಸಾಮಾನ್ಯವಾಗಿ –1 ಉತ್ಕರ್ಷಣಾ ಸ್ಥಿತಿಯನ್ನು ಗಳಿಸುವುದು. ಇವುಗಳಿಗೆ ಅಲೋಹೀಯ ಸ್ವಭಾವವು ಹೆಚ್ಚಿರುವುದು.

## ಲೋಹೀಯ ಸ್ವಭಾವ

p ಸಬ್‌ಶೆಲ್ಲಿನಲ್ಲಿ ಒಂದು ಇಲೆಕ್ಟ್ರೋನ್ ಇರುವವುಗಳೇ 13ನೇ ಗುಂಪಿನ ಮೂಲವಸ್ತುಗಳು. ಇವುಗಳು 3 ಇಲೆಕ್ಟ್ರೋನುಗಳನ್ನು ಬಿಟ್ಟುಕೊಡುವ ಒಲವು ಇರುವುದರಿಂದ +3 ಉತ್ಕರ್ಷಣಾ ಸ್ಥಿತಿಯನ್ನು ತೋರಿಸುವುದು. ಇವುಗಳಿಗೆ ಲೋಹೀಯ ಸ್ವಭಾವವು ಹೆಚ್ಚು ಇರುವುದು.

p - ಬ್ಲೋಕಿನಲ್ಲಿ -ve ಮತ್ತು +ve ಉತ್ಕರ್ಷಣಾ ಸ್ಥಿತಿಯನ್ನು ಪ್ರದರ್ಶಿಸುವ ಮೂಲವಸ್ತುಗಳಿವೆ.

19 ನೇ ಪುಟದಲ್ಲಿರುವ ಪ್ರಶ್ನೆಯ ವಿಶ್ಲೇಷಣೆ

ಪರಮಾಣು ಸಂಖ್ಯೆ 16 ಆಗಿರುವ ಮೂಲವಸ್ತುವಿನ

- ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ : $1s^2 2s^2 2p^6 3s^2 3p^4$
- ಗುಂಪಿನ ಸಂಖ್ಯೆ : 16
- ಆವೃತ್ತಿ ಸಂಖ್ಯೆ : 3
- ಬ್ಲೋಕ್ : p

  $3s^2 3p^5$ ಎಂಬ ಬಾಹ್ಯ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಹೊಂದಿರುವ ಒಂದು ಮೂಲವಸ್ತುವಿನ ಪೂರ್ಣ ಇಲೆಕ್ಟ್ರೋನ್ ವಿನ್ಯಾಸವು : $1s^2 2s^2 2p^6 3s^2 3p^5$
- ಪರಮಾಣು ಸಂಖ್ಯೆ : 17
- ಆವೃತ್ತಿಯ ಸಂಖ್ಯೆ : 3
- ಅಲೋಹ ಮೂಲವಸ್ತು
- ಸಂಯೋಜಕತೆ – 1

## d ಬ್ಲೋಕ್ ಮೂಲವಸ್ತುಗಳ ಗುಂಪಿನ ಸಂಖ್ಯೆ

d ಬ್ಲೋಕ್ ಮೂಲವಸ್ತುಗಳ ಗುಂಪು 13ರಿಂದ 12ರ ವರೆಗಿನ ಮೂಲವಸ್ತು. s ಬ್ಲೋಕ್ ಮೂಲವಸ್ತುಗಳ ನಂತರವಾಗಿರುವುದು. ಇವುಗಳ ಗುಂಪಿನ ಸಂಖ್ಯೆಯನ್ನು ಕಂಡುಹಿಡಿಯಲು ಬಾಹ್ಯ s ಸಬ್‌ಶೆಲ್ಲಿನ ಇಲೆಕ್ಟ್ರೋನಿನ ಸಂಖ್ಯೆ + d ಯ ಇಲೆಕ್ಟ್ರೋನುಗಳ ಸಂಖ್ಯೆ. ಆದರೆ ಸ್ಥಿರತೆಯನ್ನು ಗಳಿಸುವುದಕ್ಕಾಗಿ ಕೆಲವೊಮ್ಮೆ ಇಲೆಕ್ಟ್ರೋನುಗಳು s ನಿಂದ d ಶೆಲ್ಲಿಗೆ ಹೋಗುವುದಿದೆ. ಆದುದರಿಂದ,

*d ಬ್ಲೋಕ್ ಮೂಲವಸ್ತುಗಳ ಬಾಹ್ಯ s ಸಬ್‌ಶೆಲ್‌ನ ಇಲೆಕ್ಟ್ರೋನುಗಳ ಸಂಖ್ಯೆ ಮತ್ತು ಅತಿ ಹತ್ತಿರದ d ಸಬ್‌ಶೆಲ್‌ನ ಇಲೆಕ್ಟ್ರೋನುಗಳ ಸಂಖ್ಯೆಯ ಮೊತ್ತಕ್ಕೆ ಇವುಗಳ ಗುಂಪಿನ ಸಂಖ್ಯೆಯು ಸಮಾನವಾಗಿರುವುದು.*

ಪಟ್ಟಿ 1.12 ನ್ನು ವಿಶ್ಲೇಷಣೆ ಮತ್ತು ಚರ್ಚೆಗೆ ಒಳಪಡಿಸಿ ಇವುಗಳ ಗುಂಪು ಸಂಖ್ಯೆಯನ್ನು ಕಂಡುಹಿಡಿಯಬಹುದು.

## d ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳು

- ಇವುಗಳು ಮಧ್ಯಸ್ಥ ಮೂಲವಸ್ತುಗಳಾಗಿವೆ.
- ಲೋಹಗಳಾಗಿವೆ.
- ಕೊನೆಯ ಇಲೆಕ್ಟ್ರೋನ್ ತುಂಬಲ್ಪಡುವುದು. ಉಪಾಂತ್ಯವಲಯದಲ್ಲಾಗಿರುತ್ತದೆ. ಇವುಗಳು ಆವರ್ತಕ ಪಟ್ಟಿಯಲ್ಲಿ 3ರಿಂದ 12 ವರೆಗಿರುವ ಗುಂಪುಗಳಾಗಿ ಕಂಡುಬರುವುದು.

ಗುಂಪಿನಲ್ಲಿ ಸಮಾನ ಸ್ವಭಾವವನ್ನು ಪ್ರದರ್ಶಿಸುತ್ತವೆ.

ಪರಮಾಣುವಿನ ಬಾಹ್ಯ ವಲಯದ ಇಲೆಕ್ಟ್ರೋನುಗಳು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವುದು. ಪ್ರತಿಯೊಂದು ಗುಂಪಿನ ಮೂಲವಸ್ತುಗಳ ಬಾಹ್ಯವಲಯದಲ್ಲಿ ಸಮಾನ ಸಂಖ್ಯೆಯ ಇಲೆಕ್ಟ್ರೋನುಗಳಿರುವುದು. ಈ ರೀತಿಯ ಚರ್ಚೆಯ ಮೂಲಕ ಗುಂಪಿನಲ್ಲಿ ಸಮಾನ ಸ್ವಭಾವವನ್ನು ಪ್ರದರ್ಶಿಸುತ್ತದೆ ಎಂಬುದನ್ನು ವಿವರಿಸಬಹುದಲ್ಲವೇ?

ಪ್ರತಿನಿಧೀಕರಿಸುವ ಮೂಲವಸ್ತುಗಳು ಆವೃತ್ತಿಯಲ್ಲಿ ಸಮಾನ ಸ್ವಭಾವವನ್ನು ಪ್ರದರ್ಶಿಸುತ್ತವೆಯೇ ? ಚರ್ಚಿಸಬಹುದು. ಪಟ್ಟಿ 1.13ನ್ನು ವಿಶ್ಲೇಷಿಸಿd ಬ್ಲೋಕ್ ಮೂಲವಸ್ತುಗಳು ಆವೃತ್ತಿಯಲ್ಲಿ ಮತ್ತು ಗುಂಪಿನಲ್ಲಿ ಸಮಾನ ಸ್ವಭಾವವನ್ನು ಪ್ರದರ್ಶಿಸುವ ಕಾರಣವನ್ನು ಮಕ್ಕಳು ಕಂಡುಹಿಡಿಯಲಿ.

## d ಬ್ಲೋಕ್ ಮೂಲವಸ್ತುಗಳ ಉತ್ಕರ್ಷಣಾ ಸ್ಥಿತಿ

ಒಂದು ಯೌಗಿಕದಲ್ಲಿ ಪ್ರತಿಯೊಂದು ಪರಮಾಣುಗಳ ಉತ್ಕರ್ಷಣಾ ಸ್ಥಿತಿಯನ್ನು ಕಂಡುಹಿಡಿಯುವ ರೀತಿ 9ನೇ ತರಗತಿಯಲ್ಲಿ ಸೇರಿಸಲಾಗಿದೆ. ಆ ಆಶಯವನ್ನು ಮಗು ಗಳಿಸಿದೆಯೆಂದು ದೃಢೀಕರಿಸಬೇಕು.

ಉದಾ : : NaCl ಅಣುವಿನಲ್ಲಿ Cl-ನ ಉತ್ಕರ್ಷಣಾ ಸ್ಥಿತಿ – 1 ಆದರೆ Na ಯ ಉತ್ಕರ್ಷಣಾ ಸ್ಥಿತಿ ಎಷ್ಟಾಗಿರಬಹುದು?

## ವರ್ಕ್‌ಶೀಟ್ 1

| ಅಣು | ಯೌಗಿಕದಲ್ಲಿ ಪರಮಾಣುವಿನ ಉತ್ಕರ್ಷಣಾ ಸ್ಥಿತಿ | ಯೌಗಿಕದಲ್ಲಿ ಪರಮಾಣುಗಳ ಉತ್ಕರ್ಷಣಾ ಸ್ಥಿತಿಯ ಒಟ್ಟು ಮೊತ್ತ | ಇತರ ಘಟಕ ಪರಮಾಣುವಿನ ಉತ್ಕರ್ಷಣಾಸ್ಥಿತಿ |
|---|---|---|---|
| $Na_2O$ | Na $\rightarrow$ +1 | 0 | - |
| HCl | Cl $\rightarrow$ -1 | 0 | - |

$FeCl_2$, $FeCl_3$ ನಲ್ಲಿ Fe ಯ ಉತ್ಕರ್ಷಣಾ ಸ್ಥಿತಿಯನ್ನು ಕಂಡುಹಿಡಿದು ಪಟ್ಟಿ 1.14ನ್ನು ಭರ್ತಿಗೊಳಿಸಿರಿ.

| ಯೌಗಿಕಗಳು | Fe ಯ ಉತ್ಕರ್ಷಣಾ ಸ್ಥಿತಿ | Fe ಯ ಅಯೋನುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ |
|---|---|---|
| $FeCl_2$ | +2 | $Fe^{2+}$-[Ar]$3d^6$ |
| $FeCl_3$ | +3 | $Fe^{3+}$-[Ar]$3d^5$ |

Fe ಯ ಉತ್ಕರ್ಷಣಾ ಸ್ಥಿತಿಯು $FeCl_2$-ನಲ್ಲಿ +2 ಮತ್ತು $FeCl_3$ ನಲ್ಲಿ +3 ಗಳಿಸಿರುವುದನ್ನು ಪಾಠಪುಸ್ತಕದಲ್ಲಿ ನೀಡಿರುವ ಚರ್ಚೆಯ ಆಧಾರದಲ್ಲಿ ಅರ್ಥವಾಗಬಹುದಲ್ಲವೇ?

ಮಧ್ಯಸ್ಥ ಮೂಲವಸ್ತುಗಳ ಬಾಹ್ಯ ಸಬ್‌ಶೆಲ್‌ನ ಮತ್ತು ಅದಕ್ಕಿಂತ ಮೊದಲಿನ d ಸಬ್‌ಶೆಲ್‌ಗಳೊಳಗೆ ಚೈತನ್ಯದಲ್ಲಿ ಸಣ್ಣ ವ್ಯತ್ಯಾಸ ಮಾತ್ರವೇ ಇರುವುದು. ಇದು ಚಿತ್ರ 1.2 ರಲ್ಲಿ ವಿವರಿಸಲಾಗಿದೆ.

ಇದರ ಆಧಾರದಲ್ಲಿ d ಬ್ಲೋಕ್ ಮೂಲವಸ್ತುಗಳು ವಿಭಿನ್ನ ಉತ್ಕರ್ಷಣಾ ಸ್ಥಿತಿ ಗಳಿಸಲಿರುವ ಕಾರಣವನ್ನು ಕಂಡುಹಿಡಿಯಬಹುದಲ್ಲವೇ?

ಈ ಚರ್ಚೆಯ ಆಧಾರದಲ್ಲಿ ಪಟ್ಟಿ 1.15ನ್ನು ಭರ್ತಿಗೊಳಿಸಬಹುದು.

| ಯೌಗಿಕ | Mn ನ ಉತ್ಕರ್ಷಣಾ ಸ್ಥಿತಿ | ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ |
|---|---|---|
| $MnCl_2$ | +2 | $1s^2 2s^2 2p^6 3s^2 3p^6 3d^5$ |
| $MnO_2$ | +4 | $1s^2 2s^2 2p^6 3s^2 3p^6 3d^3$ |
| $Mn_2O_3$ | +3 | $1s^2 2s^2 2p^6 3s^2 3p^6 3d^4$ |
| $Mn_2O_7$ | +7 | $1s^2 2s^2 2p^6 3s^2 3p^6$ |

**ವರ್ಣಯುಕ್ತ ಯೌಗಿಕಗಳು**

ಬಣ್ಣವಿರುವ ಲವಣಗಳಲ್ಲಿ ಹೆಚ್ಚಿನವುಗಳೂ ಮಧ್ಯಸ್ಥ ಮೂಲವಸ್ತುಗಳ ಯೌಗಿಕಗಳಾಗಿವೆ. ಅವುಗಳಲ್ಲಿರುವ ಮಧ್ಯಸ್ಥ ಮೂಲವಸ್ತುಗಳ ಅಯೋನ್‌ಗಳು ಬಣ್ಣಕ್ಕೆ ಕಾರಣವಾಗಿದೆ ಎಂದು ಈ ಭಾಗದಿದ ಕ್ರೋಢೀಕರಿಸಬೇಕು. ಕೋಪರ್ ಸಲ್ಫೇಟ್, ಫೆರಸ್ ಸಲ್ಫೇಟ್ ಮುಂತಾದವುಗಳ ಬಣ್ಣವು ಮಕ್ಕಳಿಗೆ ದ್ರಾವಣಗಳಿಂದ ಅರ್ಥವಾಗಬಹುದಲ್ಲವೇ. ನಂತರ $MgSO_4$, $Na_2SO_4$ ಎಂಬಿವುಗಳ ದ್ರಾವಣಗಳನ್ನು ನಿರೀಕ್ಷಣೆ ಮಾಡಲು ಹೇಳಬೇಕು. ಇದರಿಂದ ($SO_4^{2-}$ ) ರೇಡಿಕಲ್‌ನ ಸಾನ್ನಿಧ್ಯವು ದ್ರಾವಣಗಳ ಬಣ್ಣಕ್ಕೆ ಕಾರಣವಲ್ಲವೆಂದು ಅರ್ಥವಾಗುವುದು. ಮಧ್ಯಸ್ಥ ಮೂಲವಸ್ತುಗಳ ಅಯೋನುಗಳ ಸಾನ್ನಿಧ್ಯವು ದ್ರಾವಣಗಳ ಬಣ್ಣಕ್ಕೆ ಕಾರಣವೆಂದು ಗುರುತಿಸಿ ತಿಳಿಯಲು ಸಾಧ್ಯವಾಗುವುದು.

| | | |
|---|---|---|
| $d^0$ | $Sc^{3+}$ | ಬಣ್ಣವಿಲ್ಲ |
| $d^1$ | $Ti^{3+}$ | ಪರ್ಪಲ್ |
| $d^2$ | $V^{3+}$ | ಹಸಿರು |
| $d^3$ | $Cr^{3+}$ | ಹಸಿರು |
| $d^5$ | $Mn^{2+}$ | ಪಿಂಕ್ |
| $d^6$ | $Fe^{2+}$ | ಎಲೆ ಹಸಿರು |
| $d^7$ | $Co^{2+}$ | ಪಿಂಕ್ |
| $d^8$ | $Ni^{2+}$ | ಹಸಿರು |
| $d^9$ | $Cu^{2+}$ | ಹಸಿರು |
| $d^{10}$ | $Zn^{2+}$ | ಬಣ್ಣವಿಲ್ಲ |
| $d^5$ | $Fe^{2+}$ | ಹಳದಿ |

ಐ.ಸಿ.ಟಿ.ಯ ಸಹಾಯದೊದಿಗೆ ಹೆಚ್ಚು ಬಣ್ಣವನ್ನು ಪರಿಶೋಧಿಸಿರಿ.

| ದ್ರಾವಣ | ಬಣ್ಣವಿಲ್ಲ |
|---|---|
| $MnCl_2$ | ನೀಲಿ |
| $CuSO_4$ | ಹಸಿರು |
| $NiSO_4$ | ಹಸಿರು |
| $FeSO_4$ | ಎಲೆ ಹಸಿರು |
| $MgSO_4$ | ಬಣ್ಣವಿಲ್ಲ |
| $CuCl_2$ | ನೀಲಮಿಶ್ರಿತ ಹಸಿರು |
| $Co(NO_3)_2$ | ಪಿಂಕ್ |

**ಹೆಚ್ಚಿನ ಮಾಹಿತಿಗಾಗಿ**

## ವರ್ಣಯುಕ್ತ ಅಯೋನುಗಳು

ಕೆಲವು ಮಧ್ಯಸ್ಥ ಮೂಲವಸ್ತುಗಳ ಯೌಗಿಕಗಳು ಘನಸ್ಥಿತಿ ಅಥವಾ ದ್ರಾವಣಸ್ಥಿತಿಯಲ್ಲಿರುವಾಗ ಬಣ್ಣವಿರುವವುಗಳಾಗಿವೆ.

ಉದಾ: $Ti^{3+}$ ಅಯೋನ್ - ಪರ್ಪಲ್

$V^{3+}$ ಅಯೋನ್ - ಹಸಿರು

$Cu^{2+}$ ಅಯೋನ್ - ನೀಲಿ

$Fe^{2+}$ ಅಯೋನ್ - ಎಲೆ ಹಸಿರು

ಇನ್ನೂ ಕೆಲವು ಬಣ್ಣವಿಲ್ಲದ್ದೂ ಇವೆ. ಉದಾ: $Sc^{3+}$, $Ti^{4+}$, $Zn^{2+}$ ಮುಂತಾದವುಗಳು.

d ಓರ್ಬಿಟುಗಳಲ್ಲಿರುವ ಜೊತೆಯಾಗಿರದ ಇಲೆಕ್ಟ್ರೋನುಗಳ ಸಾನ್ನಿಧ್ಯವೇ ಇಲ್ಲಿ ಬಣ್ಣಕ್ಕೆ ಕಾರಣವಾಗಿದೆ. ಯೌಗಿಕಗಳು ಉಂಟಾಗುವಾಗ ಮಧ್ಯಸ್ಥ ಮೂಲವಸ್ತುಗಳ d ಸಬ್‌ಶೆಲ್ಲಿನ ಓರ್ಬಿಟುಗಳು ಎರಡು ವಿಭಿನ್ನ ಚೈತನ್ಯ ಮಟ್ಟಗಳಾಗಿ ವಿಭಜಿಸಲ್ಪಡುವುದು. ಈ ಚೈತನ್ಯ ಮಟ್ಟಗಳೊಳಗೆ ಚೈತನ್ಯದ ವ್ಯತ್ಯಾಸ ಅತಿ ಕಡಿಮೆಯಾಗಿರುವುದು. ಆದುದರಿಂದ ಒಂದು ಚೈತನ್ಯ ಮಟ್ಟದಿಂದ ಮುಂದಿನ ಚೈತನ್ಯ ಮಟ್ಟಕ್ಕೆ ಇಲೆಕ್ಟ್ರೋನುಗಳನ್ನು ಉತ್ತೇಜಿಸಲು ಕಡಿಮೆ ಚೈತನ್ಯವು ಸಾಕಾಗುವುದು. ದೃಶ್ಯ ಬೆಳಕಿಗೆ ಇದನ್ನು ಸುಲಭದಲ್ಲಿ ಒದಗಿಸಲು ಸಾಧ್ಯ ಆದುದರಿಂದ ಮಧ್ಯಸ್ಥ ಮೂಲವಸ್ತುಗಳ ಯೌಗಿಕಗಳಲ್ಲಿ d ಇಲೆಕ್ಟ್ರೋನುಗಳು ದೃಶ್ಯ ಬೆಳಕಿನ ಬಣ್ಣಗಳನ್ನು ಹೀರುವುದರೊಂದಿಗೆ ಒಂದು ಚೈತನ್ಯ ಮಟ್ಟದಿಂದ ಮುಂದಿನ ಚೈತನ್ಯ ಮಟ್ಟಕ್ಕೆ ಹಾರುವುದು. ಇದರ ಫಲವಾಗಿ ಮಧ್ಯಸ್ಥ ಮೂಲವಸ್ತುಗಳ ಯೌಗಿಕಗಳು ವರ್ಣಯುಕ್ತವಾಗಿ ಕಾಣುವುದು.

$CuSO_4.5H_2O$ ಎಂಬ ಯೌಗಿಕವು ನೀಲ ಬಣ್ಣದಿಂದ ಕಾಣಲು ಕಾರಣ ಅದು ಕಿತ್ತಳೆ ಬಣ್ಣವನ್ನು ಹೀರುವುದರೊಂದಿಗೆ ನೀಲಬಣ್ಣವನ್ನು ಪ್ರತಿಫಲಿಸುವುದು.

Zn, Cd, Hg ಮುಂತಾದ ಮಧ್ಯಸ್ಥ ಮೂಲವಸ್ತುಗಳು ಬಣ್ಣದ ಯೌಗಿಕಗಳನ್ನು ಉಂಟುಮಾಡುವುದಿಲ್ಲ. (ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ CdS, HgI ಮುಂತಾದ ಯೌಗಿಕಗಳಲ್ಲಿ ಬಣ್ಣವನ್ನು ಉಂಟುಮಾಡಬಹುದು. ಇದು ಘನಾವಸ್ಥೆಯ ವಿಶೇಷ ಸ್ವಭಾವದಿಂದಾಗಿದೆ.) ಕಾರಣ ಅವುಗಳ d ಸಬ್‌ಶೆಲ್‌ಗಳು ಪೂರ್ಣವಾಗಿ ತುಂಬಲ್ಪಟ್ಟವುಗಳಾಗಿವೆ. d ಇಲೆಕ್ಟ್ರೋನುಗಳು ಇಲ್ಲದಿರುವುದರಿಂದ $Sc^{3+}$, $Ti^{4+}$ ಎಂಬೀ ಅಯೋನುಗಳೂ ಬಣ್ಣದ ಯೌಗಿಕಗಳನ್ನುಂಟುಮಾಡುವುದಿಲ್ಲ.

$Sc^{3+}$ - $1s^2 2s^2 2p^6 3s^2 3p^6$

$CdCl_2$ ವಿಗೆ ಬಣ್ಣವಿಲ್ಲ.

CdS ಗೆ ಹಳದಿ ಬಣ್ಣವಿರುವುದು. ಇದಕ್ಕೆ ಕಾರಣ $S^{2-}$ನಿಂದ $Cd^{2+}$ ಗೆ ನಡೆಯುವ charge transfer ಆಗಿದೆ.

$KMnO_4$ ನ Mn -ನಲ್ಲಿ d ಸಬ್‌ಶೆಲ್‌ನಲ್ಲಿ ಇಲೆಕ್ಟ್ರೋನ್ ಇಲ್ಲ. $MnO^-_4$ ನಲ್ಲಿ Mn ನ ಉತ್ಕರ್ಷಣಾ ಸ್ಥಿತಿಯು +7 ಆಗಿದೆ. d ಸಬ್‌ಶೆಲ್ಲಿನಲ್ಲಿ ಇಲೆಕ್ಟ್ರೋನ್ ಇಲ್ಲದಿದ್ದರೂ ಕಡು ನೇರಳೆ ಬಣ್ಣವಿರುವುದು. ಇದಕ್ಕೆ ಕಾರಣ $O^{2-}$ ವಿನಿಂದ Mn ಗೆ ಇರುವ charge transfer ಆಗಿದೆ.

ಸಿಡಿಮದ್ದು ಪ್ರಯೋಗದಲ್ಲಿ s-block ಮೂಲವಸ್ತುಗಳ ಯೌಗಿಕಗಳನ್ನು ಹೆಚ್ಚಾಗಿ ಉಪಯೋಗಿಸುವುದು. ಇದು ಬೆಂಕಿಯ ಜ್ವಾಲೆಗೆ ಬಣ್ಣವನ್ನು ನೀಡುವುದು.

| ಯೌಗಿಕ | ಬಣ್ಣ |
|---|---|
| $Sr(NO_3)_2$ | ಕೆಂಪು |
| LiCl | ನೇರಳೆಯುಕ್ತ ಕಡು ಕೆಂಪು |
| $CaCl_2$ | ಇಟ್ಟಿಗೆಯ ಕೆಂಪು |
| NaCl | ಹಳದಿ |
| $BaCl_2$ | ಹಸಿರು |

ಪೈಂಟ್ ತಯಾರಿಯಲ್ಲಿ ಮಧ್ಯಸ್ಥ ಮೂಲವಸ್ತು ಯೌಗಿಕಗಳನ್ನು ಬಣ್ಣ ನೀಡುವುದಕ್ಕಾಗಿ ಉಪಯೋಗಿಸಲಾಗುವುದು.

## f ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳು

f ಬ್ಲೋಕ್ ಮೂಲವಸ್ತುಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾತ್ರವೇ ಇಲ್ಲಿ ಮಾಡಲಾಗಿದೆ. ಪಟ್ಟಿಯಲ್ಲಿ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ವಿಶ್ಲೇಷಣೆಗಾಗಿ ಮಾತ್ರವೇ ಅಳವಡಿಸಲಾಗಿದೆ. ವಿದ್ಯಾರ್ಥಿಗಳು ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಬೇಕಾಗಿಲ್ಲ. ಪರಮಾಣುವಿನಲ್ಲಿ f ಸಬ್ ಶೆಲ್ಲಿನ ಸ್ಥಾನವೂ ಬಾಹ್ಯವಲಯದಿಂದ ಒಳಗಿನ ಮೂರನೇ ವಲಯದಲ್ಲಾಗಿದೆ. ಇದನ್ನು antie-penultimate shell ಎಂದು ಕರೆಯಬಹುದು.

ಉದಾ: – 6ನೇ ಆವೃತ್ತಿಯಲ್ಲಿ ಒಳಪಟ್ಟ ಮೂಲವಸ್ತುಗಳಲ್ಲಿ 4ನೇ ವಲಯದ f ಸಬ್‌ಶೆಲ್ಲಿನಲ್ಲಿ [(n-2)f] ಕೊನೆಯ ಇಲೆಕ್ಟ್ರೋನುಗಳು ತುಂಬಲ್ಪಡುವುದು.

4 ಬ್ಲೋಕುಗಳ ಸಾಮಾನ್ಯ ಇಲೆಕ್ಟ್ರೋನ್ ವಿನ್ಯಾಸ

s - $ns^{1-2}$

p - $ns^2np^{1-6}$

d - $(n-1)\ d^{1-10}\ ns^{1,\ 2}$

f - $(n-2)\ f^{\ 1-14}\ (n-1)\ d^{0-1}\ ns^2$

## ಕಲಿಕೆಯ ಪ್ರಧಾನ ಸಾಧನೆಗಳು

TB ಯಲ್ಲಿ ನೀಡಲಾದ ಕಲಿಕಾ ಸಾಧನೆಗಳನ್ನು ಮಗು ಗಳಿಸಿದೆಯೇ ಎಂದು ಮೌಲ್ಯ ಮಾಪನ ಮಾಡಲು ಚೆಕ್‌ಲಿಸ್ಟ್ ತಯಾರಿ ನೀಡಬಹುದು. ಇದೇ ರೀತಿಯಲ್ಲಿ ನಂತರ ಬರುವ ಅಧ್ಯಾಯಗಳಲ್ಲಿ ತರಗತಿ ವಾತಾವರಣಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಮೌಲ್ಯಮಾಪನ ಸೂಚಕಗಳನ್ನು ನೀಡಲು ಗಮನಿಸುವಿರಲ್ಲವೇ?

## ಮೌಲ್ಯ ಮಾಪನ ಮಾಡೋಣ

1. 1s, 2s, 2p, 3s ಎಂಬೀ ಸಬ್‌ಶೆಲ್‌ಗಳಲ್ಲಿ ಇಲೆಕ್ಟ್ರೋನುಗಳು ತುಂಬಲ್ಪಡುವುದು.

   $1s^2 2s^2 2p^6 3s^2 2p^6$

2. $1s^2 2s^2 2p^6 3s^2 3p^6 3d^8 4s^2$

   28

   d ಬ್ಲೋಕ್

   ಆವೃತ್ತಿಯ ಸಂಖ್ಯೆ 4

   ಗುಂಪಿನ ಸಂಖ್ಯೆ 10

3. a) $1s^2 2s^2 2p^7$

   b) $1s^2 2s^2 2p^5 3s^1$

   c) $1s^2 2s^2 2p^6 3s^2 3p^6 3d^2 4s^1$

4. a) $1s^2 2s^2 2p^6 3s^2 3p^5$

   b) ಆವೃತ್ತಿಯ ಸಂಖ್ಯೆ 3

   c) $YX_3$

5. a) $1s^2 2s^2 2p^6 3s^2 3p^6 3d^9$

   b) ಇದೆ. ಬಾಹ್ಯ ವಲಯದಲ್ಲಿ ಇಲೆಕ್ಟ್ರೋನುಗಳೊಂದಿಗೆ d ಸಬ್‌ಶೆಲ್‌ನ ಇಲೆಕ್ಟ್ರೋನುಗಳು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವುದು.

   c) $CuCl_2$ or CuCl

6. a) 2d, 3f

   b)4ನೇ ಚೈತನ್ಯ ಮಟ್ಟದ ನಂತರವೇ f ಸಬ್‌ಶೆಲ್ ಪ್ರಾರಂಭವಾಗುವುದು. 3ನೇ ವಲಯದ ನಂತರವೇ d ಸಬ್‌ಶೆಲ್ ಪ್ರಾರಂಭವಾಗುವುದು.

## ಮುಂದುವರಿದ ಚಟುವಟಿಕೆಗಳು

- 4s-ನಲ್ಲಿ 1 ಇಲೆಕ್ಟ್ರೋನ್ ಮಾತ್ರವಿರುವ ಮೂಲವಸ್ತು A
- E
- ಬಣ್ಣದ ಯೌಗಿಕವನ್ನು ಉಂಟುಮಾಡುವವುಗಳು. D, C
- ಕ್ರಿಯಾಶೀಲತೆ ಹೆಚ್ಚಿರುವ ಲೋಹ A
- ಕ್ರಿಯಾಶೀಲತೆ ಕಡಿಮೆ ಇರುವ ಮೂಲವಸ್ತು - F
- 4p-ಯಲ್ಲಿ ಇಲೆಕ್ಟ್ರೋನ್ ತುಂಬಲ್ಪಡುವ ಮೂಲವಸ್ತು - Br ಪರಮಾಣು ಸಂಖ್ಯೆ 35

## ಮಗುವಿನ ಮೌಲ್ಯಮಾಪನ

| ಕ್ರಮ ಸಂಖ್ಯೆ | ಸೂಚಕ | ಹೌದು | ಅಲ್ಲ |
|---|---|---|---|
| 1. | ಪರಮಾಣುಗಳ ಇಲೆಕ್ಟ್ರೋನುಗಳು ವ್ಯವಸ್ಥೆಗೊಳಿಸಿರುವುದು ಯಾವ ಯಾವ ವಲಯದಲ್ಲಿ ಎಂದು ಗುರುತಿಸಿ ತಿಳಿಯಲು ಸಾಧ್ಯವಿದೆ. | | |
| 2. | ಪ್ರತಿಯೊಂದು ವಲಯದಲ್ಲಿರುವ ಉಪವಲಯಗಳನ್ನು ಯಾವುವುವೆಂದು ಕಂಡುಹಿಡಿಯಲು ಸಾಧ್ಯವಾಗುವುದು. | | |
| 3. | ಉಪವಲಯಗಳ ಚೈತ್ರ್ಯ ಕ್ರಮವನ್ನು ತಿಳಿದು ಕ್ರಮೀಕರಿಸಲು ಸಾಧ್ಯವಾಗುವುದು. | | |
| 4. | ಪ್ರತಿಯೊಂದು ಸಬ್‌ಶೆಲ್ಲಿನಲ್ಲೂ ಹಿಡಿಯಬಹುದಾದ ಇಲೆಕ್ಟ್ರೋನುಗಳ ಸಂಖ್ಯೆಯನ್ನು ಕಂಡುಹಿಡಿಯಲು ಸಾಧ್ಯವಿದೆ. | | |
| 5. | ಮೂಲವಸ್ತುಗಳ ಪರಮಾಣು ಸಂಖ್ಯೆಯ ಆಧಾರದಲ್ಲಿ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಲು ಸಾಧ್ಯವಿದೆ. | | |
| 6. | ಮೂಲವಸ್ತುಗಳ ಬ್ಲೋಕ್, ಗುಂಪಿನ ಸಂಖ್ಯೆ, ಆವೃತ್ತಿ ಸಂಖ್ಯೆ ಎಂಬಿವುಗಳನ್ನು ಕಂಡುಹಿಡಿಯಲು ಸಾಧ್ಯವಿದೆ. | | |
| 7. | s, p ಬ್ಲೋಕ್ ಮೂಲವಸ್ತುಗಳ ವಿಶೇಷತೆಗಳನ್ನು ತಿಳಿಯಲು ಸಾಧ್ಯವಿದೆ. | | |
| 8. | d ಬ್ಲೋಕ್ ಮೂಲವಸ್ತುಗಳ ಕೆಲವು ಯೌಗಿಕಗಳಿಂದ ಅವುಗಳ ಸಂಯೋಜಕತೆ, ಉತ್ಕರ್ಷಣಾ ಸ್ಥಿತಿ, ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಎಂಬಿವುಗಳನ್ನು ಕಂಡುಹಿಡಿಯಲು ಸಾಧ್ಯವೆ. | | |
| 9. | f ಮೂಲವಸ್ತುಗಳ ವೈಶಿಷ್ಟ್ಯಗಳನ್ನು ಕಂಡುಹಿಡಿಯಲು ಸಾಧ್ಯವಿದೆ. | | |

## ಅಧ್ಯಾಪಕರ ಮೌಲ್ಯಮಾಪನ

| ನಂ. | ಸೂಚಕ | ಉತ್ತಮ | ಸರಾಸರಿ | ಉತ್ತಮಗೊಳಿಸ ಬೇಕಾದುದು |
|---|---|---|---|---|
| 1. | ಪರಮಾಣುವಿನ ಇಲೆಕ್ಟ್ರೋನುಗಳು ಕ್ರಮೀಕರಿಸಲ್ಪಟ್ಟಿರುವುದು ಯಾವ ಯಾವ ಶೆಲ್‌ಗಳಲ್ಲಿ ಎಂದು ವಿದ್ಯಾರ್ಥಿಗಳಿಗೆ ಕಂಡುಹಿಡಿಯಲು ಸಾಧ್ಯವಿದೆ. | | | |
| 2. | ಇದಕ್ಕೆ ಉಪಯೋಗಿಸಿದ ಕಲಿಕಾ ಚಟುವಟಿಕೆಗಳು ಯೋಗ್ಯವಾಗಿದ್ದುವು. | | | |
| 3. | ಪ್ರತಿಯೊಂದು ವಲಯದಲ್ಲಿರುವ ಉಪವಲಯಗಳು ಯಾವುವು ಎಂದು ವಿದ್ಯಾರ್ಥಿಗಳು ಕಂಡುಹಿಡಿದು ಚೈತನ್ಯ ಕ್ರಮವನ್ನು ಕಂಡುಹಿಡಿದು ಕ್ರಮೀಕರಿಸಿರಿ. | | | |
| 4. | ಮೂಲವಸ್ತುಗಳ ಪರಮಾಣು ಸಂಖ್ಯೆಗಳ ಆಧಾರದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಬರೆಯಲು ಸಾಧ್ಯವಾಗುವುದು. | | | |
| 5. | ಮೂಲವಸ್ತುಗಳು ಬ್ಲೋಕ್ ಆಧಾರದಲ್ಲಿ ವರ್ಗೀಕರಿಸಿ ಅವುಗಳ ವೈಶಿಷ್ಟ್ಯಗಳನ್ನು ಕಂಡುಹಿಡಿಯಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುವುದು. | | | |
| 6. | ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಗುಂಪು ಸಂಖ್ಯೆ, ಆವೃತ್ತಿ ಸಂಖ್ಯೆ ಎಂಬಿವುಗಳನ್ನು ಕಂಡುಹಿಡಿಯಲು ಉಪಯೋಗಿಸಿದ ಕಲಿಕಾ ರೀತಿ. | | | |
| 7. | ವಿದ್ಯಾರ್ಥಿಗಳಿಗೆ ಈ ಕಲಿಕೆಯ ಸಾಧನೆಗಳನ್ನು ಗಳಿಸಲು ಸಾಧ್ಯವಾಗುವುದು | | | |
| 8. | d ಮೂಲವಸ್ತುಗಳ ವೈಶಿಷ್ಟ್ಯಗಳನ್ನು ವಿದ್ಯಾರ್ಥಿಗಳಿಗೆ ಗುರುತಿಸಿ ತಿಳಿಯಲು ಸಾಧ್ಯವಿದೆ. | | | |

ಪ್ರತಿಯೊಂದು ಅಧ್ಯಾಯದಲ್ಲೂ ಈ ರೀತಿಯ ಅಧ್ಯಾಪಕರ ಮೌಲ್ಯಮಾಪನ ನಡೆಸಿ ಮಕ್ಕಳನ್ನು ಉನ್ನತ ಗುಣಮಟ್ಟಕ್ಕೆ ತಲುಪಿಸಲಿರುವ ಚಟುವಟಿಕೆಗಳನ್ನು ಆಯೋಜಿಸುವಿರಲ್ಲವೆ.

# 2

# ಮೋಲ್ ಕಲ್ಪನೆ

## *ಪೀಠಿಕೆ*

*ಮೋಲ್ ಕಲ್ಪನೆಯು ರಸಾಯನ ಶಾಸ್ತ್ರದಲ್ಲಿ ಅತಿ ಪ್ರಧಾನವಾದುದಾಗಿದೆ. ಇದರ ಅನುಬಂಧ ಆಶಯಗಳು ಮತ್ತು ಇದರ ಪ್ರಯೋಗವನ್ನು ಈ ಯೂನಿಟಿನ ಮೂಲಕ ಪರಿಚಯಿಸಲಾಗುವುದು. ಅತಿಸೂಕ್ಷ್ಮ ಕಣಗಳ ಪರಸ್ಪರ ಸಂಯೋಗವಲ್ಲವೇ ಪ್ರಕೃತಿಯ ರಾಸಾಯನಿಕ ಬದಲಾವಣೆಯ ತಳಹದಿ ಪ್ರತಿಯೊಂದು ರಾಸಾಯನಿಕ ಕ್ರಿಯೆ ಜರಗಿ ಹೊಸ ಉತ್ಪನ್ನಗಳು ಉಂಟಾಗುವಾಗ ಈ ಸೂಕ್ಷ್ಮ ಕಣಗಳು ನಿರ್ದಿಷ್ಟ ಸಂಖ್ಯೆಯಲ್ಲಿ ಸೇರುತ್ತವೆ ಎಂದೂ ಸಂಖ್ಯೆಯ ನಿಷ್ಪತ್ತಿಯ ವ್ಯತ್ಯಾಸವು ಒಂದೇ ರೀತಿಯ ಮೂಲವಸ್ತುಗಳು ಸೇರಿ ವಿಭಿನ್ನ ಯೌಗಿಕಗಳು ಉಂಟಾಗಲು ಕಾರಣವೆಂದೂ ನಮಗೆ ತಿಳಿದಿದೆ.ಆದರೆ ಅತಿ ಸೂಕ್ಷ್ಮ ಕಣಗಳಾದ ಪರಮಾಣುಗಳ ಮತ್ತು ಅಣುಗಳ ಸಂಖ್ಯೆಯನ್ನು ತಿಳಿದಿರುವುದರ ಸಂಕೀರ್ಣತೆಯು ಸಾಮಾನ್ಯರಿಗೆ ಅರ್ಥವಾಗದು. ಇಲ್ಲಿ ಸಮಾನವಾಗಿ* (identical) *ಯಾವುದೇ ಕಣಗಳ ವಿಷಯದಲ್ಲಿ (ಪರಮಾಣುಗಳು ಅಣುಗಳು ಸೇರಿ) ಸಂಖ್ಯೆಗೆ ಬದಲಾಗಿ ದ್ರವ್ಯರಾಶಿಯನ್ನು ಲೆಕ್ಕ ಹಾಕಿ ಕಣಗಳನ್ನು ಸರಿಯಾಗಿ ಸೂಚಿಸಬಹುದು ಎಂಬ ಆಶಯಕ್ಕೆ ಇಲ್ಲಿ ಪ್ರಸಕ್ತಿ ಇದೆ. ಈ ಆಶಯವನ್ನು ಅಳವಡಿಸುವ ಮೂಲಕ ಪರಮಾಣು ದ್ರವ್ಯರಾಶಿ ಅಣುವಿಕ ದ್ರವ್ಯರಾಶಿ ಎಂಬಿವುಗಳನ್ನು ಉಪಯೋಗಿಸಿ ಗ್ರಾಂ ಪರಮಾಣು ದ್ರವ್ಯರಾಶಿ ಮತ್ತು ಗ್ರಾಂ ಅಣುವಿಕ ದ್ರವ್ಯರಾಶಿ ನಿರ್ವಚಿಸುವುದು ಈ ಯೂನಿಟಿನ ಒಂದನೇ ಮೋಡ್ಯೂಲ್. ಇದಕ್ಕಾಗಿ ಪರಮಾಣು ದ್ರವ್ಯರಾಶಿ ಎಂಬ ಆಶಯ ಮಗುವಿಗೆ ಲಭಿಸಿದೆಯೆಂದು ಖಾತರಿಪಡಿಸಬೇಕಾಗಿದೆ. ಇದೇ ಮೋಡ್ಯೂಲ್‌ನಲ್ಲಿ ಒಳಗೊಂಡಿರುವ ಅವಗಾಡ್ರೊ ನಂಬರ್ ಮಗುವಿಗೆ ಹೊಸ ಆಶಯವಾಗಿದೆ. ಅವಗಾಡ್ರೊ ನಂಬರಿನ (ಅವಗಾಡ್ರೊ ಸ್ಥಿರಾಂಕದ) ಮೌಲ್ಯವು ಸೂಕ್ಷ್ಮ ಕಣಗಳು ಬಹಳ ಸಣ್ಣದಾಗಿವೆ ಎಂಬ ತಿಳುವಳಿಕೆಯನ್ನು ರಸವತ್ತಾಗಿ ಮಗುವಿಗೆ ತಿಳಿಸಬೇಕು.*

ಮೋಲ್ ಎಂದರೇನು ಎಂದೂ ಅದಕ್ಕೆ ಸಂಬಂಧಿಸಿದ ಗಣಿತ ಸಮಸ್ಯೆಗಳು ಒಳಗೊಂಡಿರುವ ಭಾಗವನ್ನು ನಂತರದ ಮೋಡ್ಯೂಲ್‌ನಲ್ಲಿ ಚರ್ಚಿಸಬೇಕು. ಕೇವಲ ಒಂದು ಆಶಯವನ್ನು ಮತ್ತು ಅದಕ್ಕೆ ಸಂಬಂಧಿಸಿದ ಗಣಿತ ಸಮಸ್ಯೆಗಳನ್ನು ನಿರ್ಧರಿಸುವುದು ಮಾತ್ರವಲ್ಲ ಈ ಭಾಗದ ಉದ್ದೇಶ. ಸೂಕ್ಷ್ಮ ಕಣಗಳ ಮೋಲ್ ಅಳತೆಯನ್ನು ನಮಗೆ ಪರಿಚಿತವಾದ ಒಂದು ಅಳತೆಯಾಗಿ ಬದಲಾಯಿಸಲಿರುವ ಸಾಧ್ಯತೆ ಪರಿಗಣಿಸಿಕೊಂಡು ಈ ಭಾಗವನ್ನು ಚರ್ಚಿಸಬೇಕು. ಇಲ್ಲಿ ಗಣಿತಕ್ಕಿಂತಲೂ ರಸಾಯನ ಶಾಸ್ತ್ರಕ್ಕೆ ಹೆಚ್ಚು ಪ್ರಾಧಾನ್ಯವನ್ನು ನೀಡಬೇಕು.

ನಿತ್ಯ ಜೀವನದಲ್ಲಿ ಮತ್ತು ವ್ಯವಸಾಯಗಳಲ್ಲೆಲ್ಲಾ ಬರುವ ಅನೇಕ ರಾಸಾಯನಿಕ ಕ್ರಿಯೆಗಳನ್ನು ನಾವು ತಿಳಿದೊ ತಿಳಿಯದೆಯೋ ನಿರ್ವಹಿಸುತ್ತೇವೆ. ಒಂದು ಗ್ಯಾಸ್ ಸ್ಟೌವ್‌ವಿನ ನೋಬ್ ಉಪಯೋಗಿಸಿ ಜ್ವಾಲೆಯನ್ನು ಕಡಿಮೆ ಮಾಡುವುದು ಮತ್ತು ಆಕ್ಸಿಲೇಟರ್ ಉಪಯೋಗಿಸಿ ಹೆಚ್ಚು ಇಂಧನವನ್ನು ನೀಡುವುದು ಹೀಗೆ ಅನೇಕ ಕ್ರಿಯೆಗಳಲ್ಲಿ ಅಗತ್ಯಕ್ಕೆ ಬೇಕಾದಷ್ಟು ಪ್ರವರ್ತಕಗಳನ್ನು ನೀಡಿ ಕ್ರಿಯೆಯನ್ನು ನಿಯಂತ್ರಿಸಲಾಗುವುದು ಎಂಬ ತಿಳುವಳಿಕೆಯು ಮಕ್ಕಳಿಗೆ ತಲುಪಿದರೆ ಮಾತ್ರವೇ ಮೋಲ್ ಕಲ್ಪನೆಯನ್ನು ಅಳವಡಿಸಿಕೊಂಡು ರಾಸಾಯನಿಕ ಕ್ರಿಯೆಗೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಮಕ್ಕಳಿಗೆ ತಿಳಿಯಲು ಸಾಧ್ಯವಿದೆ. ಒಂದು ರಾಸಾಯನಿಕ ಕ್ರಿಯೆಯಲ್ಲಿ ಪ್ರವರ್ತಕಗಳು ಪ್ರತಿಯೊಂದನ್ನೂ ಯಾವ ಪ್ರಮಾಣದಲ್ಲಿ ಉಪಯೋಗಿಸಬೇಕೆಂದೂ, ಯಾವ ಪ್ರಮಾಣದಲ್ಲಿ ಉತ್ಪನ್ನಗಳು ಉಂಟುಮಾಡುವುದೆಂದೂ ತಿಳಿಯುವುದರ ಪ್ರಾಧಾನ್ಯ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಈ ಭಾಗವನ್ನು ವಿನಿಮಯ ಮಾಡಬೇಕು.

ಕೊನೆಯ ಮೊಡ್ಯೂಲಿನಲ್ಲಿ ಮೊಲಾರಿಟಿ ಎಂಬ ಆಶಯವು ದ್ರಾವಣದ ಪ್ರಬಲತೆಯನ್ನು ಸೂಚಿಸುವ ಒಂದು ಉಪಾದಿಯಲ್ಲದೆ ಮುಂದಿನ ತರಗತಿಗಳಲ್ಲಿ ನಿರ್ವಹಿಸಬೇಕಾದ ಪ್ರಯೋಗ ಚಟುವಟಿಕೆಗಳಿಗೆ ಪ್ರಯೋಜನಕಾರಿಯಾಗಬೇಕು. ಸಾಮಾನ್ಯ ಜ್ಞಾನವಿರುವ ವಿದ್ಯಾರ್ಥಿಗೂ ತಿಳಿಯುವ ರೀತಿಯಲ್ಲಿ ಸರಳವಾಗಿ ಈ ಆಶಯವನ್ನು ತಲುಪಿಸುವುದು ಹೆಚ್ಚು ಪ್ರಯೋಜನಕಾರಿ. ಯೂನಿಟಿನ ಸಾಧ್ಯತೆ ಮತ್ತು ಪ್ರಾಧಾನ್ಯವನ್ನು ತಿಳಿದುಕೊಂಡು ಈ ಯೂನಿಟಿನ ಆಶಯವನ್ನು ಮಕ್ಕಳಿಗೆ ತಲುಪಿಸಲು ನಾವು ಪ್ರತಿಯೊಬ್ಬರೂ ತಯಾರಾಗಬೇಕು.

# MODULE WISE PERIOD DISTRIBUTION

**ಒಟ್ಟು ಪಿರೀಡ್ 10**

## ಯೂನಿಟ್ – 2

## ಮೋಲ್ ಕಲ್ಪನೆ

**ಮೋಡ್ಯೂಲ್ 1** **ಪೀರಿಯಡ್ 3**

- ರಾಸಾಯನಿಕ ಕ್ರಿಯೆಯಲ್ಲಿ ಯಾವುದಾದರೂ ಒಂದು ಪ್ರವರ್ತಕ ಮುಗಿದುಹೋದರೆ ಕ್ರಿಯೆಯು ನಿಂತುಹೋಗುವುದು.
- ಎಣಿಕೆಯ ಬದಲಾಗಿ ಮಾಸ್
- ಸೂಕ್ಷ್ಮ ಕಣಗಳ ಸಂಖ್ಯೆಯನ್ನು ಲೆಕ್ಕ ಹಾಕುವುದು.
- ಗ್ರಾಂ ಅಟೋಮಿಕ್ ಮಾಸ್ ಮತ್ತು ಅವಗಾಡ್ರೊ ಸಂಖ್ಯೆ
- ಗ್ರಾಂ ಮೋಲಿಕ್ಯೂಲಾರ್ ಮಾಸ್

**ಮೋಡ್ಯೂಲ್ 2** **ಪೀರಿಯಡ್ 3**

- ಮೋಲ್ ಕಲ್ಪನೆ
- ಅನಿಲಗಳ ಗಾತ್ರ ಮತ್ತು ಮೋಲ್‌ಗಳ ಸಂಖ್ಯೆ
- ST Pಯಲ್ಲಿ ಮೋಲಾರ್ ಗಾತ್ರ

**ಮೋಡ್ಯೂಲ್ 3** **ಪೀರಿಯಡ್ 4**

- ಮೋಲ್ ಕಲ್ಪನೆ - ಸಮೀಕೃತ ರಾಸಾಯನಿಕ ಸಮವಾಕ್ಯಗಳಲ್ಲಿ
- ದ್ರಾವಣಗಳಲ್ಲಿ ಮೋಲ್‌ಗಳ ಸಂಖ್ಯೆ
- 1M ದ್ರಾವಣವನ್ನು ತಯಾರಿಸುವ ವಿಧಾನ.

**ಯೂನಿಟ್‌ಫ್ರೇಂ** **10 ಪೀರಿಯಡ್**

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ವಿಧಾನಗಳು | ಕಲಿಕಾ ಸಾಧನೆಗಳು |
|---|---|---|
| **ಮೊಡ್ಯೂಲ್ 1 ಪೀರಿಯಡ್ 3**<br>• ರಾಸಾಯನಿಕ ಕ್ರಿಯೆಗಳಲ್ಲಿ ಯಾವುದಾದರೂ ಒಂದು ಪ್ರವರ್ತಕ ಮುಗಿದ ತಕ್ಷಣ ಕ್ರಿಯೆಯು ಮುಗಿಯುತ್ತದೆ.<br>• ಸಂಖ್ಯೆಯು ನಿರ್ದಿಷ್ಟ ನಿಷ್ಪತ್ತಿಯನ್ನು ಅನುಸರಿಸಿ ಪ್ರವರ್ತಕಗಳನ್ನು ತೆಗೆದುಕೊಂಡರೆ ಕ್ರಿಯೆಯು ಪೂರ್ಣವಾಗುತ್ತದೆ.<br>• ದ್ರವ್ಯರಾಶಿ<br>• ಸಾಪೇಕ್ಷ ಪರಮಾಣುವಿಕ ದ್ರವ್ಯರಾಶಿ<br>• ಅಣುವಿಕ ದ್ರವ್ಯರಾಶಿ<br>• ಅಣುವಿಕ ದ್ರವ್ಯರಾಶಿಯನ್ನು ಲೆಕ್ಕಹಾಕುವ ವಿಧಾನ<br>• ಗ್ರಾಂ ಪರಮಾಣುವಿಕ ದ್ರವ್ಯರಾಶಿ<br>• ಗ್ರಾಂ ಅಣುವಿಕ ದ್ರವ್ಯರಾಶಿ<br>• ನಿರ್ದಿಷ್ಟ ದ್ರವ್ಯರಾಶಿಯಲ್ಲಿರುವ GAM, GMM ಎಂಬಿವುಗಳ ಸಂಖ್ಯೆ<br>• ಅವಗಾಡ್ರೋ ಸಂಖ್ಯೆ<br>• ನಿರ್ದಿಷ್ಟ ದ್ರವ್ಯರಾಶಿಯಲ್ಲಿರುವ ಕಣಗಳ ಸಂಖ್ಯೆ | • Mg, HCl ಎಂಬಿವುಗಳ ಪರಸ್ಪರ ವರ್ತನೆಯ ವಿಶ್ಲೇಷಣೆಯ ಮೂಲಕ ಒಂದು ಪ್ರವರ್ತಕ ಮುಗಿದ ತಕ್ಷಣ ಕ್ರಿಯೆಯು ಕೊನೆಗೊಳ್ಳುವುದು ಎಂದು ತಿಳಿದುಕೊಳ್ಳುವುದು.<br>• Mg, HCl ಎಂಬಿವುಗಳ ಅಣುವಿಕ ಚಿತ್ರಣವನ್ನು ವಿಶ್ಲೇಷಣೆ ಮಾಡಿ ಪರಮಾಣುಗಳ ಸಂಖ್ಯೆಗಳ ನಡುವಿನ ಸಂಬಂಧವನ್ನು ತಿಳಿದುಕೊಳ್ಳುವುದು.<br>• ಪರಮಾಣುವಿಕ ದ್ರವ್ಯರಾಶಿ, ಅಣುವಿಕ ದ್ರವ್ಯರಾಶಿ ಎಂಬಿವುಗಳಿಗೆ ಸಂಬಂಧಿಸಿದ ಟಿಪ್ಪಣಿಯನ್ನು ವಿಶ್ಲೇಷಿಸುವುದು.<br>• GAM, GMM ಎಂಬಿವುಗಳಿಗೆ ಸಂಬಂಧಿಸಿದ ಚರ್ಚೆ, ಪಟ್ಟಿ, ಪೂರ್ತಿಗೊಳಿಸುವಿಕೆ, ಗಣಿತ ಸಮಸ್ಯೆಗಳನ್ನು ಬಗೆಹರಿಸುವುದು.<br>• 1 GAM, 1 GMM ಎಂಬಿವುಗಳ ಕಣಗಳ ಸಂಖ್ಯೆಯಲ್ಲಿರುವ ಸಮಾನತೆಯನ್ನು ವಿಶ್ಲೇಷಿಸುವುದು. ಅವಗಾಡ್ರೋ ಸಂಖ್ಯೆಗೆ ಸಂಬಂಧಿಸಿದ ಟಿಪ್ಪಣಿಗಳನ್ನು ವಿಶ್ಲೇಷಿಸಿ ಚರ್ಚಿಸಲು ಸಾಧ್ಯವಾಗುತ್ತದೆ. | • ಒಂದಕ್ಕಿಂತ ಹೆಚ್ಚು ಪ್ರವರ್ತಕಗಲಿರುವ ರಾಸಾಯನಿಕ ಕ್ರಿಯೆಯಲ್ಲಿ ಯಾವುದಾದರೂ ಒಂದು ಮುಗಿದು ಹೋದರೆ ರಾಸಾಯನಿಕ ಕ್ರಿಯೆಯು ಕೊನೆಗೊಳ್ಳುವುದು ಎಂದು ಪ್ರಯೋಗದ ಮೂಲಕ ಸಾಧಿಸಿ ತೋರಿಸಲು ಮತ್ತು ಅವುಗಳ ರಾಸಾಯನಿಕ ಸಮೀಕರಣವನ್ನು ಉಪಯೋಗಿಸಿ ವಿವರಿಸಲಿರುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ.<br>• ಪ್ರತಿಯೊಂದು ರಾಸಾಯನಿಕ ಕ್ರಿಯೆಯಲ್ಲಿಯೂ ಪ್ರವರ್ತಕದ ಪರಮಾಣುಗಳ ಸಂಖ್ಯೆಗಳ ನಡುವೆ ಒಂದು ನಿರ್ದಿಷ್ಟ ನಿಷ್ಪತ್ತಿ ಇದೆ ಎಂದು ವಿವರಿಸುವುದು.<br>• ಸಾಪೇಕ್ಷ ದ್ರವ್ಯರಾಶಿ, ಪರಮಾಣು ದ್ರವ್ಯರಾಶಿ ಎಂಬಿವುಗಳನ್ನು ನಿರ್ವಚಿಸಲು ಮತ್ತು ಉದಾಹರಣೆಗಳನ್ನು ವಿಶ್ಲೇಷಿಸಲು ಸಾಧ್ಯವಾಗುತ್ತದೆ.<br>• ಸಂಬಂಧಿಸಿದ ಟಿಪ್ಪಣಿಗಳನ್ನು ವಿಶ್ಲೇಷಣೆ ಮಾಡಿ ಚರ್ಚೆ ಮಾಡಲೂ ಸಾಧ್ಯವಾಗುತ್ತದೆ.ಗ್ರಾಂ ಪರಮಾಣುವಿಕ ದ್ರವ್ಯರಾಶಿ, ಗ್ರಾಂ ಅಣುವಿಕ ದ್ರವ್ಯರಾಶಿ ಎಂಬಿವುಗಳನ್ನು ನಿರ್ವಚಿಸಿ ಸರಳ ಲೆಕ್ಕಗಳನ್ನು ಪರಿಹರಿಸುವುದು.<br>• ಒಂದು GAM, ಒಂದು GMM ಎಂಬಿವುಗಳಲ್ಲಿ ಅಡಕವಾಗಿರುವ ಆಯಾ ಕಣಗಳ ಸಂಖ್ಯೆ ಸಮಾನವಾಗಿರುವುದೆಂದು ತಿಳಿದು ಅವಗಾಡ್ರೋ ಸಂಖ್ಯೆ ಎಂದರೇನೆಂದು ವಿವರಿಸುವುದು. |

**ಯೂನಿಟ್‌ಫ್ರೇಂ** **10 ಪೀರಿಯಡ್**

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ವಿಧಾನಗಳು | ಕಲಿಕಾ ಸಾಧನೆಗಳು |
|---|---|---|
| **ಮೊಡ್ಯೂಲ್ 2** **ಪೀರಿಯಡ್ 3**<br>• ಮೋಲ್<br>• ನಿರ್ದಿಷ್ಟ ದ್ರವ್ಯರಾಶಿಯಲ್ಲಿರುವ ಮೋಲ್ ಸಂಖ್ಯೆ<br>• ನಿರ್ದಿಷ್ಟ ಸಂಖ್ಯೆಯ ಕಣಗಳಲ್ಲಿರುವ ಮೋಲ್ ಸಂಖ್ಯೆ<br>• ಸಂಖ್ಯೆ, ದ್ರವ್ಯರಾಶಿ ಎಂಬಿವುಗಳನ್ನು ಮೋಲ್ ಅಳತೆಗೆ ಬದಲಾಯಿಸುವುದು ಮತ್ತು ಮೋಲ್ ಅಳತೆಯನ್ನು ಸಂಖ್ಯೆ, ದ್ರವ್ಯರಾಶಿ ಎಂಬಿವುಗಳಿಗೆ ಬದಲಾಯಿಸುವುದಕ್ಕೆ ಸಂಬಂಧಿಸಿದ ಲೆಕ್ಕಗಳು<br>• ಅನಿಲ ಗಾತ್ರ<br>• STP ಯಲ್ಲಿ ಮೋಲಾರ್ ಗಾತ್ರ<br>• ಮೋಲ್ ಅಳತೆಯನ್ನು STP ಯಲ್ಲಿರುವ ಗಾತ್ರವಾಗಿ ಬದಲಾಯಿಸುವುದು - STP ಯಲ್ಲಿನ ಗಾತ್ರದಿಂದ ಮೋಲ್ ಸಂಖ್ಯೆಯನ್ನು ಕಂಡುಹಿಡಿಯುವುದು | • ಮೋಲ್ ಅಳತೆಗೆ ಸಂಬಂಧಿಸಿದ ಪಟ್ಟಿಗಳನ್ನು ವಿಶ್ಲೇಷಿಸುವುದು<br>• ದ್ರವ್ಯರಾಶಿ, ಕಣಗಳ ಸಂಖ್ಯೆ ಮತ್ತು ಮೋಲ್ ಸಂಖ್ಯೆಗಳಿಗೆ ಸಂಬಂಧಿಸಿದ ಪಟ್ಟಿಗಳ ವಿಶ್ಲೇಷಣೆ<br>• ಗಣಿತ ಸಮಸ್ಯೆ<br>• ಅನಿಲಗಾತ್ರಕ್ಕೆ ಸಂಬಂಧಿಸಿದ ಟಿಪ್ಪಣಿಗಳ ವಿಶ್ಲೇಷಣೆ, ಚರ್ಚೆ, ಕ್ರೋಡೀಕರಣ<br>• ಗಾತ್ರ ಮತ್ತು ಮೋಲ್ ಸಂಖ್ಯೆಗೆ ಸಂಬಂಧಿಸಿದ ಲೆಕ್ಕಗಳು | • 'ಮೋಲ್' ನಿರ್ವಚಿಸಲು ಮತ್ತು ರಸಾಯನಶಾಸ್ತ್ರದಲ್ಲಿ 'ಮೋಲ್' ಅಳತೆಗಿರುವ ಮಹತ್ವವನ್ನು ತಿಳಿದುಕೊಳ್ಳಲು ಹಾಗೂ ಸಂಖ್ಯೆ ಮತ್ತು ದ್ರವ್ಯರಾಶಿಯ ಆಧಾರದಲ್ಲಿ 'ಮೋಲ್' ಅಳತೆಯನ್ನು ವಿವರಿಸಲು ಸಾಧ್ಯವಾಗುವುದು.<br>• ಮೋಲ್ ಸಂಖ್ಯೆಯನ್ನು ಕಂಡುಹಿಡಿಯಲಿರುವ ಸರಳ ಲೆಕ್ಕಗಳನ್ನು ಮಾಡುವುದು.<br>• ಅನಿಲಗಳ ಗಾತ್ರ ಎಂಬುದ ಅನಿಲದ ಅಣುಗಳು ವ್ಯಾಪಿಸಲ್ಪಟ್ಟಿರುವ ಸ್ಥಳದ ಅಳತೆಯಾಗಿದೆ ಎಂದು ತಿಳಿದು ಸಮಾನ ಸಂಖ್ಯೆಯ ಅಣುಗಳು ಒಳಗೊಂಡಿರುವ ವಿಭಿನ್ನ ಅನಿಲಗಳಿಗೆ ಸಮಾನ ಉಷ್ಣತೆ ಮತ್ತು ಒತ್ತಡದಲ್ಲಿ ಸಮಾನ ಗಾತ್ರ ಇರುವುದೆಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸುವುದು.<br>• ಅನಿಲಗಳ ಗಾತ್ರವನ್ನು ಹೇಳುವಾಗ ಉಷ್ಣತೆ, ಒತ್ತಡ ಎಂಬಿವುಗಳನ್ನು ಹೇಳಬೇಕಾದುದರ ಅಗತ್ಯವನ್ನು ವಿವರಿಸಲು ಸಾಧ್ಯವಾಗುವುದು.<br>• STP ಮತ್ತು STP ಯಲ್ಲಿ ಮೋಲಾರ್ ಗಾತ್ರ ಎಂದರೇನೆಂದು ವಿವರಿಸಲು ಮತ್ತು ಸರಳ ಲೆಕ್ಕಗಳನ್ನು ಬಗೆಹರಿಸಲು ಸಾಧ್ಯವಾಗುವುದು. |

ಯೂನಿಟ್‌ಫ್ರೇಂ

10 ಪೀರಿಯಡ್

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ವಿಧಾನಗಳು | ಕಲಿಕಾ ಸಾಧನೆಗಳು |
|---|---|---|
| **ಮೊಡ್ಯೂಲ್ 3** **ಪೀರಿಯಡ್ 3**<br>• ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಿಗೆ ಮೋಲ್ ಆಧಾರದಲ್ಲಿ ಅರ್ಥ<br>• ಸರಳ ಲೆಕ್ಕಗಳು<br>• ದ್ರಾವಣಗಳ ಪ್ರಬಲತೆ<br>• ಸರಳ ಲೆಕ್ಕಗಳು | • ರಾಸಾಯನಿಕ ಸಮೀಕರಣಗಳ ವಿಶ್ಲೇಷಣೆ, ಚರ್ಚೆ, ವಿವರಣೆ<br>• ಲೆಕ್ಕಗಳು<br>• ಟಿಪ್ಪಣಿ ತಯಾರಿಸುವುದು<br>• ಪ್ರಯೋಗಗಳಲ್ಲಿ ಭಾಗವಹಿಸುವುದು<br>• ಲೆಕ್ಕಗಳನ್ನು ಬಗೆಹರಿಸುವುದು, ಪಟ್ಟಿಯನ್ನು ಪೂರ್ತಿಗೊಳಿಸುವುದು. | • ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಲ್ಲಿ ಮೋಲ್ ಕಲ್ಪನೆಯನ್ನು ಉಪಯೋಗಿಸಲು ಮತ್ತು ದ್ರವ್ಯರಾಶಿ, ಗಾತ್ರ, ಸಂಖ್ಯೆ ಎಂಬಿವುಗಳಿಗೆ ಇವುಗಳನ್ನು ಹೋಲಿಸಲು ಹಾಗೂ ಸರಳ ಲೆಕ್ಕಗಳನ್ನು ಬಗೆಹರಿಸಲು ಅಗತ್ಯವಾದ ಸಾಮರ್ಥ್ಯವನ್ನು ಗಳಿಸುವುದು.<br>• ರಾಸಾಯನಿಕ ವಸ್ತುಗಳ ದ್ರಾವಣಗಳಲ್ಲಿ ಅವುಗಳ ಅಳತೆಯನ್ನು ಹೇಳುವ ರೀತಿಯನ್ನು ತಿಳಿದುಕೊಂಡು. 1M ದ್ರಾವಣಗಳನ್ನು ತಯಾರಿಸಲಿರುವ ಸಾಮರ್ಥ್ಯವನ್ನೂ ಗಳಿಸುವುದು.<br>• ವಿಭಿನ್ನ ಮೋಲಾರ್ ದಟ್ಟಣೆಯಲ್ಲಿರುವ ದ್ರಾವಣಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದ ಸರಳ ಲೆಕ್ಕಗಳನ್ನು ಪರಿಹರಿಸುವುದು. |

## ಪ್ರಧಾನ ಆಶಯಗಳು

- ಯಾವುದೇ ರಾಸಾಯನಿಕ ಕ್ರಿಯೆಯಲ್ಲಿ ಪರಮಾಣುಗಳು ಮತ್ತು ಅಣುಗಳ ಅವುಗಳ ಸಂಖ್ಯೆಗಳ ನಿರ್ದಿಷ್ಟ ನಿಷ್ಪತ್ತಿಯಲ್ಲಿ ಒಂದುಗೂಡುತ್ತದೆ.
- ಸೂಕ್ಷ್ಮ ಕಣಗಳಾದ ಪರಮಾಣುಗಳು ಮತ್ತು ಅಣುಗಳನ್ನು ನಿಖರವಾಗಿ ಎಣಿಸಿ ನೋಡಲು ಸಾಧ್ಯವಿಲ್ಲವಾದರೂ ಸೂಕ್ಷ್ಮಕಣಗಳ ಸಂಖ್ಯೆಯನ್ನು ಸಮೀಕರಣಗಳಲ್ಲಿ ಮೋಲ್ ಕಲ್ಪನೆಯನ್ನು ಉಪಯೋಗಿಸಬಹುದು.
- ಒಂದು ಮೂಲವಸ್ತುವಿನ ಎಲ್ಲ ಪರಮಾಣುಗಳು ಒಂದೇ ರೀತಿಯಲ್ಲಿರುತ್ತವೆ, ಅದೇ ರೀತಿ ಮೂಲವಸ್ತುವಿನ ಅಥವಾ ಯೌಗಿಕದ ಎಲ್ಲಾ ಅಣುಗಳೂ ಒಂದೇ ರೀತಿಯಲ್ಲಿರುತ್ತದೆ. ಆದರಿಂದ ಅವುಗಳನ್ನು ಎಣಿಸಿ ಲೆಕ್ಕಹಾಕುವುದರ ಬದಲು ದ್ರವ್ಯರಾಶಿಯ್ನು ಉಪಯೋಗಿಸಲು ಸಾಧ್ಯವಿದೆ.
- ಸೂಕ್ಷ್ಮ ಕಣಗಳ ದ್ರವ್ಯರಾಶಿಯನ್ನು ಹೇಳಲು ಸಾಪೇಕ್ಷ ದ್ರವ್ಯರಾಶಿ ವಿಧಾನವನ್ನು ಉಪಯೋಗಿಸಲಾಗುವುದು.
- ಕಾರ್ಬನ್ 12 ಪರಮಾಣುವಿನ ದ್ರವ್ಯರಾಶಿಯ 1/12 ಭಾಗವನ್ನು ಆಧಾರವಾಗಿರಿಸಿ ಪರಮಾಣುವಿಕ ದ್ರವ್ಯರಾಶಿ ಮತ್ತು ಅಣುವಿಕ ದ್ರವ್ಯರಾಶಿಯನ್ನು ಹೇಳಲಾಗುವುದು.
- ಪರಮಾಣುವಿಕ ದ್ರವ್ಯರಾಶಿಗೆ ಸಮಾನವಾದ ಗ್ರಾಂ ಅಳತೆಯನ್ನು ಗ್ರಾಂ ಪರಮಾಣುವಿಕ ದ್ರವ್ಯರಾಶಿ (GAM) ಎಂದೂ ಅಣುವಿಕ ದ್ರವ್ಯರಾಶಿಗೆ ಸಮಾನವಾದ ಗ್ರಾಂ ಅಳತೆಯನ್ನು ಗ್ರಾಂ ಅಣುವಿಕ ದ್ರವ್ಯರಾಶಿ (GMM) ಎಂದೂ ಕರೆಯುತ್ತಾರೆ.
- ಒಂದು ಗ್ರಾಂ ಪರಮಾಣುವಿಕ ದ್ರವ್ಯಾರಾಶಿಯಲ್ಲಿರುವ ಪರಮಾಣುಗಳ ಸಂಖ್ಯೆ, ಒಂದು ಗ್ರಾಂ ಅಣುವಿಕ ದ್ರವ್ಯರಾಶಿಯಲ್ಲಿರುವ ಅಣುಗಳ ಸಂಖ್ಯೆ ಎಂಬಿವುಗಳು ಅವಗಾಡ್ರೊ ಸಂಖ್ಯೆಗೆ ಸಮಾನವಾಗಿರುವುದು.
- ಅವಗಾಡ್ರೊ ಸಂಖ್ಯೆಗೆ ಸಮಾನವಾದ ಸೂಕ್ಷ್ಮ ಕಣಗಳನ್ನು ಒಳಗೊಂಡ ಪದಾರ್ಥದ ಅಳತೆಯು ಒಂದು ಮೋಲ್.
- ಮೋಲ್ ಅಳತೆಯನ್ನು ಸಂಖ್ಯೆ, ದ್ರವ್ಯರಾಶಿ ಅಥವಾ ಗಾತ್ರ (ಅನಿಲಗಳಾಗಿದ್ದರೆ) ಇವುಗಳ ಆಧಾರದಲ್ಲಿ ಹೇಳಬಹುದು.
- ಒತ್ತಡ ಮತ್ತು ಉಷ್ಣತೆಯು ಸ್ಥಿರವಾಗಿದ್ದರೆ ಸಮಾನ ಗಾತ್ರದ ಅನಿಲಗಳಲ್ಲಿ ಅಡಕವಾಗಿರುವ ಅಣುಗಳ ಸಂಖ್ಯೆ ಸಮಾನವಾಗಿರುವುದು.
- 273 K ಉಷ್ಣತೆ, 1 atm ಒತ್ತಡ ಎಂಬಿವುಗಳನ್ನು STP (Standard Temperature and Pressure) ಎಂದು ಕರೆಯುತ್ತಾರೆ.
- STP ಯಲ್ಲಿ 1ಮೋಲ್ ಅನಿಲದ ಗಾತ್ರವನ್ನು STP (Standard Temperature and Pressure) ಯಲ್ಲಿ ಮೋಲಾರ್ ಗಾತ್ರ ಎಂದು ಕರೆಯುತ್ತಾರೆ. ಇದು 22.4 L (22400 mL) ಆಗಿರುವುದು.
- ಸಮತೋಲನಗೊಲಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಲ್ಲಿ ಮೋಲ್ ಕಲ್ಪನೆಯನ್ನು ಉಪಯೋಗಿಸಿಕೊಂಡು ರಾಸಾಯನಿಕ ಕ್ರಿಯೆಯಲ್ಲಿ ವಿವಿಧ ರಾಸಾಯನಿಕ ಪದಾರ್ಥಗಳ ಅಳತೆಗೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಮಾಡಬಹುದು.
- ರಾಸಾಯನಿಕ ಪದಾರ್ಥಗಳ ದ್ರಾವಣಗಳ ಪ್ರಬಲತೆಯನ್ನು ಹೇಳಲು ಮೋಲಾರಿಟಿಯನ್ನು ಉಪಯೋಗಿಸುತ್ತಾರೆ.
- ಒಂದು ಲೀಟರ್ ದ್ರಾವಣದಲ್ಲಿ ಒಂದು ಮೋಲ್ ದ್ರವ್ಯವು ಅಡಕವಾಗಿರುವುದು 1 ಮೋಲಾರ್ (1 M) ದ್ರಾವಣ.

## ಅಧ್ಯಾಯದ ಕಡೆಗೆ

### ಮೊಡ್ಯೂಲ್ 1

ಸಮಯ: 3 ಪೀರಿಯಡ್

- *ರಾಸಾಯನಿಕ ಕ್ರಿಯೆಗಳಲ್ಲಿ ಸೂಕ್ಷ್ಮ ಕಣಗಳ ಸಂಖ್ಯೆಯಲ್ಲಿರುವ ಮಹತ್ವ ಮತ್ತು ದ್ರವ್ಯರಾಶಿಯನ್ನು ಉಪಯೋಗಿಸಿ ಸಂಖ್ಯೆಯನ್ನು ಕಂಡುಹಿಡಿಯುವುದು.*

ಅಗತ್ಯವಾದ ಸಾಮಾಗ್ರಿಗಳು:

*ಸಣ್ಣದಾಗಿ ತುಂಡರಿಸಿದ, ಶುಚಿಗೊಳಿಸಿದ ಮೇಗ್ನೀಶಿಯಂ ರಿಬ್ಬನ್, ಹೈಡ್ರೋಕ್ಲೋರಿಕ್ ಆಮ್ಲ.*

ಹಿಂದಿನ ತರಗತಿಗಳಲ್ಲಿ ತಿಳಿದುಕೊಂಡ ಕೆಲವು ರಾಸಾಯನಿಕ ಕ್ರಿಯೆಗಳ ನಿರೀಕ್ಷಣೆಗಳನ್ನು ಚರ್ಚಿಸಿಕೊಂಡು ತರಗತಿಯನ್ನು ಆರಂಭಿಸಬಹುದು. ಕ್ರಿಯೆಯನ್ನು ನಡೆಸಿದ ವಿಧಾನ, ಪ್ರಧಾನ ನಿರೀಕ್ಷಣೆಗಳು, ಕ್ರಿಯೆಯು ಕೊನೆಗೊಳ್ಳುವಾಗ ಉಂಟಾದ ಬದಲಾವಣೆ ಇತ್ಯಾದಿಗಳನ್ನು ಚರ್ಚಿಸಬಹುದು. ಅದರ ಮುಂದುವರಿಕೆಯಾಗಿ ಮೇಗ್ನೀಶಿಯಂ ರಿಬ್ಬನಿನ ತುಂಡುಗಳು ಮತ್ತು ಹೈಡ್ರೋಕ್ಲೋರಿಕ್ ಆಮ್ಲದ ಕ್ರಿಯೆಯನ್ನು ಮಂಡಿಸಬಹುದು.

ಒಂದು ಪ್ರನಾಳದಲ್ಲಿ ನಾಲ್ಕು ಅಥವಾ ಐದು mL ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲವನ್ನು ತೆಗದುಕೊಂಡು ಅದಕ್ಕೆ ಒಂದು ಸಣ್ಣ ತುಂಡು ಮೇಗ್ನೀಶಿಯಂ ಸೇರಿಸುವಾಗ ಮೇಗ್ನೀಶಿಯಂ ಕಾಣೆಯಾಗುವುದರ ಜೊತೆಗೆ ಕ್ರಿಯೆಯು ಕೊನೆಗೊಳ್ಳುವುದು ಎಂಬುದನ್ನು ವಿದ್ಯಾರ್ಥಿಯು ತಿಳಿದುಕೊಳ್ಳಬೇಕು. ಇದಕ್ಕೆ ಅನುಕೂಲವಾಗುವ ಪಟ್ಟಿಗಳನ್ನು ತಯಾರಿಸಿದ ನಂತರ ಪ್ರಯೋಗವನ್ನು ಮಾಡಬೇಕು. ಸಣ್ಣ ಗುಂಪುಗಳಲ್ಲಿ ಕ್ರಿಯೆಯನ್ನು ಮಾಡಿ ನಿರೀಕ್ಷಣೆಯ ಫಲಿತಾಂಶವನ್ನು ಕ್ರೋಡೀಕರಿಸುವುದು ಸೂಕ್ತ.

ನಂತರ ಇದೇ ಕ್ರಿಯೆಯನ್ನು ಸುಮಾರು 1mL ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲವನ್ನು ತೆಗೆದುಕೊಂಡು ಅದಕ್ಕೆ ಸ್ವಲ್ಪ ಹೆಚ್ಚು ಮೇಗ್ನೀಶಿಯಂ ತುಂಡುಗಳನ್ನು ಒಂದೊಂದಾಗಿ ಸೇರಿಸಿ ಆವರ್ತಿಸಬೇಕು. ಮೇಗ್ನೀಶಿಯಂ ಬಾಕಿ ಉಳಿದರೂ ಕೂಡಾ ಆಮ್ಲವು ಮುಗಿದ ತಕ್ಷಣ ಕ್ರಿಯೆಯು ಮುಗಿಯುವುದು ಎಂಬುದನ್ನು ಈ ಮೂಲಕ ತಿಳಿಯಬೇಕು.

ಪ್ರತಿಯೊಂದು ಕ್ರಿಯೆಯಲ್ಲಿಯೂ ಆಮ್ಲವು ಉಳಿದುಕೊಳ್ಳುವುದು ಮತ್ತು ಆಮ್ಲವು ಹೋಗುವುದನ್ನು ಲಿಟ್ಮಸ್ ಕಾಗದ ಉಪಯೋಗಿಸಿ ತಿಳಿದುಕೊಳ್ಳುವುದು.

**ಕ್ರೋಡೀಕರಿಸಬೇಕಾದುದು**

ಒಂದು ರಾಸಾಯನಿಕ ಕ್ರಿಯೆಯಲ್ಲಿ ಯಾವುದಾದರೂ ಒಂದು ಪ್ರವರ್ತಕ ಮುಗಿಯುವುದರೊಂದಿಗೆ ಕ್ರಿಯೆಯು ಕೊನೆಗೊಳ್ಳುವುದು.

ಮಾಡಿ ನೋಡಿದ ಎರಡು ಕ್ರಿಯೆಗಳಲ್ಲಿಯೂ ಯಾವುದಾದರೂ ಒಂದು ಪ್ರವರ್ತಕವು ಕ್ರಿಯೆಯ ನಂತರ ಬಾಕಿ ಉಳಿಯುತ್ತದೆ. ಹೀಗೆ ಬಾಕಿ ಉಳಿಯುವ ಮೂಲಕ ಕೈಗಾರಿಕಾ ರಾಸಾಯನಿಕ ಕ್ರಿಯೆಗಳಲ್ಲಿ ಉಂಟಾಗುವ ಆರ್ಥಿಕ ನಷ್ಟ ಮತ್ತು ಪರಿಸರ ಸಮಸ್ಯೆಗಳ ಕುರಿತು ಲಘುವಾದ ಚರ್ಚೆಗಳನ್ನು ಮಾಡಬಹುದು.

ಪ್ರವರ್ತಕಗಳನ್ನು ನಿರ್ದಿಷ್ಟವಾಗಿ ಅಳತೆಯಲ್ಲಿ ತೆಗೆದುಕೊಂಡರೆ ಅವುಗಳಲ್ಲಿ ಸ್ವಲ್ಪವೂ ಉಳಿಯದೆ, ಸಂಪೂರ್ಣವಾಗಿ ಉತ್ಪನ್ನಗಳಾಗಿ ಬದಲಾಯಿಸಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆಯನ್ನು ಕೇಳಬಹುದು. ಇದನ್ನು ವಿವರಿಸಲು ಹೈಡ್ರೋಜನ್ ಮತ್ತು ಕ್ಲೋರಿನ್‌ಗಳ ಪರಸ್ಪರ ವರ್ತನೆಯ ಚಿತ್ರಣ ಮತ್ತು ರಾಸಾಯನಿಕ ಸಮೀಕರಣವನ್ನು ವಿಶ್ಲೇಷಿಸಬೇಕು.

ನಂತರ ಇದಕ್ಕೆ ಸಂಬಂಧಿಸಿದ ಪಟ್ಟಿಯನ್ನು ವಿದ್ಯಾರ್ಥಿಗಳು ಪೂರ್ತಿಗೊಳಿಸಲಿ. ಇದಕ್ಕಾಗಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಪಟ್ಟಿ ಮತ್ತು ರಾಸಾಯನಿಕ ಸಮೀಕರಣಗಳ ಬದಲು ಅಣುಗಳ ಚಿತ್ರಣವನ್ನು ಉಪಯೋಗಿಸುವುದು ಸೂಕ್ತವಾಗಬಹುದು. ಐ.ಸಿ.ಟಿ/ಅನಿಮೇಶನ್ ಸಾಧ್ಯತೆಗಳನ್ನು ಉಪಯೋಗಿಸಬಹುದು.

ಅಣುಗಳು ಮತ್ತು ಪರಮಾಣುಗಳು ನಿರ್ದಿಷ್ಟ ಸಂಖ್ಯೆಯ ನಿಷ್ಪತ್ತಿಯಲ್ಲಿ ಸಂಯೋಜಿಸಲ್ಪಡುವುದೆಂದೂ ಈ ನಿಷ್ಪತ್ತಿಗೆ ಅನುಪಾತಿಕವಾದ ಸಂಖ್ಯೆಯ ಪ್ರಮಾಣದಲ್ಲಿ ತೆಗೆದುಕೊಂಡರೆ ಪ್ರವರ್ತಕಗಳಲ್ಲಿ ಯಾವುದು ಉಳಿಯದ ರೀತಿಯಲ್ಲಿ ಕ್ರಿಯೆಯು ಪೂರ್ಣಗೊಳ್ಳುವುದೆಂದೂ ಈ ಮೂಲಕ ವಿದ್ಯಾರ್ಥಿಯು ತಿಳಿದುಕೊಳ್ಳಬೇಕು.

ಅಮೋನಿಯಾ ಅಣುವಿನ ರೂಪೀಕರಣ, ನೀರಿನ ಅಣು ಉಂಟಾಗುವ ಕ್ರಿಯೆ ಇತ್ಯಾದಿ ವಿದ್ಯಾರ್ಥಿಗಳಿಗೆ ಪರಿಚಿತವಾದ ಕೆಲವು ಕ್ರಿಯೆಗಳನ್ನೂ ಇದೇ ರೀತಿಯಲ್ಲಿ ಚರ್ಚೆಗೊಳಪಡಿಸಿ ಎಲ್ಲಾ ರಾಸಾಯನಿಕ ಕ್ರಿಯೆಗಳಲ್ಲಿಯೂ ಪ್ರವರ್ತಕದ ಅಣುಗಳ ಸಂಖ್ಯೆಗಳ ನಿರ್ದಿಷ್ಟ ನಿಷ್ಪತ್ತಿಯಲ್ಲಿ ಸಂಯೋಜಿಸಲ್ಪಡುವುದೆಂದೂ ಆದರೆ ಈ ನಿಷ್ಪತ್ತಿಯು ಎಲ್ಲಾ ಕ್ರಿಯೆಗಳಲ್ಲಿಯೂ ಸಮಾನವಲ್ಲ ಎಂದೂ ಚರ್ಚೆಗಳ ಮೂಲಕ ಮತ್ತು ಪಟ್ಟಿ2.2 ಉಪಯೋಗಿಸಿ ತಿಳಿಹೇಳಬೇಕು.

ಅತಿಸೂಕ್ಷ್ಮ ಕಣಗಳಾದ ಪರಮಾಣುಗಳು ಮತ್ತು ಅಣುಗಳ ವಿಚಾರದಲ್ಲಿ ಅವುಗಳನ್ನು ಸ್ಪಷ್ಟವಾಗಿ ಎಣಿಸಲು ಸಾಧ್ಯವಿಲ್ಲ ಎಂಬ ಸಮಸ್ಯೆಯನ್ನು ಚರ್ಚಿಸಿ ಸಂಖ್ಯೆಯ ಬದಲು ದ್ರವ್ಯರಾಶಿಯನ್ನು ಉಪಯೋಗಿಸುವ ಆಶಯದ ಕಡೆಗೆ ದಾಟಬೇಕು. ವಸ್ತುಗಳು ಚಿಕ್ಕದಾದಂತೆ ಎಣಿಸಲು ಕಷ್ಟಕರವಾಗುವ ಉದಾಹರಣೆಗಳನ್ನು ಮತ್ತು ಸಂಖ್ಯೆ ಹೆಚ್ಚಾಗದಂತೆ ಅನುಭವಿಸಲ್ಪಡುವ ಕಷ್ಟಗಳನ್ನು ಚರ್ಚಿಸಬಹುದು.

(ಉದಾ: ಒಂದು ಪ್ಯಾಕೇಟಿನಲ್ಲಿರುವ ಮಿಠಾಯಿಗಳ ಸಂಖ್ಯೆ, ಒಂದು ಪ್ಯಾಕೇಟ್ ಸಕ್ಕರೆಯಲ್ಲಿರುವ ಕಣಗಳ ಸಂಖ್ಯೆ...)

ಎಣಿಸಬೇಕಾದ ವಸ್ತುಗಳ ಎಲ್ಲಾ ರೀತಿಯಲ್ಲಿಯೂ ಸಮಾನವಾಗಿದ್ದರೆ ಎಣಿಸುವ ಬದಲು ಇತರ ವಿಧಾನಗಳನ್ನು ಉಪಯೋಗಿಸಬಹುದೆಂಬುದನ್ನು ಉದಾಹರಣೆಗಳ ಮೂಲಕ ತಿಳಿಸಬೇಕು. ಒಂದೇ ರೀತಿಯ ನಾಣ್ಯಗಳು (ಏಕಕಾಲಕ್ಕೆ ಚಲಾವಣೆಗೆ ಬಂದವುಗಳು) ಸಮಾನ ದ್ರವ್ಯರಾಶಿಯುಳ್ಳವುಗಳಾಗಿದ್ದರೆ ಬ್ಯಾಂಕು ಮತ್ತು ಇತರ ಕಡೆಗಳಲ್ಲಿ ನಾಣ್ಯಗಳನ್ನು ಎಣಿಸಬೇಕಾಗಿ ಬಂದಾಗ ಅವುಗಳನ್ನು ಪ್ರತ್ಯೇಕಿಸಿ ತೂಗಿ ನೋಡುವುದು ಒಂದು ಉದಾಹರಣೆ ಮಾತ್ರ.

ಮೂಲವಸ್ತು ಮತ್ತು ಯೌಗಿಕಗಳ ಸೂಕ್ಷ್ಮ ಕಣಗಳು ಒಂದೇ ರೀತಿಯಾಗಿರುವುದರಿಂದ ಅವುಗಳ ಸಂಖ್ಯೆಯನ್ನು ಲೆಕ್ಕಹಾಕಲು ಅವುಗಳ ದ್ರವ್ಯರಾಶಿಯನ್ನು ತೂಗಿ ನೋಡುವುದರ ಮೂಲಕ ಸಾಧ್ಯವಿದೆ ಎಂದು ನಂತರ ವಿದ್ಯಾರ್ಥಿಯು ತಿಳಿದುಕೊಳ್ಳಬೇಕು.

*(ಟಿಪ್ಪಣಿ: ಈ ಹಂತದಲ್ಲಿ ಧಾತು ರೂಪಗಳ ಬಗ್ಗೆ ಹೇಳಬೇಕೆಂದಿಲ್ಲ)*

ಸೂಕ್ಷ್ಮ ಕಣಗಳ ದ್ರವ್ಯರಾಶಿಯನ್ನು ಸಾಪೇಕ್ಷ ದ್ರವ್ಯರಾಶಿಯ ರೀತಿಯಲ್ಲಿ ಎಣಿಸುವುದು ಮತ್ತು ಪರಮಾಣುವಿಕ ದ್ರವ್ಯರಾಶಿ, ಅಣುವಿಕ ದ್ರವ್ಯರಾಶಿ ಎಂಬಿವುಗಳ ಕುರಿತು ಒಂಭತ್ತನೇ ತರಗತಿಯಲ್ಲಿ ಕಲಿತುಕೊಳ್ಳಲಾಗಿದೆ.

ಆದರೂ ಅದರ ಒಂದು ಸರಳ ವಿಶ್ಲೇಷಣೆ ಇಲ್ಲಿ ಅಗತ್ಯವಾಗಿ ಬರಬಹುದು ಎಂಬ ಕಾರಣದಿಂದ ಪಠ್ಯಪುಸ್ತಕದಲ್ಲಿ ಅದನ್ನು ನೀಡಲಾಗಿದೆ. ಪರಮಾಣುವಿಕ ದ್ರವ್ಯರಾಶಿ, ಅದನ್ನು ಹೇಳುವ ವಿಧಾನ. ಯೂನಿಫೈಡ್‌ಮಾಸ್ ಎಂಬಿವುಗಳನ್ನು ಇದರ ಅಂಗವಾಗಿ ಚರ್ಚಿಸಬೇಕು.

*ಇದಕ್ಕೆ ಸಂಬಂಧಿಸಿ ಹಿಂದಿನ ತರಗತಿಗಳಲ್ಲಿ ಸ್ಪಷ್ಟವಾದ ತಿಳುವಳಿಕೆಯನ್ನು ಪಡೆಯದ ವಿದ್ಯಾರ್ಥಿಗಳಿಗಾಗಿ ಕೆಳಗೆ ನೀಡಲಾದ ಚಟುವಟಿಕೆ/ಭಾಗವನ್ನು ಉಪಯೋಗಿಸುವುದನ್ನು ಅಗತ್ಯವಿದ್ದರೆ ಪರಿಗಣಿಸಬಹುದು.*

ಇದನ್ನು ಸ್ಪಷ್ಟಪಡಿಸಲು ಒಂದು ಉದಾಹರಣೆಯನ್ನು ನೋಡೋಣ.

ಒಂದು ಹಣ್ಣಿನ ಅಂಗಡಿಯನ್ನು ಊಹಿಸಿಕೊಳ್ಳಿ. ಅಲ್ಲಿ ದೊರೆಯುವ ಒಂದೇ ತಳಿಯ ಹಣ್ಣುಗಳೆಲ್ಲವೂ ಒಂದೇ ರೀತಿಯವುಗಳೆಂಬುದು ಆ ಅಂಗಡಿಯ ವೈಶಿಷ್ಟ್ಯ. ಅಂದರೆ ಆ ಅಂಗಡಿಯಲ್ಲಿರುವ ದ್ರಾಕ್ಷೆಗಳೆಲ್ಲವೂ ಸಮಾನ ತೂಕ (ದ್ರವ್ಯರಾಶಿ), ಗಾತ್ರ ಮತ್ತು ಆಕೃತಿಯುಳ್ಳವುಗಳಾಗಿವೆ. ಅದೇ ರೀತಿ ಕಿತ್ತಳೆಗಳೆಲ್ಲವೂ ಸಮಾನ ತೂಕ, ಗಾತ್ರ ಮತ್ತು ಆಕೃತಿಯುಳ್ಳವುಗಳಾಗಿವೆ. ಆದರಿಂದ ತಕ್ಕಡಿ ಇದ್ದರೂ ತೂಕದ ಕಲ್ಲುಗಳು ಕಾಣದಿರುವುದರಿಂದ ಅಂಗಡಿಯಾತನು ಒಂದು ಪೇರಳೆಯನ್ನು ತೆಗೆದುಕೊಂಡು ಅದನ್ನು ಸಮಾನ ದ್ರವ್ಯರಾಶಿಯಿರುವ ಸಣ್ಣ ತುಂಡುಗಳನ್ನಾಗಿ ಮಾಡುತ್ತಾನೆ. ಅಂಗಡಿಯಲ್ಲಿರುವ ಅತ್ಯಂತ ಸಣ್ಣದಾದ ಹಣ್ಣು ದ್ರಾಕ್ಷೆಯನ್ನು ತೂಗುವುದಕ್ಕಾಗಿ ಆತನು ಒಂದು ಪೇರಳೆಯನ್ನು ಸಮಾನ ರೀತಿಯ 12 ತುಂಡುಗಳನ್ನಾಗಿ ಮಾಡಿದನು. ಇದನ್ನು ಉಪಯೋಗಿಸಿ ಆತನು ದ್ರಾಕ್ಷೆ, ಲಿಂಬೆಹುಳಿ, ಸೇಬು ಇತ್ಯಾದಿಗಳನ್ನು ತೂಗಿ ನೋಡುವುದರ ಚಿತ್ರವನ್ನು ಕೆಳಗೆ ನೀಡಲಾಗಿದೆ.





ದ್ರಾಕ್ಷೆ, ಲಿಂಬೆಹುಳಿ, ಸೇಬು ಇವುಗಳ ದ್ರವ್ಯರಾಶಿಗಳ ನಡುವಿನ ಪರಸ್ಪರ ಸಂಬಂಧವೇನು?

ದ್ರಾಕ್ಷೆಯ ದ್ರವ್ಯರಾಶಿಯ 4 ಪಾಲು ದ್ರವ್ಯರಾಶಿಯು ಲಿಂಬೆಹುಳಿಗೆ ಇವೆ. ದ್ರಾಕ್ಷೆಯ ದ್ರವ್ಯರಾಶಿಯ 16 ಪಾಲು ದ್ರವ್ಯರಾಶಿ ಸೇಬಿಗಿದೆ. ಒಂದು ದ್ರಾಕ್ಷೆಯ ದ್ರವ್ಯರಾಶಿಯನ್ನು ಈ ರೀತಿಯಲ್ಲಿ ಹೇಗೆ ಹೇಳಬಹುದು? ಒಂದು ದ್ರಾಕ್ಷೆಯ ದ್ರವ್ಯರಾಶಿ ಎಂಬುದು ಒಂದು ಪೇರಳೆಯ ದ್ರವ್ಯರಾಶಿಯ $\frac{1}{12}$ ಭಾಗಕ್ಕೆ ಸಮಾನವಾಗಿದೆ.

ಒಂದು ಲಿಂಬೆಹುಳಿಯ ದ್ರವ್ಯರಾಶಿಯ ಒಂದು ಪೇರಳೆಯ ದ್ರವ್ಯರಾಶಿಯ ಒಂದು ಪೇರಳೆಯ ದ್ರವ್ಯರಾಶಿಯ $\frac{1}{12}$ ಭಾಗದ 4 ಪಾಲು. ಹಾಗಾದರೆ ಒಂದು ಸೇಬಿನ ದ್ರವ್ಯರಾಶಿ?

ಒಬ್ಬ ವ್ಯಕ್ತಿ ಈ ಅಂಗಡಿಯಿಂದ ಒಂದು ಕಿಲೋಗ್ರಾಂ ದ್ರಾಕ್ಷೆ ಖರೀದಿಸಿದೆನೆಂದಿಟ್ಟುಕೊಳ್ಳೋಣ. ಅದರಲ್ಲಿ 200 ದ್ರಾಕ್ಷೆಗಳಿದ್ದವು.

ಒಂದು ಕಿಲೋಗ್ರಾಂ ಲಿಂಬೆಹುಳಿಯನ್ನು ಖರೀದಿಸಿದರೆ ಅದರಲ್ಲಿ 200 ಲಿಂಬೆಹುಳಿ ಇರಲಾರದಲ್ಲವೆ?ಇದಕ್ಕೆ ಕಾರಣವೇನು?

ಆದರೆ 200 ಲಿಂಬೆಹುಳಿ ದೊರೆಯಲು ಎಷ್ಟು ಕಿಲೋಗ್ರಾಂ ಲಿಂಬೆಹುಳಿ ಖರೀದಿಸಬೇಕು? 200 ಸೇಬು ದೊರೆಯಬೇಕಾದರೆ?

ಅಂದರೆ 1 ಕಿಲೋಗ್ರಾಂ ದ್ರಾಕ್ಷೆ, 4 ಕಿಲೋಗ್ರಾಂ ಲಿಂಬೆಹುಳಿ ಮತ್ತು 16 ಕಿಲೋಗ್ರಾಂ ಸೇಬಿನಲ್ಲಿ ತಲಾವಾರು ಸಂಖ್ಯೆ ಸಮಾನವಾಗಿರುವುದು. 10 ಕಿಲೋಗ್ರಾಂ ದ್ರಾಕ್ಷೆ, 40 ಕಿಲೋಗ್ರಾಂ ಲಿಂಬೆಹುಳಿ ಮತ್ತು 160 ಕಿಲೋಗ್ರಾಂ ಸೇಬು ಆದರೆ?

ಒಂದು ಕ್ವಿಂಟಾಲ್ ದ್ರಾಕ್ಷೆ, 4 ಕ್ವಿಂಟಾಲ್ ಲಿಂಬೆಹುಳಿ ಮತ್ತು 16 ಕ್ವಿಂಟಾಲ್ ಸೇಬು ಆದರೂ ಸಂಖ್ಯೆ ಸಮಾನವಾಗಿರಬಹುದಲ್ಲವೇ. ಕಿಲೋಗ್ರಾಂನ ಬದಲು ಕ್ವಿಂಟಾಲ್, ಟನ್ ಅಥವಾ ಇನ್ನಾವುದೇ ಇತರ ಏಕಕವನ್ನು ಪರಿಗಣಿಸಿದರೂ ಈ ಸಂಬಂಧವೂ ಸರಿಯಾಗಿರಬಹುದಲ್ಲವೇ.

ಅಂಗಡಿಯಾತನು ಹಣ್ಣುಗಳನ್ನು ತೂಕ ಮಾಡಲು ಉಪಯೋಗಿಸಿದ ಸಾಮಾನ್ಯ ಅದೇ ರೀತಿಯಲ್ಲಿಯೇ ಸಾಪೇಕ್ಷ ಪರಮಾಣುವಿಕ ದ್ರವ್ಯರಾಶಿಯನ್ನೂ ಪರಿಗಣಿಸಬೇಕು. ಇದಕ್ಕಾಗಿ ಕಾರ್ಬನ್– 12 ಪರಮಾಣುವಿನ ದ್ರವ್ಯರಾಶಿಯ $\frac{1}{12}$ ಭಾಗವನ್ನು ಸಂಬಂಧಸೂಚಕ (reference) ವಾಗಿ ತೆಗೆದುಕೊಳ್ಳಲಾಗಿದೆ. ಕಾರ್ಬನ್ – 12ರ ಇಷ್ಟೊಂದು ಅಂಶದ ದ್ರವ್ಯರಾಶಿಯು ಒಂದು ಹೈಡ್ರೋಜನ್ ಪರಮಾಣುವಿನ ದ್ರವ್ಯರಾಶಿಗೆ ಸಮಾನವಾಗಿ ಪರಿಗಣಿಸಬೇಕು. ಆದರಿಂದ ಹೈಡ್ರೋಜನ್‌ನ ಸಾಪೇಕ್ಷ ಪರಮಾಣುವಿಕ ದ್ರವ್ಯರಾಶಿ1 ಎಂದು ಹೇಳಲಾಗುವುದು. ಹೀಲಿಯಂನ ಸಾಪೇಕ್ಷ ಪರಮಾಣುವಿಕ ದ್ರವ್ಯರಾಶಿ 4 ಅಂದರೆ ಹೀಲಿಯಂನ ಪರಮಾಣುವಿನ ದ್ರವ್ಯರಾಶಿ ಎಂಬುದು ಒಂದು ಕಾರ್ಬನ್ ಪರಮಾಣುವಿನ ದ್ರವ್ಯರಾಶಿಯ $\frac{1}{12}$ ಭಾಗದ 4 ಪಾಲು ಆಗಿದೆ ಅಥವಾ ಹೈಡ್ರೋಜನ್ ಪರಮಾಣುವಿನ ದ್ರವ್ಯರಾಶಿಯ 4 ಪಾಲು. ಆಕ್ಸಿಜನ್‌ನ ಸಾಪೇಕ್ಷ ಪರಮಾಣುವಿನ ದ್ರವ್ಯರಾಶಿ 16, ಇದ್ದು ಹೈಡ್ರೋಜನ್‌ನ ದ್ರವ್ಯರಾಶಿಗೆ ಹೋಲಿಸಿದರೆ? ಒಂದು ಆಕ್ಸಿಜನ್‌ನ ಪರಮಾಣುವಿನ ದ್ರವ್ಯರಾಶಿಯು ಒಂದು ಹೈಡ್ರಜನ್ ಪರಮಾಣುವಿನ ದ್ರವ್ಯರಾಶಿ 16 ಪಾಲು.

ಒಂದು H ಪರಮಾಣು ಅಥವಾ ಒಂದು C-12 ಪರಮಾಣುವಿನ ದ್ರವ್ಯರಾಶಿಯನ್ನು ಸರಿಯಾಗಿ ಕಂಡುಹಿಡಿಯಲು ಸಾಧ್ಯವಿಲ್ಲದಿರುವುದರಿಂದ ಪರಮಾಣು ದ್ರವ್ಯರಾಶಿಯನ್ನು ಸಾಪೇಕ್ಷವಾಗಿ ಹೇಳಲಾಗುವುದು. ಆದರೆ ಆಧುನಿಕ ಉಪಕರಣಗಳನ್ನು ಉಪಯೋಗಿಸಿ ಇವುಗಳ ನಿಜವಾದ ದ್ರವ್ಯರಾಶಿಯನ್ನು ಕಂಡುಹಿಡಿಯಲಾಗಿದೆ. ಆದರಿಂದ ಸಾಪೇಕ್ಷ ವಿಧಾನದ ಬದಲು ಈಗ ಪರಮಾಣು ದ್ರವ್ಯರಾಶಿ, ಅಣುವಿಕ ದ್ರವ್ಯರಾಶಿ ಎಂಬಿವುಗಳು amu ಅಲ್ಲದಿದ್ದರೆ.

unified massಎಂಬ ಏಕಕದಲ್ಲಿ ಹೇಳಲಾಗುವುದು. 1amu = 1u = mass of $\frac{1}{12}$ of C-12 atom = $1.66056 \times 10^{-24}$ g 1.66056.



*ಮೂಲವಸ್ತುವಿನ ಸಾಪೇಕ್ಷ ಪರಮಾಣುವಿನ ದ್ರವ್ಯರಾಶಿಗೆ ಸಮಾನವಾದ ಗ್ರಾಂ/ಕಿಲೋಗ್ರಾಂ (ಯಾವುದಾದರೂ ದ್ರವ್ಯರಾಶಿಯ ಯೂನಿಟ್)ನಷ್ಟು ಯಾವುದೇ ಮೂಲವಸ್ತುವನ್ನು ತೆಗೆದುಕೊಂಡರೂ ಅದರಲ್ಲಿ ಅಡಕವಾಗಿರುವ ಪರಮಾಣುಗಳ ಸಂಖ್ಯೆ ಸಮಾನವಾಗಿರುವುದು ಎಂದು ಸರಳ ಉದಾಹರಣೆಗಳ ಮೂಲಕ ವಿದ್ಯಾರ್ಥಿಗೆ ತಿಳಿಸಬೇಕು. ಐ.ಸಿ.ಟಿ ಸಾಧ್ಯತೆಗಳನ್ನೂ ಉಪಯೋಗಿಸಬಹುದು.*

ಪಾಠಪುಸ್ತಕದಲ್ಲಿರುವ ಉದಾಹರಣೆಗಳ ಮೂಲಕವೇ ಗ್ರಾಂ ಪರಮಾಣುವಿಕ ದ್ರವ್ಯರಾಶಿ, ಗ್ರಾಂ ಪರಮಾಣುವಿಕ ದ್ರವ್ಯರಾಶಿ ಮತ್ತು ಅವಗಾಡ್ರೋ ಸಂಖ್ಯೆಗಳ ಸಂಬಂಧ ಎಂಬಿವುಗಳನ್ನು ಕ್ರೋಡೀಕರಿಸಬಹುದು. ಸರಳ ಲೆಕ್ಕಗಳನ್ನು ಪರಿಹರಿಸಲು ತರಬೇತಿ ನೀಡುವುದು ಈ ಆಶಯವನ್ನು ಹೆಚ್ಚು ಮನದಟ್ಟು ಮಾಡಿಕೊಳ್ಳಲು ಸಹಾಯಮಾಡಬಹುದಲ್ಲವೇ?

ನಂತರ ಮೂಲವಸ್ತುವಿನ ಅಣುಗಳು ಮತ್ತು ಯೌಗಿಕವಾಗಿ ಅಣುಗಳನ್ನು ಉದಾಹರಣೆಗಳನ್ನಾಗಿ ತೆಗೆದುಕೊಂಡು ಗ್ರಾಂ ಅಣುವಿಕ ದ್ರವ್ಯರಾಶಿ ಎಂಬ ಆಶಯವನ್ನು ಇದೇ ರೀತಿಯಲ್ಲಿ ತಿಳಿಸಿಕೊಡಬೇಕು.

ಇಲ್ಲಿ ಹೈಡ್ರೋಜನ್ ಐಸೋಟೋಪ್‌ಗಳಾದ ಹೈಡ್ರೋಜನ್, ಡ್ಯುಟೇರಿಯಂ, ಟ್ರೀಶಿಯಂ ಎಂಬಿವುಗಳ ಮತ್ತು. C-12, C 13, C 14 ಎಂಬಿವುಗಳ amu ವಿನಲ್ಲಿರುವ ಸರಿಯಾದ ದ್ರವ್ಯರಾಶಿಯನ್ನು ನೀಡಿ ಸರಾಸರಿ ಪರಮಾಣು ದ್ರವ್ಯರಾಶಿಯ concept ನ್ನು ಮಂಡಿಸಬಹುದು.

ಉದಾ:

| Isotype | Relative abundance | Atomic mass (u) |
|---|---|---|
| 12C | 98.892 | 12 |
| 13C | 1.108 | 13.00335 |
| 14C | $2\times 10^{-10}$ | 14.00317 |

Average atomic mass of carbon =

$$\frac{(98.892\times 12)+(1.108\times 13.00335)+(2\times 10^{-10}\times 14.00317)}{100}$$

## ಮೊಡ್ಯೂಲ್ 2

***ಸಮಯ: 3 ಪೀರಿಯಡ್***

### *ಮೋಲ್ ಕಲ್ಪನೆ ಮತ್ತು ಮೋಲ್ ಕಲ್ಪನೆಯನ್ನು ಉಪಯೋಗಿಸಿದ ಲೆಕ್ಕಾಚಾರಗಳು*

GAM, GMM ಎಂಬಿವುಗಳಿಗೆ ಸಂಬಂಧಿಸಿದ ಚರ್ಚೆಗಳಿಂದ GAM ನಲ್ಲಿ $6.022 \times 10^{23}$ ಪರಮಾಣು ಮತ್ತು 1GMM ನಲ್ಲಿ$6.022 \times 10^{23}$ ಅಣುಗಳು ಇರಬಹುದೆಂದು ವಿದ್ಯಾರ್ಥಿಗಳು ತಿಳಿದುಕೊಂಡಿದ್ದಾರೆ.

ರಸಾಯನಶಾಸ್ತ್ರದಲ್ಲಿ ಅವಗಾಡ್ರೋ ಸಂಖ್ಯೆಯ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಕೆಲವು ವಸ್ತುಗಳ ವಿಚಾರದಲ್ಲಿ 12 ಎಂಬ ಸಂಖ್ಯೆಗೆ 'ಡಜನ್' ಎಂದು ಹೇಳುವಂತೆಯೇ ಅವಗಾಡ್ರೋ ಸಂಖ್ಯೆಯನ್ನು 'ರಸಾಯನಿಕಶಾಸ್ತ್ರದ ವಿಜ್ಞಾನಿಯ ಡಜನ್'ಎಂದು ಪರಿಗಣಿಸಬಹುದು.

ಒಂದು ಅವಗಾಡ್ರೋ ಸಂಖ್ಯೆಗೆ ಸಮಾನವಾದ ಕಣಗಳನ್ನು ಒಳಗೊಂಡ ಪದಾರ್ಥದ ಪ್ರಮಾಣವು ಒಂದು ಮೋಲ್ ಎಂಬ ನಿರ್ವಚನವನ್ನು ವಿದ್ಯಾರ್ಥಿಗಳಿಗೆ ನೇರವಾಗಿ ಹೇಳಬಹುದು.

ನಂತರ ಒಂದು ಮೋಲ್ ಪರಮಾಣುಣು ಎಂಬುದು 1GAM ಎಂದೂ ಒಂದು ಮೋಲ್ ಅಣು ಎಂಬುದು 1GMM ಎಂದೂ ದ್ರವ್ಯರಾಶಿಯ ಆಧಾರದಲ್ಲಿ ಮೋಲ್ ಅಳತೆಯ ಅರ್ಥವನ್ನು ಸರಳ ಉದಾಹರಣೆ ಮತ್ತು ಚರ್ಚೆಯ ಮೂಲಕ ಕ್ರೋಡೀಕರಿಸಬೇಕು. ಸಂಬಂಧಿಸಿದ ಸರಳ ಲೆಕ್ಕಗಳನ್ನು ಅನುಬಂಧವಾಗಿ ನೀಡಬೇಕು.

ಮೋಲ್ ಸಂಖ್ಯೆಯನ್ನು ದ್ರವ್ಯರಾಶಿಗೆ ಬದಲಾಯಿಸುವಾಗ ಪರಮಾಣು ಮತ್ತು ಅಣುವಿಗೆ ಬೇರೆ ಬೇರೆ ಅಳತೆ (ಸಂಖ್ಯೆ) ಲಭಿಸುತ್ತದೆ ಎಂದು ತಿಳಿಸುವ ಮೂಲಕ ಮೋಲ್ ಸಂಖ್ಯೆಯನ್ನು ಹೇಳುವಾಗ ಕಣಗಳ ವಿಧವನ್ನು ಸ್ಪಷ್ಟಪಡಿಸುವ ಅಗತ್ಯ ಕೂಡಾ ವಿದ್ಯಾರ್ಥಿ ಅರ್ಥೈಸಿಕೊಳ್ಳಬೇಕು.

ಕಣಗಳ ಸಂಖ್ಯೆ ಮತ್ತು ಮೋಲ್ ಸಂಖ್ಯೆಗಳ ಸಂಬಂಧವನ್ನು ಆರಂಭದಲ್ಲಿಯೇ ಚರ್ಚಿಸಲಾಗಿದ್ದರೂ ಇದನ್ನು ಸ್ಪಷ್ಟವಾಗಿ ಕ್ರೋಡೀಕರಿಸಬೇಕು.

ದ್ರವ್ಯರಾಶಿ, ಸಂಖ್ಯೆ ಎಂಬಿವುಗಳನ್ನು ಮೋಲ್ ಸಂಖ್ಯೆಗೆ ಸಂಬಂಧಿಸಿ ಕ್ರೋಡೀಕರಿಸಲು ಪಾಠಪುಸ್ತಕದಲ್ಲಿರುವ ಚಿತ್ರ (Page No. 36) ವನ್ನೇ ಉಪಯೋಗಿಸಬಹುದು.

ಈ ಚರ್ಚೆಗಳ ಮುಂದುವರಿಕೆಯಾಗಿ,, **$6.022 \times 10^{23}$** ಕಣಗಳು = 1 1ಮೋಲ್, **$12.044 \times 10^{23}$** ಕಣಗಳು = 2 ಮೋಲ್, **$18.066 \times 10^{23}$** ಕಣಗಳು = 3 3 ಮೋಲ್ ಹೀಗೆ ಗಣಿತದ ಉದಾಹರಣೆಗಳನ್ನು ನೀಡಿ ಇದರಿಂದ ನಿರ್ದಿಷ್ಟ ಕಣಗಳು ಎಷ್ಟು ಮೋಲ್ ಎಂಬುದನ್ನು ಹೇಗೆ ಕಂಡುಹಿಡಿಯುತ್ತೀರಿ ಎಂಬ ಪ್ರಶ್ನೆಯ ಮೂಲಕ ಮತ್ತು ಮುಂದುವರೆದ ಚರ್ಚೆಯ ಮೂಲಕ ಕಣಗಳ ಸಂಖ್ಯೆಯನ್ನು ಮೋಲ್ ಸಂಖ್ಯೆಗೆ ಬದಲಿಸಲಿರುವ ಗಣಿತ ಸೂತ್ರಗಳನ್ನು ರೂಪಿಸಬಹುದು.

**ಕ್ರೋಡೀಕರಿಸಬೇಕಾದುದು**

ಕಣಗಳ ಸಂಖ್ಯೆಯನ್ನು ನೀಡಿದರೆ

$$\textbf{ಮೋಲ್ ಸಂಖ್ಯೆ} = \frac{\text{ಕಣಗಳ ಸಂಖ್ಯೆ}}{\text{ಅವಗಾಡ್ರೋ ಸಂಖ್ಯೆ}}$$

***ಟಿಪ್ಪಣಿ:*** *ಸಂಖ್ಯೆಯನ್ನು ಮೋಲ್ ಅಳತೆಗೆ ಬದಲಾಯಿಸುವಾಗ ಕಣಗಳ ವಿಧವು ಅಪ್ರಸಕ್ತವಾಗಿದೆ. ಯಾವ ವಿಧದ ಕಣವಾಗಿದ್ದರೂ ಕಣಗಳ ಸಂಖ್ಯೆಯನ್ನು* $N_A$ *ಯಿಂದ ಭಾಗಿಸಬೇಕು.*

ಇದೇ ರೀತಿ ದ್ರವ್ಯರಾಶಿ ಅಳತೆಯನ್ನು ಮೋಲ್ ಸಂಖ್ಯೆಯಾಗಿ ಬದಲಿಸಲಿರುವ ಗಣಿತ ಸೂತ್ರವನ್ನು ರೂಪೀಕರಿಸಬೇಕು. ಹೀಗೆ ಮಾಡುವಾಗ ಪರಮಾಣುಗಳ ಮೋಲ್ ಸಂಖ್ಯೆಯನ್ನು ಲೆಕ್ಕಹಾಕವುದಾದರೆ ಗ್ರಾಂನಲ್ಲಿ ನೀಡಲಾದ ದ್ರವ್ಯರಾಶಿಯನ್ನು GAM ನಿಂದ ಭಾಗಿಸಬೇಕೆಂದೂ ಅಣುಗಳ ಮೋಲ್ ಸಂಖ್ಯೆಯನ್ನು ಲೆಕ್ಕಹಾಕಬೇಕಾದರೆ ಗ್ರಾಂನಲ್ಲಿ ನೀಡಲಾದ ದ್ರವ್ಯರಾಶಿಯನ್ನು GMM ನಿಂದ ಭಾಗಿಸಬೇಕೆಂದೂ ಸ್ಪಷ್ಟವಾಗಿ ತಿಳಿಸಬೇಕು.

ಈ ಆಶಯಗಳನ್ನು ಹೆಚ್ಚು ಸ್ಪಷ್ಟಪಡಿಸಲು ಪಾಠಪುಸ್ತಕದಲ್ಲಿ ನೀಡಲಾದ ಅಥವಾ ನೀಡದ ಲೆಕ್ಕಗಳನ್ನು ಉಪಯೋಗಿಸಬೇಕು.

ಮೋಲ್ ಅಳತೆಯನ್ನು ಸಂಖ್ಯೆ ಅಥವಾ ದ್ರವ್ಯರಾಶಿಯಾಗಿ ಬದಲಾಯಿಸುವುದನ್ನೂ ಇದೇ ರೀತಿಯಲ್ಲಿ ಸ್ಪಷ್ಟಪಡಿಸಬೇಕು.

ಘನ –ದ್ರವ ಸ್ಥಿತಿಗಳಿಗಿಂತ ಅನಿಲಗಳ ಸ್ಥಿತಿ ಭಿನ್ನವಾಗಿದೆ ಎಂದು ಸ್ಪಷ್ಟನೆಯನ್ನು ನೀಡುತ್ತಾ ಮುಂದಿನ ಭಾಗವನ್ನು ಪ್ರವೇಶಿಸಬೇಕು. ಉಷ್ಣತೆಯಲ್ಲುಂಟಾಗುವ ಬದಲಾವಣೆ ಮತ್ತು ಒತ್ತಡದಲ್ಲುಂಟಾಗುವ ಬದಲಾವಣೆಗಳನ್ನು ಅನುಸರಿಸಿ ಅನಿಲದ ಗಾತ್ರದಲ್ಲಿ ವ್ಯತ್ಯಾಸ ಉಂಟಾಗುವುದೆಂದು ಸೂಕ್ತ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಬಹುದು. ಪಾಠಪುಸ್ತಕದಲ್ಲಿರುವ ಹೆಚ್ಚಿನ ಓದುವಿಕೆಗಾಗಿ ಇರುವ ಭಾಗವನ್ನೂ ಇದಕ್ಕಾಗಿ ಉಪಯೋಗಿಸಬಹುದು.

### ಅವಗಾಡ್ರೋ ಸಂಖ್ಯೆ

ಸೂಕ್ಷ್ಮ ಕಣಗಳ ಸಂಖ್ಯೆಗೆ ಸಂಬಂಧಿಸಿದ, ರಸಾಯನಶಾಸ್ತ್ರದಲ್ಲಿ ಉಪಯೋಗಿಸುವ ಒಂದು ಸ್ಥಿರ ಸಂಖ್ಯೆಯೇ ಅವಗಾಡ್ರೋ ಸಂಖ್ಯೆ ಅಥವಾ ಅವಗಾಡ್ರೋ ಸ್ಥಿರಾಂಕ. ಪರಮಾಣು, ಅಣು ಮೊದಲಾದ ಸೂಕ್ಷ್ಮ ಕಣಗಳ ಸಾಪೇಕ್ಷ ದ್ರವ್ಯರಾಶಿಗೆ ಸಮಾನವಾದ ಗ್ರಾಂ ಪದಾರ್ಥದಲ್ಲಿ ಅಡಕವಾದ ಅವಗಾಡ್ರೋ ಸಂಖ್ಯೆಯನ್ನು ಅವಗಾಡ್ರೋ ಸಂಖ್ಯೆ ಎನ್ನುತ್ತಾರೆ. $N_A$ ಎಂಬುದಾಗಿ ಪ್ರಸ್ತುತ ಇದನ್ನು ಸೂಚಿಸುತ್ತಾರೆ.

ಅವಗಾಡ್ರೋ ಸಂಖ್ಯೆಗೆ ಪ್ರಸ್ತುತ ಸ್ವೀಕರಿಸಲಾದ ಸಾಮಾನ್ಯ ಮೌಲ್ಯ $6.022 \times 10^{23}$ ಇನ್ನಷ್ಟು ನಿಖರವಾಗಿ ಹೇಳುವಾಗ $6.0221367 \times 10^{23}$ ಎನ್ನಬಹುದು. ಈ ಸಂಖ್ಯೆಯು ನಮ್ಮ ಭೂಮಿಯ ಮೇಲಿರುವ ಒಟ್ಟು ಹೊಗೆಯ ಕಣಗಳ ಸಂಖ್ಯೆಗಿಂತ ಹೆಚ್ಚಾಗಿದೆಯೇ ಎಂದು ಹೋಲಿಸಿ ಹೇಳಬಹುದು. ಆರಂಭದಲ್ಲಿ 1g ಹೈಡ್ರೋಜನ್‌ನಲ್ಲಿರುವ ಪರಮಾಣುಗಳ ಸಂಖ್ಯೆಯಾಗಿ ನಿರ್ವಚಿಸಲ್ಪಟ್ಟ ಇದು ಈಗ 12 g ಕಾರ್ಬನ್ – 12 ಐಸೋಟೋಪ್‌ನಲ್ಲಿರುವ ಪರಮಾಣುಗಳ ಸಂಖ್ಯೆ ಎಂದು ಪರಿಗಣಿಸಲ್ಪಡುತ್ತದೆ. ಈ ಸಂಖ್ಯೆಗೆ ಸಮಾನವಾದ ಕಣಗಲೊಳ ಪ್ರಮಾಣವು ಒಂದು ಮೋಲ್.

ಅವಗಾಡ್ರೋ ಸಂಖ್ಯೆಯ ಬೆಲೆಯನ್ನು ಪ್ರಪ್ರಥಮವಾಗಿ ಲೆಕ್ಕಹಾಕಿದ ಗೌರವವು ಜೋಸೆಫ್‌ಲಾಸ್ಮಿತ್ (Joseph Laschmidt) ಎಂಬ ಆಸ್ಟ್ರೇಲಿಯಾ ವಿಜ್ಞಾನಿಗೆ ಸಲ್ಲುತ್ತದೆ. ಆದರೆ ಅವಗಾಡ್ರೋ ಸಂಖ್ಯೆ ಎಂಬ ಪದಪ್ರಯೋಗವನ್ನು ಮೊದಲು ಉಪಯೋಗಿಸಿದವರು Jean Baptiste Perrin ಎಂಬ ವಿಜ್ಞಾನಿ. ಅವಗಾಡ್ರೋ ಸಂಖ್ಯೆಯ ಈಗಿನ ಮೌಲ್ಯವನ್ನು ಅತ್ಯಂತ ಶುದ್ಧವಾದ ಸಿಲಿಕಾನ್ ಸ್ಫಟಿಕದಲ್ಲಿರುವ (ವಿಶೇಷ ರೀತಿಯಲ್ಲಿ ನಿರ್ಮಿಸಲಾದ) ಪರಮಾಣುಗಳ ಪರಸ್ಪರ ದೂರವನ್ನು ಎಕ್ಸ್ – ರೇ ಸ್ಕೇಟರಿಂಗ್ ಪ್ರಯೋಗಗಳ ಮೂಲಕ ಲೆಕ್ಕಹಾಕಿ ಕಂಡುಹಿಡಿಯಲಾಗಿದೆ ಹಾಗೆ ಲೆಕ್ಕ ಹಾಕಿದ ಮೌಲ್ಯವು $N_A = 6.022 \times 10^{23}$ ಲೆಕ್ಕಹಾಕಲು ಉಪಯೋಗಿಸಿದ ರೀತಿಗೆ ಅನುಸಾರವಾಗಿ ಹಲವಾರು ವರ್ಷಗಳಿಂದ ರಸಾಯನ ಶಾಸ್ತ್ರದಲ್ಲಿ ಆಯಾ ಸಮಯಕ್ಕೆ ಅವಗಾಡ್ರೋ ಸ್ಥಿರಾಂಕ್ಕೆ ವಿಭಿನ್ನವಾದ ಮೌಲ್ಯವನ್ನು ಉಪಯೋಗಿಸಲಾಗಿದೆ. ಪಟ್ಟಿಯನ್ನು ನೋಡಿರಿ.

| Year | Author | $N_A \times 10^{23}$ |
|---|---|---|
| 1908 | Perrin | 6.7 |
| 1917 | Mullikan | 6.064 |
| 1929 | Birge | 6.0644 |
| 1931 | Bearden | 6.019 |
| 1945 | Birge | 6.02338 |
| 1951 | Dumond | 6.02544 |

| | | |
|---|---|---|
| 1965 | Bearden | 6.022088 |
| 1973 | Cohen | 6.022045 |
| 1987 | Deslattes | 6.022134 |
| 1994 | Basile | 6.0221379 |
| 2001 | De Bievre | 6.0221339 |

**ಅನಿಲ ನಿಯಮಗಳು**

ಘನ ವಸ್ತುಗಳು ಮತ್ತು ದ್ರವಗಳಿಗಿಂತ ತೀರಾ ಭಿನ್ನವಾದ ಅಣುವಿಕ ಕ್ರಮೀಕರಣ ಮತ್ತು ವೈಶಿಷ್ಟ್ಯಗಳು ಅನಿಲಗಳಿಗಿವೆ. ಘನ ಅಥವಾ ದ್ರವಗಳಿಗೆ ಹೋಲಿಸಿದರೆ ಒಂದು ಅನಿಲದ ಗಾತ್ರ ಅದು ಪ್ರಯೋಗಿಸುವ ಒತ್ತಡ, ಮತ್ತಿತ್ತರ ಹಲವು ವೈಶಿಷ್ಟ್ಯಗಳನ್ನು ಪರಸ್ಪರ ಹೋಲಿಸಿ ಅಥವಾ ಇತರ ಕೆಲವು ಚರಗಳ ಆಧಾರದಲ್ಲಿ ಮಾತ್ರ ಹೇಳಲು ಸಾಧ್ಯವಿದೆ. ಅನಿಲದ ವಿವಿಧ ವೈಶಿಷ್ಟ್ಯಗಳಿಗೆ ವಿವರಣೆಯನ್ನು ನೀಡುವ ಮೂಲಭೂತ ನಿಯಮಗಳು ಬೋಯ್ಲ್‌ನನಿಯಮ, ಚಾರ್ಲ್ಸ್‌ನ ನಿಯಮ, ಡಾಲ್ಟನ್‌ನ ಆಂಶಿಕ ಒತ್ತಡ ನಿಯಮ, ಗಹ್ರಾಂ ನಿಯಮ, ಅನಿಲಗಳ ಕೈನೆಟಿಕ್ ಮೋಲಿಕ್ಯೂಲಾರ್ ಥಿಯರಿ, ಅವಗಾಡ್ರೋ ನಿಯಮ ಇತ್ಯಾದಿಗಳಾಗಿವೆ. ಇವುಗಳಲ್ಲಿ ಬೋಯ್ಲ್‌ನಿಯಮ, ಚಾರ್ಲ್ಸ್‌ನಿಯಮ, ಅವಗಾಡ್ರೋ ನಿಯಮಗಳ ಬಗ್ಗೆ ಪಾಠಪುಸ್ತಕದಲ್ಲಿ ವಿವರಿಸಲಾಗಿದೆ.

**ಬೋಯ್ಲ್‌ನ ನಿಯಮ**

ಉಷ್ಣತೆಯು ಸ್ಥಿರವಾಗಿರುವಾಗ ಒಂದು ನಿರ್ದಿಷ್ಟ ದ್ರವ್ಯರಾಶಿಯ ಅನಿಲದ ಗಾತ್ರವು ಒತ್ತಡಕ್ಕೆ ವಿಲೋಮಾನುಪಾತಿಕವಾಗಿರುವುದು.

ಈ ನಿಯಮದ ಗಣಿತ ರೂಪವನ್ನು $V \alpha \frac{1}{P}$ ಎಂದು ಬರೆಯಬಹುದು.

$V =$ ಒಂದು ಸ್ಥಿರ ಸಂಖ್ಯೆ $\times \frac{1}{P}$

$PV =$ ಸ್ಥಿರ ಸಂಖ್ಯೆ

ಅಥವಾ $P_1V_1 = P_2V_2$

ವಾಯುವಿನ ಒತ್ತಡವು ಹೆಚ್ಚಿರುವ ಭಾಗದಿಂದ ವಾಯುವಿನ ಒತ್ತಡವು ಕಡಿಮೆ ಇರುವ, ವಾತಾವರಣದ ಮೇಲ್ಭಾಗಕ್ಕೆ ಏರುವ ಗಾಳಿ ತುಂಬಿಸಿದ ಬಲೂನ್‌ಗಳು ದೊಡ್ಡದಾಗುತ್ತಾ ಸಾಗುವುದು ಮತ್ತು ನೀರಿನ ಒತ್ತಡವು ಅಧಿಕವಾಗಿರುವ ತಳಭಾಗದಿಂದ ಒತ್ತಡವು ಕಡಿಮೆಯಾಗಿರುವ ಮೇಲ್ಭಾಗಕ್ಕೆ ಏರುವ ಅನಿಲ ಗುಳ್ಳೆಗಳು ದೊಡ್ಡದಾಗುವುದು ಇತ್ಯಾದಿಗಳು ಬೋಯ್ಲ್ ನಿಯಮಕ್ಕೆ ಸಂಬಂಧಿಸಿ ವಿವರಿಸಬಹುದಾದ ಸಂದರ್ಭಗಳಾಗಿವೆ.

**ಚಾರ್ಲ್ಸ್ ನಿಯಮ**

ಒತ್ತಡವು ಸ್ಥಿರವಾಗಿರುವಾಗ ಒಂದು ನಿರ್ದಿಷ್ಟ ದ್ರವ್ಯರಾಶಿಯ ಅನಿಲದ ಗಾತ್ರವು ಕೆಲ್ವಿನ್ ಅಳತೆ ಪಟ್ಟಿಯ ಉಷ್ಣತೆಗೆ ಸಮಾನುಪಾತಿಕವಾಗಿರುವುದು.

ಉಷ್ಣತೆಗನುಸಾರವಾಗಿ ಅನಿಲದ ಗಾತ್ರಕ್ಕೆ ಉಂಟಾಗಬಹುದಾದ ಬದಲಾವಣೆಗಳ ಕುರಿತಾದ ಕಲಿಕೆಯು ಚಾರ್ಲ್ಸ್ ನಿಯಮದ ಕಡೆಗೆ ಮುನ್ನಡೆಸಿತು. ನಿರ್ದಿಷ್ಟ ಒತ್ತಡದಲ್ಲಿರುವ ಸ್ವತಂತ್ರ್ಯವಾಗಿ ವಿಕಾಸ ಹೊಂದಲು ಸಾಧ್ಯವಿರುವ ಮುಚ್ಚಿದ ಪಾತ್ರೆಯಲ್ಲಿ ತೆಗೆದುಕೊಳ್ಳಲಾದ ವಾಯುವಿನ ಗಾತ್ರವು ಉಷ್ಣತೆ ಹೆಚ್ಚುವುದಕ್ಕನುಸಾರವಾಗಿ ಹೆಚ್ಚುವುದು. ಉಷ್ಣತೆ ಕಡಿಮೆಯಾಗುವಾಗ ಗಾತ್ರವು ಕಡಿಮೆಯಾಗುವುದು.

ಉಷ್ಣತೆಯು 0°C ನಿಂದ ಪ್ರತಿಯೊಂದು ಡಿಗ್ರಿ ಸೆಲ್ಸಿಯಸ್ (°C) ಹೆಚ್ಚುವಾಗಲೂ ಅನಿಲದ ಗಾತ್ರವೂ (V) ಅದಕ್ಕೆ 0°C ನಲ್ಲಿ ಇದ್ದ ಗಾತ್ರದ($V_0$), ತಲಾ $\frac{1}{273}$ ಭಾಗದಷ್ಟು ಹೆಚ್ಚುವುದು ಎಂದು ಪ್ರಯೋಗಗಳ ಮೂಲಕ ಚಾರ್ಲ್ಸ್ ಕಂಡುಹಿಡಿದನು.

$$V = V_0 + \frac{1}{273} V_0 \times t$$

(t ಎಂಬುದು °C ನಲ್ಲಿ ಉಷ್ಣತೆ)

ಉಷ್ಣತೆಯು 273$^0$ C ಆದರೆ ಗಾತ್ರವು $V_0$ ದ ಇಮ್ಮಡಿಯಾಗುವುದೆಂದೂ ಸೂತ್ರದಿಂದ - 273 °C ಆದರೆ ಗಾತ್ರವು ಶೂನ್ಯವಾಗುವುದೆಂದೂ ಸೂತ್ರದಿಂದ ತಿಳಿದುಕೊಳ್ಳಬಹುದು. ಇದರ ಅರ್ಥವು ಉಷ್ಣತೆ –273 $^0$C ನಿಂದ ಕಡಿಮೆಯಾದರೆ ಅನಿಲದ ಗಾತ್ರವು ಋಣ ಮೌಲ್ಯವಾಗುವುದು. ಇದು ಅರ್ಥರಹಿತ. ಆದ್ದರಿಂದಲೇ ಒಂದು ಅನಿಲವನ್ನು ತಣಿಸಿ ತಲುಪಿಸಲು ಸಾಧ್ಯವಿರುವ ಅತಿ ಕಡಿಮೆ ಉಷ್ಣತೆ–273 °C ಆಗಿದೆ ಎಂದು (lowest possible temperature) ಲೆಕ್ಕಹಾಕಬೇಕು. ಈ ಉಷ್ಣತೆಯನ್ನು 'ಸಾಧ್ಯವಾದ ಅತ್ಯಂತ ಕಡಿಮೆ ಉಷ್ಣತೆ' ಎಂದು ಪರಿಗಣಿಸಿ ಉಷ್ಣತೆಗೆ ಒಂದು ಅಳತೆ ಪಟ್ಟಿಯನ್ನು ಕೆಲ್ವಿನ್ ಎಂಬ ವಿಜ್ಞಾನಿ ಮಂಡಿಸಿದನು. ಈ ಉಷ್ಣತೆಯ ಅಳತೆ ಪಟ್ಟಿಯೇ ಕೆಲ್ವಿನ್‌ಸ್ಕೇಲ್. ಕೆಲ್ವಿನ್ ಸ್ಕೇಲಿನ ಉಷ್ಣತೆಯನ್ನು T ಎಂದು ಸೂಚಿಸಲಾಗುವುದು. ಕೆಲ್ವಿನ್ ಸ್ಕೇಲಿನಲ್ಲಿ

0 K = –273 °C

273 K = 0 °C

373 K = 100 °C

ಎಂಬಂತೆ ಉಷ್ಣತೆಯನ್ನು ಬದಲಾಯಿಸಿ ಬರೆಯಬಹುದು 0 K ಅಥವಾ –273 °C ಉಷ್ಣತೆಯು ನಿರಪೇಕ್ಷ ಶೂನ್ಯ (Absolute zero) ಎಂದು ತಿಳಿಯಲ್ಪಡುವುದು.

ಕೆಲ್ವಿನ್ ಉಷ್ಣತೆ T = °C ಉಷ್ಣತೆ (t) + 273

$$T = t + 273$$

Or $t = T - 273$

ಚಾರ್ಲ್ಸ್ ನಿಯಮದ ಗಣಿತರೂಪ

$V \propto t + 273$ ಅಥವಾ

$V \propto T$ ಎಂದು ಬರೆಯಬಹುದು

$V =$ ಒಂದು ಸ್ಥಿರ ಸಂಖ್ಯೆ $\times T$

$\frac{V}{T} =$ ಒಂದು ಸ್ಥಿರ ಸಂಖ್ಯೆ

ಅಥವಾ $\frac{V_1}{T_1} = \frac{V_2}{T_2}$

**ಅವಗಾಡ್ರೋ ನಿಯಮ**

ಇದು ಅನಿಲದ ಗಾತ್ರವನ್ನು ಅದರಲ್ಲಿರುವ ಅಣುಗಳ ಸಂಖ್ಯೆಯ ಜೊತೆಗೆ ಹೋಲಿಸುವ ಅನಿಲ ನಿಯಮವಾಗಿದೆ.

*ಉಷ್ಣತೆ, ಒತ್ತಡ ಎಂಬಿವುಗಳು ಸ್ಥಿರವಾಗಿರುವಾಗ ಅನಿಲಗಳ ಗಾತ್ರ, ಅಣುಗಳ ಸಂಖ್ಯೆಗೆ ಸಮಾನುಪಾತಿಕವಾಗಿರುವುದು.*

ಅನಿಲಗಳಲ್ಲಿ ಅಣುಗಳ ನಡುವಿನ ಅಂತರವು ಅತ್ಯಂತ ಹೆಚ್ಚು. ಈ ಅಂತರವನ್ನು ಹೋಲಿಸುವಾಗ ಅಣುಗಳ ಗಾತ್ರವು ಬಹಳ ಕಡಿಮೆ. ಅನಿಲದ ಗಾತ್ರ ಎಂಬುದು ಒಂದು ನಿರ್ದಿಷ್ಟ ಉಷ್ಣತೆ ಮತ್ತು ಒತ್ತಡದಲ್ಲಿ ಅನಿಲದ ಅಣುಗಳು ಅವುಗಳ ನಿರಂತರ ಮತ್ತು ಕ್ರಮರಹಿತವಾದ ಚಲನೆಗೆ ಉಪಯೋಗಿಸುವ ಸ್ಥಳದ ವ್ಯಾಪ್ತಿಯಾಗಿದೆ. ಈ ಗಾತ್ರಕ್ಕೆ ಹೋಲಿಸಿದರೆ ಅನಿಲದ ಅಣುಗಳ ಗಾತ್ರವನ್ನು ಮಾತ್ರವಾಗಿ ಪರಿಗಣಿಸಬೇಕೆಂದಿಲ್ಲ. (ಒಂದು ಫುಟ್ಬಾಲ್ ಮೈದಾನದಲ್ಲಿ ಆಟಗಾರನನ್ನು ಏಕಕಾಲಕ್ಕೆ ಒಟ್ಟುಗೂಡಿಸಿ ನಿಲ್ಲಿಸಲು ಬೇಕಾದ ಸ್ಥಳವು ಫುಟ್ಬಾಲ್ ಮೈದಾನದ ವಿಸ್ತೀರ್ಣಕ್ಕೆ ಹೋಲಿಸಿದರೆ ನಗಣ್ಯವಾಗಿದೆಯಲ್ಲವೇ) ಆದರಿಂದ ಯಾವುದೇ ಅನಿಲವಾಗಿದ್ದರೂ ಅವುಗಳ ಸಮಾನ ಸಂಖ್ಯೆಯ ಅಣುಗಳನ್ನು ಒಳಗೊಂಡ ಗಾತ್ರವು ಸಮಾನವಾಗಿರುವುದು. ಇಮ್ಮಡಿ ಅಣುಗಳಿದ್ದರೆ ಗಾತ್ರವು ಇಮ್ಮಡಿಯಾಗುವುದು.

ಗಣಿತ ರೂಪದಲ್ಲಿ ಹೇಳುವಾಗ

$V \infty n$

$n =$ ಮೋಲ್‌ಗಳ ಸಂಖ್ಯೆ

(NB: ಮೋಲ್‌ಗಳ ಸಂಖ್ಯೆ ಮತ್ತು ಅಣುಗಳ ಸಂಖ್ಯೆಗಳು ಅನುಪಾತಿಕವಾಗಿದೆಯಲ್ಲವೇ. ಅಣುಗಳ ಸಂಖ್ಯೆ = $n \times N_A$ )

$V =$ ಒಂದು ಸ್ಥಿರ ಸಂಖ್ಯೆ $\times n$

or $\frac{V}{n} =$ ಒಂದು ಸ್ಥಿರ ಸಂಖ್ಯೆ

ಅನಿಲಗಳಲ್ಲಿ ಅಣುಗಳ ನಡುವಿನ ಅಂತರವು ಅಣುಗಳ ಗಾತ್ರಕ್ಕೆ ಹೋಲಿಸಿದರೆ ಅತ್ಯಧಿಕವಾಗಿರುವುದರಿಂದ ಅಣುಗಳ ಗಾತ್ರವು ಅನಿಲದ ಗಾತ್ರವನ್ನು ನಿರ್ಧರಿಸುವ ಒಂದು ಘಟಕ ಅಲ್ಲವೆಂಬುದನ್ನು ವಿದ್ಯಾರ್ಥಿಯು ತಿಳಿಯಬೇಕು.

ಬದಲಾಗಿ ನಿರ್ದಿಷ್ಟ ಒತ್ತಡ ಮತ್ತು ಉಷ್ಣತೆಯಲ್ಲಿ ಅಣುಗಳ ಸಂಖ್ಯೆಯು ಹೆಚ್ಚುವುದು ಅನಿಲದ ಗಾತ್ರವನ್ನು ಹೆಚ್ಚಿಸುವುದೆಂದೂ ಸಂಖ್ಯೆಯು ಕಡಿಮೆಯಾಗುವುದು ಗಾತ್ರವನ್ನು ಕಡಿಮೆಮಾಡುವುದೆಂದೂ ಉದಾಹರಣೆ ಸಹಿತ ಸ್ಪಷ್ಟಪಡಿಸಬೇಕು. (ಉದಾ: ಸ್ವತಂತ್ರ್ಯವಾಗಿ ವಿಕಾಸ ಹೊಂದಲು ಸಾಧ್ಯವಿರುವ ಸಿಲಿಂಡರಿನಲ್ಲಿ ವಾಯುವನ್ನು ತುಂಬಿಸುವುದು ಅಥವಾ ನೀಗಿಸುವ ಕ್ರಿಯೆಯನ್ನು ಮಾಡುವಾಗ ಉಂಟಾಗುವ ಬದಲಾವಣೆ, ಹೆಚ್ಚು ಉಬ್ಬಿದ ಬಲೂನ್ ಅಥವಾ ಪೋಲಿಥೀನ್ ಚೀಲದಲ್ಲಿ ವಾಯು, $CO_2$ etc. ತುಂಬಿಸುವಾಗ ಉಂಟಾಗುವ ಬದಲಾವಣೆ) ಈ ಚಟುವಟಿಕೆಗಳ ಮೂಲಕ ನಿರ್ದಿಷ್ಟ ಉಷ್ಣತೆ ಮತ್ತು ಒತ್ತಡದಲ್ಲಿ ಅನಿಲಗಳ ಗಾತ್ರವು ಅದರಲ್ಲಿರುವ ಅಣುಗಳ ಸಂಖ್ಯೆಯನ್ನು ಮಾತ್ರ ಆಶ್ರಯಿಸುತ್ತದೆ ಎಂದೂ ವಿಧವನ್ನು ಆಶ್ರಯಿಸುವುದಿಲ್ಲ ಎಂದು ತಿಳಿಸಬೇಕು.

ಫುಟ್ಬಾಲ್ ಮೈದಾನದಲ್ಲಿ ಆಟಗಾರರ ಗಾತ್ರಕ್ಕೆ ಅನುಸರಿಸಿ ಮೈದಾನದ ವಿಸ್ತೀರ್ಣವನ್ನು ನಿರ್ಧರಿಸಲಾಗುವುದಿಲ್ಲವೆಂದೂ ಅದೇ ಸಂದರ್ಭದಲ್ಲಿ ಸೆವೆನ್ಸ್ ಫುಟ್ಬಾಲ್ ಮತ್ತು ಇಲೆವೆನ್ಸ್ ಫುಟ್ಬಾಲ್‌ನಲ್ಲಿ ಮೈದಾನದ ವಿಸ್ತೀರ್ಣವು ಬದಲಾಗುವುದೆಂಬುದನ್ನೂ ಉದಾಹರಣೆಯಾಗಿ ನೀಡಬಹುದು.

ಒಂದು ಮೋಲ್ ಯಾವುದೇ ಅನಿಲದಲ್ಲೂ ಅಣುಗಳ ಸಂಖ್ಯೆ ಸಮಾನವಾಗಿರುವುದೆಂದೂ ಆದ್ದರಿಂದಲೇ ನಿರ್ದಿಷ್ಟ ಉಷ್ಣತೆ ಮತ್ತು ಒತ್ತಡದಲ್ಲಿ ಅವುಗಳ ಗಾತ್ರವು ಸಮಾನವಾಗಿರುವುದೆಂದೂ ಸ್ಪಷ್ಟಪಡಿಸಬೇಕು. ಮೋಲಾರ್ ಗಾತ್ರ ಎಂದರೇನೆಂದು ಕ್ರೋಡೀಕರಿಸಬೇಕು.

ಅನಿಲಗಳ ಗಾತ್ರವು ಉಷ್ಣತೆ ಮತ್ತು ಒತ್ತಡಕ್ಕನುಸರಿಸಿ ವ್ಯತ್ಯಾಸ ಹೊಂದುವುದರಿಂದ ಇಂತಹ ವಿಭಿನ್ನ ಸಂದರ್ಭಗಳಲ್ಲಿ ಮೋಲಾರ್ ಗಾತ್ರದ ಬೆಲೆಯಲ್ಲಿ ಬದಲಾವಣೆ ಉಂಟಾಗಬಹುದೆಂದು ಚರ್ಚೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬೇಕು. ಒಂದು ನಿರ್ದಿಷ್ಟ ಉಷ್ಣತೆ ಮತ್ತು ಒತ್ತಡವನ್ನು ಅಂದಾಜು ಮಾಡಿ (ಸ್ಥಿರವಾಗಿರಿಸಿ) ಮೋಲಾರ್ ಗಾತ್ರವನ್ನು ಕಂಡುಹಿಡಿಯುವುದಾದರೆ ಇದರ ಬೆಲೆಯು ಸಮಾನವಾಗಿರುವುದೆಂದು ಸ್ಪಷ್ಟಪಡಿಸಬೇಕು. ನಂತರ STP, ಅನಿಲಗಳ STP ಯಲ್ಲಿ ಮೋಲಾರ್ ಗಾತ್ರ ಎಂಬಿವುಗಳನ್ನು ಕ್ರೋಡೀಕರಿಸಬೇಕು. **STP ಯಲ್ಲಿ ಯಾವುದೇ ಅನಿಲದ ಒಂದು ಮೋಲ್‌ಗೆ 22.4 Lಗಾತ್ರ ಇರುವುದು** ಎಂದು ಕ್ರೋಡೀಕರಿಸಿದ ನಂತರ ಮೋಲ್ ಸಂಖ್ಯೆಯನ್ನು ಗಾತ್ರದೊಂದಿಗೆ ಹೋಲಿಸಿ ಗಣಿತ ಗಾತ್ರವನ್ನು ರೂಪೀಕರಿಸಬೇಕು.

STP ಯಲ್ಲಿ ಅನಿಲಗಳ ಗಾತ್ರವನ್ನು ನೀಡಿದರೆ

**ಕ್ರೋಡೀಕರಿಸಬೇಕಾದುದು**

$$\text{ಮೋಲ್ ಸಂಖ್ಯೆ} = \frac{\text{STP ಯಲ್ಲಿ ಅನಿಲದ ಗಾತ್ರ}}{\text{STP ಯಲ್ಲಿ ಮೋಲಾರ್ ಗಾತ್ರ}}$$

ಕಣಗಳ ಸಂಖ್ಯೆ, ದ್ರವ್ಯರಾಶಿ, ಅನಿಲಗಳ ಗಾತ್ರ ಎಂಬಿವುಗಳಿಂದ ಮೋಲ್ ಸಂಖ್ಯೆಯನ್ನು ಕಂಡುಹಿಡಿಯಲಿರುವ ಸೂತ್ರವನ್ನು ಒಂದು ವರ್ಕ್‌ಶೀಟ್‌ನ ಮೂಲಕ ಕ್ರೋಡೀಕರಿಸಿದ ನಂತರ ಇವುಗಳಿಗೆ ಸಂಬಂಧಿಸಿದ ಲೆಕ್ಕಗಳನ್ನು ಪ್ರಶ್ನೆಗಳಾಗಿ ನೀಡಿ ಪರಿಹಾರ ಮಾಡಲು ಸಂದರ್ಭವನ್ನು ಒದಗಿಸಬೇಕು.

## ಮೊಡ್ಯೂಲ್ 3

ಸಮಯ: 4 ಪೀರಿಯಡ್

- *ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಲ್ಲಿ ಮೋಲ್ ಕಲ್ಪನೆಯನ್ನು ಉಪಯೋಸುವುದು.*
- *ಮೋಲಾರ್ ದ್ರಾವಣವನ್ನು ತಯಾರಿಸುವುದು*

ರಾಸಾಯನಿಕ ಸಮೀಕರಣಗಳ ಮತ್ತು ರಾಸಾಯನಿಕ ಸಮೀಕರಣಗಳನ್ನು ಸಮತೋಲನಗೊಳಿಸುವ ಕುರಿತು ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಕಲಿತಿದ್ದಾರೆ. ಸುಲಭವಾದ ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಲ್ಲಿ ಕೆಲವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು.

ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಲ್ಲಿ ಮೋಲ್ ಕಲ್ಪನೆಯನ್ನು ಉಪಯೋಗಿಸುವುದರ ಕುರಿತು ವಿವರಿಸಲು ಒಂದು ಅನಿಲ ರಾಸಾಯನಿಕ ಕ್ರಿಯೆಯಾದ ಅಮೋನಿಯಾ ಉತ್ಪಾದನೆಯನ್ನೇ ಉಪಯೋಗಿಸಬಹುದು.

$$N_2 + 3H_2 \rightarrow 2NH_3$$

ಎಂಬ ಸಮೀಕರಣವನ್ನು ಮೋಲ್ ಸಂಖ್ಯೆಯ ಆಧಾರಕ್ಕೆ ಬದಲಾಯಿಸುವುದನ್ನು ಮೊದಲು ಸ್ಪಷ್ಟಪಡಿಸಬೇಕು. ಪಾಠಪುಸ್ತಕದಲ್ಲಿರುವ ರೀತಿಯನ್ನೇ ಇದಕ್ಕಾಗಿ ಉಪಯೋಗಿಸಬಹುದು.

ಮೋಲ್ ಅಳತೆಯನ್ನು ಸಂಖ್ಯೆ, ದ್ರವ್ಯರಾಶಿ, ಗಾತ್ರ ಎಂಬಂತೆ ಯಾವುದೇ ರೂಪಕ್ಕೂ ಬದಲಾಯಿಸಲಿರುವ ಸಾಧ್ಯತೆಯನ್ನು ಪರಿಚಯಿಸಿಕೊಂಡು ಇದರ ಪ್ರಯೋಜನವನ್ನು ವಿವರಿಸಬೇಕು.

ಪಾಠಪುಸ್ತಕದಲ್ಲಿರುವ ಅಮೋನಿಯಾ ತಯಾರಿಯ ಉದಾಹರಣೆಯನ್ನು ಹೊರತಾಗಿ ಕೆಳಗೆ ನೀಡಲಾದ ಸಮತೋಲನಗೊಳಿಸಲ್ಪಟ್ಟ ಸರಳ ರಾಸಾಯನಿಕ ಸಮೀಕರಣಗಳನ್ನು ಉಪಯೋಗಿಸಬಹುದು.

$$C + O_2 \rightarrow CO_2$$

$$CH_4 + 2O_2 \rightarrow CO_2 + 2H_2O$$

$$2Mg + O_2 \rightarrow 2MgO$$

ಇಂತಹ ಉದಾಹರಣೆಗಳನ್ನು ನೀಡುವಾಗ ಘನ, ದ್ರವ ಪದಾರ್ಥಗಳ ವಿಚಾರದಲ್ಲಿ ಗಾತ್ರಕ್ಕೆ ಸಂಬಂಧಿಸಿದ ಲೆಕ್ಕಗಳು ಒಳಪಡದಂತೆ ಗಮನಿಸಬೇಕು. (ಗಾತ್ರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಕೇವಲ ಅನಿಲಗಳಿಗೆ ಸಂಬಂಧಿಸಿ ಮಾತ್ರ ನೀಡಬೇಕು)

ಪ್ರಯೋಗ ಶಾಲೆಯಲ್ಲಿ ಸಾಮಾನ್ಯವಾಗಿ ಮಾಡಲಾಗಿರುವ ರಾಸಾಯನಿಕ ಕ್ರಿಯೆಗಳಲ್ಲಿ ಹೆಚ್ಚಿನವುಗಳೂ ದ್ರಾವಣಗಳನ್ನು ಒಳಗೊಂಡಿರುತ್ತವೆಯಲ್ಲವೇ. ಇಂತಹ ಸಂದರ್ಭಗಳಲ್ಲಿ ದ್ರಾವಣದಲ್ಲಿರುವ ರಾಸಾಯನಿಕ ಪದಾರ್ಥದ ಪರಿಮಾಣವನ್ನು ಹೇಳಲು ಅವುಗಳ ಪ್ರಬಲತೆ, ಮೊಲಾರಿಟಿ ಎಂಬ ಅಳತೆಯನ್ನು ಉಪಯೋಗಿಸುವ ಕ್ರಮವಿದೆ. ಆಮ್ಲಗಳು, ಅಲ್ಕಲಿಗಳು, ವಿವಿಧ ಲವಣ ದ್ರಾವಣಗಳು ಎಂಬಿವುಗಳೆಲ್ಲ ಒಳಗೊಂಡ ರಾಸಾಯನಿಕ ಕ್ರಿಯೆಗಳಲ್ಲಿ ಇದು ಮಹತ್ವವನ್ನು ಹೊಂದಿರುತ್ತದೆ. ಈ ವಿಚಾರವನ್ನು ಮಗುವಿನ ಗಮನಕ್ಕೆ ತರಲು ಮತ್ತು ನಿರ್ದಿಷ್ಟ ಮೋಲಾರ್ ಪ್ರಬಲತೆಯಲ್ಲಿರುವ ದ್ರಾವಣಗಳನ್ನು ತಯಾರಿಸಲು ಹಾಗೂ ಅಗತ್ಯವಾದ ಲೆಕ್ಕಚಾರಗಳನ್ನು ಮಾಡಲು ವಿದ್ಯಾರ್ಥಿಗಳು ಸಾಮರ್ಥ್ಯ ಪಡೆಯುವ ರೀತಿಯಲ್ಲಿರುವ ಚರ್ಚೆಗಳು ನಡೆಯಬೇಕು.

ವಿವಿಧ ಮೋಲಾರ್ ಪ್ರಬಲತೆಯಲ್ಲಿರುವ ದ್ರಾವಣಗಳಲ್ಲಿ ದ್ರಾವಣಗಳಲ್ಲಿ ದ್ರವ್ಯದ ಮೋಲ್ ಸಂಖ್ಯೆ, ದ್ರಾವಣದ ಗಾತ್ರ ಎಂಬಿವುಗಳನ್ನು ವಿಶ್ಲೇಷಿಸಿ ಮೊಲಾರಿಟಿಗೆ ಸಂಬಂಧಿಸಿದ ಸೂತ್ರವನ್ನು ರೂಪೀಕರಿಸಬಹುದು.

1M ದ್ರಾವಣವನ್ನು ತಯಾರಿಸುವ ವಿಧಾನವನ್ನು ಪರಿಚಯಿಸಿ ತಿಳಿಯಪಡಿಸಲು ಪಾಠಪುಸ್ತಕದಲ್ಲಿರುವ ಚಿತ್ರಣಗಳು, ನಿಜವಾದ ಪ್ರಯೋಗಗಳು ಅಥವಾ ಅನಿಮೇಶನ್‌ಗಳನ್ನು ಉಪಯೋಗಿಸಬಹುದು. ಚಿತ್ರಗಳಲ್ಲಿರುವ ಎರಡು ವಿಧಾನಗಳಲ್ಲಿ ಯಾವುದು ಸರಿ ಎಂದು ಊಹಿಸಲು ವಿದ್ಯಾರ್ಥಿಗೆ ಸಂದರ್ಭವನ್ನೊದಗಿಸಬೇಕು ಮತ್ತು ನಂತರ ವಸ್ತುಗಳು ದ್ರವಗಳಲ್ಲಿ ವಿಲೀನವಾಗುವಾಗ ದ್ರಾವಣದ ಗಾತ್ರದಲ್ಲಿ ಉಂಟಾಗುವ ಬದಲಾವಣೆಯ ಕುರಿತು ಸ್ಪಷ್ಟವಾದ ಚರ್ಚಾ ಸೂಚಕಗಳನ್ನು ನೀಡಿ ಚರ್ಚೆಯನ್ನು ಮುನ್ನಡೆಸಿ ಸ್ಪಷ್ಟವಾದ ರೀತಿಯಲ್ಲಿ ಕ್ರೋಡೀಕರಿಸಬೇಕು. ನಂತರ ಪಾಠಪುಸ್ತಕದಲ್ಲಿರುವ ಪಟ್ಟಿ, ಸಮಾನವಾದ ಉದಾಹರಣೆಗಳನ್ನು ನೀಡಿ ಮೊಲಾಲಿಟಿ ಎಂಬ ಆಶಯವನ್ನು ಸ್ಪಷ್ಟಪಡಿಸಬೇಕು.

**ದ್ರಾವಣಗಳ ಪ್ರಬಲತೆ**

ದ್ರಾವಣಗಳಲ್ಲಿ ಅಡಕವಾಗಿರುವ ದ್ರವ್ಯದ ಪರಿಮಾಣವನ್ನು ಸೂಚಿಸಲು ಬೇರೆ ಬೇರೆ ರೀತಿಗಳನ್ನು ಅನುಸರಿಸಲಾಗುವುದು. ದ್ರವ್ಯದ ಮೋಲ್ ಸಂಖ್ಯೆಗೆ ಹೋಲಿಸಿ, ಗ್ರಾಂ ಕಣಗಳ ದ್ರವ್ಯರಾಶಿಗೆ ಸಂಬಂಧಿಸಿ ಪ್ರಬಲತೆಯನ್ನು ಸೂಚಿಸಲು ಉಪಯೋಗಿಸುವ ರೀತಿಗಳು ಮೊಲಾರಿಟಿ, ನೋರ್ಮಾಲಿಟಿ, ಫೋರ್ಮಾಲಿಟಿ ಇತ್ಯಾದಿ

**ಮೊಲಾರಿಟಿ (Molarity-M)**

ಒಂದು ಲೀಟರ್ ದ್ರಾವಣದಲ್ಲಿ ಅಡಕವಾಗಿರುವ ದ್ರವ್ಯದ ಮೋಲ್ ಸಂಖ್ಯೆಯು ಮೊಲಾರಿಟಿ (M) ಆಗಿದೆ.

$$\text{ಮೊಲಾರಿಟಿ (M)} = \frac{n}{V} = \frac{\text{ದ್ರವ್ಯದ ಮೋಲ್ ಸಂಖ್ಯೆ (n)}}{\text{ಗಾತ್ರ (ಲೀಟರ್)}}$$

(ಮೊಲಾರಿಟಿಯನ್ನು ಸೂಚಿಸುವಾಗ ದ್ರಾವಕದ ಗಾತ್ರವಲ್ಲ, ಬದಲಾಗಿ ದ್ರವ್ಯದ ವಿಲೀನಗೊಳಿಸಿದ ನಂತರದ ದ್ರಾವಣದ ಗಾತ್ರವನ್ನು ಪರಿಗಣಿಸಬೇಕೆಂಬುದನ್ನು ವಿಶೇಷವಾಗಿ ಗಮನಿಸಬೇಕು)

ಮೊಲಾರಿಟಿ ಎಂಬುದು ಬಹಳ ಸರಳವಾದ ಒಂದು ಏಕಕವಾಗಿದೆ. ಆದರೂ ದ್ರಾವಣದ ಗಾತ್ರವು ಉಷ್ಣತೆಗನುಸಾರವಾಗಿ ಬಹಳ ಕಡಿಮೆ ಪ್ರಮಾಣದಲ್ಲಿ ವ್ಯತ್ಯಾಸ ಹೊಂದುವುದರಿಂದ ನಿರ್ದಿಷ್ಟವಾಗಿ ಇಲ್ಲದಿರುವುದು ಮೊಲಾರಿಟಿಯ ಒಂದು ಕೊರತೆಗಾಗಿ ಪರಿಗಣಿಸಲಾಗುವುದು. ಅಂದರೆ ಒಂದು ಪ್ರತ್ಯೇಕ ಉಷ್ಣತೆಯಲ್ಲಿ ಹೇಳಲಾದ ಮೊಲಾರಿಟಿ ಅಳತೆಯಲ್ಲಿರುವ ಪ್ರಬಲತೆಯ ಇನ್ನೊಂದು ಉಷ್ಣತೆಯಲ್ಲಿ ವಿಭಿನ್ನವಾದ ಮೌಲ್ಯವನ್ನು ಪ್ರದರ್ಶಿಸುವುದು.

**ಮೊಲಾಲಿಟಿ (Molality - m)**

ಮೋಲಾರಿಟಿ ಭಿನ್ನವಾಗಿ ಒಂದು ಕಿಲೋಗ್ರಾಂ ದ್ರಾವಕದಲ್ಲಿ ಅಡಕವಾಗುವ ದ್ರವ್ಯದ ಮೇಲೆ ಸಂಖ್ಯೆಯನ್ನು ಹೇಳುವ ರೀತಿಯು ಮೋಲಾಲಿಟಿ (ನಿರ್ದಿಷ್ಟ ಗಾತ್ರದ ದ್ರವಣದ ಬದಲಾಗಿ ನಿರ್ದಿಷ್ಟ ಗ್ರಾಂ/1 kg ದ್ರಾವಕದಲ್ಲಿ ಎಂಬ ವಿಚಾರವನ್ನು ವಿಶೇಷವಾಗಿ ಗಮನಿಸಬೇಕು.)

$$\text{ಮೊಲಾಲಿಟಿ (m)} = \frac{\text{ದ್ರವ್ಯದ ಮೋಲ್ ಸಂಖ್ಯೆ} \quad (n)}{\text{ದ್ರಾವಕದ ಕಿಲೋಗ್ರಾಂನಲ್ಲಿರುವ ದ್ರವ್ಯರಾಶಿ}}$$

OR

$$m = \frac{\text{ದ್ರವ್ಯದ ಮೋಲ್ ಸಂಖ್ಯೆ}}{\text{ದ್ರಾವಕದ ಗ್ರಾಂನಲ್ಲಿರುವ ದ್ರವ್ಯರಾಶಿ}} \times 1000$$

$$m = \frac{n}{w} \times 1000$$

[w = ದ್ರಾವಕದ ಗ್ರಾಂಣನಲ್ಲಿರುವ ದ್ರವ್ಯರಾಶಿ]

ದ್ರಾವಕದ ದ್ರವ್ಯರಾಶಿಯು ಉಷ್ಣತೆಗನುಸಾರವಾಗಿ ಬದಲಾಗುವಂತಹದ್ದಲ್ಲ. ಆದರಿಂದ ಮೊಲಾಲಿಟಿ ಎಂಬುದು ಉಷ್ಣತೆಯನ್ನು ಆಶ್ರಯಿಸುವಂತಹದ್ದಲ್ಲ ಎಂಬುದು ಇದರ ಒಂದು ಅನುಕೂಲವಾಗಿ ಪರಿಗಣಿಸಲ್ಪಡುತ್ತದೆ. mol/kg ಎಂಬ ಏಕಕವನ್ನು ಉಪಯೋಗಿಸಿ ಮೊಲಾಲಿಟಿಯನ್ನು ಹೇಳಲಾಗುವುದು.

**ನೋರ್ಮಾಲಿಟಿ (Normality N)**

ದ್ರಾವಣಗಳ ಪ್ರಬಲತೆಯನ್ನು ಸೂಚಿಸಲು ಉಪಯೋಗಿಸಲಾಗುವ ಇನ್ನೊಂದು ಏಕಕವಿದು. ಪ್ರಯೋಗ ಶಾಲೆಯಲ್ಲಿರುವ ಆಮ್ಲ ಮತ್ತು ಆಲ್ಕಲಿಗಳ ಪ್ರಬಲತೆಯನ್ನು ಸಾಮಾನ್ಯವಾಗಿ ಈ ಏಕಕದಲ್ಲಿ ದಾಖಲಿಸಲಾಗುವುದು.

ಒಂದು ಲೀಟರ್ ದ್ರಾವಣದಲ್ಲಿ ಅಡಕವಾಗಿರುವ ದ್ರವ್ಯದ ಗ್ರಾಂ ಈಕ್ವಲೆಂಟ್‌ಗಳ (gram equivalents) ಸಂಖ್ಯೆಯನ್ನು ನೋರ್ಮಾಲಿಟಿ ಎನ್ನುವರು.

$$\text{ನೋರ್ಮಾಲಿಟಿ (N)} = \frac{\text{ದ್ರವ್ಯದ ಗ್ರಾಂ ಈಕ್ವಲೆಂಟ್‌ಗಳ ಸಂಖ್ಯೆ}}{\text{ದ್ರಾವಣದ ಗಾತ್ರ (ಲೀಟರ್‌ನಲ್ಲಿ)}}$$

**ಫೋರ್ಮಾಲಿಟಿ (Formality)**

ಅಯೋನಿಕ್ ಯೌಗಿಕಗಳಲ್ಲಿ ಬೇರೆ ಬೇರೆ ಅಣುಗಳ ಬದಲು ಫೋರ್ಮುಲ ಯೂನಿಟ್‌ಗಳು ಇರುತ್ತದೆ. ಒಂದು ಫೋರ್ಮುಲ ಯೂನಿಟ್‌ನ ದ್ರವ್ಯರಾಶಿಯನ್ನು ಗ್ರಾಂನಲ್ಲಿ ಹೇಳುವುದು ಒಂದು ಗ್ರಾಂ ಫೋರ್ಮುಲಮಾಸ್ ಎಂದು ಕರೆಯಲ್ಪಡುತ್ತದೆ. ಒಂದು ಲೀಟರ್ ದ್ರಾವಣದಲ್ಲಿ ಅಡಕವಾಗಿರುವ ಗ್ರಾಂ ಫೋರ್ಮುಲ ಮಾಸ್‌ಗಳ ಸಂಖ್ಯೆಯನ್ನು ದ್ರಾವಣದ ಫೋರ್ಮಾಲಿಟಿ ಎನ್ನುವರು.

$$\text{ಫೋರ್ಮಾಲಿಟಿ} = \frac{\text{ದ್ರವ್ಯದ ಗ್ರಾಂ ಫೋರ್ಮುಲ ಮಾಸ್‌ಗಳ ಸಂಖ್ಯೆ}}{\text{ದ್ರಾವಣದ ಗಾತ್ರ (ಲೀಟರಿನಲ್ಲಿ)}}$$

ದ್ರಾವಣಗಳ ಪ್ರಬಲತೆ ಸೂಚಿಸುವ ಇತರ ಕೆಲವು ರೀತಿಗಳು

- ಮಾಸ್ ಪರ್ಸೆಂಟೇಜ್ (Mass percentage)
- ದ್ರವ್ಯರಾಶಿ/ಗಾತ್ರ (Mass/volume)
- ಗಾತ್ರ/ಗಾತ್ರ (Volume/volume)

ಇತ್ಯಾದಿ.

**ಮಾಸ್ ಪರ್ಸಂಟೇಜ್**

ಹೆಸರೇ ಸೂಚಿಸುವಂತೆ ಒಂದು ದ್ರಾವಣದ ಒಟ್ಟು ದ್ರವ್ಯರಾಶಿಯಲ್ಲಿ ದ್ರವ್ಯದ ದ್ರವ್ಯರಾಶಿಯು ಎಷ್ಟು ಶೇಕಡಾ ಎಂಬುದನ್ನು ಇದು ಸೂಚಿಸುತ್ತದೆ.

$$\text{Mass percentage} = \frac{\text{Mass of solute}}{\text{Mass of solution}} \times 100$$

ಉದಾಹರಣೆಗೆ ಕೋಪರ್ ಸಲ್ಫೇಟಿನ 10% w/w ಜಲೀಯ ದ್ರಾವಣ ಎನ್ನುವುದು 10 g ಕೋಪರ್‌ಸಲ್ಫೇಟ್ ಮತ್ತು 90 g ನೀರು ಸೇರಿದ 100 g ದ್ರಾವಣ ಎಂಬುದನ್ನು ಸೂಚಿಸುತ್ತದೆ.

**ದ್ರವ್ಯರಾಶಿ/ಗಾತ್ರ (Mass/Volume) Percentage**

ದ್ರಾವಣದಲ್ಲಿ ಅಡಕವಾಗಿರುವ ದ್ರವ್ಯವು ಘನ ಪದಾರ್ಥವಾಗಿದ್ದಾಗ ಸಾಮಾನ್ಯವಾಗಿ ಈ ಏಕಕವನ್ನು ಉಪಯೋಗಿಸಲಾಗುತ್ತದೆ. ದ್ರಾವಣದ 100 mL ಗಾತ್ರದಲ್ಲಿ ಎಷ್ಟು ಗ್ರಾಂ ದ್ರವ್ಯವು ವಿಲೀನಗೊಂಡಿದೆ ಎಂಬುದನ್ನು ಇದು ಸೂಚಿಸುತ್ತದೆ.

$$\text{Mass/volume percentage} = \frac{\text{Mass of solute in grams}}{\text{Volume of solution in mL}} \times 100$$

**ಗಾತ್ರ/ಗಾತ್ರ (Volume/Volume) percentage**

ಇದು ದ್ರವ್ಯ ಮತ್ತು ದ್ರಾವಕಗಳು ದ್ರವ ಸ್ಥಿತಿಯಲ್ಲಿದ್ದಾಗೆ ಉಪಯೋಗಿಸುವ ಒಂದು ಏಕಕವಾಗಿದೆ. ನಿರ್ದಿಷ್ಟ ದ್ರಾವಕದಲ್ಲಿ ಎಷ್ಟು ಗಾತ್ರದ ದ್ರವವಿದೆ ಎಂಬುದನ್ನು ಇದು ಸೂಚಿಸುತ್ತದೆ.

100 mL ದ್ರಾವಣದಲ್ಲಿ ಎಷ್ಟು mL ದ್ರವ್ಯವಿದೆ ಎಂಬುದನ್ನು ಇದು ಸಾಮಾನ್ಯವಾಗಿ ಸೂಚಿಸುತ್ತದೆ

Volume percentage ಎಂದೂ ಇದು ಕರೆಯಲ್ಪಡುತ್ತದೆ.

$$\text{Volume percentage} = \frac{\text{Volume of solute}}{\text{Volume of solution}} \times 100$$

ಮೌಲ್ಯಮಾಪನ ಮಾಡೋಣ

1 a. ಹೈಡ್ರೋಜನ್
  b. ಆಕ್ಸಿಜನ್ 10 ಅಣುಗಳು

2 ಕಾರ್ಬನ್ – 12

3. 10 g

4. a. $\frac{100\,g}{4\,g} = 25$ b. $\frac{200\,g}{16\,g} = 12.5$

  c. $\frac{70\,g}{14\,g} = 5$ d. $\frac{1\,g}{40\,g} = 0.025$

5. a. $HNO_3$ - (1 × 1) + (14 × 1) + (16 × 3) = 1+14+48 = 63 g

b. $CaCl_2$ - (40 × 1) + (35.5 × 2) = 40 + 71 = 111 g

c. $Na_2SO_4$ - (23 × 2) + (32 × 1) + (16 × 4) = 46 + 32 + 64 = 142 g

d. $NH_4NO_3$ - (14 × 1) + (1 × 4) + (14 × 1) + (16 × 3) = 14 + 4 + 14 + 48 = 80g

6. i. ಮೋಲ್ ಸಂಖ್ಯೆ

a. 400 g ನೀರು : $\frac{400\,g}{18\,g} = 22.22$

b. 400 g ಕಾರ್ಬನ್ : $\frac{400\,g}{12\,g} = 33.33$

c. 400 g ಹೀಲಿಯಂ : $\frac{400g}{4g} = 100$

d. 400 g ಹೈಡ್ರೋಜನ್ : $\frac{400\,g}{2\,g} = 200$

e. 400 g ಗ್ಲುಕೋಸ್ : $\frac{400g}{180g} = 2.22$

ii. ಮೋಲ್ ಸಂಖ್ಯೆಗಳ ಆರೋಹಣ ಕ್ರಮ

e < a < b < c < d

7. p. 1 kg ನೀರಿನಲ್ಲಿರುವ ಮೋಲ್‌ಗಳ ಸಂಖ್ಯೆ = $\frac{1000\,g}{18\,g} = 55.55$

q. 500 g $CaCO_3$ ಯಲ್ಲಿರುವ ಮೋಲ್‌ಗಳ ಸಂಖ್ಯೆ

$CaCO_3$ ಯ GMM = (40 × 1) + (12 × 1) + (16 × 3) = 100 g

500 g ನಲ್ಲಿ ಮೋಲ್‌ಸಂಖ್ಯೆ = $\frac{500\,g}{100\,g} = 5$

r. $CO_2$ ವಿನ GMM = (12 × 1) + (16 × 2) = 44 g

88 g $CO_2$ ನಲ್ಲಿ ಮೋಲ್‌ಸಂಖ್ಯೆ = $\frac{88\,g}{44\,g} = 2$

88 g $CO_2$ ಅಣುಗಳ ಸಂಖ್ಯೆ = $2 \times 6.022 \times 10^{23}$

88 g $CO_2$ ವಿನಲ್ಲಿ ಒಟ್ಟು ಪರಮಾಣುಗಳ ಸಂಖ್ಯೆ = ಅಣುಗಳ ಸಂಖ್ಯೆ × ಒಂದು ಅಣುವಿನಲ್ಲಿರುವ ಪರಮಾಣುಗಳ ಸಂಖ್ಯೆ = $2 \times 6.022 \times 10^{23} \times 3$

s. 170 g ಅಮೋನಿಯಾದ ಮೋಲ್ ಸಂಖ್ಯೆ = $\frac{170g}{17g}$ = 10

170 g ಅಮೋನಿಯಾದ STP ಯಲ್ಲಿ ಗಾತ್ರ = ಮೋಲ್ ಸಂಖ್ಯೆ × 22.4L

= 10 × 22.4L = 224L

t. STP ಯಲ್ಲಿ 112 L $CO_2$ ನಲ್ಲಿ ಮೋಲ್‌ಸಂಖ್ಯೆ = $\frac{112\,L}{22.4\,L} = 5$

5 ಮೋಲ್ $CO_2$ ನ ದ್ರವ್ಯರಾಶಿ = 5 × 44 g = 220 g

5 ಮೋಲ್ $CO_2$ ನಲ್ಲಿ ಅಣುಗಳ ಸಂಖ್ಯೆ = 5 × $6.022 \times 10^{23}$

**ಮುಂದುವರಿದ ಚಟುವಟಿಕೆಗಳು**

ಒಂದು ಗ್ರಾಂ ಎಂದರೆ $\frac{1}{4}$ ಮೋಲ್. ಅದರಲ್ಲಿರುವ ಪರಮಾಣುಗಳ ಸಂಖ್ಯೆಯು $\frac{1}{4} \times N_A$.

ಇದೇ ಸಂಖ್ಯೆಯ ಪರಮಾಣುಗಳು ದೊರೆಯಲು ಅಗತ್ಯವಾದ ಕಾರ್ಬನ್ ಪರಮಾಣುಗಳ ಮೋಲ್ ಸಂಖ್ಯೆ ಮತ್ತು ಆಕ್ಸಿಜನ್ ಪರಮಾಣುಗಳ ಮೋಲ್ ಸಂಖ್ಯೆಯೂ ತಲಾ $\frac{1}{4}$ ಆಗಿದೆ.

ತೆಗೆದುಕೊಳ್ಳಬೇಕಾದ ಕಾರ್ಬನ್ = $\frac{1}{4} \times 12\,g = 3g$

ತೆಗೆದುಕೊಳ್ಳಬೇಕಾದ ಆಕ್ಸಿಜನ್ = $\frac{1}{4} \times 16g = 4g$

- ಅಣುಗಳ ಸಂಖ್ಯೆಯ ಕ್ರಮವೂ ಮೋಲ್ ಸಂಖ್ಯೆಯ ಕ್ರಮವಾಗಿದೆ. ಪರಮಾಣುಗಳ ಸಂಖ್ಯೆಯ ಕ್ರಮವು ಇದೇ ರೀತಿ ಇರಬೇಕೆಂದಿಲ್ಲ. ಪ್ರತಿಯೊಂದು ಅಣುಗಳಲ್ಲಿರುವ ಪರಮಾಣುಗಳ ಸಂಖ್ಯೆಯು ಬೇರೆ ಬೇರೆಯಾಗಿರಬಹುದು. ಪರಮಾಣುಗಳ ಸಂಖ್ಯೆಯನ್ನು ಒಂದು ಅಣುವಿನಲ್ಲಿರುವ ಪರಮಾಣುಗಳ ಸಂಖ್ಯೆಯಿಂದ ಗುಣಿಸಬೇಕು. i, ii ಪ್ರಶ್ನೆಗಳ ಉತ್ತರವನ್ನು ಪಟ್ಟಿಯಿಂದ ಬಹಳ ಸುಲಭದಲ್ಲಿ ಕಂಡುಹಿಡಿಯಬಹುದು.

| ಸ್ಯಾಂಪಲ್ | ಮೋಲ್ ಸಂಖ್ಯೆ | ಅಣುಗಳ ಸಂಖ್ಯೆ | ಪರಮಾಣುಗಳ ಸಂಖ್ಯೆ |
|---|---|---|---|
| a) 20 g He | $\frac{20g}{4g} = 5$ | $5 \times N_A$ | $5 \times N_A$ |
| b) STP ಯಲ್ಲಿ 44.8 L $NH_3$ | $\frac{44.8L}{22.4L} = 2$ | $2 \times N_A$ | $2 \times N_A \times 4$ |
| c) STP ಯಲ್ಲಿ 67.2 L $N_2$ | $\frac{67.2\,L}{22.4\,L} = 3$ | $3 \times N_A$ | $3 \times N_A \times 2$ |

| | | | |
|---|---|---|---|
| d) 1 ಮೋಲ್ $H_2SO_4$ | 1 | $1 \times N_A$ | $1 \times N_A \times 7$ |
| e) 180 g ನೀರು | $\frac{180\,g}{18\,g} = 10$ | $10 \times N_A$ | $10 \times N_A \times 3$ |

i) d < b < c < a < e

ii) a < c < d < b < e

iii) b ಯ ದ್ರವ್ಯರಾಶಿ = 2 × 17g = 34 g

c ಯ ದ್ರವ್ಯರಾಶಿ = 3 × 28 g = 84 g

d ಯ ದ್ರವ್ಯರಾಶಿ = 1 × 98 g = 98 g

- 90 g ನೀರು

a. ಅಣುಗಳ ಸಂಖ್ಯೆ = $\frac{90\,g}{18\,g} \times N_A = 5 \times N_A$

b. ಪರಮಾಣುಗಳು = $5 \times N_A \times 3$ (ನೀರಿನ ಒಂದು ಅಣುವಿನಲ್ಲಿ 3 ಪರಮಾಣುಗಳಿವೆ)

c. ಒಂದು ಅಣುವಿನಲ್ಲಿರುವ ಪ್ರತಿಯೊಂದು ಹೈಡ್ರಜನ್‌ನಲ್ಲಿಯೂ ತಲಾ ಒಂದು ಇಲೆಕ್ಟ್ರಾನ್ ಮತ್ತು ಆಕ್ಸಿಜನ್‌ನಲ್ಲಿ 8 ಇಲೆಕ್ಟ್ರಾನ್‌ಗಳಿವೆ. ನೀರಿನ ಒಂದು ಅಣುವಿನಲ್ಲಿ ಒಟ್ಟು 10 ಇಲೆಕ್ಟ್ರಾನ್‌ಗಳಿವೆ.

ಇಲೆಕ್ಟ್ರಾನ್‌ಗಳ ಸಂಖ್ಯೆ = ಅಣುಗಳ ಸಂಖ್ಯೆ × 10

$= 5 \times N_A \times 10$

- ಒಂದು ಲೀಟರ್ (i.e. 1000 mL) 1M NaOH ದ್ರಾವಣವನ್ನು ತಯಾರಿಸಲು ಬೇಕಾದ NaOH = 1 mol = 40 g.

200 mL 1M NaOH ತಯಾರಿಸಲು ಅಗತ್ಯವಾದ NaOH = $40\,g \times \frac{200}{1000} = 8\,g$

8 g NaOH ಸ್ಫಟಿಕಗಳನ್ನು ಒಂದು ಬೀಕರಿನಲ್ಲಿ ತೆಗೆದುಕೊಂಡ ನಂತರ ನೀಡಲಾದ 200 mL ನಿಂದ ಅಗತ್ಯವಾದ ನೀರನ್ನು ಬೀಕರಿನಲ್ಲಿರುವ NaOH ಗೆ ಸೇರಿಸಿ ಕದಡಿ ಅದನ್ನು ವಿಲೀನಗೊಳಿಸಿ 200 mL ಗುರುತು ಮಾಡಿದ ತನಕ ತುಂಬಿಸಬೇಕು.

- ಸಾಮಾನ್ಯವಾಗಿ ಉಪ್ಪಿನ 1M ದ್ರಾವಣ 1L (1000 mL) ತೆಗೆದುಕೊಂಡರೆ ಅದರಲ್ಲಿ ಒಂದು ಮೋಲ್ ಅಂದರೆ 58.5 g ಸಾಮಾನ್ಯ ಉಪ್ಪು ಇರುವುದು.

a. 500 mL 1M ದ್ರಾವಣದಲ್ಲಿ ಸಾಮಾನ್ಯ ಉಪ್ಪಿನ ಪ್ರಮಾಣ = $58.5\,g \times \frac{500}{1000} = 29.25\,g$

b. ಗಾತ್ರವು 500 ರಿಂದ 2 L ಆಗಿ (4 ಪಾಲು) ಹೆಚ್ಚಾದಾಗ ಪ್ರಬಲತೆಯು $\frac{1}{4}$ ಆಗಿ ಕಡಿಮೆಯಾಗುತ್ತದೆ.

ಮೋಲಾರ್ ಪ್ರಬಲತೆ = $1M \times \frac{1}{4} = \frac{1}{4}M$

3

# ರಾಸಾಯನಿಕ ಕ್ರಿಯಾ ವೇಗ ಮತ್ತು ರಾಸಾಯನಿಕ ಸಮತೋಲನ

## *ಪೀಠಿಕೆ*

*ದೈನಂದಿನ ಜೀವನದಲ್ಲಿ ವಿವಿಧ ರೀತಿಯ ರಾಸಾಯನಿಕ ಕ್ರಿಯೆಗಳನ್ನು ಗಮನಿಸಿದ್ದೀರಲ್ಲವೇ? ರಾಸಾಯನಿಕ ಪದಾರ್ಥಗಳ ಪರಸ್ಪರ ಪ್ರತಿಕ್ರಿಯೆಗೆ ಸ್ವಾಭಾವಿಕವಾದ ಒಂದು ವೇಗವಿದೆ. ಕೆಲವು ರಾಸಾಯನಿಕ ಕ್ರಿಯೆಗಳು ನಿಧಾನವಾಗಿ ನಡೆದರೆ ಇನ್ನು ಕೆಲವು ವೇಗವಾಗಿ ಜರಗುತ್ತವೆ. ಇವುಗಳಲ್ಲಿ ಹಲವು ಕ್ರಿಯೆಗಳ ವೇಗವನ್ನು ಹೆಚ್ಚು ಅಥವಾ ಕಡಿಮೆ ಮಾಡಬೇಕಾದ ಸಂದರ್ಭಗಳನ್ನು ನಾವು ಎದುರಿಸುತ್ತೇವೆ.*

*ಇದನ್ನು ಕಾರ್ಯರೂಪಕ್ಕೆ ತರಲು ರಾಸಾಯನಿಕ ಕ್ರಿಯೆಯ ದರ, ದರವನ್ನು ನಿಯಂತ್ರಿಸುವ ಘಟಕಗಳು ಮತ್ತು ಅವುಗಳ ಪ್ರಭಾವವನ್ನು ನಾವು ತಿಳಿದುಕೊಳ್ಳಬೇಕು. ಪ್ರಯೋಗ ಮತ್ತು ನಿರೀಕ್ಷಣೆಗಳ ಮೂಲಕ ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುವ ಘಟಕಗಳು, ಅವುಗಳ ಪ್ರಭಾವ, ರಾಸಾಯನಿಕ ಸಮತೋಲನ, ಏಕಮುಖಿ ಮತ್ತು ಇಕ್ಕೆಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳು, ಲಿ ಶೆಟಿಲಿಯರ್ ತತ್ವ ಎಂಬಿವುಗಳು ಹಾಗೂ* $NH_3$, $NO_2$, $H_2SO_4$ *ಎಂಬಿವುಗಳ ತಯಾರಿಯಲ್ಲಿ ಲಿ ಶೆಟಲಿಯರ್ ತತ್ವದ ಮಹತ್ವದ ಕುರಿತು ಈ ಅಧ್ಯಾಯವು ಚರ್ಚಿಸುವುದು. ರಾಸಾಯನಿಕ ಕ್ರಿಯೆಗಳ ಸ್ವಾಭಾವಿಕ ವೇಗಕ್ಕೆ ಬದಲಾವಣೆಯನ್ನು ತರಲಿರುವ ಸಾಧ್ಯತೆಗಳು ರಸಾಯನಶಾಸ್ತ್ರವನ್ನು ಪ್ರಾಯೋಗಿಕವಾದ ವಿಜ್ಞಾನವಾಗಿಸುವುದು. ಅನೇಕ ಕೈಗಾರಿಕೆ ಮತ್ತು ನಿತ್ಯಜೀವನದ ಸಂದರ್ಭಗಳಲ್ಲಿ ಪ್ರಯೋಗಿಸಬಹುದಾದ ತಿಳುವಳಿಕೆಗಳು ಮತ್ತು ಪ್ರಕ್ರಿಯೆಗಳು ಈ ಅಧ್ಯಾಯದ ಮೂಲಕ ವಿದ್ಯಾರ್ಥಿಗಳಿಗೆ ದೊರೆಯುತ್ತವೆ.*

# MODULE WISE PERIOD DISTRIBUTION

ಒಟ್ಟು ಪೀರಿಯಡ್ 10

## ಯೂನಿಟ್ 3

## ರಾಸಾಯನಿಕ ಕ್ರಿಯಾ ವೇಗ ಮತ್ತು ರಾಸಾಯನಿಕ ಸಮತೋಲನ

**ಮೊಡ್ಯೂಲ್ 1** **ಪಿರೀಡ್ 4**

- ರಾಸಾಯನಿಕ ಕ್ರಿಯಾವೇಗ ಮತ್ತು ಅದರ ಮೇಲೆ ಪ್ರಭಾವ ಬೀರುವ ಘಟಕಗಳು
- ಪ್ರಬಲತೆ ಮತ್ತು ರಾಸಾಯನಿಕ ಕ್ರಿಯಾ ವೇಗ
- ಪ್ರವರ್ತಕಗಳ ಸ್ವಭಾವ ಮತ್ತು ರಾಸಾಯನಿಕ ಕ್ರಿಯಾವೇಗ
- ಒತ್ತಡ ಮತ್ತು ರಾಸಾಯನಿಕ ಕ್ರಿಯಾ ವೇಗ
- ಘನ ಪದಾರ್ಥಗಳ ಮೇಲ್ಮೈ ವಿಸ್ತೀರ್ಣ ಮತ್ತು ರಾಸಾಯನಿಕ ಕ್ರಿಯಾವೇಗ
- ಉಷ್ಣತೆ ಮತ್ತು ರಾಸಾಯನಿಕ ಕ್ರಿಯಾ ವೇಗ
- ಪ್ರೇರಕಗಳು ಮತ್ತು ರಾಸಾಯನಿಕ ಕ್ರಿಯಾ ವೇಗ
- ಬೆಳಕು ಮತ್ತು ರಾಸಾಯನಿಕ ಕ್ರಿಯಾ ವೇಗ

**ಮೊಡ್ಯೂಲ್ 2** **ಪೀರಿಯಡ್ 6**

- ರಾಸಾಯನಿಕ ಸಮತೋಲನ
- ಏಕಮುಖಿ ರಾಸಾಯನಿಕ ಕ್ರಿಯೆ, ಇಕ್ಕೆಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆ
- ಇಕ್ಕೆಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳಲ್ಲಿ ಸಮತೋಲನ ಸ್ಥಿತಿ
- ಲಿ ಶೆಟೆಲಿಯರ್ ತತ್ವ
- ಸಮತೋಲನ ಸ್ಥಿತಿಯಲ್ಲಿ ಪ್ರಬಲತೆಯ ಪ್ರಭಾವ
- ರಾಸಾಯನಿಕ ಸಮತೋಲನ ಮತ್ತು ಒತ್ತಡ
- ರಾಸಾಯನಿಕ ಸಮತೋಲನ ಮತ್ತು ಉಷ್ಣತೆ
- ರಾಸಾಯನಿಕ ಸಮತೋಲನ ಮತ್ತು ಪ್ರೇರಕ

**ಯೂನಿಟ್‌ಫ್ರೇಂ** **ಒಟ್ಟು ಪೀರಿಯಡ್: 10**

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕೆ ಚಟುವಟಿಕೆಗಳು/ತಂತ್ರಗಳು | ಕಲಿಕೆಯ ಸಾಧನೆಗಳು |
|---|---|---|
| **ಮೊಡ್ಯೂಲ್ 1** **ಪೀರಿಯಡ್ 4**<br>ರಾಸಾಯನಿಕ ಕ್ರಿಯಾ ವೇಗ ಮತ್ತು ಅದರ ಮೇಲೆ ಪ್ರಭಾವ ಬೀರುವ ಘಟಕಗಳು<br>• ವಿವಿಧ ವೇಗದಲ್ಲಿರುವ ರಾಸಾಯನಿಕ ಕ್ರಿಯೆಗಳಿವೆ.<br>• ರಾಸಾಯನಿಕ ಕ್ರಿಯೆಯದರ<br>• ಪ್ರಬಲತೆ, ಸ್ವಭಾವ ಎಂಬಿವುಗಳು ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುತ್ತದೆ.<br>• ಒತ್ತಡ, ಘನ ಪದಾರ್ಥಗಳ ಮೇಲ್ಮೈ ವಿಸ್ತೀರ್ಣ, ಉಷ್ಣತೆ, ಪ್ರೇರಕ ಬೆಳಕು ಎಂಬಿವುಗಳು ರಾಸಾಯನಿಕ ಕ್ರಿಯಾವೇಗವನ್ನು ನಿಯಂತ್ರಿಸುವ ಘಟಕಗಳಾಗಿವೆ.<br>- ಚಿತ್ರದ ವಿಶ್ಲೇಷಣೆಯ ಸಾಮರ್ಥ್ಯ<br>- ಚರ್ಚೆಗಳಲ್ಲಿ ಪಾಲ್ಗೊಳ್ಳುವಿಕೆ<br>- ಪ್ರಯೋಗದಲ್ಲಿ ಭಾಗವಹಿಸುವುದು.<br>- ನಿರೀಕ್ಷಣೆ, ಕ್ರೋಢೀಕರಣ<br>• ಧನ ಪ್ರೇರಕ<br>• ಋಣ ಪ್ರೇರಕ | • ಚಿತ್ರದ ವಿಶ್ಲೇಷಣೆ<br>• ಪಟ್ಟಿ ಮಾಡುವುದು<br>• ಚರ್ಚೆ<br>• ಪ್ರಯೋಗ – ಸಮಾನ ದ್ರವ್ಯರಾಶಿ ಇರುವ ಮೆಗ್ನೀಶಿಯಂ (Mg) ರಿಬ್ಬನ್ ಮತ್ತು ಬೇರೆ ಬೇರೆ ಪ್ರಬಲತೆಯ ಹೈಡ್ರೋಕ್ಲೋರಿಕ್ ಆಮ್ಲ (HCl) ಉಪಯೋಗಿಸಿದ ಪ್ರಯೋಗ.<br>• ಪ್ರಯೋಗದ ನಿರೀಕ್ಷಣೆಯನ್ನು ಮಾಡಿ ರಾಸಾಯನಿಕ ಕ್ರಿಯೆಯ ದರವನ್ನು ಕಂಡುಹಿಡಿಯುವ ಸೂತ್ರ ವಾಕ್ಯವನ್ನು ರೂಪಿಸುವುದು.<br>• ಪ್ರಯೋಗ – ಸತು (Zn), ಮೆಗ್ನೀಶಿಯಂ (Mg) ಎಂಬೀ ಲೋಹಗಳು ದುರ್ಬಲಗೊಳಿಸಿದ HCl ನೊಂದಿಗೆ ವರ್ತಿಸುವುದು.<br>• ಚಿತ್ರದ ವಿಶ್ಲೇಷಣೆ<br>• ಚರ್ಚೆ<br>• ಪ್ರಯೋಗ – ಸಮಾನ ದ್ರವ್ಯರಾಶಿ ಇರುವ ಮಾರ್ಬಲ್ ತುಂಡುಗಳು, ಮಾರ್ಬಲ್ ಹುಡಿ ಎಂಬಿವುಗಳೊಂದಿಗೆ ಸಮಾನ ಪ್ರಬಲತೆ ಇರುವ ದುರ್ಬಲ HCl ವರ್ತಿಸುತ್ತದೆ. ಪ್ರಯೋಗ – ಸೋಡಿಯಂ ಥಯೋಸಲ್ಫೇಟ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳ ಪರಸ್ಪರ ಕ್ರಿಯೆಯಲ್ಲಿ ಉಷ್ಣತೆಯ ಪ್ರಭಾವವನ್ನು ನೋಡುವುದು.<br>• ಪ್ರಯೋಗ - $H_2O_2$ ವಿನ ವಿಭಜನೆಯಲ್ಲಿ $MnO_2$, $H_3PO_4$ ಎಂಬಿವುಗಳ ಪ್ರಭಾವವನ್ನು ಪ್ರಯೋಗ ಮಾಡಿ ನೋಡುವುದು. | • ವಿವಿಧ ರಾಸಾಯನಿಕ ಕ್ರಿಯೆಗಳನ್ನು ಮಾಡಿ ನೋಡಿ ರಾಸಾಯನಿಕ ಕ್ರಿಯಾವೇಗವನ್ನು ಹೋಲಿಸಲು ಮತ್ತು ನಿಗಮನಗಳನ್ನು ರೂಪಿಸಲು ಅಗತ್ಯವಾದ ಸಾಮರ್ಥ್ಯವನ್ನು ಪಡೆಯುವುದು.<br>• ರಾಸಾಯನಿಕ ಕ್ರಿಯೆಯ ದರದ ನಿರ್ವಚನವನ್ನು ರೂಪಿಸಿ ಬರೆಯುವುದು<br>• ರಾಸಾಯನಿಕ ಕ್ರಿಯೆಯ ವೇಗದ ಮೇಲೆ ಪ್ರಭಾವ ಬೀರುವ ಎರಡು ಘಟಕಗಳು ಪ್ರವರ್ತಕಗಳ ಪ್ರಬಲತೆ, ಸ್ವಭಾವ ಎಂದು ತಿಳಿದುಕೊಂಡು ಅವುಗಳ ಪ್ರಭಾವವನ್ನು ವಿವರಿಸಲು ಸಾಧ್ಯವಾಗುತ್ತದೆ.<br>• ವಿವಿಧ ಪ್ರಯೋಗಗಳ ಮೂಲಕ ಒತ್ತಡ, ಉಷ್ಣತೆ, ಪ್ರೇರಕ, ಬೆಳಕು, ಮೇಲ್ಮೈ ವಿಸ್ತೀರ್ಣ ಎಂಬಿವುಗಳು ರಾಸಾಯನಿಕ ಕ್ರಿಯಾವೇಗವನ್ನು ನಿಯಂತ್ರಿಸುವ ಘಟಕಗಳಾಗಿವೆ ಎಂದು ತಿಳಿದು ವಿವರಿಸಲು ಸಾಧ್ಯವಾಗುತ್ತದೆ. |

ಯೂನಿಟ್‌ಫ್ರೇಂ — ಒಟ್ಟು ಪೀರಿಯಡ್: 10

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕೆ ಚಟುವಟಿಕೆಗಳು/ತಂತ್ರಗಳು | ಕಲಿಕೆಯ ಸಾಧನೆಗಳು |
|---|---|---|
| **ಮೊಡ್ಯೂಲ್ 2 — ಪೀರಿಯಡ್ 6**<br>• ರಾಸಾಯನಿಕ ಸಮತೋಲನ, ಏಕ ಮುಖಿ ರಾಸಾಯನಿಕ ಕ್ರಿಯೆಗಳು, ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳು, ಲಿ ಶೆಟೆಲಿಯರ್ ತತ್ವ<br>• ಲಿ ಶೆಟೆಲಿಯರ್ ತತ್ವ, ಲಿ ಶೆಟಲಿಯರ್ ತತ್ವವನ್ನು ಉಪಯೋಗಿಸ ಬೇಕಾದ ಸಂದರ್ಭಗಳು ($NO_2$, ಅಮೋನಿಯಾ, $H_2SO_4$ ಎಂಬಿವುಗಳ ತಯಾರಿ)<br>• ಏಕಮುಖಿ ಕ್ರಿಯೆ ಇಕ್ಕಡೆಗಳಲ್ಲಿ ಜರಗುವ ಕ್ರಿಯೆ<br>• ಮುಂದಕ್ಕೆ ಜರಗುವ ಕ್ರಿಯೆ<br>• ಹಿಂದಕ್ಕೆ ಜರಗುವ ಕ್ರಿಯೆ<br>• ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳಲ್ಲಿ ಸಮತೋಲನ ಸ್ಥಿತಿ<br>• ರಾಸಾಯನಿಕ ಸಮತೋಲನ, ಗತಿ ಸಮತೋಲನ<br>• ಲಿ ಶೆಟಲಿಯರ್ ತತ್ವ<br>• ಸಮತೋಲನ ಸ್ಥಿತಿಯಲ್ಲಿ ಪ್ರಬಲತೆ, ಒತ್ತಡ ಉಷ್ಣತೆ ಎಂಬಿವುಗಳ ಪ್ರಭಾವ.<br>• ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳಲ್ಲಿ ಪ್ರೇರಕದ ಪ್ರಭಾವ | • ಪ್ರಯೋಗ - NaOH ಮತ್ತು HCl ಗಳ ಪರಸ್ಪರ ವರ್ತನೆ.<br>• ಬೋಯ್ಲಿಂಗ್ ಟ್ಯೂಬ್‌ನಲ್ಲಿ ಅಮೋನಿಯಂ ಕ್ಲೋರೈಡ್ ತೆಗೆದುಕೊಂಡು ಬಿಸಿ ಮಾಡುವ ಪ್ರಯೋಗ.<br>• ಪೊಟಾಶಿಯಂ ನೈಟ್ರೇಟ್ ($KNO_3$) ದ್ರಾವಣ, ಪೊಟಾಶಿಯಂ ಥಯೋಸಯನೇಟ್ (KCNS) ದ್ರಾವಣ, ಫೆರಿಕ್ ನೈಟ್ರೇಟ್ ($Fe(NO_3)_3$) ದ್ರಾವಣ ಎಂಬಿವುಗಳನ್ನು ಉಪಯೋಗಿಸಿದ ಪ್ರಯೋಗ<br>• ಗ್ರಾಫ್ ವಿಶ್ಲೇಷಣೆ. ಐ.ಸಿ.ಟಿ ಚರ್ಚೆ<br>• ಸಮತೋಲನ ಸ್ಥಿತಿಗೆ ತಲುಪಿದ ಸಂದರ್ಭದಲ್ಲಿ ಉಷ್ಣತೆ, ಒತ್ತಡ, ಪ್ರಬಲತೆ ಎಂಬಿವುಗಳ ಪ್ರಭಾವ.<br>ಚರ್ಚೆ, ಕ್ರೋಢೀಕರಣ<br>• ಲಿ ಶೆಟಲಿಯರ್ ತತ್ವದ ಉಪಯೋಗ - $NO_2$, $NH_3$, $H_2SO_4$ ಎಂಬಿವುಗಳ ತಯಾರಿಯಲ್ಲಿ<br>• ಚರ್ಚೆ – ಕ್ರೋಢೀಕರಣ | • ಏಕಮುಖಿ ರಾಸಾಯನಿಕ ಕ್ರಿಯೆಗಳು ಮತ್ತು ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳನ್ನು ತಿಳಿಯುವುದು ಮತ್ತು ಉದಾಹರಣೆಗಳ ಸಹಿತ ವಿವರಿಸಲು ಸಾಧ್ಯವಾಗುತ್ತದೆ.<br>• ಮುಂದಕ್ಕೆ ಜರಗುವ ರಾಸಾಯನಿಕ ಕ್ರಿಯೆ ಮತ್ತು ಹಿಂದಕ್ಕೆ ಜರಗುವ ರಾಸಾಯನಿಕ ಕ್ರಿಯೆಗಳನ್ನು ತಿಳಿದುಕೊಂಡು ದಾಖಲಿಸುತ್ತಾರೆ.<br>• ರಾಸಾಯನಿಕ ಸಮತೋಲನವು ಕೈನೆಟಿಕ್ ಆಗಿರುವುದೆಂದು ತಿಳಿದು ಪ್ರಯೋಗಗಳಲ್ಲಿ ಭಾಗ ವಹಿಸಲು ಸಾಧ್ಯವಾಗುತ್ತದೆ.<br>• ಲಿ ಶೆಟಲಿಯರ್ ತತ್ವವನ್ನು ಉಪಯೋಗಿಸಿ ಸಮತೋಲನ ಸ್ಥಿತಿಗೆ ತಲುಪುವ ರಾಸಾಯನಿಕ ಕ್ರಿಯೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನವನ್ನು ತಯಾರಿಸಲಿರುವ ವಿಧಾನಗಳನ್ನು ಕಂಡುಹಿಡಿಯಲು ಮತ್ತು ವಿವರಿಸಲು ಸಾಧ್ಯವಾಗುತ್ತದೆ.<br>• ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳಲ್ಲಿ ಪ್ರೇರಕಗಳ ಸ್ವಭಾವವನ್ನು ವಿವರಿಸಲು ಸಾಧ್ಯವಾಗುತ್ತದೆ. |

**ಯೂನಿಟ್‌ನ ಕಡೆಗೆ**

## ಮೊಡ್ಯೂಲ್ 1

ಸಮಯ 4 ಪೀರಿಯಡ್

ರಾಸಾಯನಿಕ ಕ್ರಿಯೆಯ ವೇಗ ಮತ್ತು ಅದರ ಮೇಲೆ ಪ್ರಭಾವ ಬೀರುವ ಘಟಕಗಳು

**ಸಾಮಗ್ರಿಗಳು**

ದೈನಂದಿನ ಜೀವನದಲ್ಲಿ ನಾವು ನಿರೀಕ್ಷಣೆ ಮಾಡಿರುವ ಹಲವು ರಾಸಾಯನಿಕ ಕ್ರಿಯೆಗಳ ಕುರಿತು ತರಗತಿಯಲ್ಲಿ ಚರ್ಚಿಸಿರಿ. ಇದೇ ರೀತಿ ಇತರ ಸಂದರ್ಭಗಳನ್ನು ವಿದ್ಯಾರ್ಥಿಗಳು ಪಟ್ಟಿ ಮಾಡಲಿ. ಕೆಲವು ರಾಸಾಯನಿಕ ಕ್ರಿಯೆಗಳನ್ನು ತರಗತಿಯಲ್ಲಿ ಮಾಡಿ ನೋಡಲು ವಿದ್ಯಾರ್ಥಿಗಳಿಗೆ ಸಂದರ್ಭವನ್ನು ಒದಗಿಸಬೇಕು.

ಪಟ್ಟಿ ಮಾಡಿದ ಕ್ರಿಯೆಗಳನ್ನು ವೇಗವಾಗಿ ಜರಗುವವುಗಳು ಮತ್ತು ನಿಧಾನವಾಗಿ ಜರಗುವವುಗಳೆಂದು ಎರಡು ಗುಂಪುಗಳಾಗಿ ವರ್ಗೀಕರಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಬಹುದು.

ಇಂತಹ ರಾಸಾಯನಿಕ ಕ್ರಿಯೆಗಳ ವೇಗವನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಸಂದರ್ಭಗಳನ್ನು ಚರ್ಚಿಸಿರಿ.

ಕಟ್ಟಿಗೆ ಉರಿಯುವ ಕ್ರಿಯೆಯನ್ನು ಉದಾಹರಣೆಯಾಗಿ ಪರಿಗಣಿಸಬಹುದು. ಕಟ್ಟಿಗೆ ಉರಿಯುವ ಕ್ರಿಯೆಯ ವೇಗವನ್ನು ಹೆಚ್ಚಿಸಲು ಕೈಗೊಳ್ಳಬಹುದಾದ ವಿಧಾನಗಳನ್ನು ಪಟ್ಟಿ ಮಾಡಲಿ.

- ವಾಯುವಿನ ಲಭ್ಯತೆಯನ್ನು ಹೆಚ್ಚಿಸುವುದು.
- ಕಟ್ಟಿಗೆಯನ್ನು ಸಣ್ಣ ಸೀಳುಗಳನ್ನಾಗಿ ಮಾಡಿ ಉಪಯೋಗಿಸುವುದು.
- ಒಣಗಿದ ಕಟ್ಟಿಗೆಯನ್ನು ಉಪಯೋಗಿಸುವುದು
- ಗಾಳಿ ಬೀಸುವ ದಿಕ್ಕನ್ನು ಕ್ರಮೀಕರಿಸುವುದು.

ಒಣಗಿದ ಕಟ್ಟಿಗೆಯು ಬೇಗನೆ ಉರಿಯುವುದು. ಒಣಗದ ಕಟ್ಟಿಗೆ ಉರಿಯುವಾಗ ನಾವು ನೀಡುವ ಉಷ್ಣವು ಕಟ್ಟಿಗೆಯಲ್ಲಿರುವ ತೇವಾಂಶವನ್ನು ಬಾಷ್ಪೀಕರಿಸಲು ಉಪಯೋಗಿಸಲ್ಪಡುತ್ತದೆ. ಗಾಳಿ ಬೀಸುವ ದಿಕ್ಕನ್ನು ಕ್ರಮೀಕರಿಸುವ ವಿಧಾನವನ್ನು ಹೊಗೆ ರಹಿತ ಒಲೆಗಳಲ್ಲಿ ಉಪಯೋಗಿಸಲಾಗಿದೆ.

ಈ ವಿಚಾರಗಳನ್ನು ತರಗತಿಯಲ್ಲಿ ಸವಿವರವಾಗಿ ಚರ್ಚಿಸುವಿರಲ್ಲವೇ?

**ಕ್ರೋಡೀಕರಿಸಬೇಕಾದುದು**

ಕೆಲವು ಘಟಕಗಳು ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುತ್ತದೆ.

### ಪ್ರಬಲತೆ ಮತ್ತು ರಾಸಾಯನಿಕ ಕ್ರಿಯಾವೇಗ

ಮೆಗ್ನೀಶಿಯಂ ಬೇರೆ ಬೇರೆ ಪ್ರಬಲತೆಯ ಹೈಡ್ರೋಕ್ಲೋರಿಕ್ ಆಮ್ಲದ ಜೊತೆಗೆ ವರ್ತಿಸುವುದನ್ನು ಪರಿಶೀಲಿಸಬೇಕು.

ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ಮಾಡಿ ಪಾಠಪುಸ್ತಕದಲ್ಲಿರುವ ಚಿತ್ರ 3.1ರಲ್ಲಿ ಸೂಚಿಸಲಾಗಿರುವ ಪ್ರಯೋಗವನ್ನು ನೀಡಬೇಕು. ಚರ್ಚೆಗಳ ಮೂಲಕ ಕ್ರೋಡೀಕರಿಸಬೇಕು.

**ಚರ್ಚಾ ಸೂಚಕಗಳು**

- ಈ ಪ್ರಯೋಗವನ್ನು ಮಾಡಲು ಬೇಕಾದ ಸಾಮಗ್ರಿಗಳು ಯಾವುವು?
- Mg ರಿಬ್ಬನಿನ ದ್ರವ್ಯರಾಶಿ ಸಮಾನವಾಗಿರಬೇಕೆ?
- HCl ನ ಗಾತ್ರ ಎಷ್ಟಿರಬೇಕು?
- ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯಾವೇಗ ಹೆಚ್ಚು?
- ಯಾವ ಪ್ರನಾಳದಲ್ಲಿ ಯೂನಿಟ್ ಗಾತ್ರದಲ್ಲಿ ಹೆಚ್ಚು HCl ಅಣುಗಳು ಹಿಡಿಯುತ್ತದೆ?

ಕೊಲಿಶನ್ ಸಿದ್ಧಾಂತದ ಆಧಾರದಲ್ಲಿ ಪ್ರಬಲತೆ ಹೆಚ್ಚುವಾಗ ರಾಸಾಯನಿಕ ಕ್ರಿಯಾವೇಗ ಹೆಚ್ಚಾಗುವುದಕ್ಕಿರುವ ವಿವರಣೆಯನ್ನು ನೀಡಬಹುದು.

ಪ್ರವರ್ತಕ ಅಣುಗಳು ಪರಸ್ಪರ ಡಿಕ್ಕಿಯಾಗುವಾಗ ರಾಸಾಯನಿಕ ಕ್ರಿಯೆಯು ಜರುಗುವುದೆಂದು ಕೊಲಿಶನ್ ಸಿದ್ಧಾಂತವು ಊಹಿಸುತ್ತದೆ. ಈ ರೀತಿಯಲ್ಲಿ ಡಿಕ್ಕಿಯಾಗುವ ಅಣುಗಳಿಗೆ ನಿರ್ದಿಷ್ಟ ಅಳತೆಯಲ್ಲಿಯೂ ಹೆಚ್ಚಿನ ಚೈತನ್ಯ ವಿರಬೇಕು. ಅದೇ ರೀತಿಯಲ್ಲಿ ಡಿಕ್ಕಿಯಾಗುವ ಅಣುಗಳು ಅನುಕೂಲಕರವಾದ ದಿಕ್ಕಿನಲ್ಲಿರಬೇಕು. ಪರಿಣಾಮಕಾರಿಯಾದ ಡಿಕ್ಕಿ ಹೊಡೆಯುವಿಕೆ ಜರಗಿ ಒಂದು ರಾಸಾಯನಿಕ ಕ್ರಿಯೆಯು ಆರಂಭವಾಗಲು ಅಗತ್ಯವಾದ ಕನಿಷ್ಠ ಚೈತನ್ಯವನ್ನು Threshold Energy ಎಂದು ಕರೆಯುತ್ತಾರೆ. ಬೇರೆ ಬೇರೆ ರಾಸಾಯನಿಕ ಕ್ರಿಯೆಗಳಿಗೆ ಇದು ಬೇರೆ ಬೇರೆಯಾಗಿರುತ್ತದೆ. ಕೊಲಿಶನ್ ಸಿದ್ಧಾಂತದ ಪ್ರಕಾರ ಒಂದು ರಾಸಾಯನಿಕ ಕ್ರಿಯೆಯ rate constant ನಿರ್ಧರಿಸುವುದು ಮೂರು ಘಟಕಗಳಾಗಿವೆ.

1. ಡಿಕ್ಕಿ ಹೊಡೆಯುವಿಕೆಯ ಸಂಖ್ಯೆ (ಯೂನಿಟ್ ಗಾತ್ರದಲ್ಲಿರುವ ಅಣುಗಳ ಸಂಖ್ಯೆಯನ್ನು ಆಶ್ರಯಿಸಿರುತ್ತದೆ)
2. ಸಾಕಷ್ಟು ಚೈತನ್ಯದಿಂದ ಕೂಡಿದ ಡಿಕ್ಕಿ ಹೊಡೆಯುವಿಕೆ ಅಂದರೆ ಏಕ್ಟಿವೇಶನ್ ಎನರ್ಜಿ ($E_a$) ಗಿಂತ ಹೆಚ್ಚಿನ ಚೈತನ್ಯ ಮಟ್ಟದಲ್ಲಿ (ಉಷ್ಣತೆಯಲ್ಲಿ ಸಣ್ಣ ವ್ಯತ್ಯಾಸ ಕೂಡಾ ದೊಡ್ಡ ಬದಲಾವಣೆಯನ್ನು ಉಂಟುಮಾಡುತ್ತದೆ)
3. ಪ್ರವರ್ತಕದ ಅಣುಗಳ ಅನುಕೂಲಕರ ದಿಕ್ಕಿನಲ್ಲಿರುವ ಹೊಡೆಯುವಿಕೆಗಳು (ಉಷ್ಣತೆಯ ಪ್ರಭಾವವಿಲ್ಲ)

**ಕ್ರೋಡೀಕರಿಸಬೇಕಾದುದು**

ಪ್ರವರ್ತಕ ಪ್ರಬಲತೆ ಹೆಚ್ಚಾದಂತೆ ಯೂನಿಟ್ ಗಾತ್ರದಲ್ಲಿರುವ ಅಣುಗಳ ಸಂಖ್ಯೆ ಮತ್ತು ಪರಿಣಾಮಕಾರಿಯಾದ ಡಿಕ್ಕಿ ಹೊಡೆಯುವಿಕೆಗಳ ಸಂಖ್ಯೆ ಹೆಚ್ಚುತ್ತದೆ. ಇದರ ಪರಿಣಾಮವಾಗಿ ರಾಸಾಯನಿಕ ಕ್ರಿಯೆಯ ವೇಗ ಹೆಚ್ಚುವುದು.

ಈ ರೀತಿಯಲ್ಲಿರುವ ಇತರ ಪ್ರಯೋಗಗಳನ್ನು ಮಾಡಿ ನೋಡಲು ಅಗತ್ಯವಾದ ಸಂದರ್ಭವನ್ನು ವಿದ್ಯಾರ್ಥಿಗಳಿಗೆ ನೀಡಬೇಕು.

ಉದಾ: Zn + HCl

$CaCO_3$ + HCl

ಮೊದಲಿನ ಪ್ರಯೋಗದ ನಂತರ ಕೆಳಗೆ ನೀಡಲಾದ ಚರ್ಚಾಸೂಚಕಗಳನ್ನು ನೀಡಬಹುದು.

**ಚರ್ಚಾ ಸೂಚಕಗಳು**

- ಯಾವ ಪ್ರನಾಳದಲ್ಲಿರುವ ಪ್ರವರ್ತಕ ವೇಗವಾಗಿ ಮುಗಿಯುತ್ತದೆ?
- ಪ್ರವರ್ತಕಗಳು ವರ್ತಿಸಿ ಮುಗಿದು ಹೋಗಲು ತೆಗೆದುಕೊಂಡ ಸಮಯದ ಆಧಾರದಲ್ಲಿ ಕ್ರಿಯೆಯ ವೇಗವನ್ನು ಹೋಲಿಸಲು ಸಾಧ್ಯವಿದೆಯೇ?

**ಕ್ರೋಢೀಕರಿಸಬೇಕಾದುದು**

$$\text{ರಾಸಾಯನಿಕ ಕ್ರಿಯೆಯ ದರ} = \frac{\text{ಉಪಯೋಗಿಸಲ್ಪಟ್ಟ ಪ್ರವರ್ತಕಗಳ ಪರಿಮಾಣ}}{\text{ಪ್ರವರ್ತಕಗಳು ವರ್ತಿಸಿ ಮುಗಿಯಲು ತೆಗೆದುಕೊಂಡ ಸಮಯ}}$$

ಈ ಕ್ರಿಯೆಯ ರಾಸಾಯನಿಕ ಸಮೀಕರಣವನ್ನು ಬರೆಯಲು ಸಂದರ್ಭವನ್ನು ಒದಗಿಸಿರಿ.

$Mg(s) + 2HCl(aq) \rightarrow MgCl_2(aq) + H_2(g)$

**ಚರ್ಚಾ ಸೂಚಕಗಳು**

- ಈ ಕ್ರಿಯೆಯ ಉತ್ಪನ್ನಗಳು ಯಾವುವು?
- ಉಂಟಾದ $H_2$ ವಿನ ಪರಿಮಾಣದ ಸಹಾಯದಿಂದ ರಾಸಾಯನಿಕ ಕ್ರಿಯಾವೇಗವನ್ನು ಕಂಡುಹಿಡಿಯಬಹುದೇ?

**ಕ್ರೋಢೀಕರಿಸಬೇಕಾದುದು**

$$\text{ರಾಸಾಯನಿಕ ಕ್ರಿಯೆಯ ದರ} = \frac{\text{ಉಂಟಾದ ಉತ್ಪನ್ನದ ಪರಿಮಾಣ}}{\text{ಉತ್ಪನ್ನವು ಉಂಟಾಗಲು ತೆಗೆದುಕೊಂಡು ಸಮಯ}}$$

ರಾಸಾಯನಿಕ ಸಮೀಕರಣವನ್ನು ಬರೆಯುವಾಗ ಪ್ರವರ್ತಕ ಮತ್ತು ಉತ್ಪನ್ನಗಳ ಭೌತಿಕ ಸ್ಥಿತಿಯನ್ನೂ ಕೂಡಾ ಬರೆಯಬೇಕಾದುದರ ಅಗತ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.

**ಹೆಚ್ಚಿನ ಮಾಹಿತಿಗೆ**

**ರಾಸಾಯನಿಕ ಕ್ರಿಯೆಯ ದರ**

ಸಮಯಕ್ಕೆ ಅನುಪಾತಿಕವಾಗಿ ಪ್ರವರ್ತಕಗಳ ಅಥವಾ ಉತ್ಪನ್ನಗಳ ಪ್ರಬಲತೆಯಲ್ಲಿ ಉಂಟಾಗುವ ಬದಲಾವಣೆ

ಪ್ರವರ್ತಕಗಳು $\rightarrow$ ಉತ್ಪನ್ನಗಳು

$A \rightarrow B$

$$\text{Average rate} = \frac{\text{Change in molar concentration of B}}{\text{Change in time}}$$

$$= \frac{\Delta\text{(molar concentration of B)}}{\Delta t} = \frac{\Delta[B]}{\Delta t} = \frac{\text{Final }[B] - \text{Initial }[B]}{\Delta t} = \text{This is +ve.}$$

ಇಲ್ಲಿ $\Delta[B]$ is +ve

$\Delta A$ = Final [A] - Initial [A] ಇಲ್ಲಿ $\Delta[A]$ is -ve $\therefore -\Delta A$ is +ve ಆದ್ದರಿಂದ Rate = +ve

or

$$\text{Rate} = \frac{-\Delta[A]}{\Delta t} - \frac{\text{Final [A] - Initial [A]}}{\Delta t}$$

The quantity within square brackets is -ve but $-\Delta$ [A] is +ve.

ಒಂದು ನಿರ್ದಿಷ್ಟ ಕಾಲಾವಧಿಯ ರಾಸಾಯನಿಕ ಕ್ರಿಯೆಯ ದರವನ್ನು ಸರಾಸರಿ ದರ (average rate) ಎಂದು ಕರೆಯಲಾಗುವುದು. ಒಂದು ಪ್ರತ್ಯೇಕ ನಿಮಿಷದಲ್ಲಿ ಕ್ರಿಯೆಯ ದರವನ್ನು Instantaneous Rate ಎಂದು ಕರೆಯಲಾಗುವುದು.

$$\text{Instantaneous Rate} = \frac{-d[A]}{dt} = \frac{d[B]}{dt}$$

ಹಲವು ರಾಸಾಯಿಕ ಕ್ರಿಯೆಗಳಲ್ಲಿ ಬೇರೆ ಬೇರೆ ಪ್ರವರ್ತಕ ಮತ್ತು ಉತ್ಪನ್ನಗಳ ಮೋಲ್ ಸಂಖ್ಯೆಯು ವಿಭಿನ್ನವಾಗಿರುವುದರಿಂದ ಯಾವುದಾದರೂ ಪ್ರವರ್ತಕ ಅಥವಾ ಉತ್ಪನ್ನವನ್ನು ತೆಗೆದುಕೊಂಡರೆ ಅವುಗಳ ಕ್ರಿಯೆಯ ವೇಗವು ವಿಭಿನ್ನವಾಗಿರುವುದು. ಇಂತಹ ಸಂದರ್ಭಗಳಲ್ಲಿ ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳ ಮೋಲ್ ಸಂಖ್ಯೆಯಿಂದ ಪ್ರತಿಯೊಂದು ದರವನ್ನೂ ಭಾಗಿಸಿದರೆ ಮೌಲ್ಯವು ಸಮಾನವಾಗಿ ದೊರೆಯುವುದು. ಇದನ್ನು ರಾಸಾಯನಿಕ ಕ್ರಿಯೆಯ ದರವಾಗಿ ಪರಿಗಣಿಸಲಾಗುವುದು.

ಉದಾ: $N_2 + 3H_2 \rightarrow 2NH_3$

$$\text{Rate of reaction} = \frac{-\Delta[N_2]}{\Delta t} = \frac{-1\Delta[H_2]}{3\Delta t} = \frac{+1}{2}\frac{\Delta[NH_3]}{\Delta t}$$

$$\frac{-\Delta[N_2]}{\Delta t} = \frac{1}{3}\frac{-\Delta[H_2]}{\Delta t} = \frac{1}{2}\frac{\Delta[NH_3]}{\Delta t}$$

## ಪ್ರವರ್ತಕಗಳ ಸ್ವಭಾವ ಮತ್ತು ರಾಸಾಯನಿಕ ಕ್ರಿಯಾವೇಗ

ದುರ್ಬಲಗೊಳಿಸಿದ HCl-ನಲ್ಲಿ ಸತು (Zn), ಮೆಗ್ನೀಶಿಯಂ (Mg) ಎಂಬೀ ಲೋಹಗಳ ಕ್ರಿಯಾ ವೇಗವನ್ನು ಪರಿಶೀಲಿಸಬೇಕು.

ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಅಗತ್ಯವಾದ ಸಾಮಗ್ರಿಗಳನ್ನು ಪಟ್ಟಿ ಮಾಡಿಸಬಹುದು. ಅಗತ್ಯವಾದ ಸಾಮಗ್ರಿಗಳು: ದುರ್ಬಲ HCl, ಸಮಾನ ದ್ರವ್ಯರಾಶಿಯ Zn, Mg ಎಂಬಿವುಗಳು (ಸಮಾನ ಆಕೃತಿಯಲ್ಲಿರುವುದು, ಮೇಲ್ಮೈ ವಿಸ್ತೀರ್ಣವು ಸರಿಸುಮಾರು ಸಮಾನವಾಗಿಬೇಕು) ಎರಡು ಪ್ರನಾಳ, ನೀರು.

ಪ್ರಯೋಗ ವಿಧಾನವನ್ನು ಬರೆಯಲಿ. ನಂತರ ಚರ್ಚೆಯ ಮೂಲಕ ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯೆಯು ವೇಗವಾಗಿ ನಡೆಯುತ್ತದೆ ಎಂಬುದನ್ನು ಕ್ರೋಡೀಕರಿಸಬಹುದು.

**ಚರ್ಚಾ ಸೂಚಕಗಳು**

- Zn, Mg ಎಂಬಿವುಗಳು ಸಮಾನ ದ್ರವ್ಯರಾಶಿಯಲ್ಲಿ (ಸಾಮಾನ್ಯ ಸಮಾನವಾದ ಮೇಲ್ಮೈ ವಿಸ್ತೀರ್ಣದಲ್ಲಿ) ತೆಗೆದುಕೊಳ್ಳಬೇಕಾದುದರ ಮಹತ್ವವೇನು?
- ಈ ಕ್ರಿಯೆಗಳಲ್ಲಿ ಉಪಯೋಗಿಸಿದ ಆಮ್ಲದ ಪ್ರಬಲತೆಯಲ್ಲಿ ವ್ಯತ್ಯಾಸವೇನು?
- ಇಲ್ಲಿ ಕ್ರಿಯೆಯ ಫಲವಾಗಿ ದೊರೆತ ಅನಿಲ ಯಾವುದು?

- ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯೆಯು ವೇಗವಾಗಿ ಜರಗಿತು?
- ಹಾಗಾದರೆ ರಾಸಾಯನಿಕ ಕ್ರಿಯೆಯ ವೇಗದ ಮೇಲೆ ಪ್ರಭಾವ ಬೀರಿದ ಘಟಕ ಯಾವುದು?

**ಕ್ರೋಢೀಕರಿಸಬೇಕಾದುದು**

ಪ್ರವರ್ತಕಗಳ ಸ್ವಭಾವವು ರಾಸಾಯನಿಕ ಕ್ರಿಯಾವೇಗದ ಮೇಲೆ ಪ್ರಭಾವ ಬೀರುವ ಒಂದು ಘಟಕವಾಗಿದೆ.

### ಒತ್ತಡ ಮತ್ತು ರಾಸಾಯನಿಕ ಕ್ರಿಯಾವೇಗ

ಚಿತ್ರ 3.2ನ್ನು ವಿಶ್ಲೇಷಿಸಲು ಸಂದರ್ಭವನ್ನು ಒದಗಿಸಬೇಕು. ಒತ್ತಡವು ಹೆಚ್ಚುವಾಗ ಕಣಗಳ ಪರಸ್ಪರ ಅಂತರ, ಚಲನಾ ಸಾಮರ್ಥ್ಯ, ಆಕರ್ಷಣಾಬಲ ಎಂಬಿವುಗಳಲ್ಲಿ ಉಂಟಾಗುವ ಬದಲಾವಣೆಯನ್ನು ವಿಶ್ಲೇಷಣೆ ಮತ್ತು ಚರ್ಚೆಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಬೇಕು.

**ಚರ್ಚಾ ಸೂಚಕಗಳು**

- ಒತ್ತಡವು 2 atm ಆಗಿ ಹೆಚ್ಚಿದಾಗ ಗಾತ್ರದಲ್ಲಿ ಯಾವ ಬದಲಾವಣೆ ಉಂಟಾಯಿತು?
- ಅಣುಗಳ ಸಂಖ್ಯೆಯಲ್ಲಿ ಬದಲಾವಣೆ ಉಂಟಾಗಿದೆಯೆ?
- ಯೂನಿಟ್ ಗಾತ್ರದಲ್ಲಿರುವ ಪ್ರವರ್ತಕದ ಅಣುಗಳ ಸಂಖ್ಯೆಯಲ್ಲಿ ಬದಲಾವಣೆ ಉಂಟಾಗಿದೆಯೆ?
- ಒತ್ತಡವು ಹೆಚ್ಚುವಾಗ ಅಣುಗಳ ಪರಸ್ಪರ ಕೊಲಿಶನ್ ದರದಲ್ಲಿ ಯಾವ ಬದಲಾವಣೆ ಉಂಟಾಗುತ್ತದೆ?

ಚರ್ಚಾ ಸೂಚಕಗಳ ಮೂಲಕ ಮತ್ತು ಚಿತ್ರಗಳ ಆಧಾರದಲ್ಲಿ ಟಿಪ್ಪಣಿ ತಯಾರಿಸಿ, ಐ.ಸಿ.ಟಿ ಸಾಧ್ಯತೆಗಳನ್ನು ಉಪಯೋಗಿಸಿ ಕ್ರೋಢೀಕರಿಸಬಹುದು.

**ಕ್ರೋಢೀಕರಿಸಬೇಕಾದುದು**

ಒತ್ತಡವು ಹೆಚ್ಚುವಾಗ ಅಣುಗಳು ಪರಸ್ಪರ ಹತ್ತಿರಕ್ಕೆ ಬರುವುದು ಮತ್ತು ಅವುಗಳ ಪರಸ್ಪರ ಡಿಕ್ಕಿ ಹೊಡೆಯುವಿಕೆಯ ಸಂಖ್ಯೆ ಹೆಚ್ಚುವುದು. ಇದರ ಪರಿಣಾಮವಾಗಿ ರಾಸಾಯನಿಕ ಕ್ರಿಯೆಯ ವೇಗವು ಹೆಚ್ಚುವುದು.

### ಘನ ಪದಾರ್ಥಗಳ ಮೇಲ್ಮೈ ವಿಸ್ತೀರ್ಣ ಮತ್ತು ರಾಸಾಯನಿಕ ಕ್ರಿಯಾವೇಗ

(ಸಮಾನ ದ್ರವ್ಯರಾಶಿಯ ಮಾರ್ಬಲ್ ತುಂಡು, ಮಾರ್ಬಲ್ ಹುಡಿ ಎಂಬಿವುಗಳ ಜೊತೆಗೆ ಸಮಾನ ಪ್ರಬಲತೆಯ ದುರ್ಬಲ HCl ವರ್ತಿಸುವುದು)

ಪ್ರಯೋಗವನ್ನು ಮಾಡಿ ನೋಡಲು ವಿದ್ಯಾರ್ಥಿಗಳಿಗೆ ಸೌಕರ್ಯವನ್ನು ಒದಗಿಸಿ ಕೊಡಬೇಕು. ಚಿತ್ರ 3.3ನ್ನು ವಿಶ್ಲೇಷಿಸಬಹುದು. ಅಗತ್ಯವಾದ ಸಾಮಗ್ರಿಗಳು ಮತ್ತು ಪ್ರಯೋಗ ವಿಧಾನವನ್ನು ಬರೆಯಲು ಹೇಳಬಹುದು.

**ಚರ್ಚಾ ಸೂಚಕಗಳು**

- ಎರಡೂ ಕ್ರಿಯೆಗಳಲ್ಲಿ ಆಮ್ಲದ ಪ್ರಬಲತೆ ಯಾವ ರೀತಿಯಲ್ಲಿದೆ?
- ಮಾರ್ಬಲಿನ ದ್ರವ್ಯರಾಶಿ ವ್ಯತ್ಯಾಸವಾಗಿದೆಯೆ?
- ಮಾರ್ಬಲಿನ ಮೇಲ್ಮೈ ವಿಸ್ತೀರ್ಣದಲ್ಲಿ ವ್ಯತ್ಯಾಸವಾಗಿದೆಯೆ?
- ಎರಡೂ ಬೀಕರುಗಳಲ್ಲಿಯೂ ಕ್ರಿಯೆಯ ವೇಗದಲ್ಲಿ ಯಾವುದಾದರೂ ವ್ಯತ್ಯಾಸವಿದೆಯೆ?

- ಏಕಕಾಲದಲ್ಲಿ ಆಮ್ಲದ ಹೆಚ್ಚಿನ ಅಣುಗಳು ಮಾರ್ಬಲ್‌ನ ಸಂಪರ್ಕಕ್ಕೆ ಬರಲಿರುವ ಸಾಧ್ಯತೆ ಯಾವ ಬೀಕರ್‌ನಲ್ಲಿ ಹೆಚ್ಚು?
- ಮೇಲ್ಮೈ ವಿಸ್ತೀರ್ಣ ಹೆಚ್ಚುವಾಗ ಕೊಲಿಶನ್ ದರದಲ್ಲಿ ಯಾವ ಬದಲಾವಣೆ ಉಂಟಾಗುತ್ತದೆ?
- ಈ ಕ್ರಿಯೆಯಲ್ಲಿ ಮಾರ್ಬಲ್‌ನ್ನು ಪುನಃ ಸಣ್ಣದಾಗಿ ಪುಡಿ ಮಾಡಿದರೆ ಕ್ರಿಯೆಯ ವೇಗದಲ್ಲಿ ಯಾವ ಬದಲಾವಣೆ ಉಂಟಾಗಬಹುದು?

ಚರ್ಚಾ ಸೂಚಕಗಳನ್ನು ವಿಶ್ಲೇಷಣೆ ಮಾಡಿ ಕ್ರೋಢೀಕರಿಸಬಹುದು.

**ಕ್ರೋಢೀಕರಿಸಬೇಕಾದುದು**

ಘನ ಪದಾರ್ಥಗಳು ಒಳಗೊಂಡ ರಾಸಾಯನಿಕ ಕ್ರಿಯೆಗಳಲ್ಲಿ ವೇಗದ ಮೇಲೆ ಪ್ರಭಾವ ಬೀರುವ ಘಟಕ ಮೇಲ್ಮೈ ವಿಸ್ತೀರ್ಣ(Surface area).

ದೈನಂದಿನ ಜೀವನದಿಂದ ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕಂಡುಹಿಡಿಯಬಹುದು. ಘನದ್ರವರೂಪದಲ್ಲಿರುವ ದ್ರವ್ಯಗಳನವನ್ನು ದ್ರಾವಕದಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಗಳನ್ನು ಚರ್ಚೆಯಲ್ಲಿ ಸೇರಿಸಬಹುದು.

- ಕಟ್ಟಿಗೆಯನ್ನು ಚಿಕ್ಕ ತುಂಡುಗಳನ್ನಾಗಿ ಮಾಡಿದಾಗ ವೇಗವಾಗಿ ಉರಿಯುವುದು.
- ಸಕ್ಕರೆಯನ್ನು ಹುಡಿಮಾಡಿ ಸೇರಿಸಿದರೆ ಬೇಗನೆ ವಿಲೀನವಾಗುವುದು.
- ಉಪ್ಪನ್ನು ಹುಡಿಮಾಡಿ ವಿಲೀನಗೊಳಿಸುವುದು.
- ಕಾಗದದ ಕಟ್ಟುಗಳನ್ನು ಉರಿಸುವಾಗ ಕಾಗದಗಳನ್ನು ಬಿಡಿಯಾಗಿ ಉರಿಸುವುದು.

**ಹೆಚ್ಚಿನ ಮಾಹಿತಿಗಾಗಿ**

ವಸ್ತುಗಳು ಚಿಕ್ಕದಾಗುವಾಗ ಮೇಲ್ಮೈ ವಿಸ್ತೀರ್ಣ ಹೆಚ್ಚುವುದು. ಒಂದು ಕ್ಯೂಬನ್ನು ತುಂಡುಮಾಡುವ ಉದಾಹರಣೆಯ ಮೂಲಕ ಇದನ್ನು ಸ್ಪಷ್ಟಪಡಿಸಬಹುದು.

8 ಸೆಂ.ಮೀ ಇರುವ ಒಂದು ಕ್ಯೂಬನ್ನು ಊಹಿಸಿಕೊಳ್ಳಿ.

ಮೇಲ್ಮೈ ವಿಸ್ತೀರ್ಣ $= 6a^2 = 6 \times 8^2 = 6 \times 64 = 384$ cm$^2$

ಇದೇ ಕ್ಯೂಬನ್ನು 4 ಸೆಂ,ಮೀ. ಅಂಚುಗಳಿರುವ 8 ಸಣ್ಣ ಕ್ಯೂಬ್‌ಗಳಾಗಿ ತುಂಡರಿಸಿದರೆ, ಸಣ್ಣ ಕ್ಯೂಬಿನ ಮೇಲ್ಮೈ ವಿಸ್ತೀರ್ಣ $= 6 \times 4^2 = 6 \times 16 = 96$

ಆಗ 8 ಕ್ಯೂಬ್‌ಗಳ ಒಟ್ಟು ಮೇಲ್ಮೈ ವಿಸ್ತೀರ್ಣ $= 8 \times 96 = 768$ cm$^2$

ಅಂದರೆ ಘನ ಪದಾರ್ಥಗಳನ್ನು ಒಳಗೊಂಡ ರಾಸಾಯನಿಕ ಕ್ರಿಯೆಗಳಲ್ಲಿ ಪ್ರವರ್ತಕಗಳ ಮೇಲ್ಮೈ ವಿಸ್ತೀರ್ಣ ಹೆಚ್ಚುವಾಗ ಹೆಚ್ಚು ಅಣುಗಳು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವುದು. ಇದರಿಂದಾಗಿ ಕೊಲಿಶನ್ ದರ ಹೆಚ್ಚುವುದು.



### ಉಷ್ಣತೆ ಮತ್ತು ರಾಸಾಯನಿಕ ಕ್ರಿಯಾವೇಗ

ಸೋಡಿಯಂ ಥಯೋಸಲ್ಫೇಟ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳು ಪರಸ್ಪರ ವರ್ತಿಸುವ ಕ್ರಿಯೆಯಲ್ಲಿ ಉಷ್ಣತೆಯ ಪ್ರಭಾವವನ್ನು ಪರಶೀಲಿಸುವುದು.

ಪ್ರಯೋಗವನ್ನು ಮಾಡಲು ವಿದ್ಯಾರ್ಥಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕು.

### ಅಗತ್ಯವಾದ ಸಾಮಗ್ರಿಗಳು

ಸೋಡಿಯಂ ಥಯೋಸಲ್ಫೇಟ್, ಹೈಡ್ರೋಕ್ಲೋರಿಕ್ ಆಮ್ಲ, ನೀರು, ಬೋಯ್ಲಿಂಗ್‌ಟ್ಯೂಬ್, ಸ್ಪಿರಿಟ್‌ಲ್ಯಾಂಪ್.

ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿಯೊಂದು ಗುಂಪಿಗೂ ಪ್ರಯೋಗ ವಿಧಾನವನ್ನು ನೀಡಬಹುದು. ನಿರೀಕ್ಷಣೆಗಳನ್ನು ಬರೆಯಲು ಹೇಳಬೇಕು.

### ಚರ್ಚಾ ಸೂಚಕಗಳು

- ಯಾವ ಬೋಯ್ಲಿಂಗ್ ಟ್ಯೂಬಿನಲ್ಲಿ ಬೇಗನೆ ಅಧಃಕ್ಷೇಪ ಉಂಟಾಯಿತು?
- ಬೋಯ್ಲಿಂಗ್ ಟ್ಯೂಬ್‌ಗಳಲ್ಲಿ ಉಂಟಾದ ಅಧಃಕ್ಷೇಪ ಬಣ್ಣ ಯಾವುದು?

ಚರ್ಚಾ ಸೂಚಕಗಳನ್ನು ವಿಶ್ಲೇಷಿಸುವ ಮೂಲಕ ಉಷ್ಣತೆಯು ರಾಸಾಯನಿಕ ಕ್ರಿಯೆಯ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ ಎಂದು ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳಲು ಸಾಧ್ಯವಿದೆ.

ಕ್ರೋಡೀಕರಣವನ್ನು ಮಾಡುವಾಗ ಥ್ರೆಶೋಲ್ಡ್ ಎನರ್ಜಿ, ಡಿಕ್ಕಿ ಹೊಡೆಯುವಿಕೆಗಳ ಸಂಖ್ಯೆ ಎಂಬಿವುಗಳ ಪರಸ್ಪರ ಸಂಬಂಧವನ್ನು ಸೂಚಿಸಬೇಕು.

**ಕ್ರೋಡೀಕರಿಸಬೇಕಾದುದು**

ಬಿಸಿ ಮಾಡಿದ ಬೋಯ್ಲಿಂಗ್ ಟ್ಯೂಬಿನಲ್ಲಿ ಸಲ್ಫರ್ ಅಧಃಕ್ಷೇಪ ಹೊಂದುವುದರಿಂದಾಗಿ ಹಳದಿ ಬಣ್ಣವು ಗೋಚರಿಸುವುದು.

ಉಷ್ಣತೆಯು ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುವ ಒಂದು ಪ್ರಧಾನ ಘಟಕವಾಗಿದೆ. ಉಷ್ಣತೆಯು ಹೆಚ್ಚುವಾಗ ರಾಸಾಯನಿಕ ಕ್ರಿಯಾ ವೇಗ ಹೆಚ್ಚುವುದು. ಕಡಿಮೆಯಾಗುವಾಗ ರಾಸಾಯನಿಕ ಕ್ರಿಯಾ ವೇಗ ಕಡಿಮೆಯಾಗುವುದು.

ದೈನಂದಿನ ಜೀವನದಿಂದ ಕೆಲವು ಉದಾಹರಣೆಗಳನ್ನು ನೀಡಬಹುದು.

1. ರೆಫ್ರಿಜರೇಟರ್‌ನಲ್ಲಿ ಇರಿಸಿದ ಹಿಟ್ಟು ಹುಳಿ ಬರಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದು.
2. ಕಾಫಿಹುಡಿ, ಚಹಾದ ಹುಡಿ ಎಂಬಿವುಗಳಲ್ಲಿರುವ ಘಟಕಗಳು ಬಿಸಿ ಮಾಡುವಾಗ ನೀರಿನಲ್ಲಿ ವಿಲೀನಗೊಳ್ಳುವುದು.

### ಹೆಚ್ಚಿನ ಉದಾಹರಣೆಗಳು

a) ತಣ್ಣೀರು ಮತ್ತು ಬಿಸಿನೀರಿನೊಂದಿಗೆ ಮೆಗ್ನೀಶಿಯಂ ಲೋಹದ ವರ್ತನೆ.

b) ಪೊಟಾಶಿಯಂ ಪರ್ಮಾಂಗನೇಟ್ ($KMnO_4$) ದ್ರಾವಣ, ಓಕ್ಸಾಲಿಕ್‌ಆಮ್ಲ ($H_2C_2O_4$) ದ್ರಾವಣ ಎಂಬಿವುಗಳನ್ನು ದುರ್ಬಲಗೊಳಿಸಿದ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸೇರಿಸಿದಾಗ ಲಭಿಸುವ ಮಿಶ್ರಣವು ಅಧಿಕ ಉಷ್ಣತೆಯಲ್ಲಿ ಬೇಗನೆ ಬಣ್ಣ ಇಲ್ಲದಾಗುವುದು.

**ಹೆಚ್ಚಿನ ಮಾಹಿತಿಗೆ**

ಉಷ್ಣತೆ ಹೆಚ್ಚುವಾಗ ಪ್ರವರ್ತಕದ ಅಣುಗಳು ಸರಾಸರಿ ಚೈತನ್ಯವು ಹೆಚ್ಚುವುದು ಮತ್ತು ಹೆಚ್ಚಿನ ಅಣುಗಳಿಗೆ ಕ್ಲಪ್ತ ಚೈತನ್ಯ ಅಥವಾ ಅದಕ್ಕಿಂತ ಹೆಚ್ಚು ಚೈತನ್ಯಗಳನ್ನು ಗಳಿಸಲು ಸಾಧ್ಯವಾಗುವುದು.

ಇದರ ಹೊರತಾಗಿ ಉಷ್ಣತೆ ಹೆಚ್ಚುವಾಗ ಅಣುಗಳ ಚಲನಾ ವೇಗವು ಹೆಚ್ಚುವುದರಿಂದಾಗಿ ಒಂದು ಯೂನಿಟ್ ಸಮಯದಲ್ಲಿ ಉಂಟಾಗುವ ಕೊಲಿಶನ್‌ಗಳ ಸಂಖ್ಯೆಯೂ ಹೆಚ್ಚುವುದು. ಈ ಕಾರಣಗಳಿಂದಾಗಿ effective collision ದರ ಹೆಚ್ಚುವುದು ಮತ್ತು ರಾಸಾಯನಿಕ ಕ್ರಿಯೆಯ ದರ ಹೆಚ್ಚುವುದು.

ರಾಸಾಯನಿಕ ಕ್ರಿಯೆಯ ದರವನ್ನು ವಿವರಿಸುವ ಇನ್ನೊಂದು ಪ್ರಧಾನ ಸಿದ್ಧಾಂತವು ಏಕ್ಟಿವೇಟೆಡ್ ಕೋಂಪ್ಲೆಕ್ಸ್ ಥಿಯರಿ. ಈ ಸಿದ್ಧಾಂತದ ಪ್ರಕಾರ ಒಂದು ವ್ಯವಸ್ಥೆಯ ಪ್ರವರ್ತಕದ ಅಣುಗಳು ರಾಸಾಯನಿಕ ಕ್ರಿಯೆಯ ಮೂಲಕ ಉತ್ಪನ್ನಗಳಾಗಿ ಬದಲಾಗುವುದರ ನಡುವೆ ಅಧಿಕ ಚೈತನ್ಯ ಮಟ್ಟದಲ್ಲಿರುವ ಏಕ್ಟಿವೇಟೆಡ್ ಕೋಂಪ್ಲೆಕ್ಸ್ ಎಂಬ ಮಧ್ಯಂತರ ಸ್ಥಿತಿಯ ಮೂಲಕ ಹಾದುಹೋಗುವುದು. ಇವುಗಳ ಚೈತನ್ಯವು ಪ್ರವರ್ತಕದ ಅಣುಗಳು ಮತ್ತು ಉತ್ಪನ್ನದ ಅಣುಗಳಿಗಿಂತ ಅಧಿಕವಾಗಿರುವುದು.

ಚೈತನ್ಯದ ಮಟ್ಟವು ಸಾಮಾನ್ಯ ಹೆಚ್ಚಿರುವ ಈ ಸ್ಥಿತಿಯು ಅತ್ಯಂತ ಅಸ್ಥಿರವಾಗಿರುವುದರಿಂದ ಇವುಗಳು ಬಹ ಬೇಗನೆ ವಿಭಜನೆ ಹೊಂದಿ ಉತ್ಪನ್ನಗಳಾಗಿ ಬದಲಾಗುವುದು.

ಸಾಕಷ್ಟು ಚೈತನ್ಯ ದೊರೆಯದಿದ್ದರೆ ಪ್ರವರ್ತಕದ ಅಣುಗಳಿಗೆ ಈ ಸ್ಥಿತಿಯನ್ನು ತಲುಪಲು ಸಾಧ್ಯವಿಲ್ಲ.

$E_P$ - ಉತ್ಪನ್ನ ಚೈತನ್ಯ

$E_R$ - ಪ್ರವರ್ತಕ ಚೈತನ್ಯ

$E_{AC}$ - ಏಕ್ಟಿವೇಟೆಡ್ ಕೋಂಪ್ಲೆಕ್ಸ್ ಚೈತನ್ಯ




ಗ್ರಾಫ್ ಉಪಯೋಗಿಸಿ Activated complex, activation energy, threshold energy ಎಂಬಿವುಗಳನ್ನು ಅರ್ಥೈಸಿಕೊಳ್ಳಬಹುದು.

**ಪ್ರೇರಕ ಮತ್ತು ರಾಸಾಯನಿಕ ಕ್ರಿಯಾ ವೇಗ**

ಹೈಡ್ರಜನ್ ಪೆರೋಕ್ಸೈಡ್ ವಿಭಜನೆಯನ್ನು ಪರಿಶೀಲಿಸಲಾಗುವುದು.

**ಅಗತ್ಯವಾದ ಸಾಮಗ್ರಿಗಳು**

ಹೈಡ್ರಜನ್ ಪೆರೋಕ್ಸೈಡ್ ದ್ರಾವಣ, ಊದುಬತ್ತಿ, ಬೆಂಕಿಪೆಟ್ಟಿಗೆ, ಪ್ರನಾಳ, $MnO_2$.

ಪ್ರಯೋಗ ಮಾಡಿ ನೋಡಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಿರಿ.

ಚರ್ಚಾ ಸೂಚಕಗಳನ್ನು ಗುಂಪಿನಲ್ಲಿ ವರ್ಕ್‌ಶೀಟ್ ಆಗಿ ನೀಡಿರಿ.

- ಯಾವ ಟೆಸ್ಟ್‌ಟ್ಯೂಬಿನಲ್ಲಿ ಕ್ರಿಯಾ ವೇಗವು ಹೆಚ್ಚಾಗಿರುವುದು?
- ಕ್ರಿಯಾ ವೇಗ ಹೆಚ್ಚಾಗಲು ಕಾರಣವೇನು?

ಚರ್ಚಾ ಸೂಚಕಗಳನ್ನು ವಿಶ್ಲೇಷಣೆ ಮಾಡುವುದರಿಂದ $MnO_2$ ವಿನ ಪಾತ್ರ ವಿದ್ಯಾರ್ಥಿಗಳಿಗೆ ತಿಳಿಯುವುದು.

ಪ್ರಯೋಗದ ನಂತರ $MnO_2$ ವಿನ ಅಳತೆಯಲ್ಲಿ ವ್ಯತ್ಯಾಸವಿಲ್ಲವೆಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಬೇಕು. ಅದಕ್ಕಾಗಿ ಪಾಠ ಪುಸ್ತಕದಲ್ಲಿ ಸೂಚಿಸಿದ ರೀತಿಯನ್ನು ಅನುಸರಿಸಬೇಕು.

**ಕ್ರೋಡೀಕರಿಸಬೇಕಾದುದು**

ಸ್ವತಃ ರಾಸಾಯನಿಕ ಬದಲಾವಣೆಗೆ ಒಳಗಾಗದೆ ರಾಸಾಯನಿಕ ಕ್ರಿಯೆಯ ವೇಗವನ್ನು ಬದಲಾವಣೆಗಳೊಳಿಸುವ ಪದಾರ್ಥಗಳೇ ಪ್ರೇರಕಗಳು (Catalysts).

$H_2O_2$ ವಿನ ವಿಭಜನೆಯಲ್ಲಿ $MnO_2$ ವಿನ ಪಾತ್ರ ಏನಾಗಿತ್ತು? ರಾಸಾಯನಿಕ ಕ್ರಿಯೆಯ ವೇಗದಲ್ಲಿ ಉಂಟುಮಾಡುವ ಬದಲಾವಣೆ ಏನು? $H_2O_2$ ವಿನ ವಿಭಜನೆಯ ವೇಗವನ್ನು ಕಡಿಮೆಮಾಡಲು ಸಾಧ್ಯವೇ? $H_3PO_4$ ಉಪಯೋಗಿಸಿದರೆ ಉಂಟಾಗುವ ಬದಲಾವಣೆ ಏನು? ಎಂಬೀ ಸೂಚಕಗಳನ್ನು ನೀಡಿ ಪೊಸಿಟಿವ್ ಪ್ರೇರಕಗಳು ಮತ್ತು ನೆಗೆಟಿವ್ ಪ್ರೇರಕಗಳನ್ನು ವಿವರಿಸಬಹುದು. ಉದಾಹರಣೆಗಳನ್ನು ನೀಡಬೇಕು.

**ಹೆಚ್ಚಿನ ಮಾಹಿತಿಗಾಗಿ**

**ಪೊಸಿಟಿವ್ ಪ್ರೇರಕಗಳು**

- $H_2O_2$ ನ ವಿಭಜನೆಯಲ್ಲಿ $MnO_2$
- $NH_3$ ತಯಾರಿಯ ಹೇಬರ್ ಪ್ರಕ್ರಿಯೆಯಲ್ಲಿ ಸ್ಪಂಜಿನ ರೂಪದಲ್ಲಿರುವ ಕಬ್ಬಿಣ.
- $C_{12}H_{22}O_{11}$ ಹೈಡ್ರೋಲಿಸಿಸ್‌ನಲ್ಲಿ ಇನ್‌ವರ್ಟಸ್
- ಸಂಪರ್ಕ ವಿಧಾನದಲ್ಲಿ ಸಲ್ಫ್ಯೂರಿಕ್ ಆಮ್ಲವನ್ನು ತಯಾರಿಸುವಾಗ $SO_2$ ನ್ನು $SO_3$ ಆಗಿ ಉತ್ಕರ್ಷಿಸುವ ಕ್ರಿಯೆಯಲ್ಲಿ $V_2O_5$



- $KClO_3$ ವಿಭಜನೆಯಲ್ಲಿ $MnO_2$

**ನೆಗೆಟಿವ್ ಪ್ರೇರಕಗಳು**

- $H_2O_2$ ವಿಭಜನೆಯಲ್ಲಿ $H_3PO_4$.
- $Na_2SO_3$ ಉತ್ಕರ್ಷಿಸಿ $Na_2SO_4$ ಆಗ ಬದಲಾಗುವ ಕ್ರಿಯೆಯಲ್ಲಿ ಎಥನೋಲ್
- ಪೆಟ್ರೋಲಿನ knocking ನಲ್ಲಿ Tetra Ethyl Lead (TEL)
- $H_2O_2$ ವಿನ ವಿಭಜನೆಯಲ್ಲಿ ಗ್ಲಿಸರೋಲ್.

ಇಂಟರ್‌ಮೀಡಿಯೇಟ್ ಕೊಂಪ್ಲೆಕ್ಸ್ ಥಿಯರಿ ಪ್ರಕಾರ ಪ್ರೇರಕಗಳು ಪ್ರವರ್ತಕಗಳ ಅಣುಗಳನ್ನು ಸುಲಭದಲ್ಲಿ ಉತ್ಪನ್ನವಾಗಿ ಬದಲಾಯಿಸುವ ಒಂದು ಮಾಧ್ಯಮವಾಗಿ ವರ್ತಿಸುತ್ತವೆ.

ಪ್ರೇರಕದ ಕೆಲವು ವಿಶೇಷ ತೆಗಳ ಕಾರಣ ಪ್ರವರ್ತಕದ ಅಣುಗಳು ಪ್ರೇರಕದೊಂದಿಗೆ ಸೇರಿ ಪ್ರೇರಕವನ್ನೊಳಗೊಂಡ ಇಂಟರ್ ಮೀಡಿಯೇಟ್ ಕೊಂಪ್ಲೆಕ್ಸ್ ಉಂಟಾಗುತ್ತದೆ. ಇವುಗಳು ಬಹಳ ವೇಗದಲ್ಲಿ ಉತ್ಪನ್ನವಾಗಿ ಬದಲಾಗುತ್ತವೆ ಮತ್ತು ಪ್ರೇರಕಗಳು ಹಳೆಯ ರೀತಿಯಲ್ಲಿ ಬಿಡುಗಡೆಯಾಗುತ್ತವೆ.

ವಾಹನಗಳಲ್ಲಿ ಉಪಯೋಗಿಸುವ Catalytic convertors ವಿಷಾನಿಲಗಳನ್ನು ವಿಷರಹಿತವನ್ನಾಗಿ ಮಾಡಿ ಪರಿಸರ ಮಾಲಿನ್ಯವನ್ನು ತಡೆಯುತ್ತವೆ.

$CO \rightarrow CO_2$; $NO, NO_2 \rightarrow N_2$

**ಬೆಳಕೂ ರಾಸಾಯನಿಕ ಕ್ರಿಯಾ ವೇಗವೂ**

ವಿದ್ಯಾರ್ಥಿಗಳಿಗೆ ಪರಿಚಯದಿಂದ ಪ್ರಭಾ ರಾಸಾಯನಿಕ ಕ್ರಿಯೆಗಳನ್ನು ಬರೆಯಲು ಹೇಳಬೇಕು.

$H_2$ ಮತ್ತು $Cl_2$ ಗಳು ಸೇರಿ HCl ಉಂಟಾಗುವುದು.

ದ್ಯುತಿ ಸಂಶ್ಲೇಷಣೆ

ಸಿಲ್ವರ್ ಬ್ರೋಮೈಡಿನ ವಿಭಜನೆ

ಸಲ್ಫ್ಯೂರಿಕ್ ಕ್ಲೋರೈಡಿನ ತಯಾರಿ

ಸಿಲ್ವರ್ ನೈಟ್ರೇಟಿನ ವಿಭಜನೆ

$CO + Cl_2 \xrightarrow{\text{Sunlight}} COCl_2$ (ಕಾರ್ಬೋನಿಲ್ ಕ್ಲೋರೈಡ್, Phosgene) ವಿಷಾನಿಲವಾಗಿದೆ.

ಈ ಉದಾಹರಣೆಗಳಿಂದ ಬೆಳಕು ರಾಸಾಯನಿಕ ಕ್ರಿಯೆಯ ಮೇಲೆ ಪ್ರಭಾವ ಬೀರುವ ಘಟಕವೆಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಬಹುದು.

ಇಷ್ಟು ಪಾಠ ಭಾಗಗಳು ಮುಗಿದ ಬಳಿಕ ಫ್ಲೋಚಾರ್ಟ್, Concept mapping ಮೊದಲಾದವುಗಳಿಂದ ಕಲಿತ ಪಾಠಭಾಗವನ್ನು Review ಮಾಡಿದರೆ ಉತ್ತಮ.

ರಾಸಾಯನಿಕ ಕ್ರಿಯೆಯ ವೇಗವನ್ನು ನಿಯಂತ್ರಿಸುವ ಘಟಕಗಳು, ಇವುಗಳಿಗೆ ನಿತ್ಯಜೀವನದಲ್ಲಿ ಇರುವ ಮಹತ್ವ ಇವುಗಳನ್ನು ಒಳಪಡಿಸಿ ಒಂದು ಸೆಮಿನಾರ್ ಪ್ರಬಂಧವನ್ನು ತಯಾರಿಸಲು ಹೇಳಬಹುದು.

## ಮೊಡ್ಯೂಲ್ 2

ಸಮಯ : 6 ಪಿರೀಡ್

ರಾಸಾಯನಿಕ ಸಮತೋಲನ, ಸಮತೋಲನ ಸ್ಥಿತಿ, ಏಕಮುಖೀ ಕ್ರಿಯೆಗಳು, ಇಕ್ಕೆಡೆಗಳಲ್ಲಿ ವರ್ತಿಸುವ ಕ್ರಿಯೆಗಳು, ಲಿ ಶೆಟಲಿಯರ್‌ನ ತತ್ವದ ಪ್ರಯೋಜನವನ್ನು ಪಡೆದುಕೊಳ್ಳುವ ಸಂದರ್ಭಗಳು($NO_2$, ಅಮೋನಿಯಾ, $H_2SO_4$ ಮೊದಲಾದವುಗಳ ತಯಾರಿ).

### ರಾಸಾಯನಿಕ ಸಮತೋಲನ

### ಏಕಮುಖೀ ಕ್ರಿಯೆಗಳು ಮತ್ತು ಇಕ್ಕಡೆಗಳಲ್ಲಿ ಜರಗುವ ಕ್ರಿಯೆಗಳು

ಕೆಳಗೆ ಕೊಟ್ಟಿರುವ ಸಮೀಕರಣವನ್ನು ನೀಡಿರಿ.

$Na(OH)(aq) + HCl(aq) \rightarrow NaCl(aq) + H_2O(1)$

ಪೂರ್ವಜ್ಞಾನವನ್ನು ಪರೀಕ್ಷಿಸುವುದಕ್ಕಾಗಿ ಈ ಕ್ರಿಯೆಯ ಪ್ರವರ್ತಕಗಳು ಮತ್ತು ಉತ್ಪನ್ನಗಳನ್ನು ವಿದ್ಯಾರ್ಥಿಗಳಲ್ಲಿ ಬರೆಯಲು ಹೇಳಬಹುದು.

ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಪ್ರಯೋಗ ಮಾಡಲು ಅವಕಾಶ ನೀಡಬೇಕು.

ಉತ್ಪನ್ನಗಳಾದ ಸೋಡಿಯಂ ಕ್ಲೋರೈಡ್ ಮತ್ತು ನೀರು ವರ್ತಿಸಿದರೆ ಪ್ರವರ್ತಕಗಳಿಂದ ಸೋಡಿಯಂ ಹೈಡ್ರೋಕ್ಸೈಡೂ, ಹೈಡ್ರೋಕ್ಲೋರಿಕ್ ಏಸಿಡೂ ಸಿಗಬಹುದೇ?

ಲಿಟ್ಮಸ್ ಪೇಪರ್ ಬಳಸಿ ಆಲ್ಕಲಿಗಳ ಮತ್ತು ಏಸಿಡುಗಳ ಸಾನ್ನಿಧ್ಯ ಪರೀಕ್ಷಿಸಲು ವಿದ್ಯಾರ್ಥಿಗಳಲ್ಲಿ ಹೇಳಬೇಕು.

ಹಿಂದೆ ನಡೆಸಿದ ರಾಸಾಯನಿಕ ಕ್ರಿಯೆಗಳ ಸಮತೋಲನಗೊಳಿಸಿದ ಸಮೀಕರಣ ರೂಪೀಕರಿಸಲು ಮಕ್ಕಳಲ್ಲಿ ಹೇಳಬೇಕು.

- $Zn(s) + 2\ HCl(aq) \rightarrow ZnCl_2(aq) + H_2(g)$
- $2\ Mg(s) + O_2(g) \rightarrow 2\ MgO(s)$
- $CaCO_3(s) + 2\ HCl(aq) \rightarrow CaCl_2(aq) + CO_2(g) + H_2O(l)$

ಈ ಕ್ರಿಯೆಗಳಲ್ಲಿ ಪ್ರವರ್ತಕಗಳು ಉತ್ಪನ್ನಗಳಾಗಿ ಬದಲಾಗುತ್ತವೆ. ಆದರೆ ಉತ್ಪನ್ನಗಳು ಪುನಃ ಪ್ರವರ್ತಕಗಳಾಗಿ ಬದಲಾಗಲು ಸಾಧ್ಯವೇ?

ಈ ಉದಾಹರಣೆಗಳಿಂದ ಇಲ್ಲಿ ರಾಸಾಯನಿಕ ಕ್ರಿಯೆಯು ಒಂದು ದಿಶೆಯಲ್ಲಿ ಮಾತ್ರ ನಡೆಯುವುದೆಂದು ವಿದ್ಯಾರ್ಥಿಗಳು ಮನದಟ್ಟು ಮಾಡಿಕೊಳ್ಳುತ್ತಾರೆ. ಈ ಚರ್ಚೆಯ ಕ್ರೋಡೀಕರಣವನ್ನು ನಡೆಸೋಣ.

**ಕ್ರೋಡೀಕರಿಸಬೇಕಾದುದು**

ಪ್ರವರ್ತಕಗಳು ವರ್ತಿಸಿ ಉತ್ಪನ್ನಗಳಾಗಿ ಬದಲಾಗುವುದು ಆದರೆ ಇದೇ ಸಂದರ್ಭದಲ್ಲಿ ಈ ಉತ್ಪನ್ನಗಳು ಪ್ರವರ್ತಕಗಳಾಗಿ ಬದಲಾಗದಿರುವ ರಾಸಾಯನಿಕ ಕ್ರಿಯೆಗಳನ್ನು ಏಕಮುಖೀ ಕ್ರಿಯೆಗಳು ಎಂದು ಕರೆಯುತ್ತಾರೆ.

ಏಕಮುಖೀ ಕ್ರಿಯೆಗಳಿಗೆ ಹೆಚ್ಚಿನ ಉದಾಹರಣೆ ಕೊಡಬಹುದು. ಪಾಠಪುಸ್ತಕದಲ್ಲಿ ಉದಾಹರಣೆಗಳನ್ನು ಕೊಡಲಾಗಿದೆ.

ಇನ್ನೊಂದು ಪ್ರಯೋಗವನ್ನು ಮಾಡಲಿರುವ ಸಂದರ್ಭವನ್ನು ವಿದ್ಯಾರ್ಥಿಗಳಿಗೆ ಕೊಡುವ.

ಒಂದು ಬೋಯ್ಲಿಂಗ್ ಟ್ಯೂಬಿನಲ್ಲಿ ಸ್ವಲ್ಪ ಅಮೋನಿಯಂ ಕ್ಲೋರೈಡ್ ($NH_4Cl$) ತೆಗೆದುಕೊಂಡು ಬಿಸಿಮಾಡುವ ಪ್ರಯೋಗವನ್ನು ಮಾಡುವುದು.

ನಿರೀಕ್ಷಣೆಯನ್ನು ದಾಖಲಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು.

**ಚರ್ಚಾ ಸೂಚಕಗಳು**

- ಉಂಟಾದ ಅನಿಲಗಳು ಯಾವುದಾಗಿರಲು ಸಾಧ್ಯತೆ ಇದೆ?
- ತೇವವುಳ್ಳ ಕೆಂಪು ಲಿಟ್ಮಸ್ ಪೇಪರನ್ನು ಬೋಯ್ಲಿಂಗ್ ಟ್ಯೂಬಿನ ಬಾಯಿಯ ಭಾಗದಲ್ಲಿ ತೋರಿಸಿರಿ. ಯಾವ ಬದಲಾವಣೆಯನ್ನು ನಿರೀಕ್ಷಣೆ ಮಾಡಿದಿರಿ?
- ಈ ಅನಿಲದ ಸ್ವಭಾವದ ಕುರಿತು ಏನು ತಿಳಿದುಕೊಂಡಿರಿ?

ಉಂಟಾದ ಅನಿಲ ಅಮೋನಿಯಾ ($NH_3$) ಆಗಿದೆ ಎಂದು ಈ ಚರ್ಚಾ ಸೂಚಕಗಳಿಂದ ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳಲು ಸಾಧ್ಯವಾಗುವುದು.

ಈ ಪ್ರಯೋಗ ಮಾಡುವಾಗ ವಿದ್ಯಾರ್ಥಿಗಳು ಇನ್ನೂ ಸ್ವಲ್ಪ ಸಮಯ ಲಿಟ್ಮಸ್ ಪೇಪರನ್ನು ಬೋಯ್ಲಿಂಗ್ ಟ್ಯೂಬಿನ ಬಾಯಿಯ ಭಾಗದಲ್ಲಿ ಹಿಡಿದು ಬಣ್ಣ ಬದಲಾವಣೆಯನ್ನು ವೀಕ್ಷಿಸಲು ವಿದ್ಯಾರ್ಥಿಗಳಿಗೆ ಸೂಚನೆಯನ್ನು ಕೊಡುವುದು. ನಿರೀಕ್ಷಣೆಯನ್ನು ಮಕ್ಕಳೇ ದಾಖಲಿಸಿಕೊಳ್ಳಲಿ.

ಹಿಂದಿನ ತಿಳುವಳಿಕೆಗಳಿಂದ ಲಿಟ್ಮಸ್ ಪೇಪರಿನಲ್ಲಿ ಉಂಟಾದ ಬಣ್ಣದ ಬದಲಾವಣೆಗೆ ಉಂಟಾದ ಅನಿಲದ ಎಸಿಡಿಕ್ ಗುಣ ಕಾರಣ ಎಂದು ಮಕ್ಕಳಿಗೆ ತಿಳಿಯಬಹುದು. ಈ ರಾಸಾಯನಿಕ ಕ್ರಿಯೆಯ ಸಮೀಕರಣ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು.

$$NH_4Cl(s) \rightarrow NH_3(g) + HCl(g)$$

ಅದರ ಬಳಿಕ ಟೆಸ್ಟ್‌ಟ್ಯೂಬಿನ ಬದಿಗಳಲ್ಲಿ ಒಂದು ಬಿಳಿಹುಡಿ ಅಂಟಿಕೊಂಡಿರುವುದನ್ನು ವಿದ್ಯಾರ್ಥಿಗಳು ಗಮನಿಸಿರುವುದೇ ಎಂದು ಕೇಳಬಹುದು.

ಇದು ಹೇಗೆ ಉಂಟಾಯಿತು?

$NH_3$ ಮತ್ತು HCl ಅನಿಲಗಳು ವರ್ತಿಸಿ ಇದು ಉಂಟಾಗುವುದು.

ಇದನ್ನು ಖಚಿತಪಡಿಸಲು ಚಿತ್ರ 3.4 ರಲ್ಲಿ ತೋರಿಸಿರುವ ರೀತಿಯಲ್ಲಿ ಉಪಕರಣಗಳನ್ನು ವ್ಯವಸ್ಥೆಗೊಳಿಸಿ ಪ್ರಯೋಗ ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕು. (ಯೋಗ್ಯವಾದ ಸಹಭಾಗಿತ್ವ ಅಧ್ಯಾಪಕರ ಭಾಗದಿಂದ ಉಂಟಾಗಬೇಕು).

$NH_3$, HCl ನೊಂದಿಗೆ ಸೇರಿ $NH_4Cl$ ಉಂಟಾಗುವ, $NH_4Cl$ ಬಿಸಿಮಾಡುವಾಗ $NH_3$, HCl ಉಂಟಾಗುವ ಕ್ರಿಯೆಗಳನ್ನು ಒಂದೇ ಸಮೀಕರಣದಲ್ಲಿ ಬರೆಯಬಹುದೆಂದು ಅದಕ್ಕಾಗಿ ($\rightleftharpoons$) ಚಿಹ್ನೆ ಬಳಸಬಹುದೆಂದು ತಿಳಿಯುವ ಚರ್ಚೆ ಕ್ಲಾಸಿನಲ್ಲಿ ನಡೆಯಬೇಕು.

ಇಲ್ಲಿ ಪ್ರವರ್ತಕಗಳು ವರ್ತಿಸಿ ಉತ್ಪನ್ನಗಳಾಗಿಯೂ ಉತ್ಪನ್ನಗಳು ವರ್ತಿಸಿ ಪ್ರವರ್ತಕಗಳಾಗಿಯೂ ಬದಲಾಗುವ ಎರಡು ಕ್ರಿಯೆಗಳು ಏಕಕಾಲದಲ್ಲಿ ನಡೆಯುವುದೆಂದು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು.

ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳಲ್ಲಿ ಮುಂದಕ್ಕೆ ಜರಗುವ ಕ್ರಿಯೆಯೂ ಹಿಂದಕ್ಕೆ ಜರಗುವ ಕ್ರಿಯೆಯೂ ನಡೆಯುತ್ತದೆ ಎಂಬ ಕಲ್ಪನೆ ಮಕ್ಕಳಿಗೆ ಸಿಕಬೇಕು. ಹೆಚ್ಚಿನ ಉದಾಹರಣೆಗಳನ್ನು ಕೊಟ್ಟು ಇಕ್ಕಡೆಯಲ್ಲಿ ಜರಗುವ ಕ್ರಿಯೆಯ ಕಲ್ಪನೆಯನ್ನು ಗಟ್ಟಿಮಾಡಬೇಕು.

ಒಂದು ಮುಚ್ಚಿದ ವ್ಯವಸ್ಥೆ (closed system) ಯಲ್ಲಿ ಸಮತೋಲನ ಸ್ಥಿತಿ ಉಂಟಾಗುವುದು.

ಹೆಚ್ಚಿನ ಉದಾಹರಣೆಗಳು :

ಇಕ್ಕೆಡೆಗಳಲ್ಲಿ ಜರಗುವ ಕ್ರಿಯೆಗಳು :

$3Fe(s) + 4H_2O(g) \rightleftharpoons Fe_3O_4(s) + 4H_2(g)$

$N_2O_4(g) \rightleftharpoons 2NO_2(g)$

$PCl_5(g) \rightleftharpoons PCl_3(g) + Cl_2(g)$

$BaCO_3(s) \rightleftharpoons BaO(s) + CO_2(g)$

**ಕ್ರೋಡೀಕರಿಸಬೇಕಾದುದು**

ಎರಡೂ ದಿಶೆಗಳಲ್ಲಿಯೂ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳು(Reversible reactions) ಎಂದು ಕರೆಯುವರು.

ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳಲ್ಲಿ ಪ್ರವರ್ತಕಗಳು ಉತ್ಪನ್ನಗಳಾಗಿ ಬದಲಾಗುವ ಕ್ರಿಯೆಯನ್ನು ಮುಂದಕ್ಕೆ ಜರಗುವ ಕ್ರಿಯೆ (Forward reaction) ಎಂದೂ ಉತ್ಪನ್ನಗಳು ಪ್ರವರ್ತಕಗಳಾಗಿ ಬದಲಾಗುವ ಕ್ರಿಯೆಯನ್ನು ಹಿಂದಕ್ಕೆ ಜರಗುವ ಕ್ರಿಯೆ (Backward reaction) ಎಂದೂ ಕರೆಯುತ್ತಾರೆ.

### ಇಕ್ಕಡೆಯಲ್ಲಿ ಜರಗುವ ಕ್ರಿಯೆಯಲ್ಲಿ ಸಮತೋಲನ ಸ್ಥಿತಿ

ಪ್ರಯೋಗ ಮಾಡಿ ನೋಡುವ ಅವಕಾಶವನ್ನು ಮಕ್ಕಳಿಗೆ ನೀಡಿರಿ.

ಪ್ರಯೋಗ ಸಾಮಾಗ್ರಿಗಳು.

ಪೊಟೇಶಿಯಂ ನೈಟ್ರೇಟ್ ($KNO_3$) ದ್ರಾವಣ, ಪೊಟೇಶಿಯಂ ಥಯೋಸಯನೇಟ್ ದ್ರಾವಣ, ಫೆರಿಕ್ ನೈಟ್ರೇಟ್ ದ್ರಾವಣ ($Fe(NO_3)_3$), ಟೆಸ್ಟ್‌ಟ್ಯೂಬ್‌ಗಳು, ನೀರು,

ಟೆಸ್ಟ್ ಟ್ಯೂಬಿನಲ್ಲಿ ತೆಗೆದುಕೊಂಡಿರುವ ಈ ದ್ರಾವಣಗಳನ್ನು ವೀಕ್ಷಿಸಿ ಪಟ್ಟಿ 3.1ನ್ನು ಪೂರ್ತಿಗೊಳಿಸಲು ಮಕ್ಕಳಿಗೆ ಅವಕಾಶ ನೀಡಿರಿ.

| ದ್ರಾವಣ | ಬಣ್ಣ |
|---|---|
| KCNS | ಬಣ್ಣವಿಲ್ಲ |
| $Fe(NO_3)_3$ | ನಸು ಹಳದಿ ಬಣ್ಣ |
| $KNO_3$ | ಬಣ್ಣವಿಲ್ಲ |

ಸಮತೋಲನ ಸ್ಥಿತಿಯಲ್ಲಿರುವ ವ್ಯವಸ್ಥೆಯಲ್ಲಿ ಪ್ರವರ್ತಕಗಳೂ, ಉತ್ಪನ್ನಗಳೂ ನೆಲೆಗೊಂಡಿರುತ್ತದೆ. ಇದನ್ನು ಕಂಡುಹಿಡಿಯಲು ಸಹಾಯಮಾಡುವ KCNS, $Fe(NO_3)_3$ ಪ್ರಯೋಗವನ್ನು ಯೋಜನೆ ಮಾಡಿ, ನಿರ್ವಹಿಸಿ ನಿರೀಕ್ಷಣ ಫಲಿತಾಂಶಗಳನ್ನು ವಿದ್ಯಾರ್ಥಿಗಳು ದಾಖಲಿಸಲಿ (ಅಧ್ಯಾಪಕರ ಸಹಭಾಗಿತ್ವದಲ್ಲಿ ನಡೆಯಬೇಕು) ಪಾಠಭಾಗದಲ್ಲಿ ಕೊಟ್ಟಿರುವ ಚರ್ಚಾ ಸೂಚಕಗಳನ್ನು ಬಳಸಿಕೊಳ್ಳಬಹುದು.

ರಾಸಾಯನಿಕ ಕ್ರಿಯೆಯ ಸಮೀಕರಣ ಮತ್ತು ಪಟ್ಟಿ 3.1ನ್ನು ಪರಿಶೀಲಿಸಿ ಕಡುಕೆಂಪು ಬಣ್ಣಕ್ಕೆ ಕಾರಣವಾದ ಪದಾರ್ಥ ಯಾವುದೆಂದು ಕೂಡ ದಾಖಲಿಸಲಿ. ಪ್ರಯೋಗದ ಪ್ರತಿಯೊಂದು ಘಟ್ಟದಲ್ಲೂ ಅಗತ್ಯವಾದ ಸೂಚನೆಗಳು, ಪ್ರಯೋಗ ಮಾಡಲು ಅಗತ್ಯವಾದ ನಿರ್ದೇಶನಗಳು, ಪ್ರಯೋಗದ ರೀತಿ, ಚರ್ಚಾಸೂಚಕಗಳು ಮೊದಲಾದವುಗಳನ್ನು ಕಾರ್ಡಿನಲ್ಲಿ ಬರೆದು ಗುಂಪುಗಳಲ್ಲಿ ಕೊಡತಕ್ಕದ್ದು. ಪ್ರಯೋಗದ ನಿರೀಕ್ಷಣೆಯಿಂದ ಎಲ್ಲಾ ಸಮತೋಲನ ವ್ಯವಸ್ಥೆಯಲ್ಲಿಯೂ

ಪ್ರವರ್ತಕಗಳೂ, ಉತ್ಪನ್ನಗಳೂ ನೆಲೆಸಿರುತ್ತವೆ ಎಂಬ ಕಲ್ಪನೆ ವಿದ್ಯಾರ್ಥಿಗಳಿಗೆ ಉಂಟಾಗಬೇಕು.

**ಕ್ರೋಢೀಕರಿಸಬೇಕಾದುದು**

ಒಂದು ರಾಸಾಯನಿಕ ಕ್ರಿಯೆಯಲ್ಲಿ ಮುಂದಕ್ಕೆ ಜರಗುವ ಕ್ರಿಯೆ ಮತ್ತು ಹಿಂದಕ್ಕೆ ಜರಗುವ ಕ್ರಿಯೆಯ ವೇಗಗಳು ಸಮಾನವಾಗುವ ಹಂತವನ್ನು ರಾಸಾಯನಿಕ ಸಮತೋಲನ ಸ್ಥಿತಿ (Chemical equilibrium) ಎಂದು ಕರೆಯುವರು. ಸಮತೋಲನ ಸ್ಥಿತಿ ಗಳಿಸಿದ ವ್ಯವಸ್ಥೆಯಲ್ಲಿ ಪ್ರವರ್ತಕಗಳ ಮತ್ತು ಉತ್ಪನ್ನಗಳ ಪ್ರಬಲತೆಯಲ್ಲಿ ವ್ಯತ್ಯಾಸವಿರುವುದಿಲ್ಲ.

ಇದುವರೆಗೆ ಮಾಡಿದ ಪ್ರಯೋಗ ನಿರೀಕ್ಷಣೆಯಿಂದ ಸಮತೋಲನ ಸ್ಥಿತಿಯ ವಿಶೇಷತೆಗಳು ಮಕ್ಕಳಿಗೆ ತಿಳಿಯಹುದಾಗಿದೆ.

**ಹೆಚ್ಚಿನ ವಿವರಕ್ಕಾಗಿ**

ಭೌತಿಕ ಬದಲಾವಣೆಯಲ್ಲಿಯೂ ಈ ರೀತಿಯ ಸಮತೋಲನ ಸ್ಥಿತಿ ಉಂಟಾಗುತ್ತದೆ . ಇದನ್ನು ಭೌತಿಕ ಸಮತೋಲನ ಸ್ಥಿತಿ (Physical equillibrium) ಎಂದು ಕರೆಯುತ್ತಾರೆ.

ಪದಾರ್ಥಗಳ ವಿವಿಧ ಸ್ಥಿತಿ ಬದಲಾವಣೆಯಲ್ಲಿ ಉಂಟಾಗುವ ಸಮತೋಲನ ಸ್ಥಿತಿಯೇ ಭೌತಿಕ ಸಮತೋಲನ ಸ್ಥಿತಿಯಾಗಿದೆ. ಉದಾ: ಘನ $\rightleftharpoons$ ದ್ರವ, ದ್ರವ $\rightleftharpoons$ ಅನಿಲ, ಘನ $\rightleftharpoons$ ಅನಿಲ.

| ಬದಲಾವಣೆ | ಸಂದರ್ಭ |
|---|---|
| ಘನ $\rightleftharpoons$ ದ್ರವ | ದ್ರವೀಕರಣ ದರ = ಘನೀಕರಣ ದರ |
| ದ್ರವ $\rightleftharpoons$ ಅನಿಲ | ಬಾಷ್ಪೀಕರಣ ದರ = ಬಾಷ್ಪವು ಕರಗಿ ದ್ರವವಾಗುವ ದರ |
| ಘನ $\rightleftharpoons$ ಅನಿಲ | ಉತ್ಪಾದನೆಯ ದರ = ಬಾಷ್ಪ ಕರಗಿದ ದರ |

ಇಕ್ಕಡೆಯಲ್ಲಿ ಜರಗುವ ಕ್ರಿಯೆಯ ಗ್ರಾಫ್ (ಚಿತ್ರ 3.5) ವಿಶ್ಲೇಷಿಸಿ ಚರ್ಚಾ ಸೂಚಕಗಳಿಗೆ ಉತ್ತರ ಬರೆಯುವ ಅವಕಾಶ ಮಕ್ಕಳಿಗೆ ಕೊಡಬೇಕು.

KCNS, $Fe(NO_3)_3$ ಗಳನ್ನು ಬಳಸಿ ನಡೆಸಿದ ರಾಸಾಯನಿಕ ಕ್ರಿಯೆಯಲ್ಲಿ ಸಮತೋಲನ ಸ್ಥಿತಿಗೆ ಬದಲಾವಣೆ ಬಂದ ಸಂದರ್ಭಗಳನ್ನು ಪಟ್ಟಿ ಮಾಡಲು ಅವಕಾಶ ವಿದ್ಯಾರ್ಥಿಗಳಿಗೆ ನೀಡಬೇಕು.

ಮೇಲೆ ಸೂಚಿಸಿದ ಬದಲಾವಣೆಗಳು ಸಮತೋಲನ ಸ್ಥಿತಿಯು ಹೇಗೆ ಉಂಟಾಗುವುದು ಎಂದು ನೋಡೋಣ.

ಬೇರೆ ಯಾವುದಾದರೂ ಘಟಕಗಳು ಸಮತೋಲನ ಸ್ಥಿತಿಯ ಮೇಲೆ ಪ್ರಭಾವ ಬೀರುವುದೋ ಎಂದು ಪ್ರಶ್ನೆ ಎತ್ತಬಹುದು.

ಸಮತೋಲನ ಸ್ಥಿತಿಯ ಮೇಲೆ ಪ್ರಬಲತೆಯ ವ್ಯತ್ಯಾಸ ಸೂಚಿಸಿದ KCNS, $Fe(NO_3)_3$ ಪ್ರಯೋಗದಲ್ಲಿ ಇದೇ ರೀತಿಯಲ್ಲಿ ಒತ್ತಡ, ಉಷ್ಣತೆಯ ವ್ಯತ್ಯಾಸವೂ ಸಮತೋಲನ ಸ್ಥಿತಿಯನ್ನು ಬಾಧಿಸುವ ಘಟಕಗಳೆಂದೂ ಈ ಬದಲಾವಣೆಯ ಪರಿಣಾಮಗಳನ್ನು ವಿವರಿಸಿದುದು ಲೀ ಶೆಟಲಿಯರ್ ಎಂಬ ವಿಜ್ಞಾನಿ ಎಂದೂ ಈ ತತ್ವವು ಲೀ ಶೆಟಲಿಯರ್‌ನ ತತ್ವ ಎಂದು ಕರೆಯಲ್ಪಡುವುದು ಎಂದೂ ಚರ್ಚೆಯಿಂದ ಮಕ್ಕಳಿಗೆ ಮನದಟ್ಟಾಗಬೇಕು.

## ಸಮತೋಲನ ವ್ಯವಸ್ಥೆಯ ಮೇಲೆ ಪ್ರಬಲತೆಯ ಪ್ರಭಾವ

ಅಮೋನಿಯಾದ ಕೈಗಾರಿಕಾ ಪ್ರಮಾಣದ ತಯಾರಿಯಲ್ಲಿ ಲೀ ಶೆಟಲಿಯರ್‌ನ ತತ್ವದ ಪ್ರಯೋಜನವನ್ನು ಹೇಗೆ ಪಡೆದುಕೊಳ್ಳುವರು ಎಂದು ಪರಿಶೀಲಿಸಬೇಕಾಗಿದೆ.

ಅಮೋನಿಯಾ ತಯಾರಿಯ ರಾಸಾಯನಿಕ ಸಮೀಕರಣ ಮತ್ತು ಚರ್ಚೆ ಸೂಚಕಗಳನ್ನು ಬರೆದ ಕಾರ್ಡ್‌ಗಳನ್ನು ವಿವಿಧ ಗುಂಪುಗಳಿಗೆ ಕೊಡಬೇಕು.

**ಹೆಚ್ಚಿನ ವಿವರಕ್ಕಾಗಿ**

Equilibrium Constant

1864 ರಲ್ಲಿ Canto Maximilian Guldberg, Peter Waage ಎಂಬ ನಾರ್ವೆಯ ವಿಜ್ಞಾನಿಗಳು Law of Mass Action ಮುಂದಿರಿಸಿದರು. ಇದರ ಪ್ರಕಾರ $aA + bB \rightleftharpoons cC + dD$ ಎಂಬ ರಾಸಾಯನಿಕ ಕ್ರಿಯೆಯಲ್ಲಿ,

$$K_C = \frac{[C]^c\ [D]^d}{[A]^a\ [B]^b}$$

ಇಲ್ಲಿ $K_C$ ಎಂಬುದು Equilibrium Constant ಆಗಿದೆ.

[ ] ಮೋಲಾರ್ ಪ್ರಬಲತೆಯನ್ನು ಸೂಚಿಸುತ್ತದೆ.

$K_C$ ಯ ಬೆಲೆ ದೊಡ್ಡದಾದಂತೆ ಸಮತೋಲನಗೊಂಡ ಮಿಶ್ರಣದಲ್ಲಿ ಉತ್ಪನ್ನದ ಅಳತೆ ಹೆಚ್ಚಾಗುವುದು.

**ರಾಸಾಯನಿಕ ಕ್ರಿಯೆ**

$$N_2(g) + 3H_2(g) \rightleftharpoons 2\,NH_3(g)$$

**ಚರ್ಚಾ ಸೂಚಕಗಳು**

- ನೈಟ್ರೋಜನ್‌ನ ಪ್ರಬಲತೆ ಹೆಚ್ಚಾದಾಗ ಯಾವ ಕ್ರಿಯೆಯು ವೇಗವಾಗಿ ನಡೆಯುವುದು?
- ಅಮೋನಿಯಾದ ಪ್ರಬಲತೆ ಹೆಚ್ಚಾದರೆ?
- ಉತ್ಪಾದಿಸಲ್ಪಡುವ ಅಮೋನಿಯಾವನ್ನು ನಿರಂತರವಾಗಿ ವ್ಯವಸ್ಥೆಯಿಂದ ಹೊರ ತೆಗೆದರೆ ಏನಾಗಬಹುದು?

**ಕ್ರೋಡೀಕರಿಸಬೇಕಾದುದು**

ಅಮೋನಿಯಾದ ತಯಾರಿಯಲ್ಲಿ ಪ್ರವರ್ತಕಗಳ ಪರಿಮಾಣ ಹೆಚ್ಚಾದಾಗ ಹೆಚ್ಚು ಅಮೋನಿಯಾ ಉಂಟಾಗುವುದು ಮತ್ತು ಉತ್ಪನ್ನಗಳ ಪರಿಮಾಣ ಹೆಚ್ಚಾದಾಗ ಹಿಂದಕ್ಕೆ ಜರಗುವ ಕ್ರಿಯೆಯ ವೇಗವಾಗಿ ನಡೆಯುವುದೆಂದು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಉಂಟಾಗುವ ಅಮೋನಿಯವನ್ನು ನಿರಂತರವಾಗಿ ವ್ಯವಸ್ಥೆಯಿಂದ ಹೊರತೆಗೆದರೆ ಲೀ ಶಟಲಿಯರ್‌ನ ತತ್ವದ ಪ್ರಕಾರ ಮುಂದಕ್ಕೆ ಜರಗುವ ಕ್ರಿಯೆಯು ವೇಗವಾಗಿ ಜರಗಿ $NH_3$ ಹೆಚ್ಚು ಉಂಟಾಗುವುದು ಎಂದು ಮನದಟ್ಟಾಗುವ ರೀತಿಯಲ್ಲಿ ಚರ್ಚೆಗಳು ನಡೆಯಬೇಕು.

ಪಟ್ಟಿ 3.3 ಪೂರ್ತಿಗೊಳಿಸಲಿರುವ ಅವಕಾಶ ವಿದ್ಯಾರ್ಥಿಗಳಿಗೆ ನೀಡಬೇಕು.

**ರಾಸಾಯನಿಕ ಸಮತೋಲನವೂ ಒತ್ತಡವೂ**

ಒತ್ತಡದ ಪ್ರಭಾವ ಅನಿಲಗಳ ಮೇಲೆ ಎಂಬ ಕಲ್ಪನೆ ವಿದ್ಯಾರ್ಥಿಗಳಿಗೆ ಇದೆ.

ಅಮೋನಿಯಾದ ಕೈಗಾರಿಕಾ ತಯಾರಿಯ ರಾಸಾಯನಿಕ ಸಮೀಕರಣವೂ. ಚರ್ಚಾ ಸೂಚಕಗಳೂ ಬರೆದ ಕಾರ್ಡುಗಳನ್ನು ಗುಂಪುಗಳಿಗೆ ನೀಡಿರಿ.

$$N_2(g) + 3H_2(g) \rightleftharpoons 2\,NH_3(g)$$

**ಚರ್ಚಾ ಸೂಚಕಗಳು**

- ಈ ರಾಸಾಯನಿಕ ಸಮೀಕರಣದಲ್ಲಿ ಒಟ್ಟು ಎಷ್ಟು ಮೋಲ್ ಪ್ರವರ್ತಕಗಳ ಅಣುಗಳಿವೆ?
- ಎಷ್ಟು ಮೋಲ್ ಉತ್ಪನ್ನ ಲಭಿಸುತ್ತದೆ?
- ಮುಂದಕ್ಕೆ ಜರಗುವ ಕ್ರಿಯೆ : 4 ಮೋಲ್ ಪ್ರವರ್ತಕಗಳ ಅಣುಗಳು 2 ಮೋಲ್ ಉತ್ಪನ್ನದ ಅಣುಗಳು (ಗಾತ್ರ ಕಡಿಮೆಯಾಗುವುದು)
- ಹಿಂದಕ್ಕೆ ಜರಗುವ ಕ್ರಿಯೆ : 2 ಮೋಲ್ ಉತ್ಪನ್ನದ ಅಣುಗಳು $\rightarrow$ 4 ಮೋಲ್ ಪ್ರವರ್ತಕಗಳ ಅಣುಗಳು (ಗಾತ್ರ ಕಡಿಮೆಯಾಗುವುದು)
- ಅಮೋನಿಯಾ ತಯಾರಿಯಲ್ಲಿ ಯಾವ ದಿಶೆಯಲ್ಲಿ ಕ್ರಿಯೆ ಜರಗುವಾಗ ಅಣುಗಳ ಸಂಖ್ಯೆ ಕಡಿಮೆಯಾಗುವುದು? (ಮುಂದಕ್ಕೆ ಜರಗುವ ಕ್ರಿಯೆ)
- ವ್ಯವಸ್ಥೆಯ ಒತ್ತಡ ಹೆಚ್ಚಾದರೆ ಏನು ಸಂಭವಿಸಬಹುದು?
- ವ್ಯವಸ್ಥೆಯ ಒತ್ತಡ ಕಡಿಮೆಯಾದರೆ?

**ಕ್ರೋಡೀಕರಿಸಬೇಕಾದುದು**

- ತೆಗೆದುಕೊಂಡ ಪಾತ್ರೆಯಲ್ಲಿ ನಿಶ್ಚಿತ ಉಷ್ಣತೆಯಲ್ಲಿ ಅನಿಲದ ಒತ್ತಡ ಕಡಿಮೆಯಾಗುವುದು ಅಣುಗಳ ಸಂಖ್ಯೆ (ಗಾತ್ರ) ಕಡಿಮೆಯಾಗುವಾಗ ಆಗಿದೆ.
- ಒತ್ತಡ ಕಡಿಮೆ ಮಾಡಲು ಅಣುಗಳ ಸಂಖ್ಯೆ ಕಡಿಮೆಮಾಡಬೇಕು. $NH_3$ ತಯಾರಿಯಲ್ಲಿ ಮುಂದಕ್ಕೆ ಜರಗುವ ಕ್ರಿಯೆ ಜರಗುವಾಗ ಅಣುಗಳ ಸಂಖ್ಯೆ ಕಡಿಮೆಯಾಗುವುದು. ಆದ್ದರಿಂದ 4 ಮೋಲ್ ಪ್ರವರ್ತಕಗಳ ಅಣುಗಳು ವರ್ತಿಸಿ 2 ಮೋಲ್ ಉತ್ಪನ್ನದ ಅಣುಗಳು ಉಂಟಾಗುವ ಕ್ರಿಯೆ ಒತ್ತಡ ಹೆಚ್ಚಾಗುವಾಗ ವೇಗವಾಗಿ ನಡೆಯುತ್ತದೆ. ಒತ್ತಡ ಕಡಿಮೆಯಾದರೆ ಲೀ ಶಟಲಿಯರ್ ತತ್ವವನ್ನು ಅನುಸರಿಸಿ ಒತ್ತಡ ಹೆಚ್ಚಾಗಲು, (ಅಣುಗಳ ಸಂಖ್ಯೆ ಹೆಚ್ಚಾಗಲು) ಕಾರಣವಾಗುವ ಹಿಂದಕ್ಕೆ ಜರಗುವ ಕ್ರಿಯೆ ವೇಗವಾಗಿ ನಡೆಯುವುದು. ಆದಕಾರಣ ಅಮೋನಿಯಾ ತಯಾರಿಯಲ್ಲಿ (ಹೇಬರ್ ಪ್ರಕ್ರಿಯೆಯಲ್ಲಿ) ಒತ್ತಡ 200 – 900 atm ವರೆಗೆ ಅಳವಡಿಸುತ್ತಾರೆ.

ಇನ್ನೊಂದು ಅನಿಲ ರಾಸಾಯನಿಕ ಕ್ರಿಯೆಯ ರಾಸಾಯನಿಕ ಸಮೀಕರಣ, ಚರ್ಚಾ ಸೂಚಕಗಳನ್ನು ವಿದ್ಯಾರ್ಥಿಗಳಿಗೆ ನೀಡಬಹುದು.

$$H_2(g) + I_2(g) \rightleftharpoons 2\,HI(g)$$

**ಚರ್ಚಾ ಸೂಚಕಗಳು**

- ಈ ಕ್ರಿಯೆಯಲ್ಲಿ ಒಟ್ಟು ಎಷ್ಟು ಮೋಲ್ ಪ್ರವರ್ತಕಗಳಿವೆ?
- ಎಷ್ಟು ಮೋಲ್ ಉತ್ಪನ್ನವಿದೆ?

**ಕ್ರೋಡೀಕರಿಸಬೇಕಾದುದು**

ಮುಂದಕ್ಕೆ, ಹಿಂದಕ್ಕೆ ಜರಗುವ ಕ್ರಿಯೆಯ ಫಲವಾಗಿ ಪ್ರವರ್ತಕ, ಉತ್ಪನ್ನಗಳ ಅಣುಗಳ ಸಂಖ್ಯೆಯಲ್ಲಿ ವ್ಯತ್ಯಾಸವಿಲ್ಲದಿದ್ದಲ್ಲಿ ಅಂತಹ ಅನಿಲ ರಾಸಾಯನಿಕ ಕ್ರಿಯೆಯಲ್ಲಿ ಒತ್ತಡಕ್ಕೆ ಸಮತೋಲನ ಸ್ಥಿತಿಯಲ್ಲಿ ಯಾವುದೇ ಪ್ರಭಾವ ಉಂಟುಮಾಡಲು ಸಾಧ್ಯವಿಲ್ಲ.

**ರಾಸಾಯನಿಕ ಸಮತೋಲನವೂ ಉಷ್ಣತೆಯೂ**

ರಾಸಾಯನಿಕ ಕ್ರಿಯೆ ಜರಗುವಾಗ ಚೈತನ್ಯದಲ್ಲಿ ಬದಲಾವಣೆ ಉಂಟಾಗುವುದೆಂದು ಕಲಿತಿರುವರು. ಉಷ್ಣ ಹೀರುವ

ಕ್ರಿಯೆ ಮತ್ತು ಉಷ್ಣ ವಿಸರ್ಜಕ ಕ್ರಿಯೆಗಳ ಕುರಿತು ಹಿಂದಿನ ತರಗತಿಗಳಲ್ಲಿ ಕಲಿತಿರುವರು.

ಇಕ್ಕಡೆಯಲ್ಲಿ ಜರಗುವ ಕ್ರಿಯೆಯಲ್ಲಿ ಮುಂದಕ್ಕೆ ಜರಗುವ ಕ್ರಿಯೆ ಉಷ್ಣ ಹೀರುವ ಕ್ರಿಯೆಯಾಗಿದ್ದರೆ ಹಿಂದಕ್ಕೆ ಜರಗುವ ಕ್ರಿಯೆ ಉಷ್ಣವಿಸರ್ಜಕ ಕ್ರಿಯೆಯಾಗಿರುವುದು. ಮುಂದಕ್ಕೆ ಜರಗುವ ಕ್ರಿಯೆ ಉಷ್ಣ ವಿಸರ್ಜಕವಾಗಿದ್ದಲ್ಲಿ ಹಿಂದಕ್ಕೆ ಜರಗುವ ಕ್ರಿಯೆ ಉಷ್ಣ ಹೀರುವುದಾಗಿರುವುದು.

ಒಂದು ಪ್ರಯೋಗದಿಂದ ವಿದ್ಯಾರ್ಥಿಗಳಿಗೆ  ಇದನ್ನು ಮನದಟ್ಟು ಮಾಡುವ ಪ್ರಯೋಗ ಮಾಡುವ ಅವಕಾಶ ಒದಗಿಸಿ ಕೊಡೋಣ.

ಸಾಮಾಗ್ರಿಗಳು:

ಟೆಸ್ಟ್‌ಟ್ಯೂಬ್, ಪ್ರಬಲ $HNO_3$ , ತಾಮ್ರದ ತುಂಡುಗಳು/ ನ್ಯೂಸ್ ಪೇಪರ್ ಬಾಲ್, ಕೋರ್ಕ್, ಐಸ್, ಎರಡು ಬೀಕರುಗಳು.

ಪ್ರಯೋಗ ವಿಧಾನ ಬರೆಯಲು ಅವಕಾಶ ನೀಡಿರಿ. ನಿರೀಕ್ಷಣೆಯನ್ನು ಮಕ್ಕಳು ಬರೆದುಕೊಳ್ಳಲಿ. ಟೆಸ್ಟ್‌ಟ್ಯೂಬಿನಲ್ಲಿರುವ ಅನಿಲದ ಬಣ್ಣ ಬದಲಾವಣೆಯನ್ನು ಪ್ರತ್ಯೇಕವಾಗಿ ವಿದ್ಯಾರ್ಥಿಗಳು ಗಮನಿಸಬೇಕು.

**ಕ್ರೋಡೀಕರಿಸಬೇಕಾದುದು**

ಲೀ ಶಟಲಿಯರ್‌ನ ತತ್ವ ಬಳಸಿ ಈ ಕ್ರಿಯೆಯನ್ನು ವಿಶ್ಲೇಷಿಸಬಹುದು. ಕಂದು ಬಣ್ಣದಲ್ಲಿರುವ ಅನಿಲ $NO_2$ ಆಗಿದೆ. ಐಸ್ ತುಂಬಿಸಿದ ಪಾತ್ರೆಯಲ್ಲಿ ಟೆಸ್ಟ್‌ಟ್ಯೂಬ್  ಇರಿಸಿ ಉಷ್ಣತೆ  ಕಡಿಮೆಯಾಗುವಾಗ ಉಷ್ಣ ವಿಸರ್ಜಕ ಕ್ರಿಯೆ ಜರಗಿ $NO_2$ ಅನಿಲ ಬಣ್ಣವಿಲ್ಲದ ಡೈ ನೈಟ್ರೋಜನ್ ಟೆಟ್ರೋಕ್ಸೈಡ್ ($N_2O_4$) ಆಗಿ ಬದಲಾಗುವುದು. ಬಿಸಿಮಾಡುವಾಗ ಬೇಗನೆ ಉಷ್ಣಹೀರುವ ಕ್ರಿಯೆ ಜರಗಿ ಹೆಚ್ಚು $NO_2$ ಅನಿಲ ಉಂಟಾಗುವುದರಿಂದ ಕಂದು ಕೆಂಬಣ್ಣವು ಹೆಚ್ಚುವುದು.

ರಾಸಾಯನಿಕ ಸಮತೋಲನದಲ್ಲಿ ಉಷ್ಣತೆಯ ಪ್ರಭಾವದ ಕುರಿತು ಕಲ್ಪನೆ ಉಂಟಾಗಲು ಇನ್ನೊಂದು ಪ್ರಯೋಗವನ್ನು ಬಳಸಿಕೊಳ್ಳೋಣ.

ಅಮೋನಿಯಾ ತಯಾರಿಯ ರಾಸಾಯನಿಕ ಸಮೀಕರಣ ನೀಡಿ, ಉಷ್ಣ ಹೀರುವ ಉಷ್ಣ ಬಿಡುಗಡೆಗೊಳಿಸುವ ಕ್ರಿಯೆಗಳನ್ನು ವಿದ್ಯಾರ್ಥಿಗಳು ಗುರುತಿಸಲಿ. ಲೀ ಶಟಲಿಯರ್‌ನ ತತ್ವದ ಪ್ರಕಾರ ಉಷ್ಣತೆ ಹೆಚ್ಚಾಗುವಾಗ ಮತ್ತು ಕಡಿಮೆಯಾಗುವಾಗ ಉಂಟಾಗುವ ಬದಲಾವಣೆಯನ್ನು ಚರ್ಚೆಯಿಂದ ತಿಳಿದುಕೊಳ್ಳಲಿ. $NH_3$ ತಯಾರಿಸುವಾಗ $450^0$ C ನ್ನು ಅನುಕೂಲ ಉಷ್ಣತೆಯಾಗಿ  (Optimum temperature) ಸ್ವೀಕರಿಸಲಾಗುವುದು ಎಂಬುದನ್ನು ತಿಳಿದುಕೊಳ್ಳಬೇಕು.

**ಕ್ರೋಡೀಕರಿಸಬೇಕಾದುದು**

ಹೆಚ್ಚು ಅಮೋನಿಯಾ ಉತ್ಪಾದಿಸಲು ಲೀ ಶಟಲಿಯರ್‌ನ ತತ್ವ ಪ್ರಕಾರ ಉಷ್ಣತೆಯನ್ನು ಕಡಿಮೆಮಾಡಬೇಕು. ಆದರೆ ಕೆಳಗಿನ ಉಷ್ಣತೆಯಲ್ಲಿ ಮುಂದಕ್ಕೆ – ಹಿಂದಕ್ಕೆ ಜರಗುವ ಕ್ರಿಯೆಗಳ ದರ ಬಹಳ ಕಡಿಮೆಯಾಗುವುದರಿಂದ ಮಿಶ್ರಣವು ಸಮತೋಲನ ಸ್ಥಿತಿಯನ್ನು ತಲುಪಲು ಹೆಚ್ಚು ಸಮಯ ಬೇಕಾಗುವುದು. ಹಾಗಾಗಿ ಕೈಗಾರಿಕಾ ಮಟ್ಟದಲ್ಲಿ $NH_3$ವನ್ನು ತಯಾರಿಸುವಾಗ $450^0$C ನ್ನು ಅನುಕೂಲ ಉಷ್ಣತೆಯಾಗಿ  (Optimum temperature) ಸ್ವೀಕರಿಸಲಾಗಿದೆ.

**ರಾಸಾಯನಿಕ ಸಮತೋಲನವೂ ಪ್ರೇರಕವೂ**

ಧನ ಪ್ರೇರಕಗಳು ಎಂದರೇನೆಂದು ಮಕ್ಕಳು ಕಲಿತಿರುವರು. ಪೊಸಿಟಿವ್ ಪ್ರೇರಕಗಳು, ನೆಗೆಟಿವ್ ಪ್ರೇರಕಗಳ ಬಗ್ಗೆ

ಕಲ್ಪನೆ ವಿದ್ಯಾರ್ಥಿಗಳಿಗಿದೆ. ಇಕ್ಕಡೆಯಲ್ಲಿ ಜರಗುವ ಕ್ರಿಯೆಯಲ್ಲಿ ಪ್ರೇರಕದ ಪಾತ್ರ ಏನಾಗಿರಬಹುದೆಂದು ಪ್ರಶ್ನೆ ಎತ್ತಬಹುದು.

ಪ್ರೇರಕದ ಪ್ರಭಾವವು ಮುಂದಕ್ಕೆ ಜರಗುವ ಕ್ರಿಯೆಯನ್ನು ಹಿಂದಕ್ಕೆ ಜರಗುವ ಕ್ರಿಯೆಯನ್ನು ಒಂದೇ ರೀತಿಯಲ್ಲಿ ಬಾಧಿಸುವುದು. ಮುಂದಕ್ಕೆ, ಹಿಂದಕ್ಕೆ ಜರಗುವ ಕ್ರಿಯೆಗಳ ವೇಗವನ್ನು ಹೆಚ್ಚಿಸಿ ಬೇಗನೆ ಸಮತೋಲನ ಸ್ಥಿತಿಯನ್ನು ಗಳಿಸುವುದು.

**ಹೆಚ್ಚಿನ ವಿವರಕ್ಕಾಗಿ**







ಹೆಚ್ಚಿನ ವಿವರಕ್ಕೆ ಕೊಟ್ಟ ವಿವರಗಳನ್ನು ರೆಫರೆನ್ಸ್ ಮೆಟೀರಿಯಲ್ ಆಗಿ ನೀಡಿ ಚರ್ಚೆ ಮಾಡುವುದು.

ಸಮತೋಲನ ಸ್ಥಿತಿಯ ಮೇಲೆ ವಿವಿಧ ಘಟಕಗಳ ಪ್ರಭಾವವನ್ನು ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳಲು ಸಾಧ್ಯವಿದೆ.

ಸಲ್ಫ್ಯೂರಿಕ್ ಏಸಿಡಿನ ತಯಾರಿಯ ಹಂತದಲ್ಲಿ (ಸಂಪರ್ಕ ಪ್ರಕ್ರಿಯೆ ಮೂಲಕ) ಲೀ ಶೆಟಲಿಯರ್‌ನ ತತ್ವದ ಪ್ರಯೋಜನವನ್ನು ಪಡೆದುಕೊಳ್ಳುವುದನ್ನು ತಿಳಿದುಕೊಳ್ಳಲು ಟೆಕ್ಸ್ಟ್ ಬುಕ್ಕಿನಲ್ಲಿ ಕೊಟ್ಟಿರುವ ಉದಾಹರಣೆಗಳನ್ನು ವಿದ್ಯಾರ್ಥಿಗಳು ಮಾಡಲು ಅವಕಾಶ ಕೊಡಬೇಕು.

**ಕ್ರೋಡೀಕರಿಸಬೇಕಾದುದು**

ಇಕ್ಕಡೆಯಲ್ಲಿ ಜರಗುವ ಕ್ರಿಯೆಯಲ್ಲಿ ಪ್ರೇರಕಗಳು ಮುಂದಕ್ಕೆ – ಹಿಂದಕ್ಕೆ ಜರಗುವ ಕ್ರಿಯೆಗಳ ವೇಗವನ್ನು ಒಂದೇ ದರದಲ್ಲಿ ವರ್ಧಿಸುವುದರಿಂದ ವ್ಯವಸ್ಥೆಯು ಶೀಘ್ರದಲ್ಲಿ ಸಮತೋಲನ ಸ್ಥಿತಿಯನ್ನು ಗಳಿಸುವುದು.

ಪೇಜ್ 67 ರ ಕ್ರಿಯೆ

$$2\,SO_2(g) + O_2(g) \rightarrow 2\,SO_3(g) + \text{ಉಷ್ಣ}$$

- ಓಕ್ಸಿಜನಿನ ಪ್ರಮಾಣವನ್ನು ಹೆಚ್ಚಿಸುವರು.

ಪ್ರವರ್ತಕವಾದ ಓಕ್ಸಿಜನ್‌ನ ಪ್ರಬಲತೆಯನ್ನು ವರ್ಧಿಸುವುದು ಲೀ ಶೆಟಲಿಯರ್‌ನ ತತ್ವದ ಪ್ರಕಾರ ಮುಂದಕ್ಕೆ ಜರಗುವ ಕ್ರಿಯೆಯನ್ನು ವೇಗಗೊಳಿಸುತ್ತದೆ. $SO_2$ ನ ಪ್ರಮಾಣವನ್ನು ಹೆಚ್ಚಿಸಿದಾಗ ಖರ್ಚು ಹೆಚ್ಚಾಗುವುದು.

- ಒತ್ತಡವನ್ನು ಹೆಚ್ಚಿಸುವರು.

$$2\,SO_2(g) + O_2(g) \rightarrow 2\,SO_3(g) + \text{ಉಷ್ಣ}$$

$$2\text{ ಮೊಲ್ } SO_2 + 1\text{ಮೊಲ್}O_2 \rightarrow 2\text{ ಮೊಲ್ } SO_3$$

3ಮೋಲ್ → 2 ಮೋಲ್

ಪ್ರವರ್ತಕಗಳ ಅಣುಗಳು ಉತ್ಪನ್ನದ ಅಣುಗಳು

ಲೀ ಶಟಲಿಯರನ ತತ್ವದ ಪ್ರಕಾರ ಒತ್ತಡ ಹೆಚ್ಚುವಾಗ ಒತ್ತಡವನ್ನು ಕಡಿಮೆ ಮಾಡಲು ವ್ಯವಸ್ಥೆಯು ಪ್ರಯತ್ನಿಸುವುದು. ಅಣುಗಳ ಸಂಖ್ಯೆ ಕಡಿಮೆಯಾಗುವುದು ಒತ್ತಡ ಕಡಿಮೆಯಾಗಲು ಸಹಾಯ ಮಾಡುವುದು. ಆದ್ದರಿಂದ ಮುಂದಕ್ಕೆ ಜರಗುವ ಕ್ರಿಯೆ ವೇಗವಾಗಿ ನಡೆಯುವುದು.

(ಈ ಕ್ರಿಯೆಯಲ್ಲಿ ಉಂಟಾಗುವ ಉತ್ಪನ್ನ $SO_3$ ಕ್ರಿಯಾಶೀಲತೆ ತುಂಬಾ ಹೆಚ್ಚು ಇರುವ ಒಂದು ಪದಾರ್ಥವಾಗಿದೆ. ಒತ್ತಡ ಹೆಚ್ಚಾದರೆ ಇದು ತೀವ್ರವಾಗಿ ವರ್ತಿಸಿ ಸಂಪರ್ಕ ಚೆಂಬರಿಗೆ ನಾಶ ಉಂಟುಮಾಡುತ್ತದೆ. ಆದುದರಿಂದ $SO_3$ ನ ತಯಾರಿಯ ವೇಳೆಯಲ್ಲಿ 1 atm ಅಥವಾ 2 atm ಒತ್ತಡವನ್ನು ಅನುಕೂಲ ಒತ್ತಡವಾಗಿ ಉಪಯೋಗಿಸುತ್ತಾರೆ.)

- ಅನುಕೂಲ ಉಷ್ಣತೆಯನ್ನು ಅಳವಡಿಸುವರು.

  ಸಮತೋಲನ ಸ್ಥಿತಿ ಸುಲಭದಲ್ಲಿ ಗಳಿಸುವುದು.

- ಪ್ರೇರಕ ($V_2O_5$) ಸೇರಿಸುವರು.

  ಮುಂದಕ್ಕೆ – ಹಿಂದಕ್ಕೆ ಜರಗುವ ಕ್ರಿಯೆಗಳ ವೇಗವನ್ನೋ ಒಂದೇ ದರದಲ್ಲಿ ಹೆಚ್ಚಿಸುತ್ತಿದೆ. ಉತ್ಪನ್ನ ಶೀಘ್ರವಾಗಿ ದೊರೆಯುತ್ತದೆ.

- $SO_3$ ನ್ನು ಬೇರ್ಪಡಿಸುವುದು.

  ಉತ್ಪನ್ನ $SO_3$ ಯ ಪ್ರಬಲತೆ ಕಡಿಮೆಯಾಗುತ್ತದೆ. ಲೀ ಶೆಟಲಿಯರ್ ತತ್ವದ ಪ್ರಕಾರ ಮುಂದಕ್ಕೆ ಜರಗುವ ಕ್ರಿಯೆಯ ವೇಗವನ್ನು ಹೆಚ್ಚಿಸುತ್ತದೆ.

**ಮೌಲ್ಯಮಾಪನ ಮಾಡೋಣ**

1. a. (i) $H_2(g) + I_2(g) \rightleftharpoons 2\,HI(g)$

   ಪ್ರವರ್ತಕ ಮತ್ತು ಉತ್ಪನ್ನದ ಅನಿಲದ ಅಣುಗಳ ಸಂಖ್ಯೆಯಲ್ಲಿ ವ್ಯತ್ಯಾಸವಿಲ್ಲದ ಕಾರಣ ಒತ್ತಡ ಯಾವುದೇ ಪ್ರಭಾವ ಬೀರುವುದಿಲ್ಲ.

   b. $N_2(g) + 3H_2(g) \rightleftharpoons 2\,NH_3(g)$

   1 ಮೋಲ್ ($N_2$) + 3 ಮೋಲ್ ($H_2$) → 2 ಮೋಲ್ ($NH_3$)

   4 ಮೋಲ್ → 2 ಮೋಲ್

   ಉನ್ನತ ಒತ್ತಡ ಪ್ರಯೋಗಿಸಿದರೆ ಲೀ ಶೆಟಲಿಯರನ ತತ್ವದ ಪ್ರಕಾರ ವ್ಯವಸ್ಥೆಯು ಒತ್ತಡ ಕಡಿಮೆ ಮಾಡಲು ಪ್ರಯತ್ನಿಸುವುದು. ಒತ್ತಡ ಕಡಿಮೆಯಾಗಬೇಕಾದರೆ ಅನಿಲ ಅಣುಗಳ ಸಂಖ್ಯೆ ಕಡಿಮೆಯಾಗಬೇಕು. ಆದ್ದರಿಂದ ಮುಂದಕ್ಕೆ ಜರಗುವ ಕ್ರಿಯೆ ವೇಗವಾಗಿ ನಡೆಯುವುದು. ಹೆಚ್ಚು ಹೆಚ್ಚು $NH_3$ ಲಭಿಸುವುದು.

   $C(s) + H_2O(g) \rightarrow CO(g) + H_2(g)$

   1 ಮೋಲ್ 1 ಮೋಲ್ 1 ಮೋಲ್

2. a. ಪ್ರವರ್ತಕಗಳು

   C, $H_2O$

   ಉತ್ಪನ್ನಗಳು

$CO$, $H_2$

b. ವ್ಯವಸ್ಥೆಯಿಂದ ಆಗಾಗ ಉತ್ಪನ್ನಗಳನ್ನು ಹೊರ ತೆಗೆದರೆ ಪ್ರಬಲತೆ ಕಡಿಮೆಯಾಗುತ್ತದೆ. ಲೀ ಶೆಟಲಿಯರ್ ತತ್ವದ ಪ್ರಕಾರ ವ್ಯವಸ್ಥೆಯ ಪ್ರಬಲತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತದೆ. ಅದರ ಫಲವಾಗಿ ಮುಂದಕ್ಕೆ ಜರಗುವ ಕ್ರಿಯೆ ವೇಗದಲ್ಲಿ ನಡೆದು ಉತ್ಪನ್ನಗಳು ಹೆಚ್ಚು ಲಭಿಸುತ್ತವೆ. ಉತ್ಪನ್ನಗಳು 1 ಮೋಲ್ ಅನಿಗಳೂ ಪ್ರವರ್ತಕಗಳು 1 ಮೋಲ್ ಅನಿಲಗಳಾಗಿವೆ. ಉತ್ಪನ್ನಗಳನ್ನು ಹೊರೆ ತೆಗೆಯದಿದ್ದರೆ ಒತ್ತಡ ಹೆಚ್ಚಾಗುವುದು, ಲೀ ಶೆಟಲಿಯರ್ ತತ್ವದ ಪ್ರಕಾರ ಹಿಂದಕ್ಕೆ ಜರಗುವ ಕ್ರಿಯೆ ನಡೆಯುತ್ತದೆ. ಆದ್ದರಿಂದ ಉತ್ಪನ್ನಗಳನ್ನು ಹೊರತೆಗೆಯಬೇಕು.

3. a. $NO_2$

b. ಉಷ್ಣತೆಯನ್ನು ಹೆಚ್ಚಿಸಿದರೆ ಉಷ್ಣ ಹೀರುವ ಕ್ರಿಯೆ ವೇಗದಲ್ಲಿ ನಡೆದು ಉತ್ಪನ್ನವಾದ $NO_2$ ಹೆಚ್ಚು ಲಭಿಸುತ್ತದೆ.

c. ಉಷ್ಣತೆಯನ್ನು ಹೆಚ್ಚು ಮಾಡಿರಿ. $N_2O_4$ ನ ಪ್ರಬಲತೆ ಹೆಚ್ಚು ಮಾಡಿರಿ. ಒತ್ತಡ ಕಡಿಮೆ ಮಾಡಿರಿ.

4. a. $CO_2$

b. ಮಾರ್ಬಲ್ ($CaCO_3$) ಹುಡಿಮಾಡಿ ಸೇರಿಸಿರಿ.

ಮೇಲ್ಮೈ ವಿಸ್ತೀರ್ಣ ಹೆಚ್ಚಾಗುತ್ತದೆ. ಕೊಲಿಶನ್ ಹೆಚ್ಚಾಗುತ್ತದೆ. ಕೊಲಿಶನ್ ಥಿಯರಿ ಪ್ರಕಾರ ರಾಸಾಯನಿಕ ಕ್ರಿಯೆ ವೇಗವಾಗಿ ನಡೆಯುವುದು.

2. ಪ್ರಬಲ HCl ಉಪಯೋಗಿಸಿರಿ.

ಪ್ರಬಲತೆ ಹೆಚ್ಚಾಗುವುದು. ಅಣುಗಳ ಸಂಖ್ಯೆ ಹೆಚ್ಚಾಗುವುದು. ಕೊಲಿಶನ್ ಹೆಚ್ಚಾಗುವುದು. ಕೊಲಿಶನ್ ಥಿಯರಿ ಪ್ರಕಾರ ರಾಸಾಯನಿಕ ಕ್ರಿಯೆ ವೇಗವಾಗಿ ನಡೆಯುವುದು.

5. a. ಉಷ್ಣತೆ ಕಡಿಮೆಯಾಗುವುದು ಉಷ್ಣ ವಿಸರ್ಜಕ ಕ್ರಿಯೆಯನ್ನು ತ್ವರಿತಗೊಳಿಸುವುದು. ಹೆಚ್ಚು $NO_2$ ಉಂಟಾಗುವುದು.

b. $2\ NO(g) + O_2(g) \rightleftharpoons 2\ NO_2(g)$

$\underbrace{2 \text{ ಮೋಲ್ } NO \quad 1 \text{ ಮೋಲ್ } O_2}_{3 \text{ ಮೋಲ್}} \rightarrow \underbrace{2 \text{ ಮೋಲ್ } NO_2}_{2 \text{ ಮೋಲ್}}$

ಒತ್ತಡ ಹೆಚ್ಚಾಗುವಾಗ ಲೀ ಶೆಟಲಿಯರ್ ತತ್ವವನ್ನು ಅನುಸರಿಸಿ ವ್ಯವಸ್ಥೆಯು ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ. ಒತ್ತಡ ಕಡಿಮೆಯಾಗಬೇಕಾದರೆ ಅಣುಗಳ ಸಂಖ್ಯೆ ಕಡಿಮೆಯಾಗಬೇಕು. ಆದ್ದರಿಂದ ಮುಂದಕ್ಕೆ ಜರಗುವ ಕ್ರಿಯೆ ವೇಗವಾಗಿ ನಡೆಯುವುದು.

c. ಪ್ರವರ್ತಕಗಳಲ್ಲೊಂದಾದ ಓಕ್ಸಿಜನಿನ ಪ್ರಬಲತೆ ಹೆಚ್ಚುಮಾಡುವುದು ಮುಂದಕ್ಕೆ ಜರಗುವ ಕ್ರಿಯೆಯ ವೇಗವನ್ನು ಹೆಚ್ಚು ಮಾಡುವುದು ಮತ್ತು ಹೆಚ್ಚು ಉತ್ಪನ್ನವನ್ನು ಉಂಟುಮಾಡುವುದು.

6. a. ಗಾತ್ರ ಕಡಿಮೆಯಾಗುವುದು.

b. $N_2(g) + 3H_2(g) \rightleftharpoons 2\ NH_3(g) +$ ಉಷ್ಣ

$\underbrace{1 \text{ ಮೋಲ್ } N_2 + 3 \text{ ಮೋಲ್ } H_2}_{4 \text{ ಮೋಲ್}} \rightarrow \underbrace{2 \text{ ಮೋಲ್ } NH_3}_{2 \text{ ಮೋಲ್}}$

ಪ್ರವರ್ತಕಗಳು ಉತ್ಪನ್ನಗಳಾಗಿ ಬದಲಾಗುವಾಗ ಗಾತ್ರ ಕಡಿಮೆಯಾಗುವ ಕಾರಣ ಮುಂದಕ್ಕೆ ಜರಗುವ

ಕ್ರಿಯೆಯ ದರ ಹೆಚ್ಚಾಗುವುದಕ್ಕಾಗಿ ಒತ್ತಡವನ್ನು ಹೆಚ್ಚು ಮಾಡಬೇಕು.

c. ಪ್ರವರ್ತಕಗಳಾದ $N_2$, $H_2$ ಗಳಲ್ಲಿ ಯಾವುದಾದರೂ ಒಂದರ ಪ್ರಬಲತೆಯನ್ನು ಹೆಚ್ಚು ಮಾಡಿರಿ. ಉತ್ಪನ್ನವಾದ $NH_3$ ಯನ್ನು ವ್ಯವಸ್ಥೆಯಿಂದ ಹೊರ ತೆಗೆಯಿರಿ.

d. ಪ್ರೇರಕವಾದ ಕಬ್ಬಿಣ ಮುಂದಕ್ಕೆ, ಹಿಂದಕ್ಕೆ ಜರಗುವ ಕ್ರಿಯೆಯ ದರವನ್ನು ಹೆಚ್ಚಿಸಿ ಶೀಘ್ರದಲ್ಲಿ ಸಮತೋಲನ ಸ್ಥಿತಿ ತಲಪುವಂತೆ ಮಾಡುವುದು.

**ಮುಂದುವರಿದ ಚಟುವಟಿಕೆಗಳು**

1. a. Zn, Mg ಗಳನ್ನು ದುರ್ಬಲ HCl ನೊಂದಿಗೆ ವರ್ತಿಸುವಂತೆ ಮಾಡಿರಿ.

b. $Zn(s) + 2\,HCl(aq) \rightarrow ZnCl_2(s) + H_2(g)$

$Mg(s) + 2\,HCl(aq) \rightarrow MgCl_2(s) + H_2(g)$

c. ರಾಸಾಯನಿಕ ಕ್ರಿಯೆಯ ದರ = $\frac{\text{ಉಪಯೋಗಿಸ್ಪಟ್ಟ ಪ್ರವರ್ತಕದ ಪರಿಮಾಣ}}{\text{ಪ್ರವರ್ತಕ ವ ರ್ತಿ ಸಲು ತೆಗೆದುಕೊಂಡ ಸಮಯ}}$

ರಾಸಾಯನಿಕ ಕ್ರಿಯೆಯ ದರ = $\frac{\text{ಉಂಟಾದ ಉತ್ಪನಃ ಪರಿಮಾಣ}}{\text{ಉತ್ಪನ–ಉಂಟಾಗಲು ತೆಗೆದುಕೊಂಡ ಸಮಯ}}$

2. a. ಕ್ರಿಯೆ C → ಮುಂದಕ್ಕೆ ಜರಗುವ ಕ್ರಿಯೆ

ಕ್ರಿಯೆ D → ಹಿಂದಕ್ಕೆ ಜರಗುವ ಕ್ರಿಯೆ




b. A ಎಂಬ ಬಿಂದು ಎಡಕ್ಕೆ ತಳ್ಳಲ್ಪಡುವುದು.

3. a. ಪ್ರಯೋಗ 1 ರಲ್ಲಿ ಉಷ್ಣತೆ ಹೆಚ್ಚು ಮಾಡಿದರೆ ಅಣುಗಳ ಗತಿ ಚೈತನ್ಯ ಹೆಚ್ಚಾಗುವುದು. ಫಲಪ್ರದವಾದ ಡಿಕ್ಕಿ ಹೊಡೆಯುವಿಕೆಯ ಸಂಖ್ಯೆ ಹೆಚ್ಚಾಗುತ್ತದೆ. ಕೊಲಿಶನ್ ಥಿಯರಿ ಪ್ರಕಾರ ರಾಸಾಯನಿಕ ಕ್ರಿಯೆಯು ವೇಗವಾಗಿ ಜರಗುತ್ತದೆ.

b. $Na_2S_2O_3(aq) + 2HCl(aq) \rightarrow 2\,NaCl(aq) + S(s) + H_2O(l) + SO_2(g)$

4. a. ಹುಡಿ ಮಾಡಿದ ಮಾರ್ಬಲ್, ಪ್ರಬಲ HCl ಗಳನ್ನು ಆರಿಸಿಕೊಳ್ಳುತ್ತೇನೆ.

b. $CaCO_3(s) + 2HCl(aq) \rightarrow CaCl_2(aq) + H_2O(l) + CO_2(g)$

## ವಿದ್ಯಾರ್ಥಿಯ ಮೌಲ್ಯಮಾಪನ

| ಕ್ರಮ ನಂ. | ಸೂಚಕ | ಹೌದು | ಇಲ್ಲ |
|---|---|---|---|
| 1. | ರಾಸಾಯನಿಕ ಕ್ರಿಯೆಗಳು ವಿವಿಧ ವೇಗದಲ್ಲಿ ನಡೆಯುತ್ತವೆ ಎಂದು ತಿಳಿದುಕೊಳ್ಳಲು ಸಾಧ್ಯವಿದೆ. | | |
| 2. | ರಾಸಾಯನಿಕ ಕ್ರಿಯೆಯ ದರ ಕಂಡುಹಿಡಿಯಲು ತಿಳಿದಿದೆ. | | |
| 3. | ಪ್ರವರ್ತಕಗಳ ಪ್ರಬಲತೆ, ಸ್ವಭಾವಗಳು ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ ಎಂದು ತಿಳಿದುಕೊಳ್ಳಲು ಮತ್ತು ಅವುಗಳ ಪ್ರಭಾವವನ್ನು ವಿವರಿಸಲು ಸಾಧ್ಯವಿದೆ. | | |
| 4. | ವಿವಿಧ ಪ್ರಯೋಗಗಳಿಂದ ಒತ್ತಡ, ಉಷ್ಣತೆ, ಪ್ರೇರಕಗಳು, ಬೆಳಕು, ಮೇಲ್ಮೈ ವಿಸ್ತೀರ್ಣಗಳು ರಾಸಾಯನಿಕ ಕ್ರಿಯಾ ವೇಗವನ್ನು ನಿಯಂತ್ರಿಸುವ ಘಟಕಗಳಾಗಿವೆ ಎಂದು ವಿವರಿಸಲು ಸಾಧ್ಯವಿದೆ. | | |
| 5. | ಏಕಮುಖೀ ಕ್ರಿಯೆಗಳೂ, ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳನ್ನು ತಿಳಿದುಕೊಳ್ಳಲೂ, ವಿವರಣೆ ನೀಡಲೂ ಸಾಧ್ಯವಿದೆ. | | |
| 6. | ಮುಂದಕ್ಕೆ ಜರಗುವ ಕ್ರಿಯೆ ಮತ್ತು ಹಿಂದಕ್ಕೆ ಜರಗುವ ಕ್ರಿಯೆಗಳನ್ನು ಕಂಡುಹಿಡಿದು ಗುರುತಿಸಲು ಸಾಧ್ಯವಿದೆ. | | |
| 7. | ರಾಸಾಯನಿಕ ಸಮತೋಲನವು ಗತಿಶೀಲತೆಯುಳ್ಳದ್ದಾಗಿದೆ ಎಂದು ಕಂಡುಹಿಡಿಯುವ ಪ್ರಯೋಗಗಳನ್ನು ಆಯೋಜಿಸಲು ಸಾಧ್ಯವಿದೆ. | | |
| 8. | ಲೀ ಶಟಲಿಯರ್‌ನ ತತ್ವವನ್ನು ಅಳವಡಿಸಿ ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳಲ್ಲಿ ಸಮತೋಲನ ಸ್ಥಿತಿಗೆ ತಲುಪಿದ ವ್ಯವಸ್ಥೆಯ ಮೇಲೆ ಉಷ್ಣತೆ, ಒತ್ತಡ, ಪ್ರಬಲತೆಗಳ ಪ್ರಭಾವವನ್ನು ವಿವರಿಸಲು ಸಾಧ್ಯವಿದೆ. | | |

## ಅಧ್ಯಾಪಕರ ಮೌಲ್ಯಮಾಪನ

| ನಂ. | ಸೂಚಕ | ಉತ್ತಮ | ಸರಾಸರಿ | ಉತ್ತಮಪಡಿ ಸಬೇಕಾಗಿದೆ. |
|---|---|---|---|---|
| 1. | ರಾಸಾಯನಿಕ ಕ್ರಿಯೆಗಳು ವಿವಿಧ ವೇಗದಲ್ಲಿ ನಡೆಯುತ್ತವೆ ಎಂದು ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳಲು ಸಾಧ್ಯವಿದೆ. | | | |
| 2. | ರಾಸಾಯನಿಕ ಕ್ರಿಯೆಯ ದರವನ್ನು ಕಂಡುಹಿಡಿಯಲು ವಿದ್ಯಾರ್ಥಿಗಳಿಗೆ ತಿಳಿದಿದೆ. | | | |
| 3. | ಪ್ರವರ್ತಕಗಳ ಪ್ರಬಲತೆ, ಸ್ವಭಾವಗಳು ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ ಎಂದು ತಿಳಿದುಕೊಳ್ಳಲು ಮತ್ತು ಅವುಗಳ ಪ್ರಭಾವವನ್ನು ವಿವರಿಸಲು ಮಕ್ಕಳಿಗೆ ಸಾಧ್ಯವಿದೆ. | | | |
| 4. | ವಿವಿಧ ಪ್ರಯೋಗಗಳಿಂದ ಒತ್ತಡ, ಉಷ್ಣತೆ, ಪ್ರೇರಕಗಳು, ಬೆಳಕು, ಮೇಲ್ಮೈ ವಿಸ್ತೀರ್ಣಗಳು ರಾಸಾಯನಿಕ ಕ್ರಿಯಾ ವೇಗವನ್ನು ನಿಯಂತ್ರಿಸುವ ಘಟಕಗಳಾಗಿವೆ ಎಂದು ವಿದ್ಯಾರ್ಥಿಗಳಲ್ಲಿ ತಿಳುವಳಿಕೆಯನ್ನುಂಟುಮಾಡಲು ಸಾಧ್ಯವಿದೆ. | | | |
| 5. | ಏಕಮುಖೀ ಕ್ರಿಯೆಗಳು ಮತ್ತು ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ ಮಕ್ಕಳಿಗೆ ತಿಳಿದಿದೆ. | | | |
| 6. | ಮುಂದಕ್ಕೆ ಜರಗುವ ಕ್ರಿಯೆ ಮತ್ತು ಹಿಂದಕ್ಕೆ ಜರಗುವ ಕ್ರಿಯೆಗಳನ್ನು ಕಂಡುಹಿಡಿದು ಗುರುತಿಸುವ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ತಿಳಿದಿದೆ. | | | |
| 7. | ರಾಸಾಯನಿಕ ಸಮತೋಲನವು ಗತಿಶೀಲತೆಯುಳ್ಳದ್ದಾಗಿದೆ ಎಂದು ಕಂಡುಹಿಡಿಯುವ ಪ್ರಯೋಗ – ನಿರೀಕ್ಷಣೆಗಳಲ್ಲಿ ಭಾಗವಹಿಸುವ ಸಾಮರ್ಥ್ಯ ವಿದ್ಯಾರ್ಥಿಗಳು ಗಳಿಸಿದರು. | | | |
| 8. | ಲೀ ಶಟಲಿಯರ್‌ನ ತತ್ವವನ್ನು ಅಳವಡಿಸಿ ಇಕ್ಕಡೆಯಲ್ಲಿ ಜರಗುವ ಕ್ರಿಯೆಗಳಲ್ಲಿ ಸಮತೋಲನ ಸ್ಥಿತಿಗೆ ತಲುಪಿದ ವ್ಯವಸ್ಥೆಯ ಮೇಲೆ ಉಷ್ಣತೆ, ಒತ್ತಡ, ಪ್ರಬಲತೆಗಳ ಪ್ರಭಾವವನ್ನು ವಿದ್ಯಾರ್ಥಿಗಳಿಗೆ ಮನದಟ್ಟುಮಾಡಲು ಸಾಧ್ಯವಾಯಿತು. | | | |

4

# ಕ್ರಿಯಾಶೀಲ ಶ್ರೇಣಿಯೂ ವಿದ್ಯುತ್ ರಸಾಯನ ಶಾಸ್ತ್ರವೂ

## ಮುನ್ನುಡಿ

ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವ ಲೋಹಗಳ ಸಾಮರ್ಥ್ಯವನ್ನು ಕಂಡುಹಿಡಿದು ನೀರು, ವಾಯು, ಏಸಿಡ್ ಎಂಬಿವುಗಳೊಂದಿಗೆ ಲೋಹಗಳ ರಾಸಾಯನಿಕ ಕ್ರಿಯಾ ಸಾಮರ್ಥ್ಯದ ವ್ಯತ್ಯಾಸದ ಅಧ್ಯಯನದಿಂದ ಲೋಹಗಳ ಕ್ರಿಯಾಶೀಲ ಶ್ರೇಣಿಯ ನಿರ್ಮಾಣಕ್ಕೆ ದಾರಿ ತೋರುವ ರೀತಿಯಲ್ಲಿ ಚಟುವಟಿಕೆಗಳನ್ನು ಯೋಜನೆ ಮಾಡಿ ನಡೆಸಲು ಮಗುವಿಗೆ ಸಾಧ್ಯವಾಗುವ ರೀತಿಯಲ್ಲಿ ಈ ಯೂನಿಟನ್ನು ಪ್ರಸ್ತುತಪಡಿಸಬೇಕಾಗಿದೆ. ನಿತ್ಯ ಜೀವನದಲ್ಲಿ ಪ್ರಾಯೋಗಿಕ ಹಂತದಲ್ಲಿ ಮಗುವಿಗೆ ಉಂಟಾಗುವ ಅನುಭವಗಳ ಕಾರ್ಯಕಾರಣಗಳಿಗೆ ಬೊಟ್ಟುಮಾಡಿತೋರಿಸುವ ಚಟುವಟಿಕೆಗಳು ತರಗತಿಯಲ್ಲಿ ಪ್ರತಿಫಲಿಸಬೇಕು. ಈ ರೀತಿಯ ಚಟುವಟಿಕೆಗಳ ಆಧಾರದಲ್ಲಿ ಕಂಡುಹಿಡಿದ ಲೋಹಗಳ ಕ್ರಿಯಾಶೀಲ ಶ್ರೇಣಿ ಸ್ಥಾನಪಲ್ಲಟ ಕ್ರಿಯೆಯನ್ನು ಹೋಲಿಸಿ ಶ್ರೇಣಿಯ ಲೋಹಗಳ ಕ್ರಿಯಾ ಶೀಲತೆಯನ್ನು ಗಟ್ಟಿಮಾಡುವ ರೀತಿಯಲ್ಲಿ ಯೂನಿಟಿನ ಮುಂದಿರುವ ಹಾದಿ ಆಗಬೇಕು. ಸ್ಥಾನಪಲ್ಲಟ ಕ್ರಿಯೆಯು ಒಂದು ರಿಡೋಕ್ಸ್ ರಾಸಾಯನಿಕ ಕ್ರಿಯೆಯಾಗಿದೆ ಎಂದು ಉದಾಹರಣೆ ಸಹಿತ ವಿವರಿಸಬೇಕು. ಸ್ಥಾನಪಲ್ಲಟ ಕ್ರಿಯೆಯಲ್ಲಿ ಕ್ರಿಯಾಶೀಲತೆ ಹೆಚ್ಚಿರುವ ಲೋಹ ಕಡಿಮೆ ಇರುವ ಲೋಹವನ್ನು ಅದರ ಅಯೋನ್‌ನಿಂದ ಬೇರ್ಪಡಿಸುತ್ತದೆ ಎಂದು ಪ್ರಯೋಗಗಳನ್ನು ಮಾಡಿ ಮನದಟ್ಟುಮಾಡಬೇಕಾಗಿದೆ. ಈ ಚಟುವಟಿಕೆಗಳಿಂದ ದೊರೆತ ಸಂಶೋಧನೆಗಳ ಬೆಳಕಿನಲ್ಲಿ ಒಂದು ಲೋಹವು ಅದರ ಅಯೋನ್‌ನೊಂದಿಗೆ ಸಂಪರ್ಕದಲ್ಲಿ ಇರುವ ಪರಿಸ್ಥಿತಿಯಲ್ಲಿ ಇದೇ ಸಂದರ್ಭದಲ್ಲಿ ನೆಲೆಗೊಳ್ಳುವ ಇನ್ನೊಂದು ಲೋಹದ ಪರಿಸ್ಥಿತಿಯೊಂದಿಗೆ ಬಾಹ್ಯವಾಗಿಯೂ, ಆಂತರಿಕವಾಗಿಯೂ ಒಂದು ಪ್ರತ್ಯೇಕ ರೀತಿಯಲ್ಲಿ ಜೋಡಿಸಿ ವಿದ್ಯುತ್ ಉತ್ಪಾದಿಸಬಹುದೆಂದೂ ಉತ್ಪಾದಿಸಲ್ಪಡುವ ವಿದ್ಯುತ್ತಿನ ವೋಲ್ಟೇಜ್ ಲೋಹಗಳ ಕ್ರಿಯಾಶೀಲತೆಯೊಂದಿಗೆ ಸಂಬಂಧಪಟ್ಟಿದೆ ಎಂಬ ವಿಚಾರವನ್ನು ಮನದಟ್ಟು ಮಾಡಿಕೊಡಬೇಕಾಗಿದೆ. ಗೆಲ್ವಾನಿಕ್ ಸೆಲ್ ಎಂಬ ಈ ಸಲಕರಣೆಯ ಭಾಗಗಳಾದ ಏನೋಡ್, ಕೇಥೋಡ್, ಇಲೆಕ್ಟ್ರೋಲೈಟ್, ಸಾಲ್ಟ್ ಬ್ರಿಜ್ ಎಂಬಿವುಗಳನ್ನು ಪರಿಚಯಿಸಲು, ವಿವಿಧ ತರದ ಗೆಲ್ವಾನಿಕ್ ಸೆಲ್‌ಗಳನ್ನು ಸ್ವತಃ ನಿರ್ಮಾಣ ಮಾಡಲು,

ಅದರಲ್ಲಿ ವಿದ್ಯುತ್ ಉತ್ಪಾದಿಸುವ ರಸಾಯನ ಶಾಸ್ತ್ರವನ್ನು ಕಂಡುಹಿಡಿಯಲು ಮಕ್ಕಳನ್ನು ಪ್ರಾಪ್ತರನ್ನಾಗಿಸಬೇಕು. ವ್ಯಾಪಕವಾಗಿ ಉಪಯೋಗಿಸುವ ಮರ್ಕ್ಯುರಿ ಸೆಲ್ಲುಗಳು ಉಂಟುಮಾಡುವ ಪರಿಸರ ಮಾಲಿನ್ಯ ಇಲ್ಲದಂತೆ ಮಾಡಲು ಮತ್ತೊಂದು ಗೆಲ್ವಾನಿಕ್ ಸೆಲ್ ಆದ $H_2$ - $O_2$ ಫ್ಯೂಯೆಲ್ ಸೆಲ್ ಉಪಯೋಗಿಸಿದಲ್ಲಿ ಪರಿಸರ ಮಾಲಿನ್ಯವನ್ನು ಇಲ್ಲದಂತೆ ಮಾಡಬಹುದೆಂದೂ ಹಾಗೆ ಪ್ರಕೃತಿ ಸ್ನೇಹಿಯಾಗಿ ರಸಾಯನ ಶಾಸ್ತ್ರವು ಕಾರ್ಯವೆಸಗುತ್ತದೆ ಎಂಬ ಜ್ಞಾನವನ್ನು ಮಕ್ಕಳಲ್ಲಿ ಬೆಳೆಸಬೇಕು.

ರಾಸಾಯನಿಕ ಚೈತನ್ಯದಿಂದ ವಿದ್ಯುತ್ ಚೈತನ್ಯವನ್ನು ಉತ್ಪಾದಿಸುವುದರ ಹಾಗೇಯೇ ವಿದ್ಯುತ್ ಚೈತನ್ಯವನ್ನು ಉಪಯೋಗಿಸಿ ರಾಸಾಯನಿಕ ಕ್ರಿಯೆಗಳನ್ನು ನಡೆಸಬಹುದೆಂಬುದನ್ನೂ, ಆ ರೀತಿಯ ಸೆಲ್‌ಗಳನ್ನು ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳೆಂದೂ ಕರೆಯುತ್ತಾರೆ ಎಂದೂ ಮಕ್ಕಳು ತಿಳಿದುಕೊಳ್ಳಬೇಕು. ವಿವಿಧ ರೀತಿಯ ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳನ್ನು ನಿರ್ಮಿಸಲೂ ಅವುಗಳಲ್ಲಿರುವ ರಾಸಾಯನಿಕ ಕ್ರಿಯೆಗಳನ್ನು ಗುರುತಿಸಲೂ ಸಾಧ್ಯವಾಗಬೇಕು. ನಿತ್ಯ ಜೀವನದಲ್ಲಿ ಪ್ರಾಯೋಗಿಕವಾಗಿ ಇವುಗಳ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿದೆ. ಮಕ್ಕಳಲ್ಲಿ ಹೆಚ್ಚಿನ ಸಂಶೋಧನಾ ಸ್ವಭಾವವನ್ನು ಹೆಚ್ಚಿಸಲು ಹೊಸ ಗೆಲ್ವಾನಿಕ್ ಸೆಲ್‌ಗಳ ರೂಪಕಲ್ಪನೆ, ಕ್ರಿಯಾಶೀಲ ಶ್ರೇಣಿಯನ್ನು ಬಳಸಿಕೊಂಡು ಸೆಲ್‌ಗಳ ವೋಲ್ಟೇಜ್ ಪ್ರವಹಿಸುವಿಕೆ, ಆಭರಣ ಲೋಹಗಳ ಶುದ್ಧೀಕರಣ, ಲೋಹದ ಲೇಪನ ಮೊದಲಾದ ಚಟುವಟಿಕೆಗಳನ್ನು ನಡೆಸಲು ಸಾಧ್ಯವಿರುವ ರೀತಿಯಲ್ಲಿ ಮಕ್ಕಳ ಕೈಹಿಡಿದು ಮೇಲಕ್ಕೆತ್ತಬೇಕು.

# MODULE WISE PERIOD DISTRIBUTION

ಒಟ್ಟು ಪೀರಿಯಡ್ **10**

## ಯೂನಿಟ್ 4

## ಕ್ರಿಯಾಶೀಲ ಶ್ರೇಣಿಯೂ ವಿದ್ಯುತ್ ರಸಾಯನ ಶಾಸ್ತ್ರವೂ

**ಮೊಡ್ಯೂಲ್ 1** **ಪೀರಿಯಡ್ 3**

- ಲೋಹಗಳ ರಾಸಾಯನಿಕ ಕ್ರಿಯಾ ಸಾಮರ್ಥ್ಯ
- ನೀರಿನೊಂದಿಗೆ ವರ್ತನೆ
- ವಾಯುವಿನೊಂದಿಗೆ ವರ್ತನೆ
- ಏಸಿಡಿನೊಂದಿಗೆ ವರ್ತನೆ.
- ಕ್ರಿಯಾಶೀಲ ಶ್ರೇಣಿ
- ಕ್ರಿಯಾಶೀಲ ಶ್ರೇಣಿಯೂ, ಸ್ಥಾನಪಲ್ಲಟ ಕ್ರಿಯೆಗಳೂ

**ಮೊಡ್ಯುಲ್ 2** **ಪೀರಿಯಡ್ 4**

- ವಿದ್ಯುತ್ ಉತ್ಪಾದಿಸಲು ಲೋಹಗಳು
- ರಿಡೋಕ್ಸ್ ಕ್ರಿಯೆಯ ಮೂಲಕ ರಾಸಾಯನಿಕ ಚೈತನ್ಯವನ್ನು ವಿದ್ಯುತ್ ಚೈತನ್ಯವಾಗಿ ಮಾಡಬಹುದು.
- ಗೇಲ್ವಾನಿಕ್ ಸೆಲ್ಲುಗಳು
- ಕ್ರಿಯೆಗಳೂ, ನಿರ್ಮಾಣವೂ

**ಮೊಡ್ಯೂಲ್ 3** **ಪೀರಿಯಡ್ 3**

- ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳು
- ಇಲೆಕ್ಟ್ರೊಲೈಟ್‌ಗಳು
- ವಿದ್ಯುತ್ ವಿಶ್ಲೇಷಣೆ
- ನೀರಿನ ವಿದ್ಯುತ್ ವಿಶ್ಲೇಷಣೆಯ ರಾಸಾಯನ ಶಾಸ್ತ್ರ
- ದ್ರವೀಕೃತ ಸೋಡಿಯಂ ಕ್ಲೋರೈಡಿನ ವಿದ್ಯುತ್ ವಿಶ್ಲೇಷಣೆ
- ಸೋಡಿಯಂ ಕ್ಲೋರೈಡ್ ದ್ರಾವಣದ ವಿದ್ಯುತ್ ವಿಶ್ಲೇಷಣೆ.

**ಯೂನಿಟ್ ಫ್ರೇಂ** | **ಒಟ್ಟು ಪೀರಿಯಡ್ 10**

| ಆಶಯಗಳು/ ತಿಳುವಳಿಕೆಗಳು/ ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| ಮೊಡ್ಯೂಲ್ 1 ಪೀರಿಯಡ್ 3<br>• ವಿವಿಧ ಲೋಹಗಳು ವಾಯು, ಜಲ, ಏಸಿಡಿನೊಂದಿಗೆ ವಿವಿಧ ರೀತಿಯಲ್ಲಿ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುತ್ತವೆ.<br>• ಲೋಹಗಳ ಕ್ರಿಯಾಶೀಲತೆಯ ಆಧಾರದಲ್ಲಿ ಕ್ರಿಯಾಶೀಲ ಶ್ರೇಣಿಯನ್ನು ನಿಗದಿಪಡಿಸುವುದು.<br>• ಕ್ರಿಯಾಶೀಲತೆ ಕಡಿಮೆಇರುವ ಲೋಹಗಳನ್ನು ಅವುಗಳ ಲವಣ ದ್ರಾವಣದಿಂದ ಕ್ರಿಯಾಶೀಲತೆ ಹೆಚ್ಚಿರುವ ಲೋಹ ಸ್ಥಾನಪಲ್ಲಟಗೊಳಿಸುತ್ತದೆ. | • ಪ್ರಯೋಗ, ಚರ್ಚೆ, ಪಟ್ಟಿಮಾಡುವುದು ನಿಗಮನ<br>• ಪ್ರಯೋಗ, ನಿರೀಕ್ಷಣೆ, ಚರ್ಚೆ, ಪಟ್ಟಿ ಮಾಡುವುದು.<br>• ಕೆಲವು ರಿಡೋಕ್ಸ್ ಕ್ರಿಯೆಗಳನ್ನು ನಡೆಸುತ್ತಾರೆ ಉತ್ಕರ್ಷಣೆ, ಅಪಕರ್ಷಣೆ, ಚರ್ಚೆ, | • ವಿವಿಧ ಲೋಹಗಳ ವಾಯು, ಜಲ, ಏಸಿಡ್‌ಗಳೊಂದಿಗೆ ವರ್ತಿಸುವ ರೀತಿಯನ್ನು ಪ್ರಯೋಗದ ಮೂಲಕ ಕಂಡುಹಿಡಿದು ವಿವರಿಸುವರು.<br>• ಕ್ರಿಯಾಶೀಲ ಶ್ರೇಣಿಯಲ್ಲಿ ಲೋಹಗಳ ಸ್ಥಾನ ತಿಳಿದುಕೊಂಡು ರಾಸಾಯನಿಕ ಕ್ರಿಯೆಯ ಬಗ್ಗೆ ತಿಳಿಯಲು ಸಾಧ್ಯವಿದೆ.<br>• ಕ್ರಿಯಾಶೀಲ ಶ್ರೇಣಿ ಬಳಸಿ ಸ್ಥಾನಪಲ್ಲಟ ಕ್ರಿಯೆ ನಡೆಯುವುದೋ ಇಲ್ಲವೊ ಎಂದು ತಿಳಿಯಲು ಸಾಧ್ಯವಿದೆ. |
| **ಮೊಡ್ಯೂಲ್ 2 ಪೀರಿಯಡ್ 4**<br>• ಸ್ಥಾನಪಲ್ಲಟ ಕ್ರಿಯೆಯಲ್ಲಿ ಉತ್ಕರ್ಷಣೆ, ಅಪಕರ್ಷಣೆ,<br>• ರಿಡೋಕ್ಸ್ ಕ್ರಿಯೆಯಲ್ಲಿ ವಿದ್ಯುತ್ ಚೈತನ್ಯ ರಾಸಾಯನಿಕ ಚೈತನ್ಯವಾಗುವುದು.<br>• ಗೇಲ್ವನಿಕ್ ಸೆಲ್‌ಗಳು | • ಪ್ರಯೋಗ, ಚರ್ಚೆ, ಪಟ್ಟಿ ಮಾಡುವುದು, ನಿಗಮನ ಪ್ರಯೋಗ ಸಾಮಾಗ್ರಿಗಳು<br>Cu, Zn, Fe, Mg<br>$CuSO_4$, $ZnSO_4$, $FeSO_4$<br>$MgSO_4$<br>Zn, Cu, ಗೇಲ್ವನಿಕ್ ಸೆಲ್ಲು ನಿರ್ಮಿಸುವರು. ಚರ್ಚೆ, ಏನೋಡ್, ಕೇಥೋಡ್, ಗೇಲ್ವನಿಕ್ ಸೆಲ್ಲಿನಲ್ಲಿ ವಿದ್ಯುತ್ ಪ್ರವಾಹದ ದಿಶೆ. | • ಉತ್ಕರ್ಷಣೆ – ಅಪಕರ್ಷಣೆ ಕ್ರಿಯೆಗಳ ಲಿಸ್ಟ್ ಮಾಡುವರು.<br>• ಗೇಲ್ವನಿಕ್ ಸೆಲ್ ನಿರ್ಮಿಸಲು ಸಾಧ್ಯವಾಗುವುದು.<br>• ಏನೋಡ್, ಕೇಥೋಡ್‌ಗಳನ್ನು ಕಂಡುಹಿಡಿದು ಲಿಸ್ಟ್ ಮಾಡುವರು. |

ಯೂನಿಟ್ ಫ್ರೇಂ

ಒಟ್ಟು ಪೀರಿಯಡ್ 10

| ಆಶಯಗಳು/ ತಿಳುವಳಿಕೆಗಳು/ ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| ಮೊಡ್ಯುಲ್ 3<br>ಪೀರಿಯಡ್ 3<br>• ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳು<br>• ಇಲೆಕ್ಟ್ರೋಲೈಟುಗಳು<br>• ವಿದ್ಯುತ್ ವಿಶ್ಲೇಷಣೆ | • ವಿದ್ಯುತ್ ವಿಶ್ಲೇಷಣಾ ಸೆಲ್ ನಿರ್ಮಾಣ ಚರ್ಚೆ.<br>• ವಿದ್ಯುತ್ ವಿಶ್ಲೇಷಣಾ ರಾಸಾಯನಿಕ ಕ್ರಿಯೆಗಳು, ಚರ್ಚೆ. | • ಕ್ಯುಪ್ರಿಕ್, ಕ್ಲೋರೈಡಿನ ವಿದ್ಯುತ್ ವಿಶ್ಲೇಷಣೆ ನಡೆಸುವರು.<br>• ಒಂದು ವಿದ್ಯುತ್ ವಿಶ್ಲೇಷಣಾ ಸೆಲ್ಲಿನಲ್ಲಿ ಏನೋಡ್, ಕೇಥೋಡ್, ಇಲೆಕ್ಟ್ರೋಲೈಟ್‌ಗಳನ್ನು ಕಂಡುಹಿಡಿದು ಗುರುತಿಸುವರು. ವಿದ್ಯುತ್ ವಿಶ್ಲೇಷಣಾ ಸೆಲ್ಲಿನಲ್ಲಿ ಇಲೆಕ್ಟ್ರೋಡ್‌ಗಳಲ್ಲಿ ಬಿಡುಗಡೆಯಾಗುವ ಪದಾರ್ಥಗಳನ್ನು ಕಂಡುಹಿಡಿಯುವುದು. |
| • ನೀರಿನ ವಿದ್ಯುತ್ ವಿಶ್ಲೇಷಣೆ, ದ್ರವೀಕೃತ ಸೋಡಿಯಂ ಕ್ಲೋರೈಡಿನ ವಿದ್ಯುತ್ ವಿಶ್ಲೇಷಣೆ, ಸೋಡಿಯಂ ಕ್ಲೋರೈಡಿನ ಜಲೀಯ ದ್ರಾವಣದ ವಿದ್ಯುತ್ ವಿಶ್ಲೇಷಣೆ. | • ನೀರಿನ ವಿದ್ಯುತ್ ವಿಶ್ಲೇಷಣೆಯ ಚರ್ಚೆ ಕ್ರೋಡೀಕರಣ, ಪಟ್ಟಿ ಮಾಡುವುದು. | • ವಿವಿಧ ಪದಾರ್ಥಗಳ ವಿದ್ಯುತ್ ವಿಶ್ಲೇಷಣೆಫಲವಾಗಿ ಏನೋಡಿನಲ್ಲಿಯೂ ಕೇಥೋಡಿನಲ್ಲಿಯೂ ಉಂಟಾಗುವ ಪದಾರ್ಥಗಳನ್ನು ಕಂಡುಹಿಡಿದು ಲಿಸ್ಟ್ ಮಾಡುವರು. |
| • ವಿದ್ಯುತ್ ವಿಶ್ಲೇಷಣೆಯ ಪ್ರಯೋಜನವನ್ನು ಪಡೆದುಕೊಳ್ಳುವ ಸಂದರ್ಭಗಳು. | • ಚರ್ಚೆ, ಕ್ರೋಡೀಕರಣ, ಪಟ್ಟಿ ಮಾಡುವುದು. | • ನಿತ್ಯ ಜೀವನದಲ್ಲಿ ವಿದ್ಯುತ್ ವಿಶ್ಲೇಷಣೆಯ ಪ್ರಯೋಜನವನ್ನು ಪಡೆದುಕೊಳ್ಳುವ ಸಂದರ್ಭಗಳನ್ನು ಲಿಸ್ಟ್‌ಮಾಡುವರು. |

**ಕಲಿಕಾ ಸಾಧನೆಗಳು**

- ಲೋಹಗಳ ರಾಸಾಯನಿಕ ಕ್ರಿಯಾ ಸಾಮರ್ಥ್ಯ ಬೇರೆ ಬೇರೆ ಆಗಿದೆ ಎಂದು ಪ್ರಯೋಗಗಳಿಂದ ಕಂಡುಹಿಡಿಯುವರು.
- ಕ್ರಿಯಾ ಶೀಲ ಶ್ರೇಣಿಯ ಸಹಾಯದಿಂದ ಲೋಹಗಳ ಕ್ರಿಯಾಶೀಲತೆಯನ್ನು ಹೋಲಿಸಲು ಸಾಧ್ಯವಾಗುತ್ತದೆ.
- ರಿಡೋಕ್ಸ್ ರಾಸಾಯನಿಕ ಕ್ರಿಯೆಗಳನ್ನು ಕಂಡುಹಿಡಿಯುತ್ತಾರೆ.
- ಲೋಹಗಳ ಸ್ಥಾನಪಲ್ಲಟಗೊಳಿಸುವ ಸಾಮರ್ಥ್ಯವನ್ನು ತಿಳಿದುಕೊಂಡು ಪಟ್ಟಿ ಪೂರ್ತಿಗೊಳಿಸುವರು.
- ಗೇಲ್ವನಿಕ್ ಸೆಲ್ ನಿರ್ಮಿಸುವರು.
- ವಿವಿಧ ರೀತಿಯ ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳನ್ನು ತಿಳಿದುಕೊಂಡು ಅವುಗಳ ರಾಸಾಯನಿಕ ಕ್ರಿಯೆಗಳನ್ನು ವಿವರಿಸುವರು.

**ಪ್ರಧಾನ ಆಶಯಗಳು**

- ಲೋಹಗಳಿಗೆ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವ ಸಾಮರ್ಥ್ಯ ಬೇರೆ ಬೇರೆ ಆಗಿದೆ.
  - ನೀರಿನೊಂದಿಗೆ
  - ವಾಯುವಿನೊಂದಿಗೆ
  - ದುರ್ಬಲ ಏಸಿಡಿನೊಂದಿಗೆ
- ಲೋಹಗಳ ಕ್ರಿಯಾಶೀಲತೆಯನ್ನು, ಕ್ರಿಯಾಶೀಲ, ಶ್ರೇಣಿಯಲ್ಲಿ ಅವುಗಳ ಸ್ಥಾನವನ್ನೂ ಹೋಲಿಸುವರು.
- ಸ್ಥಾನಪಲ್ಲಟ ರಾಸಾಯನಿಕ ಕ್ರಿಯೆ – ಕ್ರಿಯಾಶೀಲ ಶ್ರೇಣಿಯಲ್ಲಿ ಸ್ಥಾನದ ಮಾನದಂಡದಲ್ಲಿ ವಿವರಿಸುವರು.
  - $CuSO_4$ ನಲ್ಲಿ Zn
  - $AgNO_3$ ನಲ್ಲಿ Cu
- ಕ್ರಿಯಾಶೀಲತೆ ಹೆಚ್ಚಿರುವ ಲೋಹಗಳು ಕ್ರಿಯಾಶೀಲತೆ ಕಡಿಮೆ ಇರುವ ಲೋಹಗಳ ಲವಣ ದ್ರಾವಣದಿಂದ ಲೋಹವನ್ನು ಸ್ಥಾನಪಲ್ಲಟಗೊಳಿಸುತ್ತದೆ.
- ರಿಡೋಕ್ಸ್ ಕ್ರಿಯೆ
- ಗೇಲ್ವನಿಕ್ ಸೆಲ್
  - ಭಾಗಗಳು
  - ಕ್ರಿಯೆಗಳು
- ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳು
  - $CuCl_2$ ದ್ರಾವಣ
  - ಏಸಿಡ್ ಮಿಶ್ರಗೊಳಿಸಿದ ನೀರು
  - NaCl ದ್ರಾವಣ
  - NaCl ದ್ರವೀಕೃತ
- ವಿದ್ಯುತ್ ವಿಶ್ಲೇಷಣೆಯ ಪ್ರಯೋಜನವನ್ನು ಉಪಯೋಗಿಸುವ ಕೆಲವು ಕ್ಷೇತ್ರಗಳು.

## ಯೂನಿಟ್‌ನೊಳಗೆ

### ಮೊಡ್ಯುಲ್ 1

ಸಮಯ 3 ಪೀರಿಯಡ್

ಚಿತ್ರದಲ್ಲಿ ಕೊಟ್ಟಿರುವವುಗಳು ವಿವಿಧ ರೀತಿಯ ಸೆಲ್ಲುಗಳಾಗಿವೆ. ಇವುಗಳಲ್ಲಿ ವಿದ್ಯುತ್ ಉತ್ಪಾದಿಸುವ ಸಾಧಾರಣ ಸೆಲ್ಲುಗಳು, ಸ್ಟೋರೇಜ್ ಸೆಲ್ಲುಗಳು, ವಿದ್ಯುತ್ ಉಪಯೋಗಿಸಿ ರಾಸಾಯನಿಕ ಕ್ರಿಯೆ ಜರಗಿಸುವ ಸೆಲ್ಲು, ನೀರನ್ನು ವಿಭಜಿಸುವ ಸೆಲ್ಲು, ವಿದ್ಯುಲ್ಲೇಪನ ಸೆಲ್ಲು ಮೊದಲಾದವುಗಳು ಸೇರಿವೆ. ಚಿತ್ರ 4.1 ರ ಪ್ರಯೋಗ ಮಾಡುವಾಗ ಟೆಸ್ಟ್ ಟ್ಯೂಬಿಗೆ ಒಂದು ಸಣ್ಣ ತುಂಡು ಸೋಡಿಯಂನ್ನು ಹಾಕುವರು. ಅದು ಸೀಮೆ ಎಣ್ಣೆಯ ಕೆಳಗೆ ಇರುವ ನೀರಿಗೆ ತಾಗುವಾಗ ರಾಸಾಯನಿಕ ಕ್ರಿಯೆಯ ಫಲವಾಗಿ ಉಂಟಾಗುವ ಹೈಡ್ರೋಜನ್ ಅನಿಲ ಗುಳ್ಳೆಗಳು ತುಂಡನ್ನು ಸೀಮೆ ಎಣ್ಣೆಯ ಮೇಲ್ತಳಕ್ಕೆ ಎತ್ತುವುದು. ಅಲ್ಲಿ ಹೈಡ್ರೋಜನ್ ವಾತಾವರಣಕ್ಕೆ ಹೋಗುವುದೂ, ಸೋಡಿಯಂ ಪುನಃ ಸೀಮೆ ಎಣ್ಣೆಯ ಕೆಳಗೆ ಇರುವ ನೀರಿನ ತಳಕ್ಕೆ ತಲಪುವಾಗ ನೀರಿನೊಂದಿಗೆ ರಾಸಾಯನಿಕ ಕ್ರಿಯೆ ಜರಗಿಸಿ ಉಂಟಾಗುವ ಹೈಡ್ರೋಜನ್ ಸೋಡಿಯಂನ್ನು ಪುನಃ ಸೀಮೆಎಣ್ಣೆಯ ಮೇಲ್ತಳಕ್ಕೆತಲುಪಿಸುವುದು. ಈ ಕ್ರಿಯೆಯು ಸೋಡಿಯಂ ವರ್ತಿಸಿ ಮುಗಿಯುವ ತನಕ ಮುಂದುವರಿಯುವುದು. ರಾಸಾಯನಿಕ ಕ್ರಿಯೆಯ ಫಲವಾಗಿ ಉಂಟಾಗುವNaOH ಫಿನೋಫ್ತಲೀನ್ ಸೇರಿಸಿದ ನೀರಿಗೆ ಪಿಂಕ್ ಬಣ್ಣವನ್ನು ಕೊಡಲು ಕಾರಣವಾಗುವುದು.

ಬಿಸಿಯುಳ್ಳ ನೀರಿನಲ್ಲಿ ಹಾಕಿದ ಮೆಗ್ನೀಶಿಯಂ ವೇಗವಾಗಿ ವರ್ತಿಸಿ ಹೈಡ್ರೋಜನ್ ಅನಿಲವನ್ನು ಹೊರಬಿಡುವುದು. ಬಿಸಿನೀರಿನಲ್ಲಿ $Mg(OH)_2$ ಕರಗಿ ಸೋರುವ ಕಾರಣ ಫಿನೋಫ್ತಲೀನ್ ಒಳಗೊಂಡ ನೀರು ಪಿಂಕ್ ಬಣ್ಣಕ್ಕೆ ಹೊಂದುವುದು.

Cu, Fe ಗಳು ತಣ್ಣೀರಿನೊಂದಿಗೆ ವರ್ತಿಸಿ ಹೈಡ್ರೋಜನನ್ನು ಉಂಟುಮಾಡಲಾರುವು ಆದರೆ ಸೂಪರ್ ಹೀಟೆಡ್ ಸ್ಟೀಮಿನೊಂದಿಗೆ Fe ವರ್ತಿಸುವುದು.

$$3Fe(s) + 4H_2O_{(g)} \rightarrow Fe_3O_4 + 4H_{2(g)}$$

ಪ್ರಯೋಗಗಳಿಂದ ದೊರೆತ ಲೋಹಗಳ ನೀರಿನೊಂದಿಗೆ ವರ್ತನೆಯ ಕ್ರಿಯಾಸಾಮರ್ಥ್ಯದ ಕಡಿಮೆಯಾಗುವ ಕ್ರಮವಾಗಿದೆ $Na > Mg > Fe > Cu$.

ವಾತಾವರಣದ ವಾಯುವಿನ ಓಕ್ಸಿಜನ್, ನೀರಿನ ತೀವ್ರ, ಕಾರ್ಬನ್ ಡೈ ಓಕ್ಸೈಡ್‌ಗಳೊಂದಿಗೆ ಸೋಡಿಯಂ ವರ್ತಿಸುವ ಕಾರಣ ಅದರ ಹೊಳಪು ನಷ್ಟವಾಗುವುದು. ಮೆಗ್ನೀಶಿಯಂ ವಾಯುವಿನೊಂದಿಗೆ ವರ್ತಿಸುವ ಕಾರಣ ಅದರ ಹೊಳಪು ನಷ್ಟವಾಗುವುದು.

$$2Mg + O_2 \rightarrow 2MgO$$

Al, Cu ಗಳು ವಾಯುವಿನೊಂದಿಗೆ ವರ್ತಿಸಿ ಬಣ್ಣ ಮಸುಕಾಗುವುದಾದರೂ ಚಿನ್ನ ವರ್ತಿಸುವುದಿಲ್ಲ. ಸೋಡಿಯಂ ಅತ್ಯಂತ ಬೇಗ ಹೊಳಪು ನಷ್ಟವಾಗುವ ಲೋಹವಾಗಿದೆ. ಈ ಲೋಹಗಳು ವಾಯುವಿನೊಂದಿಗೆ ವರ್ತಿಸಿ ಹೊಳಪು ನಷ್ಟವಾಗುವ ಅವರೋಹಣ ಕ್ರಮವನ್ನು ಕೆಳಗೆ ಕೊಡಲಾಗಿದೆ. ಸೋಡಿಯಂ, ಮೆಗ್ನೀಶಿಯಂ, ಅಲ್ಯುಮೀನಿಯಂ, ಕೋಪ್ಪರ್, ಚಿನ್ನ.

ಸಮಾನ ಭಾರವುಳ್ಳ (ಒಂದೇ ಆಕೃತಿಯುಳ್ಳದ್ದು ಉತ್ತಮ – ಮೇಲ್ಮೈ ವಿಸ್ತೀರ್ಣ ಸಮಾನವಾಗಿರಬೇಕು) Mg, Pb, Zn, Fe, Cu ಎಂಬ ಲೋಹಗಳನ್ನು ತೆಗೆದುಕೊಳ್ಳಿರಿ. ಸಮಾನ ಗಾತ್ರದ ಒಂದೇ ಪ್ರಬಲತೆಯುಳ್ಳ ದುರ್ಬಲ HCl ನ್ನು ತೆಗೆದುಕೊಂಡ ಐದು ಟೆಸ್ಟ್‌ಟ್ಯೂಬ್‌ಗಳಿಗೆ ಈ ಲೋಹಗಳನ್ನು ಒಂದೊಂದಾಗಿ ಹಾಕಿ ನಿರೀಕ್ಷಿಸಿರಿ.

ನಿರೀಕ್ಷಣೆ : Mg ಹಾಕಿದ ಟೆಸ್ಟ್‌ಟ್ಯೂಬಿನಿಂದ ಹೆಚ್ಚಿನ ಗುಳ್ಳೆಗಳು ಬರುವುದೆಂದೂ Cu ಹಾಕಿ ಟೆಸ್ಟ್ ಟ್ಯೂಬಿನಿಂದ ಗುಳ್ಳೆಗಳು ಏನೂ ಬರುವುದಿಲ್ಲ ಎಂದು ಮಗುವಿಗೆ ಮನದಟ್ಟು ಮಾಡಬೇಕು. ಲೋಹಗಳು dil HCl ನೊಂದಿಗೆ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವ ರಾಸಾಯನಿಕ ಸಮೀಕರಣಗಳು ಕೆಳಗೆ ಕೊಡಲಾಗಿದೆ.

$Mg + 2HCl \rightarrow MgCl_2 + H_2$

$Fe + 2HCl \rightarrow FeCl_2 + H_2$

$Zn + 2HCl \rightarrow ZnCl_2 + H_2$

$Pb + 2HCl \rightarrow PbCl_2 + H_2$

ಅತ್ಯಂತ ಹೆಚ್ಚು ವೇಗವಾಗಿ ರಾಸಾಯನಿಕ ಕ್ರಿಯೆ ನಡೆಯುವುದು ಮೆಗ್ನೀಶಿಯಂ ಹಾಕಿದ ಟೆಸ್ಟ್ ಟ್ಯೂಬಿನಲ್ಲಿ (test tube 2) ಆಗಿದೆ. ಲೋಹದೊಂದಿಗೆ ರಾಸಾಯನಿಕ ಕ್ರಿಯೆ ನಡೆಯದುದು ಕೋಪ್ಪರ್ ಹಾಕಿದ ಟೆಸ್ಟ್‌ಟ್ಯೂಬಿನಲ್ಲಿ (test tube 3). ಆಗಿದೆ.

ರಾಸಾಯನಿಕ ಕ್ರಿಯೆಯ ಕಡಿಮೆಯಾಗುವ ಕ್ರಮ ಕೆಳಗೆ ನೀಡಲಾಗಿದೆ.

$2 > 5 > 1 > 4 > 3$

dil HCl ನೊಂದಿಗೆ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸಿ ಹೈಡ್ರೋಜನನ್ನು ಉಂಟುಮಾಡುವ ಕ್ರಮದಲ್ಲಿ, ಕ್ರಿಯಾಶೀಲತೆಯ ವ್ಯತ್ಯಾಸವನ್ನು ಅನುಸರಿಸಿ ಲೋಹಗಳನ್ನು ಹೀಗೆ ವ್ಯವಸ್ಥೆಗೊಳಿಸಬಹುದು.

$Mg > Zn > Fe > Pb > Cu$

ಟೆಕ್ಸ್ಟ್ ಬುಕ್‌ನಲ್ಲಿ ಸೇರಿಸಿರುವುದು ಕೆಲವು ಲೋಹಗಳನ್ನು ಮಾತ್ರ ಸೇರಿಸಿದ ಕ್ರಿಯಾಶೀಲ ಶ್ರೇಣಿಯಾಗಿದೆ. ಇತರ ಲೋಹಗಳನ್ನು ಅಯೋನುಗಳನ್ನು ಸೇರಿಸಿ ಹಿರಿದಾಗಿಸಿದ ಲೋಹಗಳ ಕ್ರಿಯಾಶೀಲ ಶ್ರೇಣಿ ಇದೆ ಎಂದು ತರಗತಿಯಲ್ಲಿ ಚರ್ಚೆ ನಡೆಯಬೇಕಾಗಿದೆ. ಕ್ರಿಯಾಶೀಲ ಶ್ರೇಣಿಯಲ್ಲಿ ಲೋಹಗಳ ಸ್ಥಾನವನ್ನು ಅವುಗಳ ಸ್ಥಾನಪಲ್ಲಟ ಕ್ರಿಯೆಗಳನ್ನು ಕ್ರಿಯಾಶೀಲ ಶ್ರೇಣಿ ಉಪಯೋಗಿಸಿ ಪರಿಚಯಪಡಿಸಬೇಕು. ಕ್ರಿಯಾಶೀಲ ಶ್ರೇಣಿಯಲ್ಲಿ ಹೈಡ್ರೋಜನನ್ನು ಸೇರಿಸಿರುವುದು ಅದೊಂದು ಆಧಾರವಾಗಿ (reference) ಪ್ರಯೋಜನವನ್ನು ಪಡೆಯುವುದಕ್ಕಾಗಿದೆ. ($H_2$ ವಿನ ಕೆಳಗೆ ಇರುವ ಲೋಹ ಅಯೋನುಗಳನ್ನು $H_2$ ಗೆ ಅಪಕರ್ಷಿಸಲು ಸಾಧ್ಯವಾಗುವುದು) ಚಿತ್ರ 4.3 ಪರೀಕ್ಷಿಸಿ ನೋಡಿ ಪಟ್ಟಿ 4.2 ನ್ನು ಪೂರ್ತಿಗೊಳಿಸಿರಿ.

| ನಿರೀಕ್ಷಿಸಬೇಕಾದುದು | ಪ್ರಯೋಗದ ಮೊದಲು | ಪ್ರಯೋಗ ಬಳಿಕ |
|---|---|---|
| ಝಿಂಕ್ ಓಕ್ಸೈಡಿನ ಬಣ್ಣ | ಝಿಂಕಿನ ಬಣ್ಣ (ಬೂದು) | ತಾಮ್ರದ ಬಣ್ಣ |
| $CuSO_4$ ದ್ರಾವಣದ ಬಣ್ಣ | ನೀಲ ಬಣ್ಣ | ಬಹಳ ದುರ್ಬಲ (ಮಸುಕಿದ) ನೀಲ ಬಣ್ಣ |

ಝಿಂಕ್ ಓಕ್ಸೈಡಿನ ಬಣ್ಣ ಪ್ರಯೋಗದ ಮೊದಲು ಬೂದು ಬಣ್ಣವಾಗಿರುವುದು. ಪ್ರಯೋಗದ ಬಳಿಕ ಕೆಂಪು ಬಣ್ಣವಾಯಿತು. $CuSO_4$ ದ್ರಾವಣದ ಬಣ್ಣ ನೀಲಿಯಾಗಿತ್ತು. ಪ್ರಯೋಗದ ಬಳಿಕ ಬಣ್ಣ ಮಸುಕುವುದು ಎಂದು ಪಟ್ಟಿ ತುಂಬಿಸಲು ತಿಳಿದಿರಬೇಕು.

ಇಲ್ಲಿ Cu ಲೋಹ ಸ್ಥಾನಪಲ್ಲಟಗೊಳಿಸಲ್ಪಟ್ಟಿತು ಅದಕ್ಕೆ ಕಾರಣ Zn ನ ಕ್ರಿಯಾಶೀಲತೆ ಹೆಚ್ಚಿರುವುದು ಆಗಿದೆ ಎಂದು ಮಗುವಿಗೆ ತಿಳಿಯಬೇಕಾಗಿದೆ.

$Zn^{o} \rightarrow Zn^{2+} + 2e$ ಎಂಬ ಕ್ರಿಯೆ ಉತ್ಕರ್ಷಣೆಯಾಗಿದೆ ಯಾಕೆಂದರೆ Zn ಇಲೆಕ್ಟ್ರೋನ್ ಕಳೆದುಕೊಳ್ಳುತ್ತದೆ ಮತ್ತು $Cu^{2+}$ ವಿನ ಬದಲಾವಣೆ $Cu^{2+} + 2e \rightarrow Cu$ ಆಗಿದೆ ಈ ಕ್ರಿಯೆಯು ಅಪಕರ್ಷಣೆ ಎಂದು ತಿಳಿಯಲ್ಪಡಲು ಕಾರಣ $Cu^{2+}$ ಇಲೆಕ್ಟ್ರೋನ್‌ಗಳನ್ನು ಪಡೆಯುತ್ತದೆ ಎಂಬುದಾಗಿದೆ.

ಚಿತ್ರ 4.4 ಪ್ರಯೋಗ ಮಾಡುವಾಗ ಕೋಪ್ಪರ್ ಸರಿಗೆಯಲ್ಲಿ ಸಿಲ್ವರ್ ಅಂಟಿಕೊಂಡಿರುವುದನ್ನು ಕಾಣಬಹುದು. ಇದಕ್ಕೆ ಕಾರಣ $Ag^{+} + e \rightarrow Ag$ ಎಂಬ ಅಪಕರ್ಷಣಾ ಕ್ರಿಯೆಯಾಗಿದೆ. ಇಲ್ಲಿ $Ag^{+}$ ಇಲೆಕ್ಟ್ರೋನನ್ನು ಪಡೆಯುತ್ತದೆ. ಅಂದರೆ ಸಿಲ್ವರ್ ನೈಟ್ರೇಟ್ ದ್ರಾವಣದ ಬಣ್ಣ ನೀಲವಾಗಿ ಬದಲಾಗುತ್ತದೆ. ಇದು $Cu \rightarrow Cu^{2+} + 2e^{-}$ ಎಂಬ ಉತ್ಕರ್ಷಣಾ ಕ್ರಿಯೆಯ ಕಾರಣದಿಂದಾಗಿದೆ. ಇಲ್ಲಿ Cu ಇಲೆಕ್ಟ್ರೋನ್‌ಗಳನ್ನು ಕಳೆದುಕೊಂಡು ದ್ರಾವಣದಲ್ಲಿ ವಿಲೀನವಾಗುವುದು. ರಾಸಾಯನಿಕ ಕ್ರಿಯೆಯ ಸಮೀಕರಣ.

$2AgNO_{3(aq)} + Cu_{(s)} \rightarrow Cu(NO_3)_{2(aq)} + 2Ag$

$2Ag^{+}NO_{3(aq)}^{-} + Cu_{(s)} \rightarrow Cu^{2+}(NO_3^{-})_{2(aq)} + 2Ag$

ಉತ್ಕರ್ಷಣೆ ಹೊಂದಿದ ಲೋಹ : Cu

ಅಪಕರ್ಷಣೆ ಹೊಂದಿದ ಅಯೋನ್ : $Ag^{+}$

ಉತ್ಕರ್ಷಣೆ : $Cu \rightarrow Cu^{2+} + 2e^{-}$

ಅಪಕರ್ಷಣೆ: $2Ag^{+} + 2e^{-} \rightarrow 2Ag$

ಪಟ್ಟಿ 4.3 ಪೂರ್ತಿಗೊಳಿಸಿರಿ.

| ದ್ರಾವಣ/ ಲೋಹ | Mg | Cu | Zn | Fe | Ag |
|---|---|---|---|---|---|
| $MgSO_4$ | X | X | X | X | X |
| $CuSO_4$ | ✓ | X | ✓ | ✓ | X |
| $ZnSO_4$ | ✓ | X | X | X | X |
| $FeSO_4$ | ✓ | X | ✓ | X | X |
| $AgNO_3$ | ✓ | ✓ | ✓ | ✓ | X |

ಇಲೆಕ್ಟ್ರೋನ್‌ಗಳನ್ನು ಬಿಟ್ಟುಕೊಟ್ಟು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವ ಸಾಮರ್ಥ್ಯ ಕಡಿಮೆಯಾಗುವ ಕ್ರಮ.

Mg > Zn > Fe > Cu > Ag

## ಮೊಡ್ಯೂಲ್ 2

ಸಮಯ 1 ಪೀರಿಯಡ್

### ವಿದ್ಯುತ್ ಉತ್ಪಾದಿಸಲು ಲೋಹಗಳು – ಗೇಲ್ವಾನಿಕ್ ಸೆಲ್

Zn - Cu ಗೇಲ್ವಾನಿಕ್ ಸೆಲ್ಲಿನಲ್ಲಿ ಇಲೆಕ್ಟ್ರೋನ್‌ಗಳನ್ನು ಬಿಟ್ಟುಕೊಡಲು ಸಾಧ್ಯವಿರುವ ಇಲೆಕ್ಟ್ರೋಡ್ Zn ಇಲೆಕ್ಟ್ರೋನ್ ಪಡೆಯಲು ಸಾಧ್ಯವಿರುವುದು $Cu^{2+}$ ಅಯೋನಿಗೆ ಆಗಿದೆ. Zn ಇಲೆಕ್ಟ್ರೋಡಿನಲ್ಲಿ ನಡೆಯುವ ರಾಸಾಯನಿಕ

ಕ್ರಿಯೆಯ ಉತ್ಕರ್ಷಣೆಯಾಗಿದೆ. $Zn_{(s)} \rightarrow Zn^{2+} + 2e^-$ . Cu ಇಲೆಕ್ಟ್ರೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯ ಸಮೀಕರಣ $Cu^{2+} + 2e^- \rightarrow Cu$

ಎಂಬ ಅಪಕರ್ಷಣಾ ಕ್ರಿಯೆಯಾಗಿದೆ. ಚಿತ್ರದಲ್ಲಿ ಕಾಣುವ ರೀತಿಯಲ್ಲಿ ಸಾಮಗ್ರಿಗಳನ್ನು ವ್ಯವಸ್ಥೆಗೊಳಿಸಬೇಕು. Cu ದಂಡ $CuSO_4$ ದ್ರಾವಣದಲ್ಲಿಯೂ,Ag ದಂಡ $AgNO_3$ ದ್ರಾವಣದಲ್ಲಿಯೂ ಮುಳುಗಿಸಿರಿ.. Cu- $CuSO_4$ ದ್ರಾವಣದಲ್ಲಿ ಸೇರಿರುವ ಅರ್ಧ ಸೆಲ್ ಏನೋಡ್ ಆಗಿಯೂ Ag - $AgNO_3$ ದ್ರಾವಣದಲ್ಲಿ ಸೇರಿರುವ ಅರ್ಧ ಸೆಲ್ ಕೇಥೋಡ್ ಆಗಿಯೂ ವರ್ತಿಸುವುದು. ಅಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯ ಫಲವಾಗಿ ಉಂಟಾಗುವ ಇಲೆಕ್ಟ್ರೋನುಗಳು ಬಾಹ್ಯ ಸರ್ಕೀಟ್ ಮೂಲಕ Cu ದಿಂದ Ag ಗೆ ಪ್ರವಹಿಸುವುದು. ಇಲ್ಲಿ ಉಪಯೋಗಿಸಿರುವ ಸಾಲ್ಟ್ ಬ್ರಿಜ್ ಸರ್ಕೀಟ್ ಪೂರ್ತಿಯಾಗಿ ನಿರಂತರವಾಗಿ ವಿದ್ಯುತ್ ಪ್ರವಾಹ ಹರಿಯಲು ಸಾಧ್ಯವಾಗುವಂತೆ ಮಾಡುವುದು. ರಾಸಾಯನಿಕ ಕ್ರಿಯೆಯನ್ನು ಕೆಳಗೆ ಸೇರಿಸಲಾಗಿದೆ.




ಏನೋಡಿನಲ್ಲಿ $Cu \rightarrow Cu^{2+} + 2e^-$

ಕೇಥೋಡಿನಲ್ಲಿ $2Ag^+ + 2e^- \rightarrow 2Ag$

$$\underline{Cu(s) + 2Ag^+(aq) \rightarrow Cu^{2+}(aq) + 2Ag(s)}$$

ಇದೊಂದು ರಿಡೋಕ್ಸ್ ಕ್ರಿಯೆಯಾಗಿದೆ. ಈ ಇಲೆಕ್ಟ್ರೋನ್ ವರ್ಗಾವಣೆ ವಿದ್ಯುತ್ ಪ್ರವಾಹ ಉಂಟುಮಾಡುವುದು. ಇಲೆಕ್ಟ್ರೋನ್ ಪ್ರವಾಹದ ದಿಶೆ ಏನೋಡಿನಿಂದ ಕೇಥೋಡಿಗೆ ಆಗಿದೆ.

Zn, Cu, Ag ಎಂಬ ಲೋಹಗಳನ್ನು ಉಪಯೋಗಿಸಿ ತಯಾರಿಸಿದ ಗೇಲ್ವಾನಿಕ್ ಸೆಲ್ಲುಗಳ ಏನೋಡ್ ಕೇಥೋಡ್‌ಗಳು ಪಟ್ಟಿ 4.4 ರಲ್ಲಿ ಕೊಡಲಾಗಿದೆ.

| ಸೆಲ್ | ಏನೋಡ್ | ಕೇಥೋಡ್ |
|---|---|---|
| Zn - Cu | Zn | Cu |
| Zn - Ag | Zn | Ag |
| Cu - Ag | Cu | Ag |

## ಮೊಡ್ಯೂಲ್ 3

ಸಮಯ : 3 ಪೀರಿಯಡ್

### ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳು

ಚಿತ್ರ 4.6 ರಲ್ಲಿ ಕೊಟ್ಟಿರುವ ಪ್ರಯೋಗದಲ್ಲಿ $CuCl_2$ ಹರಳುಗಳು ವಿದ್ಯುತ್ ಹರಿಯಲು ಬಿಡುವುದಿಲ್ಲ ಎಂದು ತಿಳಿದುಕೊಳ್ಳಬಹುದು. ಆದರೆ $CuCl_2$ ವಿನ ಜಲೀಯ ದ್ರಾವಣ ವಿದ್ಯುತ್ ಹರಿಯಲು ಬಿಡುತ್ತದೆ. $CuCl_2$ ದ್ರವೀಕೃತ ಸ್ಥಿತಿಯಲ್ಲಿಯಾದರೆ ವಿದ್ಯುತ್ ಚಾಲಕವಾಗಿರುತ್ತಿತ್ತು. $CuCl_2$ ನ ಜಲೀಯ ದ್ರಾವಣದ ಮೂಲಕ ವಿದ್ಯುತ್ ಹರಿಯಿಸುವಾಗ ಪೊಸಿಟಿವ್ ಇಲೆಕ್ಟ್ರೋಡಿನಲ್ಲಿ ಕ್ಲೋರಿನ್ ಹೊರಬರುವುದು. ನೆಗೆಟಿವ್ ಇಲೆಕ್ಟ್ರೋಡಿನಲ್ಲಿ ಕೋಪ್ಪರ್

ನಿಕ್ಷೇಪಿಸುವುದು. $CuCl_2$ ನ ಬಣ್ಣ ಕಡಿಮೆಯಾಗುತ್ತಾ ಬರುವುದು. $CuCl_2$ ನ $Cu^{2+}$ Cu ಆಗಿ ಕೇಥೋಡಿನಲ್ಲಿ ನಿಕ್ಷೇಪಿಸುವುದು ಇದಕ್ಕೆ ಕಾರಣ.

$Cu^{2+} + 2e^- \rightarrow Cu$

ಇಲ್ಲಿ ನಡೆದುದು ಅಪಕರ್ಷಣೆಯಾಗಿದೆ.

ಅಂದರೆ ಏನೋಡಿನಲ್ಲಿ ಉತ್ಕರ್ಷಣೆ ನಡೆಯುವುದೂ, ಏನೋಡಿನ ಚಾರ್ಜ್ ಪೊಸಿಟಿವ್ ಆಗಿರುವುದೂ ಆಗಿದೆ.

$2Cl^- \rightarrow Cl_2 + 2e^-$

**ನೀರಿನ ವಿದ್ಯುತ್ ವಿಶ್ಲೇಷಣೆಯ ರಾಸಾಯನ ಶಾಸ್ತ್ರ**

ಶುದ್ಧ ನೀರು ವಿದ್ಯುತ್ತನ್ನು ಹರಿಯಬಿಡುವುದಿಲ್ಲ. ದುರ್ಬಲ ಸಲ್ಫ್ಯೂರಿಕ್ ಏಸಿಡ್ ಸೇರಿಸಿದ ನೀರಿನ ವಿದ್ಯುತ್ ವಿಶ್ಲೇಷಣೆ ನಡೆಸುವಾಗ ಕೇಥೋಡಿನ ಕಡೆಗೆ (ನೆಗೆಟಿವ್ ಇಲೆಕ್ಟ್ರೋಡ್) ಸಾಗುವ ಅಯೋನ್ ಹೈಡ್ರೋನಿಯಂ ($H_3O^+$) ಅಯೋನಾಗಿದೆ. ಏನೋಡಿನ ಕಡೆಗೆ (ಪೊಸಿಟಿವ್ ಇಲೆಕ್ಟ್ರೋಡ್) ಸಾಗುವ ಅಯೋನ್ $SO_4^{2-}$ ಆದರೂ ನೀರು ವಿಭಜನೆ ಹೊಂದಿ $O_2$, $4H^+$, $4e^-$ ಎಂಬಿವುಗಳು ಉಂಟಾಗುವುದು. ನೀರಿನ ಉತ್ಕರ್ಷಕ ಒಲವು $SO_4^{2-}$ ಗಿಂತ ಹೆಚ್ಚು ಆದಕಾರಣ ಓಕ್ಸಿಜನ್ ಏನೋಡಿನಲ್ಲಿ ಲಭಿಸುವುದು. . (Note: Pt electrodes Ni electrodes or Ni coated iron electrodes are used in this experiment).

**ದ್ರವೀಕೃತ ಸೋಡಿಯಂ ಕ್ಲೋರೈಡಿನ ವಿದ್ಯುತ್ ವಿಶ್ಲೇಷಣೆ**

- . ಪೊಸಿಟಿವ್ ಇಲೆಕ್ಟ್ರೋಡಿನ ಕಡೆಗೆ ನೆಗೆಟಿವ್ ಚಾರ್ಜ್ ಇರುವ ಕ್ಲೋರೈಡ್ ($Cl^-$) ಅಯೋನುಗಳು ಆಕರ್ಷಿಸಲ್ಪಡುವುದು.
- ಅಲ್ಲಿ ನಡೆಯುವ ರಾಸಾಯನಿಕ ಕ್ರಿಯೆ

  $2Cl^- \rightarrow Cl_2 + 2e^-$
- ನೆಗೆಟಿವ್ ಇಲೆಕ್ಟ್ರೋಡಿನ ಕಡೆಗೆ ಆಕರ್ಷಿಸುವ ಅಯೋನ್ $Na^+$ (ಸೋಡಿಯಂ ಅಯೋನ್) ಆಗಿರುವುದು.

ಇಲ್ಲಿ ನಡೆಯುವ ರಾಸಾಯನಿಕ ಕ್ರಿಯೆ

$Na^+ + e^- \rightarrow Na$

ಆದುದರಿಂದ ದ್ರವೀಕೃತ ವಿದ್ಯುತ್ ವಿಶ್ಲೇಷಣೆಗೆ ಒಳಗಾಗುವಾಗ ಪೊಸಿಟಿವ್ ಇಲೆಕ್ಟ್ರೋಡಿನಲ್ಲಿ ಕ್ಲೋರಿನ್ನೂ, ನೆಗೆಟಿವ್ ಇಲೆಕ್ಟ್ರೋಡಿನಲ್ಲಿ ಸೋಡಿಯಂ ಉತ್ಪನ್ನಗಳಾಗಿ ಲಭಿಸುವುದು.

**ಸೋಡಿಯಂ ಕ್ಲೋರೈಡ್ ದ್ರಾವಣದ ವಿದ್ಯುತ್ ವಿಶ್ಲೇಷಣೆ:**

ಸೋಡಿಯಂ ಕ್ಲೋರೈಡ್ ದ್ರಾವಣದಲ್ಲಿ ಅಯೋನುಗಳು

NaCl ನ ಅಯೋನ್‌ಗಳು : $Na^+$; $Cl^-$

$H_2O$ ನ ಅಯೋನ್‌ಗಳು : $H^+$; $OH^-$

- ಪೊಸಿಟಿವ್ ಇಲೆಕ್ಟ್ರೋಡಿನ ಕಡೆಗೆ ಆಕರ್ಷಿಸುವ ಅಯೋನುಗಳು : $Cl^-$, $OH^-$
- ನೆಗೆಟಿವ್ ಇಲೆಕ್ಟ್ರೋಡಿನ ಕಡೆಗೆ ಆಕರ್ಷಿಸುವ ಅಯೋನುಗಳು: $Na^+$; $H^+$

- ದ್ರಾವಣದಲ್ಲಿ ಧಾರಾಳವಾಗಿ ಇರುವುದು $H_2O$.

$Na^+$ ಅಯೋನ್ ಮತ್ತು $H_2O$ ನ್ನು ಹೋಲಿಸುವಾಗ ಅಪಕರ್ಷಣಾ ಒಲವು ಹೆಚ್ಚಿರುವುದು ನೀರಿಗೆ. ಆದ ಕಾರಣ ಕೇಥೋಡಿನಲ್ಲಿ ಹೈಡ್ರೋಜನ್ ಅನಿಲವಾಗಿದೆ.

$$2H_2O + 2e^- \rightarrow H_2 + 2OH^-$$

$Cl^-$ ಅಯೋನ್ ಮತ್ತು $H_2O$ ನ್ನು ಹೋಲಿಸುವಾಗ $Cl^-$ ಗೆ ಉತ್ಕರ್ಷಣೆ ಸಂಭವಿಸುತ್ತದೆ.

$$2Cl^- \rightarrow Cl_2 + 2e^-$$

ಆದಕಾರಣ ಏನೋಡಿನಲ್ಲಿ ಕ್ಲೋರಿನ್ ಅನಿಲ ಲಭಿಸುತ್ತದೆ.

**ಮೌಲ್ಯಮಾಪನ ಮಾಡೋಣ**

1. - $CuSO_4$ ದ್ರಾವಣದಲ್ಲಿಯೂ $AgNO_3$ ದ್ರಾವಣದಲ್ಲಿಯೂ ಮುಳುಗಿಸಿದ ಕಬ್ಬಿಣದ ಆಣಿಗಳಿಗೆ ಬಣ್ಣ ವ್ಯತ್ಯಾಸ ಉಂಟಾಗುವುದು.
   - $CuSO_4$ ದ್ರಾವಣದಲ್ಲಿ ಮುಳುಗಿಸಿದ ಕಬ್ಬಿಣದ ಆಣಿಯಲ್ಲಿ ನಡೆಯುವ ರಾಸಾಯನಿಕ ಕ್ರಿಯೆ ಕೆಳಗೆ ಕೊಡಲಾಗಿದೆ.

$$CuSO_4(aq) + Fe(s) \rightarrow FeSO_4(aq) + Cu$$

   $AgNO_3$ ದ್ರಾವಣದಲ್ಲಿ ಮುಳುಗಿಸಿದ ಕಬ್ಬಿಣದ ಆಣಿಯಲ್ಲಿ ನಡೆಯುವ ರಾಸಾಯನಿಕಕ್ರಿಯೆ

$$2AgNO_3(aq) + Fe(s) \rightarrow Fe(NO_3)_2(aq) + 2Ag(s)$$

   - Fe, Cu ಮತ್ತು Ag ಗಿಂತ ಕ್ರಿಯಾಶೀಲತೆ ಹೆಚ್ಚು ಇರುವ ಲೋಹವಾಗಿದೆ. ಆದಕಾರಣ Fe ಗೆ Cu ಮತ್ತು Ag ಗಳನ್ನು ಸ್ಥಾನಪಲ್ಲಟಿಸಲು ಸಾಧ್ಯವಿದೆ.

2. - ದ್ರವೀಕೃತ KCl ಮತ್ತು ಪೊಟೇಶಿಯಂ ಕ್ಲೋರೈಡ್ ದ್ರಾವಣದಲ್ಲಿ ವಿದ್ಯುತ್ ವಿಶ್ಲೇಷಣೆ ನಡೆಯುವುದು.
   - ದ್ರವೀಕೃತ KCI ನ ವಿದ್ಯುತ್ ವಿಶ್ಲೇಷಣೆ. KCl ನ $K^+$ $Cl^-$ ಅಯೋನುಗಳು.

   ಪೊಸಿಟಿವ್ ಇಲೆಕ್ಟ್ರೋಡಿನಲ್ಲಿ (ಏನೋಡಿನಲ್ಲಿ ರಾಸಾಯನಿಕ ಕ್ರಿಯೆ)

$$2Cl^- \rightarrow Cl_2 + 2e^-$$

   ಏನೋಡಿನಲ್ಲಿ ಕ್ಲೋರಿನ್ ಅನಿಲ ಉಂಟಾಗುವುದು.

ನೆಗೆಟಿವ್ ಇಲೆಕ್ಟ್ರೋಡಿನಲ್ಲಿ (ಕೇಥೋಡಿನಲ್ಲಿ ರಾಸಾಯನಿಕ ಕ್ರಿಯೆ)

$$K^+ + e^- \rightarrow K$$

   ಕೇಥೋಡಿನಲ್ಲಿ ಪೊಟೇಶಿಯಂ ಉತ್ಪನ್ನವಾಗಿ ಲಭಿಸುವುದು.

   - KCl ದ್ರಾವಣದಲ್ಲಿ ವಿದ್ಯುತ್ ವಿಶ್ಲೇಷಣೆ

   KCl ದ್ರಾವಣದಲ್ಲಿರುವ ಅಯೋನುಗಳು : $K^+$, $Cl^-$, $H^+$, $OH^-$

   ಏನೋಡಿನಲ್ಲಿ ರಾಸಾಯನಿಕ ಕ್ರಿಯೆ

$$2Cl^- \rightarrow Cl_2 + 2e^-$$

   ಏನೋಡಿನಲ್ಲಿ ಕ್ಲೋರಿನ್ ಲಭಿಸುವುದು.

ಕೇಥೋಡಿನಲ್ಲಿ ರಾಸಾಯನಿಕ ಕ್ರಿಯೆ

$$2H_2O + 2e^- \rightarrow H_2 + 2OH^-$$

ಕೇಥೋಡಿನಲ್ಲಿ ಹೈಡ್ರೋಜನ್ ಲಭಿಸುವುದು.

- ಜಲೀಯ ದ್ರಾವಣದಲ್ಲಿ ಕೇಥೋಡಿನಲ್ಲಿ $H_2$, ದ್ರವೀಕೃತ ಸ್ಥಿತಿಯಲ್ಲಿ ಕೇಥೋಡಿನಲ್ಲಿ K ಲಭಿಸುವುದು. ಎರಡೂ ಸ್ಥಿತಿಯಲ್ಲಿ ಏನೋಡಿನಲ್ಲಿ $Cl_2$ ಲಭಿಸುವುದು.

3. ಮೆಗ್ನೀಶಿಯಂ ರಿಬ್ಬನ್ $MgSO_4$ ದ್ರಾವಣದಲ್ಲಿಯೂ Ag ರೋಡ್ $AgNO_3$ ದ್ರಾವಣದಲ್ಲಿಯೂ ಮುಳುಗಿಸಿ ಇಡಿ. ಚಿತ್ರದಲ್ಲಿ ಕಾಣಿಸಿರುವ ರೀತಿಯಲ್ಲಿ ಸಾಮಾಗ್ರಿಗಳನ್ನು ಸಜ್ಜುಗೊಳಿಸಿರಿ. Mg ರಿಬ್ಬನ್‌ನಿಂದ Ag ದಂಡಕ್ಕೆ ಇಲೆಕ್ಟ್ರೋನ್ ಪ್ರವಹಿಸುವುದು. ಕೇಥೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆ.




$Ag^+ + 1e^- \rightarrow Ag$

ಏನೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆ

$Mg \rightarrow Mg^{2+} + 2e^-$

**ಮುಂದುವರಿದ ಚಟುವಟಿಕೆಗಳು**

1. $CuSO_4$ ದ್ರಾವಣದಲ್ಲಿ ಕಾರ್ಬನ್ ಇಲೆಕ್ಟ್ರೋಡ್ ಉಪಯೋಗಿಸುವಾಗ

   i. ನೆಗೆಟಿವ್ ಇಲೆಕ್ಟ್ರೋಡಿನ (ಕೇಥೋಡ್) ಬಣ್ಣ ಬದಲಾವಣೆ ಈ ಕಾರ್ಬನ್ ರೋಡಿನಲ್ಲಿ ಕೋಪ್ಪರ್ ಅಂಟಿಕೊಂಡಿರುವುದು ಇದಕ್ಕೆ ಕಾರಣ. ಕೋಪ್ಪರ್ ಸಲ್ಫೇಟ್ ದ್ರಾವಣದ ನೀಲ ಬಣ್ಣ ಕಡಿಮೆಯಾಗಿ ಬರುವುದು ಕಾಣಬಹುದು.

   ಕೇಥೋಡಿನಲ್ಲಿ (–)

   $Cu^{2+} + 2e^- \rightarrow Cu$

   ಏನೋಡಿನಲ್ಲಿ (+)

   $4OH^- - 4e^- \rightarrow 2H_2O + O_2$

2.



ಪ್ರಧಾನವಾಗಿ ಇಲ್ಲಿ ಉಪಯೋಗಿಸುವ ಇಲೆಕ್ಟ್ರೋಡ್‌ಗಳು ಕಾರ್ಬನ್ ದಂಡಗಳಾಗಿವೆ. ಆದರೆ ಮಾತ್ರ ಏನೋಡಿನಲ್ಲಿ $O_2$ ಲಭಿಸುವುದು. ಕೇಥೋಡಿನಲ್ಲಿ ಕೋಪ್ಪರ್ ಲಭಿಸುವುದು.

3. ಪಟ್ಟಿಯಲ್ಲಿ ಕೊಟ್ಟಿರುವ ರೀತಿಯಲ್ಲಿ ಇಲೆಕ್ಟ್ರೋಡ್‌ಗಳನ್ನು ತೆಗೆದುಕೊಂಡು 6 ಸೆಲ್ಲುಗಳನ್ನು ನಿರ್ಮಿಸಿರಿ. ರಾಸಾಯನಿಕ ಕ್ರಿಯೆಗಳು ಪಟ್ಟಿಯಲ್ಲಿ ಕೊಡಲಾಗಿದೆ.

| Cell | ಏನೋಡ್ | ಕೇಥೋಡ್ |
|---|---|---|
| Mg – Zn | ಮೆಗ್ನೀಶಿಯಂ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದ ಮೆಗ್ನೀಶಿಯಂ ರಿಬ್ಬನ್ $Mg \rightarrow Mg^{2+} + 2e^-$ | $ZnSO_4$ ದ್ರಾವಣದಲ್ಲಿ ಮುಳುಗಿಸಿದ Zn ರೋಡ್ $Zn^{2+} + 2e^- \rightarrow Zn$ |
| Mg – Cu | ಮೆಗ್ನೀಶಿಯಂ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದ ಮೆಗ್ನೀಶಿಯಂ ರಿಬ್ಬನ್ $Mg \rightarrow Mg^{2+} + 2e^-$ | $CuSO_4$ ದ್ರಾವಣದಲ್ಲಿ ಮುಳುಗಿಸಿದ Cu ರೋಡ್ $Cu^{2+} + 2e^- \rightarrow Cu$ |
| Mg – Ag | ಮೆಗ್ನೀಶಿಯಂ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದ ಮೆಗ್ನೀಶಿಯಂ ರಿಬ್ಬನ್ $Mg \rightarrow Mg^{2+} + 2e^-$ | $AgNO_3$ ದ್ರಾವಣದಲ್ಲಿ ಮುಳುಗಿಸಿದ Ag ಸರಿಗೆ $Ag^+ + e^- \rightarrow Ag$ |
| Zn – Cu | $ZnSO_4$ ದ್ರಾವಣದಲ್ಲಿ ಮುಳುಗಿಸಿದ Zn ರೋಡ್ $Zn \rightarrow Zn^{2+} + 2e^-$ | $CuSO_4$ ದ್ರಾವಣದಲ್ಲಿ ಮುಳುಗಿಸಿದ Cu ರೋಡ್ $Cu^{2+} + 2e^- \rightarrow Cu$ |
| Zn – Ag | $ZnSO_4$ ದ್ರಾವಣದಲ್ಲಿ ಮುಳುಗಿಸಿದ Zn ರೋಡ್ $Zn \rightarrow Zn^{2+} + 2e^-$ | $AgNO_3$ ದ್ರಾವಣದಲ್ಲಿ ಮುಳುಗಿಸಿದ Ag ಸರಿಗೆ $Ag^+ + e^- \rightarrow Ag$ |
| Cu – Ag | $CuSO_4$ ದ್ರಾವಣದಲ್ಲಿ ಮುಳುಗಿಸಿದ Cu ರೋಡ್ $Cu \rightarrow Cu^{2+} + 2e^-$ | $AgNO_3$ ದ್ರಾವಣದಲ್ಲಿ ಮುಳುಗಿಸಿದ Ag ಸರಿಗೆ $Ag^+ + e^- \rightarrow Ag$ |

4. ಒಂದಕ್ಕಿಂತ ಹೆಚ್ಚು ಸೆಲ್ಲುಗಳನ್ನು ಸೀರಿಸ್ ಕನೆಕ್ಟ್ ಮಾಡಿದ ವ್ಯವಸ್ಥೆಯೇ ಬೇಟರಿ.

**ಪ್ರೈಮರಿ ಸೆಲ್ :** ಪುನಃ ಉಪಯೋಗಿಸಲು ಸಾಧ್ಯವಿಲ್ಲದ ಒಂದು ನಿಶ್ಚಿತ ಸಮಯ ಪರಿಧಿಯಲ್ಲಿ ಮಾತ್ರ ರಾಸಾಯನಿಕ ಕ್ರಿಯೆ ಜರಗಿಸಿ ಲಭಿಸುವ ವಿದ್ಯುತ್ತನ್ನು ಒಮ್ಮೆಗೆ ಮಾತ್ರ ಉಪಯೋಗಿಸಲು ಸಾಧ್ಯವಿರುವವುಗಳೂ ಉಪಯೋಗದ ಬಳಿಕ ಡೆಡ್ ಆಗುವ ಸೆಲ್ಲುಗಳನ್ನು ಪ್ರೈಮರಿ ಸೆಲ್ ಎಂದು ಹೇಳುವರು.

ಉದಾ : ಡ್ರೈಸೆಲ್

**ಸೆಕೆಂಡರಿ ಸೆಲ್ :** ಉಪಯೋಗದ ಬಳಿಕ ಪುನಃ ವಿರುದ್ಧ ದಿಶೆಯಲ್ಲಿ ವಿದ್ಯುತ್ ಹಾಯಿಸಿ ರೀಚಾರ್ಜ್ ಮಾಡಿ ಪುನಃ ಪುನಃ ಉಪಯೋಗಿಸಲು ಸಾಧ್ಯವಿರುವ ಸೆಲ್ಲುಗಳೇ ಸೆಕೆಂಡರಿ ಸೆಲ್ಲುಗಳು. ಉದಾ : ಲೆಡ್ ಸ್ಟೋರೇಜ್ ಬೇಟರಿ. ಡ್ರೈಸೆಲ್.

ಲಕ್ಲಾನ್‌ಶ್ಯ ಸೆಲ್
ಮರ್ಕ್ಯುರಿ ಸೆಲ್

## ಪಾಠಭಾಗದಲ್ಲಿರುವ ಚಟುವಟಿಕೆಗಳಿಗೆ ಹೆಚ್ಚಿನ ವಿವರಣೆಗಳು

ಲೋಹಗಳ ಭೌತಿಕ ಗುಣಗಳು ಮಕ್ಕಳಿಗೆ ತಿಳಿದಿದೆಯಲ್ಲವೇ? ಭೌತಿಕ ಗುಣದಲ್ಲಿರುವ ಈ ಸಾಮ್ಯತೆಯ ರೀತಿಯಲ್ಲಿಯೇ ರಾಸಾಯನಿಕವಾಗಿಯೂ ಲೋಹಗಳು ಸಾದೃಶ್ಯವನ್ನು ತೋರಿಸುತ್ತವೆ.

ರಾಸಾಯನಿಕವಾಗಿ ಸಾದೃಶ್ಯವಿದ್ದರೂ ಲೋಹಗಳ ರಾಸಾಯನಿಕ ಕ್ರಿಯಾ ಸಾಮರ್ಥ್ಯದ ವ್ಯತ್ಯಾಸವನ್ನು ವಿವಿಧ ಪ್ರಯೋಗಳಿಂದ ಕಂಡುಹಿಡಿಯಲು ಸಾಧ್ಯವಿದೆ ಎಂದೂ ಮತ್ತು ಅದನ್ನು ತರಗತಿಯಲ್ಲಿ ನಡೆಸಲು ಏನೆಲ್ಲ ಮಾಡಬೇಕೆಂಬ ಹಂತಕ್ಕೆ ಮಕ್ಕಳನ್ನು ತಲುಪಿಸಬೇಕು.

ಯೂನಿಟಿನ ಪ್ರಾರಂಭದಲ್ಲಿ ಕೊಟ್ಟಿರುವ ಚಿತ್ರಗಳನ್ನು ಪರಿಶೀಲಿಸಿ ಅವುಗಳಲ್ಲಿ ನಡೆಯುವುದು ವಿದ್ಯುತ್ ರಾಸಾಯನಿಕ ಕ್ರಿಯೆಯಾಗಿದೆ ಎಂದು ತಿಳಿದುಕೊಳ್ಳಬೇಕು. ಇವುಗಳೊಳಗೆ ಇರುವ ಲೋಹಗಳ ರಾಸಾಯನಿಕ ಕ್ರಿಯೆಗಳ ಪ್ರಯೋಜನವನ್ನು ಪಡೆಯುವರು ಅಂದರೆ ಕೆಲವು ಲೋಹಗಳು ಬಹಳ ತೀವ್ರವಾಗಿ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವಾಗ ಇನ್ನು ಕೆಲವು ಬಹಳ ನಿಧಾನವಾಗಿ ಅದೇ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುತ್ತವೆ ಎಂದೂ ಮಗು ತಿಳಿಯಬೇಕು. ಲೋಹಗಳ ರಾಸಾಯನಿಕ ಕ್ರಿಯಾ ಸಾಮರ್ಥ್ಯ ಬೇರೆ ಬೇರೆಯಾಗಿದೆ ಎಂದು ಪ್ರಯೋಗಗಳಿಂದ ಹೇಗೆ ಕಂಡುಹಿಡಿಯಬಹುದೆಂದು ಮಕ್ಕಳು ಗುಂಪಾಗಿ ಯೋಚಿಸಲಿ. ಮಾರ್ಗಗಳನ್ನು ನಿರ್ದೇಶಿಸಲಿ. ಮಕ್ಕಳು ಗುಂಪುಗಳಾಗಿಯೋ ಅಲ್ಲದೆಯೋ ಈ ಪ್ರಯೋಗಗಳನ್ನು ಮಾಡಬಹುದಾಗಿದೆ.

## ಲೋಹಗಳ ನೀರಿನೊಂದಿಗಿನ ರಾಸಾಯನಿಕ ಕ್ರಿಯೆ

ಚಿತ್ರ 4.1 ರ ಪ್ರಯೋಗ ಕ್ಲಾಸ್ ರೂಮಿನಲ್ಲಿ ಪ್ರದರ್ಶಿಸುವರು. ಮೆಗ್ನೇಶಿಯಂನ್ನು ಫಿನೋಪ್ತಲೀನ್ ಸೇರಿಸಿದ ಬಿಸಿನೀರಿನಲ್ಲಿಯೂ, ತಣ್ಣೀರಿನಲ್ಲಿಯೂ ಹಾಕಿ ನಿರೀಕ್ಷಿಸುವುದು.

ಪ್ರಯೋಗದ ಬಳಿಕ ಕೆಳಗೆ ಸೇರಿಸಿದ ಪಟ್ಟಿ ಪೂರ್ತಿಗೊಳಿಸಲು ಹೇಳುವುದು.

| ಲೋಹ | ತಣ್ಣೀರು | ಬಿಸಿನೀರು | ಸುಪರ್ ಹೀಟೆಡ್ ಸ್ಟೀಂ |
|---|---|---|---|
| Na | ತೀವ್ರವಾಗಿವರ್ತಿಸಿ ಫಿನೋಪ್ತ ಲೀನ್‌ನ್ನುಪಿಂಕ್ ಬಣ್ಣವನ್ನಾಗಿಸುವುದು. $2Na + 2H_2O \rightarrow 2NaOH + H_2$ | ಸೋಡಿಯಂನ್ನು ಬಿಸಿ ನೀರಿನಲ್ಲಿಯೂ ಸೂಪರ್ ಹೀಟೆಡ್ ಸ್ಟೀಂನೊಂದಿಗೂ ವರ್ತಿಸಿ ನೋಡಬಾರದು. ತೀವ್ರವಾದ ರಾಸಾಯನಿಕ ಕ್ರಿಯೆ ಜರಗುವುದರಿಂದ ಇದು ಅಪಾಯಕಾರಿ ಯಾಗಿದೆ. | |
| Mg | ವರ್ತಿಸುವುದಿಲ್ಲ (ಬಹಳ ನಿಧಾನವಾಗಿ ವರ್ತಿಸುವುದು) | ನಿಧಾನವಾಗಿ ವರ್ತಿಸುವುದು $Mg + 2H_2O \rightarrow MgOH + H_2$ | ಹೆಚ್ಚಿನ ತೀವ್ರತೆಯಿಂದ ವರ್ತಿಸುವುದು. |
| Fe | ವರ್ತಿಸುವುದಿಲ್ಲ | ವರ್ತಿಸುವುದಿಲ್ಲ | ವರ್ತಿಸುವುದು. $3Fe + 4H_2O \rightarrow Fe_3O_4 + 4H_2$ |
| Cu | ವರ್ತಿಸುವುದಿಲ್ಲ | ವರ್ತಿಸುವುದಿಲ್ಲ | ವರ್ತಿಸುವುದಿಲ್ಲ |

## ವಾಯುವಿನೊಂದಿಗೆ ಲೋಹಗಳ ವರ್ತನೆ

ಚೂರಿಯಿಂದ ಒಂದು ತುಂಡು ಸೋಡಿಯಂನ ತುಂಡರಿಸಿದ ಭಾಗವನ್ನು ನಿರೀಕ್ಷಣೆ ಮಾಡಲು ಅವಕಾಶ ನೀಡಿರಿ. ಸ್ವಲ್ಪ ಸಮಯ ಕಳೆದಾಗ ತುಂಡರಿಸಿದ ಭಾಗದಲ್ಲಿ ಹೊಳಪು ಕಡಿಮೆಯಾಗುವುದನ್ನು ಕಾಣಬಹುದು. ಇದಕ್ಕೆ ಕಾರಣವನ್ನು ಕಂಡುಕೊಳ್ಳಲು ವಾಯುವಿನ ಘಟಕಗಳನ್ನು ತಿಳಿದಿರಬೇಕಾಗಿದೆ. ಅವುಗಳಲ್ಲಿ $O_2$, $H_2O$, $CO_2$ ಗಳು ಸೋಡಿಯಂನೊಂದಿಗೆ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುತ್ತವೆ. ಅದರ ರಾಸಾಯನಿಕ ಕ್ರಿಯೆಯ ಪ್ರವರ್ತಕ ಭಾಗ ಪ್ರಶ್ನೆ ಭಾಗದಲ್ಲಿ ನೀಡಿ ಉತ್ಪನ್ನ ಭಾಗವನ್ನು ಮಕ್ಕಳು ಪೂರ್ತಿಗೊಳಿಸಲಿ.

$$4Na + O_2 \rightarrow \text{----------------------}$$
$$2Na + 2H_2O \rightarrow \text{----------------------} + H_2O$$
$$NaOH + CO_2 \rightarrow \text{----------------------} + H_2O$$

ಹೊಸ ಮೆಗ್ನೇಶಿಯಂ ರಿಬ್ಬನ್ ವಾಯುವಿನಲ್ಲಿ ತೆರೆದಿರಿಸಿದರೆ ಹೊಳಪು ನಷ್ಟವಾಗುವುದನ್ನೊ, ಅಲ್ಯುಮೀನಿಯಂ ಪಾತ್ರೆಗಳ ಹೊಳಪು ನಷ್ಟವಾಗುವುದನ್ನೊ, ತಾಮ್ರದ ಪಾತ್ರೆಗಳಿಗೆ ಕಿಲುಬು ಹಿಡಿಯುವುದನ್ನೊ, ಚಿತ್ರಗಳನ್ನು ತೋರಿಸಿಯೋ, ICT ಉಪಯೋಗಿಸಿಯೋ Mg, Cu, Au, Na, Al ಗಳ ಹೊಳಪು ನಷ್ಟವಾಗುವಿಕೆಯ ಅವರೋಹಣ ಕ್ರಮದಲ್ಲಿ ಬರೆಯಲು ಅವಕಾಶ ಒದಗಿಸಬೇಕು.

## ಲೋಹಗಳೊಂದಿಗೆ ದುರ್ಬಲ HCl ನ ವರ್ತನೆ

ಚಿತ್ರ 4.2 ರ ರೀತಿಯಲ್ಲಿ ಟೆಸ್ಟ್ ಟ್ಯೂಬ್‌ಗಳನ್ನು ಸ್ಟೇಂಡಿನಲ್ಲಿ ಸಜ್ಜುಗೊಳಿಸಿ Mg, Pb, Zn, Fe, Cu ಎಂಬ ಲೋಹಗಳ ಒಂದೇ ಗಾತ್ರ ಮತ್ತು ಮೇಲ್ಮೈ ವಿಸ್ತೀರ್ಣವುಳ್ಳ ತುಂಡುಗಳನ್ನು ಹಾಕಿ ಉತ್ಪಾದಿಸುವ ಹೈಡ್ರೋಜನ್ ಗುಳ್ಳೆಗಳ ಸಂಖ್ಯೆಗಳ ಆಧಾರದಲ್ಲಿ ರಾಸಾಯನಿಕ ಕ್ರಿಯೆಯ ವೇಗವನ್ನು ಹೋಲಿಸಿ ವೇಗ ಕಡಿಮೆಯಾಗುವ ಕ್ರಮ ಮತ್ತು ರಾಸಾಯನಿಕ ಕ್ರಿಯೆಯ ಸಮೀಕರಣಗಳನ್ನು ಬರೆಯಲು ಸಮರ್ಥರಾಗಬೇಕು. ಮೂರು ಪರೀಕ್ಷೆಗಳಿಂದ ದೊರೆತ ಶ್ರೇಣಿಗಳ ಪಟ್ಟಿ 4.1 ರ ಕ್ರಿಯಾಶೀಲ ಶ್ರೇಣಿಯೊಂದಿಗೆ ಹೋಲಿಸಿ ದೊರೆತ ಕ್ರಮ ಸರಿಯಾಗಿದೆ ಎಂದು ತಿಳಿಸಬೇಕಾಗಿದೆ.

**ಕ್ರೋಡೀಕರಿಸಬೇಕಾದುದು**

ಲೋಹಗಳಿಗೆ ಬೇರೆಬೇರೆ ರೀತಿಯ ರಾಸಾಯನಿಕ ಕ್ರಿಯಾ ಸಾಮರ್ಥ್ಯ ಇರುತ್ತವೆ. ಅವುಗಳ ರಾಸಾಯನಿಕ ಕ್ರಿಯಾ ಸಾಮರ್ಥ್ಯ ಕಡಿಮೆಯಾಗುವುದನ್ನು ಅನುಸರಿಸಿ ವ್ಯವಸ್ಥೆಗೊಳಿಸಿದ ಶ್ರೇಣಿಯೇ ಕ್ರಿಯಾಶೀಲ ಶ್ರೇಣಿಯಾಗಿದೆ.

## ಕ್ರಿಯಾಶೀಲ ಶ್ರೇಣಿ

ಕ್ರಿಯಾಶೀಲ ಶ್ರೇಣಿಯೂ ಸ್ಥಾನಪಲ್ಲಟ ಕ್ರಿಯೆಗಳೂ. ಚಿತ್ರ 4.3 ರಲ್ಲಿ ಕೊಟ್ಟಿರುವ ಪ್ರಯೋಗವನ್ನು ಮಕ್ಕಳು ಅವಲೋಕಿಸಿ ನಿರೀಕ್ಷಣೆಯನ್ನು ಪಟ್ಟಿ 4.2 ರಲ್ಲಿ ದಾಖಲಿಸಲಿ. ಉತ್ಕರ್ಷಣೆ, ಅಪಕರ್ಷಣೆ, ರಿಡೋಕ್ಸ್ ಕ್ರಿಯೆಗಳನ್ನು ಕಂಡುಹಿಡಿಯಲು ಕ್ರಿಯಾಶೀಲತೆ ಕಡಿಮೆ ಇರುವ ಲೋಹಗಳನ್ನು ಅವುಗಳ ಲವಣ ದ್ರಾವಣದಿಂದ ಕ್ರಿಯಾಶೀಲತೆ ಹೆಚ್ಚು ಇರುವ ಲೋಹಗಳು ಸ್ಥಾನಪಲ್ಲಟ ಮಾಡುವುದೆಂದು ತಿಳಿದಿರಬೇಕು. ರಿಡೋಕ್ಸ್ ರಾಸಾಯನಿಕ ಕ್ರಿಯೆಯಲ್ಲಿ ಉತ್ಕರ್ಷಣೆ, ಅಪಕರ್ಷಣೆಗಳು ನಡೆಯುವುದು ಹೇಗೆ ಎಂದು ರಾಸಾಯನಿಕ ಸಮೀಕರಣದ ಮೂಲಕ ಮನದಟ್ಟು ಮಾಡಬೇಕು. ಸಿಲ್ವರ್ ನೈಟ್ರೇಟ್ ದ್ರಾವಣದಲ್ಲಿ ಕೋಪ್ಪರ್ ಸರಿಗೆ ಇರಿಸಿ ಮೇಲೆ ನಡೆಸಿದ ಪ್ರಯೋಗ ಚಟುವಟಿಕೆಯನ್ನು ಆವರ್ತಿಸಬೇಕಾಗಿದೆ.

ಪಟ್ಟಿ 4.3 ರ ಸ್ಪೋಟಿಂಗ್ ಟೈಲಿನ ಸಹಾಯದಿಂದ ಲೋಹಗಳನ್ನು ಲವಣ ದ್ರಾವಣದಲ್ಲಿ ಮುಳುಗಿಸಿ ನಿರೀಕ್ಷಣೆಯನ್ನು ಪೂರ್ತಿಗೊಳಿಸುವಾಗ ಕ್ರಿಯಾಶೀಲತೆ ಕಡಿಮೆ ಇರುವ ಲೋಹಗಳನ್ನು ಅವುಗಳ ಲವಣ ದ್ರಾವಣದಿಂದ ಕ್ರಿಯಾಶೀಲತೆ ಹೆಚ್ಚು ಇರುವ ಲೋಹಗಳು ಸ್ಥಾನಪಲ್ಲಟಗೊಳಿಸುತ್ತವೆ ಎಂದು ತಿಳಿದುಕೊಳ್ಳಬಹುದು. ಶ್ರೇಣಿಯಲ್ಲಿ ಹೈಡ್ರೋಜನಿನ ಸ್ಥಾನವನ್ನು ವಿವರಿಸುವಾಗ $H_2$ ನಿಂದ ಕೆಳಗಿರುವ ಲೋಹ ಅಯೋನ್‌ಗಳನ್ನು $H_2$ ಅಪಕರ್ಷಿಸುವುದೆಂದೂ $H_2$ ನಿಂದ ಮೇಲೆ ಇರುವ ಲೋಹ ಪರಮಾಣುಗಳು $H_2$ ನ್ನು ಅಪಕರ್ಷಿಸಿ ಏಸಿಡ್‌ನಿಂದ $H_2$ ಸ್ಥಾನಪಲ್ಲಟಗೊಳಿಸುವುದೆಂದೂ ವಿವರಿಸಬಹುದು. ಕ್ರಿಯೆಶೀಲತೆ ಹೆಚ್ಚಿರುವ ಲೋಹಗಳು ಸಾಮಾನ್ಯವಾಗಿ ಜಲೀಯ ದ್ರಾವಣದಲ್ಲಿ ಇಲೆಕ್ಟ್ರೋನ್‌ಗಳನ್ನು ನಷ್ಟ ಹೊಂದಿ ಪೊಸಿಟಿವ್ ಅಯೋನುಗಳಾಗುವ ಒಲವನ್ನು ತೋರಿಸುತ್ತವೆ. ಹೀಗೆ ಇಲೆಕ್ಟ್ರೋನ್‌ಗಳನ್ನು ನಷ್ಟ ಹೊಂದುವ ಲೋಹಗಳ ಸಾಮರ್ಥ್ಯ ಬೇರೆ ಬೇರೆ ಆಗಿದೆ. ಇದರ ಪ್ರಯೋಜನವನ್ನು ಪಡೆದು ಚಿತ್ರ 4.5 ರ ರೀತಿಯಲ್ಲಿ ಸಾಮಾಗ್ರಿಗಳನ್ನು ಸಜ್ಜುಗೊಳಿಸಿ ಮಕ್ಕಳು ಸ್ವತಃ ಗೇಲ್ವನಿಕ್ ಸೆಲ್ ನಿರ್ಮಿಸಿ ವಿದ್ಯುತ್ ಉತ್ಪಾದಿಸಲಿ.

ರಿಡೋಕ್ಸ್ ರಾಸಾಯನಿಕ ಕ್ರಿಯೆಯ ಮೂಲಕ ರಾಸಾಯನಿಕ ಚೈತನ್ಯವನ್ನು ವಿದ್ಯುತ್ ಚೈತನ್ಯವಾಗಿ ಬದಲಾಯಿಸುವ ವ್ಯವಸ್ಥೆಯೇ ಗೇಲ್ವನಿಕ್ ಸೆಲ್ ಅಥವಾ ವೋಲ್ಟಾ ಸೆಲ್ ಎಂದು ತಿಳಿಯಬೇಕು.
ಹೇಗೆ ವಿದ್ಯುತ್ ಉತ್ಪಾದಿಸಲ್ಪಟ್ಟಿತು ಎಂದು ತಿಳಿಯುವ ರೀತಿಯಲ್ಲಿ ಏನೋಡಿನಲ್ಲಿ ಉತ್ಕರ್ಷಣೆ ನಡೆಯುವುದು ಎಂದೂ ಕೇಥೋಡಿನಲ್ಲಿ ಅಪಕರ್ಷಣೆ ನಡೆಯುವುದು ಎಂದೂ ಮಕ್ಕಳು ತಿಳಿಯಬೇಕು. ಇಲೆಕ್ಟ್ರೋನ್ ಪ್ರವಾಹದ ದಿಶೆ ಏನೋಡಿನಿಂದ ಕೇಥೋಡಿನ ಕಡೆಗೆ ಎಂದು ತಿಳಿಯಪಡಿಸಬೇಕು.

ಸಿಲ್ವರ್ ಇಲೆಕ್ಟ್ರೋಡ್ ಮತ್ತು ಕೋಪ್ಪರ್ ಇಲೆಕ್ಟ್ರೋಡ್ ಬಳಸಿ ಇನ್ನೊಂದು ಗೇಲ್ವನಿಕ್ ಸೆಲ್ ನಿರ್ಮಿಸಿ ಸೆಲ್ ಚಿತ್ರಿಸಿ ರಾಸಾಯನಿಕ ಕ್ರಿಯೆ ಬರೆದು ಇಲೆಕ್ಟ್ರೋನ್ ಪ್ರವಾಹದ ದಿಶೆ ಗುರುತಿಸಲು ಮಗುವಿಗೆ ಸಾಧ್ಯವಾಗುವ ರೀತಿಯಲ್ಲಿ ಚಟುವಟಿಕೆಯನ್ನು ಆಯೋಜಿಸಬೇಕು. ಕೇಥೋಡಿನಲ್ಲಿ ಮತ್ತು ಏನೋಡಿನಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳನ್ನು ಪ್ರತ್ಯೇಕವಾಗಿ ಬರೆಯಲೂ, ರಿಡೋಕ್ಸ್ ಕ್ರಿಯೆಯನ್ನು ಬರೆಯಲೂ ಮಗುವಿಗೆ ಸಾಧ್ಯವಾಗಬೇಕು. ಪಟ್ಟಿ 4.4 ಪೂರ್ತಿಗೊಳಿಸುವಾಗ ಗೇಲ್ವನಿಕ್ ಸೆಲ್‌ನ ರಾಸಾಯನಿಕ ಕ್ರಿಯೆಗಳನ್ನು ಏನೋಡ್, ಕೇಥೋಡ್‌ಗಳನ್ನು ತಿಳಿದುಕೊಂಡು ಮೌಲ್ಯಮಾಪನ ಮಾಡಬೇಕು.

## ಮೊಡ್ಯುಲ್ 3

ಸಮಯ : 3 ಪೀರಿಯಡ್

ರಾಸಾಯನಿಕ ಚೈತನ್ಯವನ್ನು ವಿದ್ಯುತ್ ಚೈತನ್ಯವಾಗಿ ಬದಲಾಯಿಸಬಹುದೆಂದು ನಾವು ಕಂಡುಹಿಡಿದೆವು. ಹಾಗಾದರೆ ವಿದ್ಯುತ್ ಚೈತನ್ಯವನ್ನು ಉಪಯೋಗಿಸಿ ರಾಸಾಯನಿಕ ಕ್ರಿಯೆಗಳನ್ನು ನಡೆಸಲು ಸಾಧ್ಯವಿಲ್ಲವೇ? ನೀರಿನ ವಿದ್ಯುತ್ ವಿಶ್ಲೇಷಣೆ ಮಾಡಿ ಹೈಡ್ರೋಜನ್ ಮತ್ತು ಓಕ್ಸಿಜನ್‌ಗಳಾಗಿ ಬದಲಾಯಿಸಲು ಸಾಧ್ಯವಾಗಿದೆಯಲ್ಲವೇ?

### ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳು

ಚಿತ್ರ 4.6 ರಲ್ಲಿ ಕೊಟ್ಟಿರುವ ಪ್ರಯೋಗವನ್ನು ಮಕ್ಕಳು ಮಾಡಲಿ. ಕ್ಯುಪ್ರಿಕ್ ಕ್ಲೋರೈಡ್ ದ್ರಾವಣದ ಮೂಲಕ ವಿದ್ಯುತ್ ಹಾಯಿಸುವಾಗ ಬೇಟರಿಯ ಪೊಸಿಟಿವ್ ಧ್ರುವದೊಂದಿಗೆ ಜೋಡಿಸಿದ ಇಲೆಕ್ಟ್ರೋಡಿನಲ್ಲಿಯೂ ನೆಗೆಟಿವ್ ಧ್ರುವದೊಂದಿಗೆ ಜೋಡಿಸಿದ ಇಲೆಕ್ಟ್ರೋಡಿನಲ್ಲಿಯೂ ನಡೆದ ರಾಸಾಯನಿಕ ಕ್ರಿಯೆಗಳನ್ನು ಮಕ್ಕಳು ನಿರೀಕ್ಷಣೆ ಮಾಡಿ ದಾಖಲಿಸಿ ರಾಸಾಯನಿಕ ಸಮೀಕರಣಗಳನ್ನು ಬರೆಯಲಿ. ಇಲ್ಲಿಯೂ ಏನೋಡಿನಲ್ಲಿ ಉತ್ಕರ್ಷಣೆ ಮತ್ತು

ಕೇಥೋಡಿನಲ್ಲಿ ಅಪಕರ್ಷಣೆ ನಡೆಯುವುದೆಂದು ಮಕ್ಕಳಿಗೆ ತಿಳಿಸಬೇಕು. ಇಲ್ಲಿ ಗೇಲ್ವಾನಿಕ್ ಕೋಶಕ್ಕಿಂತ ವಿಭಿನ್ನವಾಗಿ ಏನೋಡ್ ಪೊಸಿಟಿವ್ ಮತ್ತು ಕೇಥೋಡ್ ನೆಗೆಟಿವ್ ಎಂಬ ಆಶಯ ರೂಪಿಸಬೇಕು.

**ನೀರಿನ ವಿದ್ಯುದ್ವಿಶ್ಲೇಷಣೆಯ ರಸಾಯನ ಶಾಸ್ತ್ರ.** ಶುದ್ಧ ನೀರಿನಲ್ಲಿ ವಿದ್ಯುತ್ ಪ್ರವಹಿಸುವುದಿಲ್ಲವೆಂದೂ ಸ್ವಲ್ಪ ಆಮ್ಲ ಸೇರಿಸಿದಾಗ ವಿದ್ಯುತ್ ಪ್ರವಹಿಸುವುದೆಂದೂ ಆಗ ಕೇಥೋಡ್ ಹಾಗೂ ಏನೋಡಿನಲ್ಲಿ ರಾಸಾಯನಿಕ ಕ್ರಿಯೆ ಜರಗುವುದೆಂದೂ ಅವುಗಳನ್ನು ಮಕ್ಕಳಿಂದ ಬರೆಸಬೇಕೆಂದು ನೆನಪಿಡಿರಿ.
ರಿಡೋಕ್ಸ್ ಕ್ರಿಯೆಯ ರಾಸಾಯನಿಕ ಸಮೀಕರಣ ಬರೆದು $H_2$ ಕೇಥೋಡಿನಲ್ಲೂ $O_2$ ಏನೋಡಿನಲ್ಲಿ ಲಭಿಸುವುದಕ್ಕಿರುವ ರಸಾಯನಶಾಸ್ತ್ರವನ್ನು ಮಕ್ಕಳು ತಿಳಿದುಕೊಳ್ಳಬೇಕು.

## ದ್ರವೀಕರಿಸಿದ ಸೋಡಿಯಂ ಕ್ಲೋರೈಡಿನ ವಿದ್ಯುತ್ ವಿಶ್ಲೇಷಣೆ

ಘನರೂಪದಲ್ಲಿ NaCI ವಿದ್ಯುತ್ ವಾಹಕವಲ್ಲ. ಅಯೋನುಗಳಿಗೆ ಚಲನ ಸ್ವಾತಂತ್ರ್ಯ ಇಲ್ಲದಿರುವುದು ಇದಕ್ಕೆ ಕಾರಣ. ಆದರೆ ದ್ರವೀಕರಿಸಿದ ಸ್ಥಿತಿಯಲ್ಲಿ NaCI ವಿದ್ಯುತ್ ವಾಹಕವಾಗುವುದು. ನೆಗೆಟಿವ್ ಇಲೆಕ್ಟ್ರೋಡಿನಲ್ಲಿ ಮತ್ತು ಪೊಸಿಟಿವ್ ಇಲೆಕ್ಟ್ರೋಡಿನಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳನ್ನು ಬರೆದು ಪೊಸಿಟಿವ್ ಇಲೆಕ್ಟ್ರೋಡಿನಲ್ಲಿ ಕ್ಲೋರಿನ್ ಅನಿಲವೂ ನೆಗೆಟಿವ್ ಇಲೆಕ್ಟ್ರೋಡಿನಲ್ಲಿ ಸೋಡಿಯಂ ಲಭಿಸುವುದೆಂದು ಮಕ್ಕಳು ತಿಳಿದುಕೊಳ್ಳಬೇಕು.

## ಸೋಡಿಯಂ ಕ್ಲೋರೈಡ್ ದ್ರಾವಣದ ವಿದ್ಯುತ್ ವಿಶ್ಲೇಷಣೆ

ಎರಡು ಕಾರ್ಬನ್ ದಂಡಗಳನ್ನುಪಯೋಗಿಸಿ ಸೋಡಿಯಂ ಕ್ಲೋರೈಡ್ ದ್ರಾವಣದ ಮೂಲಕ ವಿದ್ಯುತ್ ಹಾಯಿಸುವಾಗ ಪೊಸಿಟಿವ್ ಅಯೋನುಗಳಾದ $Na^+$, $H_3O^+$ ನೆಗೆಟಿವ್ ಇಲೆಕ್ಟ್ರೋಡಿನ ಕಡೆಗೆ ಆಕರ್ಷಿಸಲ್ಪಡುವುದು ಆದರೆ ಇಲೆಕ್ಟ್ರೋನಿನಿಂದ ಅಪಕರ್ಷಣೆಯ ಮೂಲಕ $H_2$ ಉಂಟಾಗುವುದು.

$$2H_2O + 2e^- \rightarrow H_2 + 2OH^-$$

ಆದರೆ $Cl^-$, $OH^-$ ಎಂಬ ನೆಗೆಟಿವ್ ಅಯೋನುಗಳು ಪೊಸಿಟಿವ್ ಇಲೆಕ್ಟ್ರೋಡಿನ ಕಡೆಗೆ ಚಲಿಸಿ $Cl^-$ ಉತ್ಕರ್ಷಣೆಗೊಳಗಾಗಿ $Cl_2$ ಉಂಟಾಗುವುದು.

$$2Cl^- \rightarrow Cl_2 + 2e^-$$

ಹೀಗೆ ಪೊಸಿಟಿವ್ ಇಲೆಕ್ಟ್ರೋಡಿನಲ್ಲಿ ಕ್ಲೋರಿನ್ ಮತ್ತು ನೆಗೆಟಿವ್ ಇಲೆಕ್ಟ್ರೋಡಿನಲ್ಲಿ $H_2$ ಲಭಿಸುವುದು. $Na^+OH^-$ ನೀರಿನಲ್ಲೇ ಉಳಿಯುವುದರಿಂದ ಫಿನೋಫ್ತಲಿನಿಂದಾಗಿ ಗುಲಾಬಿ ಬಣ್ಣ ಉಂಟಾಗುವುದು.

## ಸೆಲ್ ತಯಾರಿಸುವಾಗ ಗಮನಿಸಬೇಕಾದ ವಿಷಯಗಳು

- ಸಮಾನ ಪ್ರಬಲತೆಯ ಇಲೆಕ್ಟ್ರೋಲೈಟ್ ದ್ರಾವಣಗಳನ್ನು ತೆಗೆದುಕೊಳ್ಳಲು ಗಮನಿಸಬೇಕು.
- 0ಯಿಂದ 2 ವೋಲ್ಟ್‌ವರೆಗೆ ಅಳೆಯಲು ಸಾಧ್ಯವಿರುವ ವೋಲ್ಟ್‌ಮೀಟರ್ (ಡಿಜಿಟಲ್ ಆದರೆ ಉತ್ತಮ) ಉಪಯೋಗಿಸುವುದು ಉತ್ತಮ.
- ಇಲೆಕ್ಟ್ರೋಡ್ ಪೊಟೆನ್ಶಿಯಲ್‌ನಲ್ಲಿ ಬಹಳ ವ್ಯತ್ಯಾಸವಿರುವ ಲೋಹ ದಂಡಗಳನ್ನು ಉಪಯೋಗಿಸಿದರೆ ಸಾಮಾನ್ಯ ದೊಡ್ಡ ರೀಡಿಂಗ್ ಲಭಿಸಬಹುದು.
- ಲೋಹಗಳ ಮೇಲ್ಮೈಯನ್ನು ಹೊಯಿಗೆ ಕಾಗದದಿಂದ ಚೆನ್ನಾಗಿ ಉಜ್ಜಿ ಶುಚಿಗೊಳಿಸಬೇಕು.

- ಸಾಲ್ಟ್ ಬ್ರಿಡ್ಜ್ ತಯಾರಿಸಲು $KNO_3$, KCl, $NH_4$, $NO_3$ ಇವುಗಳಲ್ಲಿ ಯಾವುದಾದರೂ ಒಂದರ ದ್ರಾವಣದಲ್ಲಿ ಮುಳುಗಿಸಿದ ಫಿಲ್ಟರ್ ಪೇಪರ್ ನ್ಯೂಸ್ ಪೇಪರ್, ಬಟ್ಟೆ, ಬನಿಯನ್ ಬಟ್ಟೆ, ದೀಪದ ಬತ್ತಿ ಇವುಗಳಲ್ಲಿ ಯಾವುದನ್ನೂ ಉಪಯೋಗಿಸಬಹುದು.

## ಹೆಚ್ಚಿನ ಮಾಹಿತಿಗಾಗಿ

### ಗೇಲ್ವಾನಿಕ್ ಸೆಲ್ಲಿನ ರಾಸಾಯನಿಕ ಕ್ರಿಯೆಗಳು

ಗೇಲ್ವಾನಿಕ್ ಸೆಲ್ಲಿನ ಎರಡು ಇಲೆಕ್ಟ್ರೋಲೈಟುಗಳ ನಡುವೆ ಸಂಪರ್ಕ ಕಲ್ಪಿಸಿ ಮಂಡಲ ಪೂರ್ತಿಗೊಳಿಸಲು ಸಾಲ್ಟ್‌ಬ್ರಿಡ್ಜನ್ನು ಉಪಯೋಗಿಸುವರು. ಸಾಲ್ಟ್ ಬ್ರಿಡ್ಜ್‌ನಲ್ಲಿರುವ ಅಯೋನುಗಳ ಪ್ರವಾಹವು ಮಂಡಲವನ್ನು ಪೂರ್ತಿಗೊಳಿಸುವುದು. ಸಾಲ್ಟ್ ಬ್ರಿಡ್ಜ್ ನಲ್ಲಿ ರಾಸಾಯನಿಕ ಕ್ರಿಯೆ ಜರಗುವುದಿಲ್ಲ. ಸಾಲ್ಟ್‌ಬ್ರಿಡ್ಜ್ ತಯಾರಿಸಲು ಉಪಯೋಗಿಸುವ ಲವಣದ ಪೊಸೆಟಿವ್ ಅಯೋನಿನ ಮತ್ತು ನೆಗೆಟಿವ್ ಅಯೋನಿನ ಗಾತ್ರ ಸಮಾನವಾಗಿದ್ದರೆ ಅವುಗಳ ವಾಹಕತ್ವ ಸಾಮಾನ್ಯ ಒಂದೇ ರೀತಿಯಿರಬಹುದು. ಸಾಲ್ಟ್ ಬ್ರಿಡ್ಜ್ ಉಪಯೋಗಿಸದಿದ್ದರೆ ಬಾಹ್ಯ ಮಂಡಲದಲ್ಲಿ ಇಲೆಕ್ಟ್ರೋನ್ ಪ್ರವಹಿಸಲಾರದು.

ಗೇಲ್ವಾನಿಕ್ ಸೆಲ್ಲಿನಲ್ಲಿ ಪೊಟೆನ್ಶಿಯಲ್ ವ್ಯತ್ಯಾಸವುಂಟಾಗುವುದು ಹೇಗೆ?

ಪ್ರತಿಯೊಂದು ಇಲೆಕ್ಟ್ರೋಡಿಗೂ ಅದರದ್ದೇ ಆದ ಪೊಟೆನ್ಶಿಯಲ್ ಇರುವುದು. Zn, $ZnSO_4$ ದ್ರಾವಣದಲ್ಲಿ ಮುಳುಗಿಸಿರಿಸಿದಾಗ Zn ಇಲೆಕ್ಟ್ರೋನುಗಳನ್ನು ಕಳಕೊಂಡು ಅಯೋನುಗಳಾಗಿ ದ್ರಾವಣವನ್ನು ಸೇರುವುದು ಮತ್ತು $Zn^{2+}$ ಇಲೆಕ್ಟ್ರೋನುಗಳನ್ನು ಸ್ವೀಕರಿಸಿ ಲೋಹವಾಗಿ ಬದಲಾಗುವ ಆಸಕ್ತಿ ತೋರಿಸುವುದು.

$$Zn \rightarrow Zn^{2+} + 2e^-$$

$$Zn^{2+} \rightarrow 2e^- + Zn$$

Cu, $CuSO_4$ ದ್ರಾವಣದಲ್ಲಿ ಇದೇ ರೀತಿ ವರ್ತಿಸುವುದು.

$$Cu \rightarrow Cu^{2+} + 2e^-$$

$$Cu^{2+} \rightarrow 2e^- + Cu$$

ಪ್ರತಿಯೊಂದು ಇಲೆಕ್ಟ್ರೋಡಿನಲ್ಲೂ ಲೋಹದ ಹಾಗೂ ಅದರ ಅಯೋನುಗಳ ಈ ಒಲವು ಲೋಹ ಹಾಗೂ ಇಲೆಕ್ಟ್ರೋಲೈಟ್ ನಡುವಿನ ಸಂಪರ್ಕ ಮೇಲ್ಮೈಯಲ್ಲಿ ಒಂದು ಪೊಟೆನ್ಶಿಯಲ್ ಉಂಟಾಗುವುದು. ಇದುವೇ ಇಲೆಕ್ಟ್ರೋಡ್ ಪೊಟೆನ್ಶಿಯಲ್. ಇದು ವಿವಿಧ ಲೋಹ ಇಲೆಕ್ಟ್ರೋಡುಗಳಲ್ಲಿ ವಿಭಿನ್ನವಾಗಿರುವುದು.

ಈ ಇಲೆಕ್ಟ್ರೋಡುಗಳೊಳಗಿನ ಇಲೆಕ್ಟ್ರೋಡ್ ಪೊಟೆನ್ಶಿಯಲ್ ವ್ಯತ್ಯಾಸವು ಸೆಲ್ emf ಆಗಿರುವುದು.






### ಸ್ಟಾಂಡರ್ಡ್ ಹೈಡ್ರಜನ್ ಇಲೆಕ್ಟ್ರೋಡ್

ಒಂದು ಪ್ಲಾಟಿನಂ ಇಲೆಕ್ಟ್ರೋಡನ್ನು1M HCl ದ್ರಾವಣದಲ್ಲಿ ಮುಳುಗಿಸಿರಿಸಿ ಅದರ ಮೂಲಕ 298K (25°C) ಉಷ್ಣತೆಯಲ್ಲಿ ಹಾಗೂ 1atm ಒತ್ತಡದಲ್ಲಿರುವ $H_2$ಅನಿಲವನ್ನು ಹಾಯಿಸಲಾಗುವುದು SHE ಎಂಬುದು ಒಂದು ಅರ್ಧ ಸೆಲ್ಲಾಗಿದೆ. ಇದರ ಇಲೆಕ್ಟ್ರೋಡ್ ಪೊಟೆನ್ಶಿಯಲ್ ಸೊನ್ನೆ ಎಂದು ಪರಿಗಣಿಸಲಾಗಿದೆ.

$$H^+(ag) + e^- \rightarrow \frac{1}{2} H_2(g)$$

ಈ ವ್ಯವಸ್ಥೆಯನ್ನು ಲೋಹಗಳ ಸ್ಟಾಂಡರ್ಡ್ ಇಲೆಕ್ಟ್ರೋಡ್ ಪೊಟೆನ್ಶಿಯಲ್ ಲೆಕ್ಕಹಾಕಲು ಉಪಯೋಗಿಸಲಾಗುವುದು. SHE ಯೊಂದಿಗೆ ಜೋಡಿಸಿದಾಗ ಏನೋಡಾಗಿ ವರ್ತಿಸುವುದರ ಇಲೆಕ್ಟ್ರೋಡ್ ಪೊಟೆನ್ಶಿಯಲ್ ನೆಗೆಟಿವ್ ಆಗಿ ಪರಿಗಣಿಸಲಾಗುವುದು. ಕೇಥೋಡಾಗಿ ವರ್ತಿಸುವುದರ ಇಲೆಕ್ಟ್ರೋಡ್ ಪೊಟೆನ್ಶಿಯಲ್ ಪೊಸೆಟಿವ್ ಆಗಿರುವುದು.

### ಪ್ರೈಮರಿ ಸೆಲ್ಲುಗಳು

1. ಕಾರ್ಬನ್ – ಸತು ಡ್ರೈಸೆಲ್

ಏನೋಡ್ : ಸತುವಿನ ಪಾತ್ರೆ

ಕೇಥೋಡ್ : ಸುತ್ತಲೂ $MnO_2$ ಹುಡಿ ತುಂಬಿಸಲ್ಪಟ್ಟ ದಂಡ

ಇಲೆಕ್ಟ್ರೋಲೈಟ್: $NH_4Cl$, $ZnCl_2$ಸೇರಿಸಿದ ಪೇಸ್ಟ್

ಏನೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆ :

ಕೇಥೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆ: $NH^{4+} + e^- + MnO_2 \rightarrow MnO(OH) + NH_3$

### ಪಾದರಸದ ಸೆಲ್

ಏನೋಡ್ - Zn (HgO)

ಕೇಥೋಡ್- HgO : $HgO + H_2O + 2e^- \rightarrow Hg + 2OH^-$

ಸೆಲ್ಲಿನ ರಾಸಾಯನಿಕ ಕ್ರಿಯೆ- $Zn(Hg) + HgO(s) \rightarrow ZnO(s) + Hg(l)$

### ಸೆಕೆಂಡರಿ ಸೆಲ್

ಲೆಡ್‌ಸ್ಟೋರೇಜ್ ಸೆಲ್ – ರೀಚಾರ್ಜ್ ಮಾಡಬಹುದಾದ ಸೆಲ್

ಏನೋಡ್ – ಸ್ಪಂಜಿನಂತಹ ಸೀಸ

ಕೇಥೋಡ್ – ಲೆಡ್‌ಪೆರೋಕ್ಸೈಡ್ ತುಂಬಿಸಿದ ಲೆಡ್.

ಇಲೆಕ್ಟ್ರೋಲೈಟ್ – ದುರ್ಬಲ ಸಲ್ಫ್ಯೂರಿಕ್ ಆಮ್ಲ

ಕೇಥೋಡ್- $Pb(s) + SO_4^{2}(aq) \rightarrow PbSO_4(s) + 2e^-$

ಏನೋಡ್- $PbO_2(s) + SO_4^{2}(aq) + 4H^+(aq) + 2e^- \rightarrow PbSO_4(s) + 2H_2O(l)$

ಫ್ಯೂಯಲ್ ಸೆಲ್

$H_2/O_2$ ಫ್ಯೂಯಲ್ ಸೆಲ್

ಏನೋಡ್ - $H_2$ - $2H_2(g) + 4(OH^-)aq + 2e^- \rightarrow 4H_2O + 4e^-$

ಕೇಥೋಡ್- $O_2$ + $O_2(g) + 2H_2O + 4e^- \rightarrow 4OH-$

ಇಲೆಕ್ಟ್ರೋಲೈಟ್ - NaOH(aq)

ಸೆಲ್ಲಿನ ರಾಸಾಯನಿಕ ಕ್ರಿಯೆ - $2H_2 + O_2 \rightarrow 2H_2O$

# 5

# ಲೋಹಗಳ ಉತ್ಪಾದನೆ

**ಮುನ್ನುಡಿ**

ವಿಜ್ಞಾನದ ಬೆಳವಣಿಗೆಯಲ್ಲಿ ಲೋಹಗಳ ಸಂಶೋಧನೆಗೆ ಮಹತ್ತರವಾದ ಪಾತ್ರವಿದೆ. ಕೆಲವು ಲೋಹಗಳು ಸ್ವತಂತ್ರ ಸ್ಥಿತಿಯಲ್ಲಿ ಕಂಡುಬರುವುದು. ಆದರೆ ಇತರ ಹೆಚ್ಚಿನ ಲೋಹಗಳೂ ಯೋಗ್ಯವಾದ ಅದಿರುಗಳಿಂದ ರಾಸಾಯನಿಕ ಕ್ರಿಯೆಗಳ ಮೂಲಕ ಬೇರ್ಪಡಿಸಿ ತೆಗೆಯುವವುಗಳಾಗಿವೆ. ಇದಕ್ಕೆ ಸಂಬಂಧಿಸಿದ ವಿವಿಧ ಹಂತಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಯೌಗಿಕಗಳು, ಅದಿರುಗಳು, ಗೇಂಗ್, ಅದಿರುಗಳ ಸಾಂದ್ರೀಕರಣ ವಿಧಾನಗಳು, ಕಾಲ್ಸಿನೇಶನ್, ರೋಸ್ಟಿಂಗ್, ಲೋಹ ಶುದ್ಧೀಕರಣದ ವಿವಿಧ ವಿಧಾನಗಳು. ಲೋಹಗಳ ಕೈಗಾರಿಕಾ ಮಟ್ಟದ ಉತ್ಪಾದನೆ (ಕಬ್ಬಿಣ, ಅಲ್ಯುಮಿನಿಯಂ) ಮಿಶ್ರ ಲೋಹವಾದ ವಿವಿಧ ತರದ ಉಕ್ಕುಗಳ ವೈಶಿಷ್ಟ್ಯಗಳು, ತಾಮ್ರದ ಶುದ್ಧೀಕರಣ ಪ್ರಕ್ರಿಯೆ ಎಂಬಿವುಗಳು ಪ್ರಧಾನ ಆಶಯಗಳಾಗಿವೆ. ಮಾನವ ಸಮೂಹದ ಅಭಿವೃದ್ಧಿಗೆ ತಳಹದಿಯಾದ ಕಬ್ಬಿಣ ಮತ್ತು ಅಲ್ಯುಮೀನಿಯಂ ಇವುಗಳ ಕೈಗಾರಿಕಾ ಮಟ್ಟದ ಉತ್ಪಾದನೆಗೆ ಪ್ರತ್ಯೇಕ ಪರಿಗಣನೆ ನೀಡಲಾಗಿದೆ. ಲೋಹ ಶುದ್ಧೀಕರಣದಲ್ಲಿ ಪ್ರಧಾನವಾಗಿ ತಾಮ್ರದ ಶುದ್ಧೀಕರಣದ ಕುರಿತು ಬಗ್ಗೆ ಚರ್ಚಿಸಲಾಗಿದೆ. ಲೋಹ ಶುದ್ಧೀಕರಣಕ್ಕೆ ಸಂಬಂಧಿಸಿದ ವಿವಿಧ ಹಂತಗಳ ರಾಸಾಯನಿಕ ಸಮೀಕರಣಗಳನ್ನು ರೂಪಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು. ವಿದ್ಯಾರ್ಥಿಗಳಿಗೆ ಲೋಹಗಳ ಉತ್ಪಾದನೆಯ ವಿವಿಧ ಹಂತಗಳನ್ನು ಮನದಟ್ಟು ಮಾಡಲು ಫೀಲ್ಡ್ ಟ್ರಿಪ್, ಕಾರ್ಖಾನೆಗಳ ಸಂದರ್ಶನ ಎಂಬಿವುಗಳ ಸಾಧ್ಯತೆಗಳನ್ನು ಉಪಯೋಗಿಸಬೇಕು.

# MODULE WISE PERIOD DISTRIBUTION

**ಒಟ್ಟು ಪೀರಿಯಡ್ 12**

**ಅಧ್ಯಾಯ – 5**

## ಲೋಹಗಳ ಉತ್ಪಾದನೆ

**ಮೋಡ್ಯೂಲ್ 1** **ಪೀರಿಯಡ್ 6**

- ಯೌಗಿಕಗಳು, ಅದಿರುಗಳು
- ಲೋಹಗಳ ಉತ್ಪಾದನೆಯ ಪ್ರಧಾನ ಘಟ್ಟಗಳು
- ಅದಿರುಗಳ ಸಾಂದ್ರೀಕರಣ
- ಸಾಂದ್ರೀಕರಿಸಿದ ಅದಿರಿನಿಂದ ಲೋಹಗಳ ಬೇರ್ಪಡಿಸುವಿಕೆ.
- ಲೋಹ ಶುದ್ಧೀಕರಣ.
- ಲೋಹಗಳ ಉತ್ಪಾದನೆಯ ರಸಾಯನ ಶಾಸ್ತ್ರ.

**ಮೋಡ್ಯೂಲ್ 2** **ಪೀರಿಯಡ್ 6**

- ಕಬ್ಬಿಣದ ಕೈಗಾರಿಕಾ ಮಟ್ಟದ ಉತ್ಪಾದನೆ
- ಅಲ್ಯುಮೀನಿಯಂನ ಉತ್ಪಾದನೆ
- ತಾಮ್ರದ ಶುದ್ಧೀಕರಣ

ಯೂನಿಟ್ ಫ್ರೇಂ

ಒಟ್ಟು ಪೀರಿಯಡ್ 12

| ಆಶಯಗಳು/ ತಿಳುವಳಿಕೆಗಳು/ ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| **ಮೊಡ್ಯೂಲ್ – 1** **ಪೀರಿಯಡ್ 6**<br>• ಖನಿಜಗಳು ಮತ್ತು ಅದಿರುಗಳು<br>• ಲೋಹಗಳ ಉತ್ಪಾದನೆ – ಪ್ರಧಾನ ಹಂತಗಳು<br>• ಅದಿರುಗಳ ಸಾಂದ್ರೀಕರಣ<br>– ನೀರಿನ ಪ್ರವಾಹದಲ್ಲಿ ತೊಳೆಯುವುದು<br>– ತೇಲಿಸುವುದು<br>– ಕಾಂತೀಯ ಬೇರ್ಪಡಿಸುವಿಕೆ<br>– ಲೀಚಿಂಗ್<br>• ಸಾಂದ್ರೀಕರಿಸಿದ ಅದಿರಿನಿಂದ ಲೋಹಗಳ ಬೇರ್ಪಡಿಸುವಿಕೆ.<br>– ಸಾಂದ್ರೀಕರಿಸಿದ ಅದಿರಿನ ಓಕ್ಸೈಡುಗಳು<br>♦ ಕಾಲ್ಸಿನೇಶನ್<br>♦ ರೋಸ್ಟಿಂಗ್<br>– ಓಕ್ಸೈಡಾಗಿ ಬದಲಾಯಿಸಿದ ಅದಿರಿನ ಅಪಕರ್ಷಣೆ | • ಪಟ್ಟಿ ಮಾಡುವುದು; ವಿಶ್ಲೇಷಣೆ, ಚರ್ಚೆ.<br>ಐ. ಸಿ. ಟಿ ಹೆಚ್ಚಿನ ಖನಿಜಗಳ ಬಗ್ಗೆ ತಿಳಿಯಲು.<br>• ಚರ್ಚೆ<br>ವಿಶ್ಲೇಷಣೆ<br>ಚಾರ್ಟ್ ತಯಾರಿ<br>• ಚರ್ಚೆ<br>ವಿಶ್ಲೇಷಣೆ<br>ಪಟ್ಟಿ ಪೂರ್ತಿಗೊಳಿಸುವುದು.<br>• ಚರ್ಚೆ<br>ವಿಶ್ಲೇಷಣೆ<br>ವರ್ಗೀಕರಿಸುವುದು.<br>ಹೋಲಿಸುವುದು.<br>ರಾಸಾಯನಿಕ ಸಮೀಕರಣ ರೂಪಿಸುವುದು. | • ಖನಿಜಗಳು, ಅದಿರುಗಳು, ಗೇಂಗ್ ಎಂಬಿವುಗಳನ್ನು ಗುರುತಿಸಿ ಅವುಗಳ ಬಗ್ಗೆ ವಿವರಿಸಲು ಸಾಧ್ಯವಾಗುವುದು.<br>• ಮೆಟಲರ್ಜಿಯ ವಿವಿಧ ಹಂತಗಳಲ್ಲಿ ನಡೆಯುವ ಕ್ರಿಯೆಗಳನ್ನು ವಿವರಿಸುವರು.<br>• ನೀರಿನ ಪ್ರವಾಹದಲ್ಲಿ ತೊಳೆಯುವುದು, ತೇಲಿಸುವ ಕ್ರಿಯೆ, ಕಾಂತೀಯ ಬೇರ್ಪಡಿಸುವಿಕೆ ಲೀಚಿಂಗ್ ಎಂಬ ಸಾಂದ್ರೀಕರಣ ವಿಧಾನಗಳಲ್ಲಿ ಅದಿರಿನ ಸಾಂದ್ರೀಕರಣಕ್ಕೆ ಯೋಗ್ಯ ವಾದವುಗಳನ್ನು ಕಂಡುಹಿಡಿದು ಸೂಚಿಸುವರು.<br>• ಓಕ್ಸೈಡುಗಳನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ಕಾಲ್ಸಿನೇಶನ್ ಮತ್ತು ರೋಸ್ಟಿಂಗ್‌ಗಳೊಳಗಿನ ವ್ಯತ್ಯಾಸ ಹಾಗೂ ಅದಿರುಗಳಿಗೆ ಸಂಬಂಧ ಪಟ್ಟದ್ದನ್ನು ಆಯ್ದುಕೊಳ್ಳುವರು. |

**ಯೂನಿಟ್ ಫ್ರೇಂ** **ಒಟ್ಟು ಪೀರಿಯಡ್ 12**

| ಆಶಯಗಳು/ ತಿಳುವಳಿಕೆಗಳು/ ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಲೋಹ ಶುದ್ಧೀಕರಣ<br>– ದ್ರವೀಕರಿಸಿ ಬೇರ್ಪಡಿಸುವುದು.<br>– ಬಾಷ್ಪೀಕರಣ<br>– ವಿದ್ಯುದ್ವಿಶ್ಲೇಷಣೆ | • ಚರ್ಚೆ<br>ವಿಶ್ಲೇಷಣೆ<br>ವರ್ಗೀಕರಣ<br>ಹೋಲಿಸುವಿಕೆ | • ಲೋಹ ಶುದ್ಧೀಕರಣದ ವಿವಿಧ ವಿಧಾನಗಳಾದ ದ್ರವೀಕರಿಸಿ ಬೇರ್ಪಡಿಸುವಿಕೆ, ಬಾಷ್ಪೀಕರಣ, ವಿದ್ಯುದ್ವಿಶ್ಲೇಷಣೆ ಎಂಬಿವುಗಳನ್ನು ಲೋಹಗಳ ಮತ್ತು ಕಶ್ಮಲಗಳ ಗುಣ ಸ್ವಭಾವಗಳ ಆಧಾರದಲ್ಲಿ ಆರಿಸಲು ಸಾಧ್ಯವಾಗುವುದು. |
| • ಲೋಹಗಳ ಉತ್ಪಾದನೆಯ ರಸಾಯನ ಶಾಸ್ತ್ರ | • ಚರ್ಚೆ<br>ವಿಶ್ಲೇಷಣೆ<br>ವರ್ಗೀಕರಣ<br>ಹೋಲಿಸುವಿಕೆ<br>ಚಾರ್ಟ್ ನಿರ್ಮಾಣ<br>ಟಿಪ್ಪಣಿ ತಯಾರಿ | • ಲೋಹ ಉತ್ಪಾದನೆಯ ರಸಾಯನ ಶಾಸ್ತ್ರವನ್ನು ವಿವರಿಸಲು ಸಾಧ್ಯವಾಗುವುದು. |
| **ಮೊಡ್ಯೂಲ್ 2** **ಪೀರಿಯಡ್ 6**<br>• ಕಬ್ಬಿಣದ ಕೈಗಾರಿಕಾ ಉತ್ಪಾದನೆ<br>– ಪಿಗ್ ಅಯರ್ನ್<br>– ಕಾಸ್ಟ್ ಅಯರ್ನ್ | • ಚರ್ಚೆ<br>ವಿಶ್ಲೇಷಣೆ<br>ಐ.ಸಿ.ಟಿ. ಬ್ಲಾಸ್ಟ್ ಫರ್ನಸ್ ವೀಡಿಯೋ ಚಾರ್ಟ್ ತಯಾರಿ<br>ರಾಸಾಯನಿಕ ಸಮೀಕರಣ ರೂಪೀಕರಣ ಫೀಲ್ಡ್ ಟ್ರಿಪ್ | • ಕೈಗಾರಿಕಾ ಮಟ್ಟದಲ್ಲಿ ಕಬ್ಬಿಣದ ಉತ್ಪಾದನೆಯ ವಿವಿಧ ಘಟ್ಟಗಳನ್ನು ವಿವರಿಸುವರು. |
| • ವಿವಿಧ ರೀತಿಯ ಉಕ್ಕುಗಳು | • ಚರ್ಚೆ, ಪಟ್ಟಿ ಮಾಡುವುದು, ವಿಶ್ಲೇಷಣೆ | • ವಿವಿಧ ರೀತಿಯ ಉಕ್ಕುಗಳ ವಿಶೇಷತೆಗಳನ್ನು ತಿಳಿದುಕೊಳ್ಳುವರು. |

**ಯೂನಿಟ್ ಫ್ರೇಮ್** **ಒಟ್ಟು ಪೀರಿಯಡ್ 12**

| ಆಶಯಗಳು/ ತಿಳುವಳಿಕೆಗಳು/ ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಅಲ್ಯುಮಿನಿಯಂ – ಉತ್ಪಾದನೆ<br>• ಬೋಕ್ಸೈಟಿನಿಂದ ಅಲ್ಯುಮಿನಿಯಂ ಉತ್ಪಾದನೆಯ ವಿಧಾನ.<br>• ಅಲ್ಯುಮಿನಾವನ್ನು ವಿದ್ಯುತ್ ವಿಶ್ಲೇಷಣೆಗೆ ಒಳಪಡಿಸಿ ಅಲ್ಯುಮಿನಿಯಂನ್ನು ಬೇರ್ಪಡಿಸಲಾಗುವುದು.<br>• ತಾಮ್ರದ ಶುದ್ಧೀಕರಣ | • ಚರ್ಚೆ<br>• ಚಿತ್ರ ನಿರೀಕ್ಷಣೆ<br>• ವಿಶ್ಲೇಷಣೆ<br>• ರಾಸಾಯನಿಕ ಸಮೀಕರಣದ ರೂಪೀಕರಣ<br>• ಪ್ರಯೋಗ – ವಿದ್ಯುತ್ ವಿಶ್ಲೇಷಣೆ ವಿಧಾನದ ಮೂಲಕ ತಾಮ್ರದ ಶುದ್ಧೀಕರಣ. | • ಅಲ್ಯುಮಿನಿಯಂ ಅದಿರಿನ ಸಾಂದ್ರೀಕರಣ ಮತ್ತು ಅಲ್ಯುಮಿನಿಯಂ ಉತ್ಪಾದನೆ ವಿಧಾನವನ್ನು ವಿವರಿಸುವರು.<br>• ತಾಮ್ರದ ಶುದ್ಧೀಕರಣ ಪ್ರಕ್ರಿಯೆಯನ್ನು ವಿವರಿಸುವರು. |

## ಯೂನಿಟ್‌ನ ಕಡೆಗೆ....

**ಮೋಡ್ಯೂಲ್ 1**

**ಮೆಟಲರ್ಜಿ – ಪ್ರಧಾನ ಹಂತಗಳು** ಸಮಯ : 6 ಪೀರಿಯಡ್

### ಬೇಕಾಗುವ ಸಾಮಾಗ್ರಿಗಳು

ವಿವಿಧ ಯೌಗಿಕಗಳ ಹೆಸರು ಮತ್ತು ರಾಸಾಯನಿಕ ಸೂತ್ರವನ್ನು ಬರೆದ ಚಾರ್ಟು:

ಲೋಹಗಳ ಸಂಶೋಧನೆಗೆ ಸಂಬಂಧಿಸಿದ ಚರಿತ್ರೆಯನ್ನು ಪ್ರಾರಂಭದಲ್ಲಿ ವಿವರಿಸಬಹುದು. ಮಕ್ಕಳಿಗೆ ಲೋಹಗಳ ಬಗ್ಗೆ ಹೆಚ್ಚು ಆಸಕ್ತಿ ಉಂಟಾಗುವುದಕ್ಕಾಗಿ ಕೆಲವೊಂದು ಪುರಾತನ ವಸ್ತುಗಳನ್ನು ಸೇರಿಸಿಕೊಳ್ಳಬಹುದು.

ಉದಾ : ಲೋಹಯುಗ ಮುಂತಾದವುಗಳು ಒಂದು ಚರ್ಚೆಯ ಮೂಲಕ ವಿವಿಧ ಲೋಹ ನಿರ್ಮಿತ ವಸ್ತುಗಳನ್ನು, ಅವುಗಳು ಒಳಗೊಂಡಿರುವ ಲೋಹಗಳ ಗುಣ ವಿಶೇಷತೆ ಕುರಿತಾದ ಒಂದು ಪಟ್ಟಿ ತಯಾರಿಸಬಹುದು. ಲೋಹಗಳ ಕಾಠಿಣ್ಯ, ತಂತುಶೀಲ ಪತ್ರಶೀಲತ್ವ, ವಿದ್ಯುತ್ ವಾಹಕತ್ವ ಮೊದಲಾದ ಭೌತಿಕ ಗುಣಗಳು ಉಪಯೋಗಿಸಲ್ಪಡುವ ವಿವಿಧ ಸಂದರ್ಭಗಳಿಗೆ ಉದಾಹರಣೆಗಳನ್ನು ಕಂಡುಹಿಡಿಯುವಂತೆ ಮಕ್ಕಳಿಗೆ ಸೂಚಿಸಬಹುದು. ಅನಂತರ ಲೋಹಗಳ ಉತ್ಪಾದನೆಯ ಬಗ್ಗೆ ಒಂದು ಚರ್ಚೆ ನಡೆಸಬಹುದು.

**ಚರ್ಚಾ ಸೂಚಕಗಳು**

- ಎಲ್ಲಾ ಲೋಹಗಳ ಕ್ರಿಯಾ ಸಾಮರ್ಥ್ಯ ಸಮಾನವಾಗಿದೆಯೇ?
- ಎಲ್ಲಾ ಲೋಹಗಳೂ ಭೂಮಿಯಲ್ಲಿ ಕಂಡುಬರುವುದು ಒಂದೇ ರೀತಿಯಲ್ಲಿಯೇ?

### ಕ್ರೋಡೀಕರಿಸಬೇಕಾದುದು – ಖನಿಜಗಳು (ನಿರ್ವಚನ)

- ಭೂಮಿಯಲ್ಲಿ ಕಂಡುಬರುವ ಎಲ್ಲಾ ಖನಿಜಗಳಿಂದಲೂ ಲೋಹಗಳ ಮೂಲವಸ್ತುಗಳನ್ನು ಕೈಗಾರಿಕಾ ಮಟ್ಟದಲ್ಲಿ ಉತ್ಪಾದಿಸಲು ಸಾಧ್ಯವಿದೆಯೇ?
- ಈ ರೀತಿಯಲ್ಲಿ ಉತ್ಪಾದಿಸಬೇಕಿದ್ದಲ್ಲಿ ಇವುಗಳಿಗಿರಬೇಕಾದ ವಿಶೇಷತೆಗಳು ಯಾವುವು?

ಈ ವಿಶೇಷತೆಗಳನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ.

### ಕ್ರೋಡೀಕರಿಸಬೇಕಾದುದು – ಅದಿರುಗಳು (ನಿರ್ವಚನ)

ಅನಂತರ ಪಾಠ ಪುಸ್ತಕದ ಪುಟ 87 ರಲ್ಲಿರುವ ಪಟ್ಟಿ 5.1 ನ್ನು ವಿಶ್ಲೇಷಿಸಬೇಕು. ಚರ್ಚೆಯ ಮೂಲಕ ಪಟ್ಟಿಯನ್ನು ವಿಸ್ತರಿಸಬಹುದು. ಎಲ್ಲಾ ಅದಿರುಗಳೂ ಖನಿಜಗಳಾಗಿವೆಯೆಂದೂ ಆದರೆ ಎಲ್ಲಾ ಖನಿಜಗಳೂ ಅದಿರುಗಳಲ್ಲವೆಂದೂ ಇರುವ ನಿಗಮನಕ್ಕೆ ಮಕ್ಕಳನ್ನು ತಲುಪಿಸಬೇಕು.

ಖನಿಜಗಳ ಕುರಿತಾದ ಹೆಚ್ಚಿನ ಮಾಹಿತಿಗೆ http://gwydir.demon.co.uk/jo/minerals/alphabet/htm ಎಂಬ ವೆಬ್‌ಲಿಂಕನ್ನು ಪರಿಚಯಿಸಬೇಕು.

ಮಕ್ಕಳಿಗೆ ಖನಿಜಗಳ ಕುರಿತಾದ ತಿಳುವಳಿಕೆಯನ್ನು ದೃಢಗೊಳಿಸಲು ವರ್ಕ್‌ಶೀಟ್ 1 ನ್ನು ಉಪಯೋಗಿಸಬಹುದು.

## ಹೆಚ್ಚಿನ ಮಾಹಿತಿಗಾಗಿ

**ಅದಿರುಗಳಿಗೆ ಹೆಚ್ಚಿನ ಉದಾಹರಣೆಗಳು :**

| ಲೋಹ | ಅದಿರು | ರಾಸಾಯನಿಕ ಸೂತ್ರ |
|---|---|---|
| ಪೊಟಾಶಿಯಂ | ಸಿಲ್ವಿನ್ | $KCl$ |
| ಸೋಡಿಯಂ | ರೋಕ್‌ಸಾಲ್ಟ್ | $NaCl$ |
| ಕಾಲ್ಸಿಯಂ | ಲೈಮ್‌ಸ್ಟೋನ್ | $CaCO_3$ |
| | ಜಿಪ್ಸಂ | $CaSO_4.2H_2O$ |
| ಮೆಗ್ನೀಶಿಯಂ | ಮೇಗ್ನಸೈಟ್ | $MgCO_3$ |
| | ಡೋಲೋಮೈಟ್ | $MgCO_3.CaCO_3$ |
| ಅಲ್ಯುಮೀನಿಯಂ | ಡಯಾಸ್ಪೋರ್ | $Al_2O_3.H_2O$ |
| | ಕಯೋಲಿನೈಟ್ (ಒಂದು ರೀತಿಯ ಕ್ಲೇ) | $Al_2(OH)_4.Si_2O_5$ |
| ಟೈಟಾನಿಯಂ | ರುಟೈಲ್ | $TiO_2$ |
| | ಇಲ್ಮನೈಟ್ | $FeTiO_3$ |
| ಸತು | ಝಿಂಕ್ಸೈಟ್ | $ZnO$ |
| ಕಬ್ಬಿಣ | ಅಯರ್ನ್ ಪೈರೈಟ್ | $FeS_2$ |
| ತವರ | ಕಾಸಿಟ್ಟರೈಟ್ (ಟಿನ್ ಸ್ಟೋನ್) | $SnO_2$ |
| ಕ್ರೋಮಿಯಂ | ಕ್ರೋಮೈಟ್ | $FeCr_2O_4$ |
| ಮೆಂಗನೀಸ್ | ಪೈರೋಲಸೈಟ್ | $MnO_2$ |
| ಸೀಸ | ಗಲೇನ | $PbS$ |
| ಕೋಪ್ಪರ್ | ಮೆಲಕೈಟ್ | $CuCO_3.Cu(OH)_2$ |
| | ಕೋಪ್ಪರ್ ಗ್ಲಾನ್ಸ್ | $Cu_2S$ |
| ಪಾದರಸ | ಸಿನಬಾರ್ | $HgS$ |
| ಬೆಳ್ಳಿ | ಅರ್ಜೆಂಟೈಟ್ | $Ag_2S$ |

ಅನಂತರದ ಚರ್ಚೆಗಳಲ್ಲಿ ಲೋಹಗಳ ಉತ್ಪಾದನೆ ಅಥವಾ ಮೆಟಲರ್ಜಿ ಇದರ ಮೂರು ಪ್ರಧಾನ ಹಂತಗಳನ್ನು ಕ್ರೋಡೀಕರಿಸಬೇಕು. ಹಂತಗಳನ್ನು ಚರ್ಚಿಸಿದ ನಂತರ ಚಾರ್ಟು ಮಾಡಿ ಮಂಡಿಸುವಂತೆ ತಿಳಿಸಬಹುದು.

## ಅದಿರುಗಳ ಸಾಂದ್ರೀಕರಣ

ಅದಿರುಗಳಲ್ಲಿ ಹಲವು ರೀತಿಯ ಕಶ್ಮಲಗಳು ಸೇರಿಕೊಂಡಿರಬಹುದೆಂಬ ವಿಷಯವನ್ನು ಮಕ್ಕಳಿಗೆ ತಿಳಿಸಬೇಕು. ಅದಿರುಗಳಿಂದ ಇಂತಹ ಕಶ್ಮಲಗಳನ್ನು ಬೇರ್ಪಡಿಸಬೇಕಾದ ಅಗತ್ಯದ ಬಗ್ಗೆ ಚರ್ಚೆ ನಡೆಸಬಹುದು.

**ಚರ್ಚಾ ಸೂಚಕಗಳು**

- ಅದಿರುಗಳ ಸಾಂದ್ರೀಕರಣದ ಅಗತ್ಯವೇನು?
- ಸಾಂದ್ರೀಕರಣದ ಮೊದಲು ಅದಿರನ್ನು ಚೆನ್ನಾಗಿ ಹುಡಿಮಾಡುವುದು ಯಾಕಾಗಿರಬಹುದು?
- ಎಲ್ಲ ಅದಿರುಗಳಲ್ಲಿ ಸೇರಿಕೊಂಡಿರುವ ಕಶ್ಮಲಗಳು ಸಮಾನ ಸ್ವಭಾವದವುಗಳಾಗಿರಬಹುದೇ?
- ಎಲ್ಲ ಅದಿರುಗಳ ಮೂಲಭೂತ ಘಟಕಗಳು ಒಂದೇ ಆಗಿವೆಯೇ?

ಕ್ರೋಡೀಕರಿಸಬೇಕಾದುದು : ಅದಿರುಗಳ ಸಾಂದ್ರೀಕರಣಕ್ಕಿರುವ ವಿವಿಧ ವಿಧಾನಗಳು ಸಾಂದ್ರೀಕರಣದ ವಿವಿಧ ರೀತಿಗಳನ್ನು ಚಾರ್ಟಿನಲ್ಲಿ ಅಥವಾ ಕರಿಹಲಗೆಯಲ್ಲಿ ಬರೆಯಬಹುದು.

### 1. ನೀರಿನ ಪ್ರವಾಹದಲ್ಲಿ ತೊಳೆದು ತೆಗೆಯುವುದು (Levigation or Hydraulic Washing)

ಪಾಠ ಪುಸ್ತಕದ ಪುಟ ಸಂಖ್ಯೆ 88 ರಲ್ಲಿರುವ ಚಿತ್ರ 5.1 ರ ಸಹಾಯದೊಂದಿಗೆ ವಿವರಿಸಬಹುದು. ಅದಿರಿನ ಸಾಂದ್ರತೆ ಹೆಚ್ಚಿದ್ದು ಕಶ್ಮಲಗಳ ಸಾಂದ್ರತೆ ಕಡಿಮೆಯಿರುವಾಗ ಈ ವಿಧಾನವನ್ನು ಬಳಸುವರೆಂದು ಮನದಟ್ಟುಮಾಡಬೇಕು. ಕಶ್ಮಲಗಳನ್ನು ಬೇರ್ಪಡಿಸಲು ಗ್ರ್ಯಾವಿಟಿಯಲ್ಲಿರುವ ವ್ಯತ್ಯಾಸವನ್ನು ಉಪಯೋಗಿಸುವುದರಿಂದ ಈ ವಿಧಾನಕ್ಕೆ Gravity Separation ಎಂಬ ಹೆಸರನ್ನೂ ಉಪಯೋಗಿಸಬಹುದು. ಗ್ರ್ಯಾವಿಟಿಯ ವ್ಯತ್ಯಾಸವನ್ನು ಉಪಯೋಗಿಸುವುದಕ್ಕಾಗಿ ಜಲ ಪ್ರವಾಹದ ಮೇಲ್ಪದರನ್ನು (upaward stream) ಉಪಯೋಗಿಸುವರು.

### 2. ನೊರೆಯಲ್ಲಿ ತೇಲಿಸುವಿಕೆ (Froth Floatation)

ನೊರೆಯಲ್ಲಿ ತೇಲಿಸುವ ವಿಧಾನವನ್ನು ಬಳಸುವ ಸಂದರ್ಭಗಳನ್ನು ಮಕ್ಕಳಿಗೆ ತಿಳಿಸಬೇಕು. ಈ ಪ್ರಕ್ರಿಯೆಯನ್ನು ವಿವರಿಸುವುದಕ್ಕಾಗಿ ಪಾಠ ಪುಸ್ತಕದಲ್ಲಿರುವ ಪುಟ ಸಂಖ್ಯೆ 88 ರ ಚಿತ್ರ 5.2 ನ್ನು ಉಪಯೋಗಿಸಬಹುದು. ಇದಲ್ಲದೆ ನೊರೆಯಲ್ಲಿ ತೇಲಿಸುವ ಪ್ರಕ್ರಿಯೆಯ ಏನಿಮೇಶನ್ ವೀಡಿಯೋ ಇಂಟರ್‌ನೆಟ್ಟಿನಿಂದ ಡೌನ್ ಲೋಡ್ ಮಾಡಿ ಉಪಯೋಗಿಸುವುದು ಹೆಚ್ಚು ಫಲಕಾರಿಯಾಗಬಹುದು. ಈ ಪ್ರಕ್ರಿಯೆಯಲ್ಲಿ ಪೈನ್ ಎಣ್ಣೆ ಹಾಗೂ ವಾಯುವನ್ನು ಉಪಯೋಗಿಸುವುದು ಧಾರಾಳ ನೊರೆ ಉಂಟಾಗುವುದಕ್ಕಾಗಿದೆ. ನೊರೆ ಉಂಟಾದರೆ ಮಾತ್ರವೇ ಅದಿರು ಅದರಲ್ಲಿ ಅಂಟಿಕೊಂಡು ನೀರಿನ ಮೇಲ್ಭಾಗದಲ್ಲಿ ತೇಲಬಹುದು. ಈ ವಿಧಾನವನ್ನು ಪ್ರಧಾನವಾಗಿ ಉಪಯೋಗಿಸುವುದು ಸಲ್ಫೈಡ್ ಅದಿರುಗಳಿಗೆಂದು ಕ್ರೋಡೀಕರಿಸಬಹುದು.

**ಹೆಚ್ಚಿನ ಮಾಹಿತಿಗಾಗಿ**

ನೊರೆಯಲ್ಲಿ, ತೇಲಿಸುವ ಕ್ರಿಯೆಯ ತತ್ವ

ನೊರೆಯಲ್ಲಿ ತೇಲಿಸುವ ಕ್ರಿಯೆಗೆ ಮೇಲ್ಮೈ ಹೀರುವಿಕೆಯು ಆಧಾರವಾಗಿರುವುದು. ಎಣ್ಣೆಯ ಕಣಗಳು ಅದಿರಿನ ಕಣಗಳನ್ನು ಬೇಗನೆ ಒದ್ದೆಯಾಗಿಸಿ ನೊರೆಯ ಇದನ್ನು ಮೇಲ್ಭಾಗಕ್ಕೆ ಕೊಂಡೊಯ್ಯುವುದು. ಇದೇ ಸಮಯದಲ್ಲಿ, ಕಶ್ಮಲದ ಕಣಗಳನ್ನು ನೀರು ಒದ್ದೆಯಾಗಿಸಿ ಅವುಗಳು ಟಾಂಕಿಯ ಅಡಿಭಾಗದಲ್ಲಿ ತಂಗುವುದು. ಈ ನೊರೆಯನ್ನು ಇನ್ನೊಂದು ಟಾಂಕಿಗೆ ವರ್ಗಾಯಿಸಿ ಅಲ್ಲಿ ನೀರಿನಿಂದ ತೊಳೆದು ಅದಿರಿನ ಕಣಗಳನ್ನು ಬೇರ್ಪಡಿಸಲಾಗುವುದು.

**ತೇಲಿಸುವ ಪ್ರಕ್ರಿಯೆಯಲ್ಲಿ ಉಪಯೋಗಿಸಲ್ಪಡುವ ಇತರ ಪದಾರ್ಥಗಳು**

ಪೈನ್ ಎಣ್ಣೆಯ ಹೊರತಾಗಿ ಫೇಟ್ಟಿ ಏಸಿಡುಗಳು (Fatty Acids), ಝಾಂತೇಟ್ಸ್ (Xanthates) ಎಂಬಿವುಗಳನ್ನು ಮಿಶ್ರಣದಲ್ಲಿ ಸೇರಿಸುವರು. ಈ ರಿಯೇಜಿಂಟುಗಳನ್ನು ಸಂಗ್ರಾಹಕಗಳೇ (Collectors) ನ್ನುವರು. ಅದಿರಿನ ಕಣಗಳ non-wettability ಹೆಚ್ಚಿಸುವುದಕ್ಕಾಗಿ ಇವುಗಳನ್ನು ಉಪಯೋಗಿಸುವರು. ಫೋರ್ತ್ ಸ್ಟೆಬಿಲೈಸರುಗಳಾದ Froth Stabilizers) ಅನಿಲಿನ್, ಕ್ರಸೋಲ್ ಎಂಬಿವುಗಳನ್ನೂ ಮಿಶ್ರಣದಲ್ಲಿ ಸೇರಿಸುವರು.

**ಪ್ಲವನ ಪ್ರಕ್ರಿಯೆ – ಎರಡು ಸಲ್ಫೈಡು ಅದಿರುಗಳ ಬೇರ್ಪಡಿಸುವಿಕೆಗೆ**

ನೀರಿನ ಮತ್ತು ಎಣ್ಣೆಯ ನಿಷ್ಪತ್ತಿಯನ್ನು ಕ್ರಮೀಕರಿಸಿ ಎರಡು ಸಲ್ಫೈಡ್ ಅದಿರುಗಳನ್ನು ಬೇರ್ಪಡಿಸಬಹುದು. ಕೆಲವು ಸಲ್ಫೈಡುಗಳಲ್ಲಿ **ಡಿಪ್ರಸೆಂಟುಗಳು** (**Depressants**) ಎಂದು ಕರೆಯಲ್ಪಡುವ ಪದಾರ್ಥಗಳನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸಿ ಇದನ್ನು ನಡೆಸುವರು. ಈ ರಿಯೇಜಂಟುಗಳು ಕೆಲವು ಸಲ್ಫೈಡು ಅದಿರುಗಳು ನೊರೆಯೊಂದಿಗೆ ಬರುವುದನ್ನು ತಡೆಯುವುದು ಉದಾಹರಣೆಗೆ ZnS, PbS ಎಂಬಿವುಗಳು ಸೇರಿದ ಅದಿರಿನ ಸಾಂದ್ರೀಕರಣದಲ್ಲಿ NaCN ನ್ನು ಡಿಪ್ರಸೆಂಟಾಗಿ ಉಪಯೋಗಿಸುವರು. ಇದು ZnS-ನ ಮೇಲ್ಮೈಯಲ್ಲಿ $Na_2[Zn(CN)_4]$ ಎಂಬ ಸತುವಿನ ಯೌಗಿಕದ ಆವರಣ ಉಂಟುಮಾಡಿ ಅದು ನೊರೆಯೊಂದಿಗೆ ಸೇರುವುದನ್ನು ತಡೆಯುವುದು. ನೊರೆಯೊಂದಿಗೆ ಬರುವ PbS ನ ಕಣಗಳನ್ನು ನೊರೆಯಿಂದ ಬೇರ್ಪಡಿಸಬಹುದು.

**3. ಕಾಂತೀಯ ಬೇರ್ಪಡಿಸುವಿಕೆ (Magnetic Separation)**

ಅದಿರು ಹಾಗೂ ಕಶ್ಮಲಗಳು ಕಾಂತೀಯ ಗುಣವುಳ್ಳವುಗಳಾದರೆ ಮತ್ತು ಎರಡಕ್ಕೂ ಕಾಂತೀಯ ಸ್ವಭಾವ ಇಲ್ಲದಿದ್ದರೆ ಈ ವಿಧಾನವನ್ನು ಉಪಯೋಗಿಸಲು ಸಾಧ್ಯವಿಲ್ಲ. ಒಂದು ರೋಲರನ್ನು ಮಾತ್ರ ಕಾಂತ ವಾಗಿಸಬಹುದೆಂಬ ವಿಷಯವನ್ನು ಗಮನಿಸಬೇಕು. ಪಾಠ ಪುಸ್ತಕದ ಪುಟ ಸಂಖ್ಯೆ 88 ರ ಚಿತ್ರ 5.3 ನ್ನು ಉಪಯೋಗಿಸಿ ಚರ್ಚಿಸಬೇಕು.

**4. ಲೀಚಿಂಗ್ (Leaching)**

ಇತರ ವಿಧಾನಗಳಿಗಿಂತ ವಿಭಿನ್ನವಾಗಿ ಇದು ಒಂದು ರಾಸಾಯನಿಕ ಕ್ರಿಯೆಯೆಂಬುದನ್ನು ತಿಳಿಸಬೇಕು.
ಸಾಂದ್ರೀಕರಣ ವಿಧಾನಗಳ ಕುರಿತಾದ ಸಾಮಾನ್ಯ ಆಶಯ ರೂಪೀಕರಣಕ್ಕೆ ಪಾಠ ಪುಸ್ತಕದ ಪುಟ ಸಂಖ್ಯೆ 89ರ ಪಟ್ಟಿ 5.2 ನ್ನು ಆಧಾರವಾಗಿರಿಸಿ ವರ್ಕ್‌ಶೀಟ್ ನೀಡಬಹುದು (ವರ್ಕ್‌ಶೀಟ್ 2)

## II. ಸಾಂದ್ರೀಕರಿಸಿದ ಅದಿರಿನಿಂದ ಲೋಹದ ಬೇರ್ಪಡಿಸುವಿಕೆ (Extraction of Metal from Concentrated Ore)

ಇದರ ಎರಡು ಹಂತಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಚರ್ಚಿಸಬೇಕು.

### a) ಸಾಂದ್ರೀಕರಿಸಿದ ಅದಿರನ್ನು ಓಕ್ಸೈಡುಗಳಾಗಿಸುವುದು

#### i) ಕಾಲ್ಸಿನೇಶನ್ (Calcination)

ವಾಯುವಿನ ಸಂಪರ್ಕವಿಲ್ಲದೆ ಅದಿರನ್ನು ಬಿಸಿಮಾಡಬೇಕಾದ, ಆದರೆ ಉಷ್ಣತೆಯನ್ನು ದ್ರವೀಕರಣ ಬಿಂದುವಿಗಿಂತ ಕಡಿಮೆಯಾಗಿರುವಂತೆ ನೋಡಿಕೊಳ್ಳಬೇಕಾದ ವಿಷಯವನ್ನು ಮನದಟ್ಟುಮಾಡಬೇಕು. ಇಲ್ಲಿ ಅದಿರಿನೊಂದಿಗೆ ಓಕ್ಸಿಜನ್ ವರ್ತಿಸಬೇಕಾದುದಿಲ್ಲ. ದ್ರವೀಕರಣ ಬಿಂದುವಿಗಿಂತ ಉನ್ನತ

ಉಷ್ಣತೆಯಲ್ಲಿ ಅದಿರಿನಲ್ಲಿರುವ ಲೋಹದ ಯೌಗಿಕವು ದ್ರವೀಕರಿಸಲ್ಪಟ್ಟು ರಾಸಾಯನಿಕ ಬದಲಾವಣೆಗೆ ಸಾಧ್ಯತೆಯಿರುವುದು. ಯಾವ ರೀತಿಯ ಅದಿರುಗಳಿಗೆ ಕಾಲ್ಸಿನೇಶನ್ ಉಪಯೋಗಿಸಬೇಕೆಂಬುದು ಸ್ಪಷ್ಟವಾಗಬೇಕು.

**ii) ರೋಸ್ಟಿಂಗ್ (Roasting)**

ಇಲ್ಲಿಯೂ ದ್ರವೀಕರಣ ಬಿಂದುವಿಗಿಂತ ಕೆಳಗಿನ ಉಷ್ಣತೆಯನ್ನು ಉಪಯೋಗಿಸುವುದು ಯಾಕೆಂದರೆ ಅದಿರಿನಲ್ಲಿರುವ ಯೌಗಿಕವು ದ್ರವೀಕರಿಸಲ್ಪಟ್ಟು ಅಪಕರ್ಷಣೆ ಸಾಧ್ಯವಾಗದಂತಹ ಯೌಗಿಕವಾಗಿ ಬದಲಾಗುವುದನ್ನು ತಡೆಯುವುದಕ್ಕಾಗಿದೆ. ಸಲ್ಫೈಡ್ ಅದಿರುಗಳಿಗೆ ಉತ್ಕರ್ಷಣೆ ಜರಗಬೇಕಾದುದರಿಂದ ಓಕ್ಸಿಜನ್ ಅದಿರಿನೊಂದಿಗೆ ವರ್ತಿಸಬೇಕಾಗಿದೆ. ಆದುದರಿಂದ ಓಕ್ಸಿಜನಿನ ಸಂಪರ್ಕದಲ್ಲಿ ರೋಸ್ಟಿಂಗ್ ನಡೆಸುವರು.

ಕಾಲ್ಸಿನೇಶನ್ ಮತ್ತು ರೋಸ್ಟಿಂಗಿಗೆ ಸಂಬಂಧಿಸಿದ ಅದಿರುಗಳನ್ನು ವರ್ಗೀಕರಿಸಲು ವರ್ಕ್‌ಶೀಟ್ ನೀಡಬಹುದಾಗಿದೆ. (ವರ್ಕ್‌ಶೀಟ್)

## b) ಓಕ್ಸೈಡಾಗಿಸಿದ ಅದಿರಿನ ಅಪಕರ್ಷಣೆ

ಉತ್ಕರ್ಷಣೆ ಮತ್ತು ಅಪಕರ್ಷಣೆಗೆ ಸಂಬಂಧಿಸಿದ ತಿಳುವಳಿಕೆ ಮಕ್ಕಳಿಗಿದೆ. ವಿಭಿನ್ನ ಓಕ್ಸೈಡುಗಳ ಅಪಕರ್ಷಣೆಗೆ ಅಪಕರ್ಷಣಕಾರಿಗಳಾಗಿ ಯೋಗ್ಯವಾದ ವಿಭಿನ್ನ ಪದಾರ್ಥಗಳನ್ನು ಉಪಯೋಗಿಸುವರೆಂಬ ಆಶಯ ಮಕ್ಕಳಿಗೆ ಸಿಗಬೇಕಾದ $Fe_2O_3$, $ZnO$ ಎಂಬಿವುಗಳ ಅಪಕರ್ಷಣೆಯ ಸಮೀಕರಣವನ್ನು ಅಧ್ಯಾಪಕರ ಸಹಾಯದೊಂದಿಗೆ ಮಕ್ಕಳೇ ರೂಪಿಸಲಿ. ಸೋಡಿಯಂ, ಪೊಟೇಶಿಯಂ, ಕಾಲ್ಸಿಯಂ ಮುಂತಾದ ಲೋಹಗಳ ಅದಿರಿನ ಅಪಕರ್ಷಣೆಗೆ ಸಾಧಾರಣ ಅಪಕರ್ಷಣಕಾರಿಗಳನ್ನು ಉಪಯೋಗಿಸಲು ಸಾಧ್ಯವಾಗದಿರುವ ಕಾರಣವನ್ನು ತಿಳಿಸಬೇಕು. (ಯೌಗಿಕಗಳ ಹೆಚ್ಚಿನ ಸ್ಥಿರತೆ, ಉನ್ನತ ಉಷ್ಣತೆಯಲ್ಲಿ ಕಾರ್ಬನಿನೊಂದಿಗೆ ಸೇರಿ ಕಾರ್ಬೈಡುಗಳುಂಟಾಗುವ ಸಾಧ್ಯತೆ) ಇವುಗಳ ಅಪಕರ್ಷಣೆಗೆ ಅತ್ಯಂತ ಶಕ್ತಿಶಾಲಿ ಅಪಕರ್ಷಣಕಾರಿಯಾದ ವಿದ್ಯುತ್ ಬೇಕಾಗುವುದೆಂದು ಕ್ರೋಢೀಕರಿಸಬೇಕು.

## III. ಲೋಹಗಳ ಶುದ್ಧೀಕರಣ(Refining of Metals)

ವಿವಿಧ ಅಗತ್ಯಗಳಿಗೆ ಉಪಯೋಗಿಸುವ ಲೋಹಗಳ ಶುದ್ಧೀಕರಣದ ಅಗತ್ಯವನ್ನು ಮಕ್ಕಳಿಗೆ ತಿಳಿಸಬೇಕು.

**ಚರ್ಚಾ ಸೂಚಕಗಳು**

- ಎಲ್ಲ ಲೋಹಗಳ ಮತ್ತು ಅವುಗಳಲ್ಲಿರುವ ಕಶ್ಮಲಗಳ ರಾಸಾಯನಿಕ ಗುಣಗಳು ಒಂದೇ ರೀತಿಯಾಗಿವೆಯೇ?
- ಎಲ್ಲ ಲೋಹಗಳನ್ನು ಶುದ್ಧೀಕರಿಸಲು ಒಂದೇ ವಿಧಾನ ಸಾಕಾಗಬಹುದೇ?

### a. ದ್ರವೀಕರಿಸಿ ಬೇರ್ಪಡಿಸುವಿಕೆ (Liquation)

ಪಾಠ ಪುಸ್ತಕದ ಪುಟ ಸಂಖ್ಯೆ 90ರಲ್ಲಿರುವ ಚಿತ್ರ 5.4 ರಲ್ಲಿ ಸೂಚಿಸಿದಂತೆ ಲೋಹಗಳಿಗೆ ದ್ರವೀಕರಣ ಬಿಂದು ಕಡಿಮೆಯೂ, ಕಶ್ಮಲಗಳ ದ್ರವೀಕರಣ ಬಿಂದು ಹೆಚ್ಚು ಆಗಿರಬೇಕಾದ ವಿಷಯವನ್ನು ಮನದಟ್ಟು ಮಾಡಬೇಕು. ಅತ್ಯಧಿಕ ಉಷ್ಣತೆಯನ್ನು ಉಪಯೋಗಿಸಬಾರದೆಂಬ ವಿಷಯವನ್ನು ತಿಳಿಸಬೇಕು. ಅತ್ಯಧಿಕ ಉಷ್ಣತೆಯಲ್ಲಿ ಕಶ್ಮಲಗಳೂ ಲೋಹದೊಂದಿಗೆ ಸೇರಿಕೊಳ್ಳುವ ಸಾಧ್ಯತೆಯಿದೆ. ಉದಾ : ತವರ

### b. ಬಾಷ್ಪೀಕರಣ (Distillation)

ಬಾಷ್ಪೀಕರಣಕ್ಕೆ ಸಂಬಂಧಿಸಿದ ಆಶಯ, ಮಕ್ಕಳಿಗೆ ಹಿಂದಿನ ತರಗತಿಯಲ್ಲೇ ದೊರೆತಿದೆ ಈ ರೀತಿಯಲ್ಲಿ ಶುದ್ಧೀಕರಿಸಬೇಕಾದ ಲೋಹಗಳ ಕುದಿಯುವ ಒಂದು ಕಡಿಮೆಯಿರಬೇಕಾದ ಅಗತ್ಯವನ್ನು ಮನದಟ್ಟುಮಾಡಬೇಕು.
ಉದಾ : ಸತು, ಪಾದರಸ.

### c. ವಿದ್ಯುದ್ವಿಶ್ಲೇಷಣೆ ಶುದ್ಧೀಕರಣ (Electrolytic Refining)

ವಿದ್ಯುದ್ವಿಶ್ಲೇಷಣೆಗೆ ಸಂಬಂಧಿಸಿದ ಆಶಯ ಮಕ್ಕಳಿಗೆ 4 ನೇ ಅಧ್ಯಾಯದಲ್ಲಿ ದೊರೆತಿದೆ. ಪ್ರತಿಯೊಂದು ಇಲೆಕ್ಟ್ರೋಡಿನಲ್ಲಿ ಜರಗುವ ರಾಸಾಯನಿಕ ಕ್ರಿಯೆ (ಉತ್ಕರ್ಷಣೆ/ ಅಪಕರ್ಷಣೆ) ಯಾವುದೆಂಬುದು ತಿಳಿದಿದೆಯೇ ಎಂದು ಪರೀಕ್ಷಿಸಬಹುದು. ತಾಮ್ರ, ಬೆಳ್ಳಿ ಎಂಬಿವುಗಳನ್ನು ಶುದ್ಧೀಕರಿಸುವಾಗ ತೆಗೆದುಕೊಳ್ಳಬೇಕಾದ ಏನೋಡ್, ಕೇಥೋಡ್, ಇಲೆಕ್ಟ್ರೋಲೈಟ್ ಎಂಬಿವುಗಳ ಯಾವುವೆಂದು ಚರ್ಚೆಯ ಮೂಲಕ ಕ್ರೋಡೀಕರಿಸಬಹುದು. ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿದು ಬರೆಯಲು ತಿಳಿಸಬೇಕು.
ವರ್ಕ್‌ಶೀಟುಗಳನ್ನು ನೀಡುವುದರ ಮೂಲಕ ಆಶಯ ಸ್ಪಷ್ಟತೆಯನ್ನು ಹೊಂದಬಹುದು. (ವರ್ಕ್‌ಶೀಟ್ 4)
ಲೋಹಗಳ ಕ್ರಿಯಾಶೀಲ ಶ್ರೇಣಿ ಮಕ್ಕಳಿಗೆ ಪರಿಚಯವಿದೆ. ಲೋಹಗಳ ಉತ್ಪಾದನೆಯನ್ನು ಇದಕ್ಕೆ ಹೊಂದಿಸಿಕೊಂಡು ಚರ್ಚಿಸಬೇಕು. ಲೋಹಗಳ ಕ್ರಿಯಾ ಸಾಮರ್ಥ್ಯ ಮತ್ತು ಉತ್ಪಾದನಾ ರೀತಿಗೆ ಸಂಬಂಧಿಸಿದ ಪಾಠ ಪುಸ್ತಕದ ಪುಟ ಸಂಖ್ಯೆ 91 ರಲ್ಲಿರುವಂತೆ ಪಟ್ಟಿ 5.3 ನ್ನು ವಿಶ್ಲೇಷಿಸಿ ಇದನ್ನು ಕ್ರೋಡೀಕರಿಸಬೇಕು. ಕ್ರಿಯಾಶೀಲತೆ ಹೆಚ್ಚಿರುವ ಲೋಹಗಳ ಸಂಶೋಧನೆಗೆ ವಿಳಂಬವಾದ ಕಾರಣವನ್ನು ವಿವರಿಸಬಹುದು. ಲೋಹ ನಿರ್ಮಾಣ ಸಮಯದಲ್ಲಿ ಒಂದು ಅಪಕರ್ಷಣಕಾರಿಯನ್ನು ಉಪಯೋಗಿಸಬೇಕಾದುದರ ಅಗತ್ಯವನ್ನು ಚರ್ಚೆಯ ಮೂಲಕ ತಿಳಿಸಬಹುದು.

**ಕ್ರೋಡೀಕರಿಸಬೇಕಾದುದು**

ಅತ್ಯಂತ ಹೆಚ್ಚು ಕ್ರಿಯಾಶೀಲತೆಯಿರುವ ಲೋಹಗಳು ಅತ್ಯಂತ ಶಕ್ತಿಶಾಲಿ ಅಪಕರ್ಷಣಕಾರಿಯಾದ ವಿದ್ಯುತ್ತನ್ನು ಉಪಯೋಗಿಸಲಾಗುವುದು.
ಕ್ರಿಯಾಶೀಲತೆ ಕಡಿಮೆಯಿರುವ ಲೋಹಗಳು – C, CO ಎಂಬ ಅಪಕರ್ಷಣಕಾರಿಗಳನ್ನು ಉಪಯೋಗಿಸುವರು.
ಕ್ರಿಯಾ ಸಾಮರ್ಥ್ಯ ಅತ್ಯಂತ ಕಡಿಮೆಯಿರುವ ಲೋಹಗಳು – ಪ್ರಕೃತಿಯಲ್ಲಿ ಸ್ವತಂತ್ರ ಸ್ಥಿತಿಯಲ್ಲಿ ಕಂಡುಬರುವುದು.

ಲೋಹಗಳ ಕ್ರಿಯಾಸಾಮರ್ಥ್ಯ ಮತ್ತು ಉಪಯೋಗಿಸಬೇಕಾದ ಅಪಕರ್ಷಣಕಾರಿಗಳಿಗೆ ಸಂಬಂಧಿಸಿ ಒಂದು ಟಿಪ್ಪಣಿ ತಯಾರಿಸಲು ತಿಳಿಸಬಹುದು.

### ಕೈಗಾರಿಕಾ ಮಟ್ಟದಲ್ಲಿ ಕಬ್ಬಿಣದ ಉತ್ಪಾದನೆ ಅಗತ್ಯವಿರುವ ಸಾಮಗ್ರಿಗಳು

ಇಂಟರ್‌ನೆಟ್ಟಿನಿಂದ ಡೌನ್‌ಲೋಡ್ ಮಾಡಿದ ಬ್ಲಾಸ್ಟ್‌ಫರ್ನೆಸ್ ವೀಡಿಯೋ, ಕಬ್ಬಿಣದ ವಿವಿಧ ರೂಪಗಳ ಗುಣಗಳನ್ನು ಪಟ್ಟಿಮಾಡಿದ ಚಾರ್ಟ್, ವಿದ್ಯುತ್ ವಿಶ್ಲೇಷಣಾ ವಿಧಾನದಲ್ಲಿ ಅಲ್ಯುಮೀನಿಯಂನ್ನು ಬೇರ್ಪಡಿಸುವ ಪ್ರಕ್ರಿಯೆಯನ್ನು ಚಿತ್ರೀಕರಿಸಿದ ಚಾರ್ಟು, ತಾಮ್ರದ ಸರಿಗೆ, ಅಶುದ್ಧ ತಾಮ್ರದ ತುಂಡು, ಬೀಕರ್, ಡ್ರೈಸೆಲ್, ಕನೆಕ್ಟಿಂಗ್ ವಯರ್, ಕೋಪ್ಪರ್ ಸಲ್ಫೇಟ್, ಸಲ್ಫ್ಯೂರಿಕ್ ಆಮ್ಲ.

## ಮೋಡ್ಯೂಲ್ 2

### ಲೋಹಗಳ ಉತ್ಪಾದನೆಯ ರಸಾಯನ ಶಾಸ್ತ್ರ ಸಮಯ 6 : ಪೀರಿಯಡ್

ಪಾಠ ಪುಸ್ತಕದ ಪುಟ ಸಂಖ್ಯೆ 92 ರಲ್ಲಿ ಕೊಟ್ಟಿರುವ Edubundu ವಿನ Resource ನ್ನು ಉಪಯೋಗಿಸಲು ಗಮನಿಸಬೇಕು. ಬ್ಲಾಸ್ಟ್‌ಫರ್ನೆಸ್ ಉಪಯೋಗಿಸಿ ಕಬ್ಬಿಣ ಉತ್ಪಾದಿಸುವುದಕ್ಕೆ ಸಮಾನವಾದ ಇತರ ವೀಡಿಯೋ ಹಾಗೂ ಆನಿಮೇಶನುಗಳನ್ನು Internet ನಿಂದ download ಮಾಡಿ ಉಪಯೋಗಿಸಬಹುದಾಗಿದೆ. ಚರ್ಚೆಯ ಮೂಲಕ ಲೋಹ ನಿರ್ಮಾಣದ ವಿವಿಧಹಂತಗಳ ಬಗ್ಗೆ ಆಶಯ ರೂಪೀಕರಣ ಆಗಬೇಕು.

**ಚರ್ಚಾ ಸೂಚಕಗಳು**

- ಹೆಮೆಟೈಟನ್ನು ನೀರಿನ ಪ್ರವಾಹದಲ್ಲಿ ತೊಳೆಯುವಾಗ ಯಾವ ರೀತಿಯ ಕಶ್ಮಲಗಳು ಬೇರ್ಪಡಿಸಲ್ಪಡುವುದು?
- ಕಾಲ್ಸಿನೇಶನ್ ಸಂದರ್ಭದಲ್ಲಿ ಹೆಮೆಟೈಟಿನಿಂದ ಬೇರ್ಪಡುವ ಕಶ್ಮಲಗಳು ಯಾವುವು?
- ಹೆಮೆಟೈಟಿನಿಂದ ಸಿಲಿಕಾವನ್ನು ಹೇಗೆ ಬೇರ್ಪಡಿಸಬಹುದು?
- ಫರ್ನೆಸಿನ ಮೇಲ್ಭಾಗದಿಂದ ಸೇರಿಸುವ ಮಿಶ್ರಣದಲ್ಲಿ ಯಾವ ಯಾವ ವಸ್ತುಗಳು ಅಡಕವಾಗಿವೆ?
- ಸುಣ್ಣದ ಕಲ್ಲನ್ನು ಸೇರಿಸುವುದರ ಉದ್ದೇಶವೇನು?
- ಇದಕ್ಕೆ ಫರ್ನೆಸಿನೊಳಗೆ ಯಾವ ಬದಲಾವಣೆ ಸಂಭವಿಸುತ್ತದೆ (ಹಿಂದಿನ ತಿಳುವಳಿಕೆಯ ಮೂಲಕ ಮಕ್ಕಳು ರಾಸಾಯನಿಕ ಸಮೀಕರಣ ರೂಪಿಸಲಿ)
- ಈ ರಾಸಾಯನಿಕ ಕ್ರಿಯೆಯು ಸಿಲಿಕಾವನ್ನು ಬೇರ್ಪಡಿಸಲು ಹೇಗೆ ಸಹಕಾರಿಯಾಗಿದೆ?
- ಸ್ಲೇಗಿನ ಸಾಂದ್ರತೆ ಕಡಿಮೆಯಾಗಿರುವುದರ ಪ್ರಯೋಜನವೇನು?

(ಅಧ್ಯಾಪಕರ ಸಹಾಯದೊಂದಿಗೆ ಮಕ್ಕಳು ರಾಸಾಯನಿಕ ಸಮೀಕರಣ ರೂಪಿಸುವರು. ರಾಸಾಯನಿಕ ಕ್ರಿಯೆಯಲ್ಲಿ ಗೇಂಗ್, ಫ್ಲಕ್ಸ್, ಸ್ಲೇಗ್ ಎಂಬಿವುಗಳನ್ನು ಗುರುತಿಸುವರು)

**ಕ್ರೋಡೀಕರಿಸಬೇಕಾದುದು**

$CaCO_3$ ಫರ್ನೆಸಿನೊಳಗೆ ವಿಭಜಿಸಲ್ಪಟ್ಟು $CaO$ ಮತ್ತು $CO_2$ ಉಂಟಾಗುವುದು. ಕ್ಷಾರವಾದ $CaO$ ಆಮ್ಲೀಯವಾಗಿರುವ $SiO_2$ನೊಂದಿಗೆ ವರ್ತಿಸಿ $CaSiO_3$ ಎಂಬ ಸ್ಲೇಗ್ ಉಂಟಾಗುವುದು. ಸ್ಲೇಗಿಗೆ ಕಬ್ಬಿಣಕ್ಕಿಂತ ಸಾಂದ್ರತೆ ಕಡಿಮೆಯಾಗಿರುವುದರಿಂದ ಅದು ದ್ರವೀಕರಿಸಲ್ಪಟ್ಟ ಅದಿರಿನ ಮೇಲ್ಭಾಗದಲ್ಲಿ ತೇಲುವುದು.

ಫರ್ನೆಸಿನೊಳಗೆ ಕೋಕಿಗೆ ಉಂಟಾಗುವ ಬದಲಾವಣೆ ಮತ್ತು ಅದರಿಂದಾಗಿ ಉಂಟಾಗುವ CO ಅಪಕರ್ಷಣಕಾರಿಯಾಗಿ ವರ್ತಿಸುವ ರೀತಿಯನ್ನು ಚರ್ಚೆಯ ಮೂಲಕ ವಿವರಿಸಬೇಕು.

**ಚರ್ಚಾ ಸೂಚಕಗಳು**

- ಇನ್ನು ಫರ್ನೆಸಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳು ಯಾವುವು?
- ಫರ್ನೆಸಿನೊಳಗೆ ಕೋಕಿಗೆ ಯಾವ ಬದಲಾವಣೆ ಉಂಟಾಗುವುದು?

- ಕೋಕ್ ಪೂರ್ಣವಾಗಿ ಉತ್ಕರ್ಷಣೆಗೊಳಗಾದಾಗ ಉಂಟಾಗುವ ಅನಿಲ ಯಾವುದು?
- ಈ ರಾಸಾಯನಿಕ ಕ್ರಿಯೆ ಜರಗುವಾಗ ಫರ್ನೆಸಿನ ಉಷ್ಣತೆ ಹೆಚ್ಚಾಗಲು ಕಾರಣವೇನು?
  (ಕೋಕಿಗೆ ಉತ್ಕರ್ಷಣೆ ಉಂಟಾಗಿ $CO_2$ ಉಂಟಾಗುವ ರಾಸಾಯನಿಕ ಕ್ರಿಯೆಯು ಉಷ್ಣ ವಿಸರ್ಜಕವೆಂದು ಕ್ರೋಢೀಕರಿಸಬೇಕು)
- $CO_2$ ವನ್ನು ಕೋಕ್ ಅಪಕರ್ಷಿಸಿದರೆ ಉಂಟಾಗು ಅನಿಲ ಯಾವುದು?
- ಫರ್ನೆಸಿನಲ್ಲಿ ಈ ರಾಸಾಯನಿಕ ಕ್ರಿಯೆ ಜರಗುವ ಭಾಗದಲ್ಲಿ ಉಷ್ಣತೆ ಕಡಿಮೆಯಾಗಿರಲು ಕಾರಣವೇನು?
  (ರಾಸಾಯನಿಕ ಸಮೀಕರಣವನ್ನು ವಿಶ್ಲೇಷಿಸಿ ರಾಸಾಯನಿಕ ಕ್ರಿಯೆಯು ಉಷ್ಣ ಹೀರುವ ಕ್ರಿಯೆಯೆಂದು ಕ್ರೋಢೀಕರಿಸಬೇಕು)
- ಫರ್ನೆಸಿನಲ್ಲುಂಟಾಗುವ CO, $Fe_2O_3$ ಯೊಂದಿಗೆ ಹೇಗೆ ವರ್ತಿಸುವುದು? ಇಲ್ಲಿ CO ವಿನ ಪಾತ್ರವೇನು?

(ಅಧ್ಯಾಪಕರ ಸಹಾಯದೊಂದಿಗೆ ಮಕ್ಕಳು ರಾಸಾಯನಿಕ ಸಮೀಕರಣವನ್ನು ರಚಿಸಬೇಕು. $Fe_2O_3$ ಗೆ ಅಪಕರ್ಷಣೆ ಮತ್ತು CO ವಿಗೆ ಉತ್ಕರ್ಷಣೆ ಉಂಟಾಗಿರುವುದರಿಂದ CO ಅಪಕರ್ಷಣಕಾರಿಯಾಗಿ ವರ್ತಿಸುವುದೆಂದು ಕ್ರೋಢೀಕರಿಸಬೇಕು)

ಬ್ಲಾಸ್ಟ್ ಫರ್ನೆಸಿನಲ್ಲಿ ಜರಗುವ ವಿವಿಧ ರಾಸಾಯನಿಕ ಕ್ರಿಯೆಗಳ ಒಂದು ಫ್ಲೋಚಾರ್ಟ್ ನಿರ್ಮಿಸುವಂತೆ ಮಕ್ಕಳಿಗೆ ತಿಳಿಸಬಹುದು. ಕಬ್ಬಿಣದ ವಿವಿಧ ರೂಪಗಳಾದ ಪಿಗ್ ಅಯನ್ರ್, ಕಾಸ್ಟ್ ಅಯನ್ರ್, ರೋಟ್ ಅಯನ್ರ್ ಎಂಬಿವುಗಳ ಉತ್ಪಾದನೆಯ ವಿಧ ಮತ್ತು ಗುಣಗಳನ್ನು ಪಟ್ಟಿಮಾಡಿ ಕ್ರೋಢೀಕರಿಸಬೇಕು.

| ಕಬ್ಬಿಣ | ಕಾರ್ಬನ್ (%) | ಉತ್ಪಾದನೆಯ ರೀತಿ/ ಗುಣಗಳು |
|---|---|---|
| ಪಿಗ್ ಅಯನ್ರ್ | 4 | ಬ್ಲಾಸ್ಟ್ ಫರ್ನೆಸಿನಿಂದ ಲಭಿಸುವುದು. |
| ಕಾಸ್ಟ್ ಅಯನ್ರ್ | 3 | ಪಿಗ್ ಅಯನಿರ್ಗೆ ಸ್ಕ್ರಾಪ್ ಅಯನ್ರ್ ಮತ್ತು ಕೋಕ್ ಸೇರಿಸಿ ಪ್ರತ್ಯೇಕ ಫರ್ನೆಸಿನಲ್ಲಿ ದ್ರವೀಕರಿಸಿ ನಿರ್ಮಿಸುವರು. |
| ರೋಟ್ ಅಯನ್ರ್ | 0.2–0.5 | ಘನೀಕರಿಸುವಾಗ ಸ್ವಲ್ಪ ವಿಕಾಸ ಹೊಂದುವುದು.<br>ಕಾಸ್ಟ್ ಅಯನ್ರ್‌ನ್ನು ಶುದ್ಧೀಕರಿಸಿ ತಯಾರಿಸುವರು. |

ಬ್ಲಾಸ್ಟ್ ಫರ್ನೆಸಿನ ರಾಸಾಯನಿಕ ಕ್ರಿಯೆಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳಲು Study tour ನ್ನು ನಡೆಸಬಹುದು.

**ಹೆಚ್ಚಿನ ಮಾಹಿತಿಗಾಗಿ**

**ಮೆಟಲರ್ಜಿಯ**

ಆಧಾರದಲ್ಲಿ ಲೋಹ ನಿರ್ಮಾಣ ಚಟುವಟಿಕೆಗಳ ಸಿದ್ಧಾಂತವನ್ನು ತಿಳಿದುಕೊಳ್ಳಬಹುದು. ಇಲ್ಲಿ ಅತಿ ಹೆಚ್ಚು ಪ್ರಸಕ್ತವಾದ ಘಟಕವು ಗಿಬ್ಸ್ ಚೈತನ್ಯ ವ್ಯತ್ಯಾಸ ($\Delta G$) ಆಗಿದೆ. ಒಂದು ನಿರ್ದಿಷ್ಟ ಉಷ್ಣತೆಯಲ್ಲಿರುವ ಯಾವುದೇ ಚಟುವಟಿಕೆಯ ಗಿಬ್ಸ್ ಚೈತನ್ಯ ವ್ಯತ್ಯಾಸ ($\Delta G$) ವನ್ನು ನೀಡುವ ಸಮೀಕರಣವು $\Delta G = \Delta H - T\Delta S$. ಇದು ಗಿಬ್ಸ್ ಸಮವಾಕ್ಯವೆಂದು ಕರೆಯಲ್ಪಡುವುದು. ಈ ಸಮೀಕರಣದಲ್ಲಿ .$\Delta H$ ಎಂಬುದು ಕ್ರಿಯೆಯ ಎಂಥಾಲ್ಪಿ ವ್ಯತ್ಯಾಸ ಮತ್ತು $\Delta S$ ಎಂಬುದು ಎಂಟ್ರೋಪಿ ವ್ಯತ್ಯಾಸವಾಗಿದೆ. ಯಾವುದೇ ರಾಸಾಯನಿಕ ಕ್ರಿಯೆಯ ಸ್ಟಾಂಡರ್ಟ್ ಫ್ರೀ ಎನರ್ಜಿ ವ್ಯತ್ಯಾಸವು $\Delta G = \Delta G^{\Theta} + RTlnk$ ಎಂದಾಗಿದೆ. ಸಮತೋಲನ ಸ್ಥಿತಿಯಲ್ಲಿ $\Delta G = 0$ ಆದುದರಿಂದ ($\Delta G^{\Theta}$) $\Delta G^{\Theta} = - RT\ InK$ ಎಂಬ ಸಮೀಕರಣವನ್ನುಪಯೋಗಿಸಿ ಸೂಚಿಸಬಹುದು. ಈ ಸಮೀಕರಣ K ಎಂಬುದು ಸಮತೋಲನ ಸ್ಥಿರಾಂಕ (Equilibrium Constant ) ವನ್ನು ಸೂಚಿಸುವುದು. $\Delta G$ ಯ ಬೆಲೆ ನೆಗೆಟಿವ್ ಆದರೆ K ಯ ಬೆಲೆ ಪೊಸಿಟಿವ್ ಆಗಿರುವುದು. ಪ್ರವರ್ತಕಗಳು ಉತ್ಪನ್ನಗಳಾಗಿ ಬದಲಾದರೆ ಮಾತ್ರವೇ ಇದು ಸಾಧ್ಯ. ಒಂದು ರಾಸಾಯನಿಕ ಕ್ರಿಯೆಯ (Spontaneous Process) $\Delta G$ ಯ ಬೆಲೆ ನೆಗೆಟಿವ್ ಆಗಿರಬೇಕು. ಇದಕ್ಕೆ ಅತ್ಯಂತ ಯೋಗ್ಯವಾದ $\Delta H$ ಬೆಲೆ ನೆಗೆಟಿವ್ ಮತ್ತು $\Delta S$ ಪೊಸಿಟಿವ್ ಆಗುವುದಾಗಿದೆ. $\Delta H$ ಪೊಸಿಟಿವ್ ಆದರೆ $\Delta H$ ನೆಗೆಟಿವ್ ಆದರೂ ಉನ್ನತ ಉಷ್ಣತೆಯಲ್ಲಿ $\Delta G$ ನೆಗೆಟಿವ್ ಆಗಿರುವುದು.

**ಕಪಲ್ಡ್ ರಾಸಾಯನಿಕ ಕ್ರಿಯೆಗಳು (Coupled Reactions)**

ಎರಡು ರಾಸಾಯನಿಕ ಕ್ರಿಯೆಗಳ ಪ್ರವರ್ತಕಗಳು ಹಾಗೂ ಉತ್ಪನ್ನಗಳು ಒಂದೇ ವ್ಯವಸ್ಥೆಯಲ್ಲಿ ಜೊತೆಯಾಗಿದ್ದರೆ ಈ ಕ್ರಿಯೆಯ ಒಟ್ಟು $\Delta G$ ದೊಡ್ಡ ನೆಗೆಟಿವ್ ಬೆಲೆಯಾಗಿ ಕ್ರಿಯೆ ಸ್ವಯಂ ಜರಗುವುದು. ಇಂತಹ ಕ್ರಿಯೆಗಳನ್ನು ಕಪಲ್ಡ್ ಕ್ರಿಯೆಗಳೆನ್ನುವರು. ಕಬ್ಬಿಣದ ಕೈಗಾರಿಕಾ ಮಟ್ಟದ ಉತ್ಪಾದನೆಯ ಇಂತಹ ಕ್ರಿಯೆಯಾಗಿದೆ. FeO ವನ್ನು ಕೋಕಿನ ಸಾನ್ನಿಧ್ಯದಲ್ಲಿ ಅಪಕರ್ಷಣೆಗೊಳಪಡಿಸಲಾಗುವುದು. ಇಲ್ಲಿ FeO ನ ಅಪಕರ್ಷಣೆ ಮತ್ತು ಕೋಕಿನ ಉತ್ಕರ್ಷಣೆಯ ಜೊತೆಗೊಳಿಸಲಾಗಿದೆ.

ಜೊತೆಗೊಳಿಸುವ ಕ್ರಿಯೆಗಳು

$FeO(s) \rightarrow Fe(s) + \frac{1}{2}O_2(g)$ — ಅಪಕರ್ಷಣೆ ಉಷ್ಣತೆಯಲ್ಲಿ

$\Delta H$ +ve (ಸಾಧ್ಯತೆಯಿಲ್ಲ)

$\Delta S$ +ve (ಉನ್ನತ ಉಷ್ಣತೆಯಲ್ಲಿ ಮಾತ್ರವೇ ಸಾಧ್ಯ)

$C(s) + \frac{1}{2}O_2(g) \rightarrow CO(g)$ — $\Delta H$ -ve, $\Delta S$ +ve (ಎಲ್ಲಾ ಉಷ್ಣತೆಯಲ್ಲೂ ಹೆಚ್ಚಿನ ಸಾಧ್ಯತೆ)

ಕಪಲ್ಡ್ ಕ್ರಿಯೆ :

$FeO(s) + C(s) \rightarrow Fe(s/l) + CO(g)$ — (ಅಪಕರ್ಷಣೆ ಉಷ್ಣತೆಯಲ್ಲಿ ಸಾಧ್ಯತೆ ಹೆಚ್ಚು)

**ಎಲಿಂಗಂ ಚಿತ್ರ (Ellingham Diagram)**

ಓಕ್ಸೈಡ್ ರೂಪೀಕರಣ ಕ್ರಿಯೆಗಳ (Standard Free Energy of Formation) $\Delta G^{\Theta}$ ಮತ್ತು ಉಷ್ಣತೆ (T) ನಡುವಿನ ಗ್ರಾಫ್ ಎಲಿಂಗಂ ಚಿತ್ರವಾಗಿದೆ. ಓಕ್ಸೈಡುಗಳ ಅಪಕರ್ಕ್ಷಣೆಗಿರುವ ಯೋಗ್ಯವಾದ ಅಪಕರ್ಷಣಕಾರಿಯನ್ನು ಆಯ್ಕೆ ಮಾಡುವುದಕ್ಕೆ ಈ ಚಿತ್ರವು ಸಹಕಾರಿಯಾಗುವುದು. ಚಿತ್ರದಲ್ಲಿ ಮೇಲ್ಭಾಗದಲ್ಲಿ ಗ್ರಾಫ್ ಬರುವ ಓಕ್ಸೈಡುಗಳನ್ನು ಗ್ರಾಫ್ ಕೆಳಭಾಗದಲ್ಲಿರುವ ಮೂಲವಸ್ತುವನ್ನುಪಯೋಗಿಸಿ ಅಪಕರ್ಷಿಸಬಹುದು. ಚಿತ್ರದಲ್ಲಿ ಸುಮಾರು 1073 ಕೆಲ್ವಿನಿಗಿಂತ ಮೇಲೆ [C,CO] ಗ್ರಾಫ್ [Fe,FeO]ಗ್ರಾಫಿನ ಕೆಳಗೆಯಾದುದರಿಂದ ಈ ಉಷ್ಣತೆಯಲ್ಲಿ ಕೋಕಿಗೆ FeO ವನ್ನು ಅಪಕರ್ಷಿಸಲು ಸಾಧ್ಯವಾಗುವುದು.




**ಮಿಶ್ರಲೋಹವಾದ ಉಕ್ಕು**

ಪಾಠಪುಸ್ತಕದ ಪುಟ ಸಂಖ್ಯೆ 95 ರ ಪಟ್ಟಿ 5.4 ನ್ನು ವಿಶ್ಲೇಷಿಸಿ ವಿವಿಧ ರೀತಿಯ ಸ್ಟೀಲುಗಳ ಕುರಿತಾದ ಆಶಯ ರೂಪಿಸಬಹುದು. ವಿವಿಧ ರೀತಿಯ ಉಕ್ಕುಗಳ ಘಟಕಗಳು ವಿಭಿನ್ನವಾಗಿರುವುದೆಂದೂ, ಘಟಕಗಳು ಸಮಾನವಾಗಿದ್ದರೂ ಕೆಲವು ಮಿಶ್ರಲೋಹಗಳು ಗುಣಗಳಲ್ಲಿ ವಿಭಿನ್ನವಾಗಿರುವುದಕ್ಕಿರುವ ಕಾರಣಗಳ ಕುರಿತು ಚರ್ಚಿಸಬೇಕು.

**ಕ್ರೋಡೀಕರಿಸಬೇಕಾದುದು**

ಘಟಕಗಳನ್ನು ವ್ಯತ್ಯಾಸಗೊಳಿಸಿ ಮತ್ತು ಘಟಕ ಮೂಲವಸ್ತುಗಳ ನಿಷ್ಪತ್ತಿಯನ್ನು ವ್ಯತ್ಯಾಸಗೊಳಿಸಿ ವಿವಿಧ ರೀತಿಯ ಮಿಶ್ರಲೋಹಗಳನ್ನು ತಯಾರಿಸುವರು.

ವರ್ಕ್‌ಶೀಟುಗಳನ್ನು ನೀಡಿ ಮಿಶ್ರ ಲೋಹಗಳಾದ ವಿವಿಧ ರೀತಿಯ ಉಕ್ಕುಗಳ ಕುರಿತಾದ ಆಶಯ ರೂಪಿಸಬಹುದು.

## ಅಲ್ಯುಮೀನಿಯಂನ ಉತ್ಪಾದನೆ

ಅಲ್ಯುಮೀನಿಯಂ ಮಕ್ಕಳಿಗೆ ಚಿರಪರಿಚಿತವಾಗಿದೆ. ಅಲ್ಯುಮೀನಿಯಂನ ವಿವಿಧ ವಿಶೇಷತೆಗಳನ್ನು ಉಪಯೋಗಿಸುವ ವಿವಿದ ಸಂದರ್ಭಗಳನ್ನು ಪಟ್ಟಿ ಮಾಡಲು ತಿಳಿಸಬಹುದು. ಯಾವುದೇ ಲೋಹದ ಬೆಲೆ ನಿಶ್ಚಯಿಸಲ್ಪಡುವುದು ಅವುಗಳ ತಯಾರಿಯ ವೆಚ್ಚದ ಆಧಾರದಲ್ಲಾಗಿದೆ. ಒಂದು ಕಾಲದಲ್ಲಿ ಅಲ್ಯುಮೀನಿಯಂಗೆ ಚಿನ್ನಕ್ಕಿಂತಲೂ ಅಧಿಕ ಬೆಲೆಯಿದ್ದುದು ಹಾಗೂ ಈಗ ಚಿನ್ನಕ್ಕಿಂತ ಬಹಳ ಕಡಿಮೆ ಬೆಲೆ ಇರುವುದರ ಕಾರಣವನ್ನು ಚರ್ಚೆ ಮಾಡಬಹುದು. ಅಲ್ಯುಮೀನಿಯಂನ ಕೈಗಾರಿಕಾ ಮಟ್ಟದ ಉತ್ಪಾದನೆಯ ಎರಡು ಪ್ರಧಾನ ಹಂತಗಳನ್ನು ಪರಿಚಯಿಸಬೇಕು.

1. ಬೋಕ್ಸೈಟಿನ ಸಾಂದ್ರೀಕರಣ
2. ವಿದ್ಯುದ್ವಿಶ್ಲೇಷಣೆಯ ಮೂಲಕ ಅಲ್ಯುಮೀನಿಯಂ ಬೇರ್ಪಡಿಸುವಿಕೆ.
3. ಪ್ರತಿಯೊಂದುಹಂತವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಚರ್ಚಿಸಬೇಕು.

### 1. ಬೋಕ್ಸೈಟಿನ ಸಾಂದ್ರೀಕರಣ

**ಚರ್ಚಾ ಸೂಚಕಗಳು**

- ಬೋಕ್ಸೈಟಿನ ರಾಸಾಯನಿಕ ಸೂತ್ರ ಯಾವುದು?
- ಬೋಕ್ಸೈಟಿನಲ್ಲಿರುವ ಪ್ರಧಾನ ಕಶ್ಮಲ ಯಾವುದು?

ಬೋಕ್ಸೈಟಿನ ಸಾಂದ್ರೀಕರಣದ ವಿವಿಧ ಘಟ್ಟಗಳನ್ನು ಪರಿಚಯಿಸುವುದಕ್ಕಾಗಿ ಪಾಠಪುಸ್ತಕದ ಪುಟ ಸಂಖ್ಯೆ 96 ರಲ್ಲಿರುವ ಫ್ಲೋಚಾರ್ಟ್ ಉಪಯೋಗಿಸಬೇಕು. ಪ್ರತಿಯೊಂದು ಘಟ್ಟಕ್ಕೆ ಸಂಬಂಧಿಸಿದ ರಾಸಾಯನಿಕ ಸಮೀಕರಣಗಳನ್ನು ರೂಪಿಸಲು ಮಕ್ಕಳಿಗೆ ಅಧ್ಯಾಪಕರು ಸಹಾಯ ಮಾಡಬೇಕು.

**ಹೆಚ್ಚಿನ ಮಾಹಿತಿಗಾಗಿ**

**ಬೋಕ್ಸೈಟಿನಿಂದ ಅಲ್ಯುಮಿನಾದ ಲೀಚಿಂಗ್**

ಅಲ್ಯುಮೀನಿಯಂನ ಪ್ರಧಾನ ಅದಿರು ಬೋಕ್ಸೈಟ್ ಆಗಿದೆ. ಇದರಲ್ಲಿ ಸಿಲಿಕನ್ ಡೈ ಒಕ್ಸೈಡ್ ($SiO_2$), ಕಬ್ಬಿಣದ ಒಕ್ಸೈಡುಗಳು, ಟೈಟಾನಿಯಂ (IV) ಒಕ್ಸೈಡ್ ($TiO_2$) ಮುಂತಾದ ಕಶ್ಮಲಗಳು ಸೇರಿಕೊಂಡಿರುವುದು. ಚೆನ್ನಾಗಿ ಹುಡಿಮಾಡಿ ಬೋಕ್ಸೈಟನ್ನು 473 – 523 ಕೆಲ್ವಿನ್ ಉಷ್ಣತೆಯಲ್ಲಿ 35 – 36 ಬಾರ್ ಒತ್ತಡದಲ್ಲಿ 45% ಕಾಸ್ಟಿಕ್ ಸೋಡ (NaOH) ದ್ರಾವಣದೊಂದಿಗೆ ಸೇರಿಸಿ ಬಿಸಿಮಾಡಲಾಗುವುದು. $Al_2O_3$ ಸೋಡಿಯಂ ಅಲ್ಯುಮಿನೇಟಾಗಿ ದ್ರಾವಣದಲ್ಲಿ ವಿಲೀನವಾಗುವುದು. ಬೋಕ್ಸೈಟಿನಲ್ಲಿ ಸೇರಿಕೊಂಡಿರುವ ಸಿಲಿಕನ್ ಡೈ ಒಕ್ಸೈಡ್ ಕಶ್ಮಲವೂ ಇದರೊಂದಿಗೆ ವಿಲೀನವಾಗುವುದು. ಆದರೆ ಕಶ್ಮಲಗಳಾದ ಕಬ್ಬಿಣದ ಒಕ್ಸೈಡ್, ಟೈಟಾನಿಯಂ ಡೈ ಒಕ್ಸೈಡ್ ಎಂಬಿವುಗಳು ವಿಲೀನವಾಗುವುದಿಲ್ಲ.

$$Al_2O_3(s) + 2NaOH\,(aq) + 3H_2O\,(l) \rightarrow 2Na[Al(OH)_4]\,(aq)$$

ದ್ರಾವಣಕ್ಕೆ $CO_2$ ಅನಿಲವನ್ನು ಹಾಯಿಸಲಾಗುವುದು. ಜಲೀಯ ಅಲ್ಯುಮೀನಿಯಂ ಓಕ್ಸೈಡ್ ಅಧಃಕ್ಷೇಪಗೊಳ್ಳುವುದು ಈ ಹಂತದಲ್ಲಿ ದ್ರಾವಣವನ್ನು ಹೊಸದಾಗಿ ತಯಾರಿಸಿದ ಹೈಡ್ರೇಟೆಡ್ ಅಲ್ಯುಮೀನಿಯಂ ಓಕ್ಸೈಡಿನಿಂದ "ಸೀಡ್" ಮಾಡಲಾಗುವುದು. ಇದು ಅಲ್ಯುಮೀನಿಯಂ ಓಕ್ಸೈಡ್ ಅಧಃಕ್ಷೇಪಗೊಳ್ಳುವುದನ್ನು ತ್ವರಿತಗೊಳಿಸುವುದು.

$$2Na[Al(OH)_4]\,(aq) + CO_2\,(g) + 3H_2O\,(l) \rightarrow Al_2O_3.xH_2O\,(s) + 2NaHCO_3\,(aq)$$

ಸೋಡಿಯಂ ಸಿಲಿಕೇಟ್ ದ್ರಾವಣದಲ್ಲೇ ಉಳಿಯುವುದು. ಆದರೆ ಹೈಡ್ರೇಟೆಡ್ ಅಲ್ಯುಮಿನಾ ಅಧಃಕ್ಷೇಪಗೊಳ್ಳುವುದು. ಇದನ್ನು ಸೋಸಿ ತೆಗೆದ ನಂತರ ಒಣಗಿಸಿ ಬಿಸಿಮಾಡಿ ಶುದ್ಧವಾದ ಶುಷ್ಕ ಅಲ್ಯುಮಿನಾ $(Al_2O_3)$ ತಯಾರಿಸುವರು.

$$Al_2O_3.xH_2O\,(s) \xrightarrow{1470\ K} Al_2O_3\,(s) + xH_2O\,(l)$$

**2. ವಿದ್ಯುದ್ವಿಶ್ಲೇಷಣಾ ಕ್ರಿಯೆಯ ಮೂಲಕ ಅಲ್ಯುಮೀನಿಯಂನ್ನು ಬೇರ್ಪಡಿಸುವುದು**

$Fe_2O_3$ ಯಿಂದ ಕಬ್ಬಿಣವನ್ನು ಬೇರ್ಪಡಿಸಲು ಉಪಯೋಗಿಸಿದ ಅಪಕರ್ಷಣಕಾರಿ (CO) ಇಲ್ಲಿ ಫಲಕಾರಿಯಾಗದಿರುವುದಕ್ಕಿರುವ ಕಾರಣಗಳ ಕುರಿತು ಚರ್ಚಿಸಬೇಕು. ಅಲ್ಯುಮೀನಿಯಂ ಕಬ್ಬಿಣಕ್ಕಿಂತ ಕ್ರಿಯಾಶೀಲವಾದ ಲೋಹವಾದುದರಿಂದ ಇದರ ಯೌಗಿಕಗಳಿಗೆ ಸ್ಥಿರತೆ ಹೆಚ್ಚಿರುವುದು. ಆದುದರಿಂದ $Al_2O_3$ ಯ ಅಪಕರ್ಷಣೆಗೆ ಅತ್ಯಂತ ಶಕ್ತಿಶಾಲಿ ಅಪಕರ್ಷಣಕಾರಿಯಾದ ವಿದ್ಯುತ್ ಬೇಕಾಗಿರುವುದೆಂದು ಕ್ರೋಡೀಕರಿಸಬೇಕು. ಪಾಠ ಪುಸ್ತಕದ ಪುಟ ಸಂಖ್ಯೆ 97 ರಲ್ಲಿರುವ ಚಿತ್ರ 5.7ನ್ನು ಚಾರ್ಟಿನಲ್ಲಿ ಬರೆದು ಚರ್ಚೆಗೆ ಉಪಯೋಗಿಸುವುದು ಹೆಚ್ಚು ಪರಿಣಾಮಕಾರಿಯಾಗಬಹುದು. ಅಲ್ಯುಮಿನಾದೊಂದಿಗೆ ಕ್ರಯೋಲೈಟನ್ನು ಸೇರಿಸುವುದರ ಅಗತ್ಯವನ್ನು ತಿಳಿಸಬೇಕು. ವಿದ್ಯುದ್ವಿಶ್ಲೇಷಣೆಯ ಪರಿಣಾಮವಾಗಿ ಏನೋಡಿನಲ್ಲಿ ಕೇಥೋಡಿನಲ್ಲೂ ಜರಗುವ ರಾಸಾಯನಿಕ ಕ್ರಿಯೆಗಳಿಗೆ ಸಂಬಂಧಿಸಿ ಸ್ಪಷ್ಟವಾದ ಆಶಯ ಮಕ್ಕಳಲ್ಲಿ ರೂಪುಗೊಳ್ಳುವಂತೆ ಚರ್ಚೆಯನ್ನು ಮುನ್ನಡೆಸಬೇಕು.

**ಚರ್ಚಾ ಸೂಚಕಗಳು**

- ವಿದ್ಯುದ್ವಿಶ್ಲೇಷಣಾ ಸೆಲ್ಲಿನ ಮೂಲಕ ವಿದ್ಯುತ್ ಹಾಯಿಸಿದಾಗ ಏನು ಸಂಭವಿಸಬಹುದು?
- ಅಲ್ಯುಮಿನಾದಲ್ಲಿ ಅಡಕವಾಗಿರುವ ಪೊಸಿಟಿವ್ ಅಯೋನ್ ಮತ್ತು ನೆಗೆಟಿವ್ ಅಯೋನ್ ಯಾವುದು?
- ವಿದ್ಯುತ್ ವಿಶ್ಲೇಷಣೆಯಲ್ಲಿ ಉತ್ಕರ್ಷಣೆ ಮತ್ತು ಅಪಕರ್ಷಣೆ ಜರಗುವ ಅಯೋನುಗಳು ಯಾವುವು?

ಅಧ್ಯಾಪಿಕೆಯ ಸಹಾಯದೊಂದಿಗೆ ಮಕ್ಕಳು ಏನೋಡಿನಲ್ಲೂ, ಕೇಥೋಡಿನಲ್ಲೂ ಜರಗುವ ರಾಸಾಯನಿಕ ಕ್ರಿಯೆಗಳನ್ನು ಬರೆಯುವರು. ಆಗಾಗ್ಗೆ ಏನೋಡನ್ನು ಬದಲಿಸುವುದಕ್ಕಿರುವ ಕಾರಣವನ್ನು ಅಧ್ಯಾಪಿಕೆಯ ಸಹಾಯದೊಂದಿಗೆ ಮಕ್ಕಳು ಕಂಡುಕೊಳ್ಳಲಿ. ವಿದ್ಯುತ್ತಿನ ಅಗತ್ಯಗಳಿಗಾಗಿ ಮತ್ತು ಮಿಶ್ರಲೋಹಗಳಿಗಾಗಿ ಅತಿ ಹೆಚ್ಚು ಬಳಸಲ್ಪಡುವ ತಾಮ್ರವು ಮಕ್ಕಳಿಗೆ ಪರಿಚಯವಿರುವುದಾಗಿದೆ. ಇಂತಹ ಅಗತ್ಯಗಳಿಗೆ ಉಪಯೋಗಿಸುವ ತಾಮ್ರವು ಅತ್ಯಂತ ಶುದ್ಧವಾಗಿರಬೇಕಾದ ಅಗತ್ಯವನ್ನು ಮನದಟ್ಟುಮಾಡಬೇಕು. ಅದಿರಿನಿಂದ ಬೇರ್ಪಡಿಸಲ್ಪಟ್ಟ ತಾಮ್ರದಲ್ಲಿ ಹಲವು ಕಶ್ಮಲಗಳು ಒಳಗೊಂಡಿರಬಹುದು. ಆದುದರಿಂದ ತಾಮ್ರವನ್ನು ಪುನಃ ಶುದ್ಧೀಕರಿಸಬೇಕಾಗಿದೆ. ಇದಕ್ಕೆ ಅತ್ಯಂತ ಯೋಗ್ಯವಾಗಿರುವುದು ವಿದ್ಯುದ್ವಿಶ್ಲೇಷಣೆಯಾಗಿದೆ. ಪಾಠ ಪುಸ್ತಕದ ಪುಟ ಸಂಖ್ಯೆ 98 ರ ಚಿತ್ರ 5.8 ನ್ನುಪಯೋಗಿಸಿ ಚರ್ಚೆಯನ್ನು ನಡೆಸಬಹುದು. ಇಲೆಕ್ಟ್ರೋಲಿಸಿಸಿನ ಕುರಿತಾಗಿ ಮಕ್ಕಳಿಗಿರುವ ಜ್ಞಾನವನ್ನು ಪರಿಶೀಲಿಸಿ, ಈ

ಪ್ರಕ್ರಿಯೆಯಲ್ಲಿ ಉಪಯೋಗಿಸಬೇಕಾದ ಏನೋಡ್, ಕೇಥೋಡ್, ಇಲೆಕ್ಟ್ರೋಲೈಟ್ ಎಂಬಿವುಗಳ ಕುರಿತಾದ ಆಶಯ ರೂಪಿಸಬಹುದು. ಕೋಪ್ಪರ್ ಸಲ್ಫೇಟ್‌ಗೆ ಸಲ್ಫ್ಯೂರಿಕ್ ಏಸಿಡ್ ಸೇರಿಸುವುದು ಅದರ ವಾಹಕತ್ವವನ್ನು ಹೆಚ್ಚಿಸುವುದಕ್ಕಾಗಿದೆ. ಪ್ರತಿಯೊಂದು ಇಲೆಕ್ಟ್ರೋಡಿನಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳನ್ನು ಮಕ್ಕಳು ಅಧ್ಯಾಪಕರ ಸಹಾಯದೊಂದಿಗೆ ರೂಪಿಸಿಕೊಳ್ಳಲಿ.

ಈ ಕ್ರಿಯೆಗೆ ವಿದ್ಯುತ್ ಖರ್ಚಾಗುವುದಿದ್ದರೂ ಏನೋಡ್ ಮಡ್ಡಿನಲ್ಲಿ ಬೆಲೆಬಾಳುವ ಲೋಹಗಳು ತಂಗುವುದರಿಂದ ಲಾಭಕರವೆಂದು ಕ್ರೋಡೀಕರಿಸಬಹುದು.

ಇಲೆಕ್ಟ್ರೋಲಿಸಿಸ್ ಮೂಲಕ ತಾಮ್ರದ ಒಂದು ಸ್ಯಾಂಪಲನ್ನು ಶುದ್ಧೀಕರಿಸುವಂತೆ ಎಸೈನ್‌ಮೆಂಟ್ ಕೊಡಬಹುದು.

## ವರ್ಕ್‌ಶೀಟ್ 1

ಪಟ್ಟಿಯಲ್ಲಿ ಬಿಟ್ಟು ಹೋದಭಾಗವನ್ನು ತುಂಬಿಸಿರಿ.

| ಲೋಹ | ಅದಿರು | ರಾಸಾಯನಿಕ ಸೂತ್ರ |
|---|---|---|
| ಅಲ್ಯುಮಿನಿಯಂ | a. ............... | $Al_2O_3.2H_2O$ |
| b. ............... | ಹೆಮೆಟೈಟ್ | $Fe_2O_3$ |
| ಕಬ್ಬಿಣ | ಮೇಗ್ನೆಟೈಟ್ | c. ............... |
| ತಾಮ್ರ | d. ............... | $CuFeS_2$ |
| ತಾಮ್ರ | ಕುಪ್ರೈಟ್ | e. ............... |
| ಸತು | ಸಿಂಕ್‌ಬ್ಲೆಂಡ್ | f. ............... |
| ಸತು | g. ............... | $ZnCO_3$ |

## ವರ್ಕ್‌ಶೀಟ್ 2

ಹೊಂದಿಸಿ ಬರೆಯಿರಿ

| ಸಾಂದ್ರೀಕರಣ ರೀತಿ | ಸಂದರ್ಭ |
|---|---|
| a. ನೀರಿನ ಪ್ರವಾಹದಲ್ಲಿ ತೊಳೆದು ತೆಗೆಯುವುದು | i. ಕಶ್ಮಲದ ಸಾಂದ್ರತೆ ಹೆಚ್ಚಿದ್ದು ಅದಿರಿನ ಸಾಂದ್ರತೆ ಕಡಿಮೆಯಿರುವುದು. |
| b. ತೇಲಿಸುವಿಕೆ | ii. ಯೋಗ್ಯವಾದ ದ್ರಾವಣದಲ್ಲಿ ಅದಿರು ವಿಲೀನವಾಗುವಾಗ |
| c. ಕಾಂತೀಯ ಬೇರ್ಪಡಿಸುವಿಕೆ | iii. ಕಶ್ಮಲಗಳ ಸಾಂದ್ರತೆ ಕಡಿಮೆಯಿದ್ದು ಅದಿರಿನ ಸಾಂದ್ರತೆ ಹೆಚ್ಚಿರುವಾಗ |
| d. ಲೀಚಿಂಗ್ | iv. ಅದಿರು ಅಥವಾ ಕಶ್ಮಲಗಳು ಇವೆರಡರಲ್ಲಿ ಯಾವುದಾದರೂ ಒಂದಕ್ಕೆ ಕಾಂತೀಯ ಸ್ವಭಾವವಿರುವಾಗ. |

## ವರ್ಕ್‌ಶೀಟ್ 3

ಕೆಳಗೆ ಕೊಟ್ಟಿರುವ ಯೌಗಿಕಗಳನ್ನು ಕಾಲ್ಸಿನೇಶನ್ ಮತ್ತು ರೋಸ್ಟಿಂಗಿಗೆ ಒಳಪಡಿಸುವವುಗಳಾಗಿ ವರ್ಗೀಕರಿಸಿರಿ:

$Al_2O_3.2H_2O$

$Cu_2S$

$ZnS$

$ZnCO_3$

$PbS$

$CuCO_3$

$Cu(OH)_2$

$HgS$

$CaCO_3$

$Ag_2S$

$Fe_2O_3.xH_2O$

$CuFeS_2$,

$MgCO_3$

$FeS_2$

| ಕಾಲ್ಸಿನೇಶನಿಗೆ ಒಳಪಡಿಸುವವುಗಳು | ರೋಸ್ಟಿಂಗಿಗೆ ಒಳಪಡಿಸುವವುಗಳು |
|---|---|
| | |

## ವರ್ಕ್‌ಶೀಟ್ 4

ಲೋಹಗಳ ಒಂದು ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

ಸತು

ಪಾದರಸ

ತಾಮ್ರ

ಕಾಡ್ಮಿಯ

ಸೀಸ

ಬೆಳ್ಳಿ

ಲೋಹ ಶುದ್ಧೀಕರಣದ ಆಧಾರದಲ್ಲಿ ಇವುಗಳನ್ನು ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಯೋಗ್ಯ ರೀತಿಯಲ್ಲಿ ತುಂಬಿಸಿರಿ.

| ದ್ರವೀಕರಿಸಿ ಬೇರ್ಪಡಿಸುವುದು | ಭಟ್ಟಿ ಇಳಿಸುವಿಕೆ | ವಿದ್ಯುದ್ವಿಶ್ಲೇಷಣೆ |
|---|---|---|
| | | |

## ವರ್ಕ್‌ಶೀಟ್ 5

ಕೆಲವು ಲೋಹಗಳ ಉತ್ಪಾದನಾ ರೀತಿಗಳನ್ನು ಕೆಳಗೆ ಎಡಭಾಗದ ಕಾಲಂನಲ್ಲಿ ಕೊಡಲಾಗಿದೆ. ಪ್ರತಿಯೊಂದಕ್ಕೂ ಯೋಗ್ಯವಾದ ಎರಡು ಲೋಹಗಳನ್ನು ಕಂಡುಹಿಡಿದು ಬಲಭಾಗದ ಕಾಲಂನಲ್ಲಿ ಬರೆಯಿರಿ.

| ಲೋಹ ಉತ್ಪಾದನಾ ರೀತಿ | ಉದಾಹರಣೆ |
|---|---|
| 1. ಲೋಹದ ಓಕ್ಸೈಡುಗಳನ್ನು ಕಾರ್ಬನ್/CO ಉಪಯೋಗಿಸಿ ಅಪಕರ್ಷಿಸಲಾಗುವುದು. | |
| 2. ದ್ರವೀಕರಿಸಿದ ಲೋಹ ಯೌಗಿಕಗಳನ್ನು ವಿದ್ಯುದ್ವಿಶ್ಲೇಷಣೆಗೊಳಪಡಿಸಿ ಲೋಹವನ್ನು ಉತ್ಪಾದಿಸುವರು. | |
| 3. ಪ್ರಕೃತಿಯಲ್ಲಿ ಸ್ವತಂತ್ರ ಸ್ಥಿತಿಯಲ್ಲಿ ಕಂಡುಬರುವುದು. | |
| 4. ಲೋಹದ ಸಲ್ಫೈಡನ್ನು ಸ್ವಯಂ ಅಪಕರ್ಷಣೆ ಮತ್ತು ಉತ್ಕರ್ಷಣೆ ಕ್ರಿಯೆಯ ಮೂಲಕ ಬೇರ್ಪಡಿಸುವರು. | |

## ವರ್ಕ್‌ಶೀಟ್ 6

ಬೋಕ್ಸೈಟಿನ ಸಾಂದ್ರೀಕರಣಕ್ಕೆ ಸಂಬಂಧಿಸಿದ ಕ್ರಿಯೆಗಳನ್ನು ಕ್ರಮರಹಿತವಾಗಿ ಕೊಡಲಾಗಿದೆ. ಇವುಗಳನ್ನು ಕ್ರಮೀಕರಿಸಿ ಬೋಕ್ಸೈಟಿನ ಸಾಂದ್ರೀಕರಣದ ಸರಿಯಾದ ಫ್ಲೋಚಾರ್ಟ್ ತಯಾರಿಸಿರಿ.

ಬಿಸಿಯಾದ NaOH ದ್ರಾವಣ

ಸೋಡಿಯಂ ಅಲ್ಯುಮಿನೇಟ್ ದ್ರಾವಣ ($NaAlO_2$)

ಶುಷ್ಕ ಅಲ್ಯುಮಿನಾ ($Al_2O_3$)

ದ್ರಾವಣದಿಂದ ಕಶ್ಮಲಗಳನ್ನು ಸೋಸಿ ತೆಗೆಯಲಾಗುವುದು.

$Al(OH)_3$ ಅಧಃಕ್ಷೇಪ

ಅಧಃಕ್ಷೇಪವನ್ನು ಬೇರ್ಪಡಿಸಿ ಚೆನ್ನಾಗಿ ತೊಳೆದು ಬಿಸಿಮಾಡುವರು.

ಸ್ವಲ್ಪ $Al(OH)_3$ ಸೇರಿಸಿ, ನೀರು ಸೇರಿಸಿ ದುರ್ಬಲಗೊಳಿಸಿ $Al(OH)_3$ ಅಧಃಕ್ಷೇಪಗೊಳಿಸುವರು

ಬೋಕ್ಸೈಟ್ ($Al_2O_3.2H_2O$)

## ವರ್ಕ್‌ಶೀಟ್ 7

ಕೆಳಗೆ ಕೊಟ್ಟಿರುವ ಪದಬಂಧವನ್ನು ಪೂರ್ತಿಗೊಳಿಸಿರಿ.



**ಬಲಭಾಗಕ್ಕೆ**

1. $Al_2O_3.2SiO_2.2H_2O$ ಎಂಬುದು __________ ರ ರಾಸಾಯನಿಕ ಸೂತ್ರವಾಗಿದೆ.(4)
3. ಅದಿರುಗಳನ್ನು ಹುಡಿಮಾಡುವ ಕ್ರಿಯೆ (7)
4. ತಾಮ್ರದ ಶುದ್ಧೀಕರಣದಲ್ಲಿ ಶುದ್ಧ ತಾಮ್ರದ ತೆಳ್ಳಗಿನ ತಗದು __________ ಆಗಿ ಉಪಯೋಗಿಸಲ್ಪಡುವುದು (3)
5. ಶಾಶ್ವತ ಕಾಂತಗಳನ್ನು ತಯಾರಿಸಲು ಉಪಯೋಗಿಸುವ ಸ್ಟೇನ್‌ಲೆಸ್ ಸ್ಟೀಲ್ (4)
7. ದ್ರವೀಕರಣ ಬಿಂದು ಕಡಿಮೆಯಾಗಿರುವ ಲೋಹಗಳ ಶುದ್ಧೀಕರಣ ರೀತಿ. (4)

**ಕೆಳಭಾಗಕ್ಕೆ**

1. ಝಿಂಕ್ ಕಾರ್ಬನೇಟ್ ಅಡಕವಾಗಿರುವ ಅದಿರು. (4)
2. ಸಲ್ಫೈಡ್ ಅದಿರುಗಳ ಸಾಂದ್ರೀಕರಣ ವಿಧಾನ. (6)
4. ವಾಯುವಿನ ಸಂಪರ್ಕವಿಲ್ಲದೆ ಅದಿರುಗಳನ್ನು ಬಿಸಿಮಾಡುವ ವಿಧಾನ.(6)
6. ಉನ್ನತ ಪ್ರತಿರೋಧವಿರುವ ಸ್ಟೇನ್‌ಲೆಸ್‌ಸ್ಟೀಲ್. (2)

**ವರ್ಕ್‌ಶೀಟ್ ಉತ್ತರಗಳು**

**ವರ್ಕ್‌ಶೀಟ್ 1**

a. ಬೋಕ್ಸೈಟ್   b. ಕಬ್ಬಿಣ

c. $Fe_3O_4$   d. ಕೋಪ್ಪರ್ ಪೈರೈಟ್

e. $Cu_2O$   f. ZnS

g. ಕೆಲಾಮಿನ್

**ವರ್ಕ್‌ಶೀಟ್ 2**

a. iii   b. i

c. iv   d. ii

**ವರ್ಕ್‌ಶೀಟ್ 3**

ಕಾಲ್ಸಿನೇಶನಿಗೆ ನಡೆಸಬೇಕಾದವುಗಳು : $Al_2O_3.2H_2O$, $ZnCO_3$, $CuCO_3$, $Cu(OH)_2$, $CaCO_3$, $Fe_2O_3.xH_2O$, $MgCO_3$

ರೋಸ್ಟಿಂಗ್ ನಡೆಸಬೇಕಾದವುಗಳು: $Cu_2S$, ZnS, PbS, HgS, $Ag_2S$, $CuFeS_2$, FeS

**ವರ್ಕ್‌ಶೀಟ್ 4**

ದ್ರವೀಕರಿಸಿ ಬೇರ್ಪಡಿಸುವುದು : ತವರ, ಸೀಸ

ಭಟ್ಟಿ ಇಳಿಸುವಿಕೆ : ಸತು, ಕಾಡ್ಮಿಯಂ

ವಿದ್ಯುದ್ವಿಶ್ಲೇಷಣೆ : ಕೋಪ್ಪರ್, ಬೆಳ್ಳಿ

**ವರ್ಕ್‌ಶೀಟ್ 5**

1. Fe, Zn   2. Al, Ca
3. Ag, Au   4. Cu

## ವರ್ಕ್‌ಶೀಟ್ 6

ಬೋಕ್ಸೈಟ್ ($Al_2O_3.2H_2O$)

↓

ಬಿಸಿಯಾದ NaOH ದ್ರಾವಣ

↓

ಸೋಡಿಯಂ ಅಲ್ಯುಮಿನೇಟ್ ದ್ರಾವಣ ($NaAlO_2$)

↓

ದ್ರಾವಣದಿಂದ ಕಶ್ಮಲಗಳನ್ನು ಸೋಸಿ ತೆಗೆಯಲಾಗುವುದು

↓

ಸ್ವಲ್ಪ $Al(OH)_3$ ಸೇರಿಸಿ, ನೀರು ಸೇರಿಸಿ ದುರ್ಬಲಗೊಳಿಸಿ $Al(OH)_3$ ಅಧಃಕ್ಷೇಪಿಸಲ್ಪಡುವುದು.

↓

$Al(OH)_3$ ಅಧಃಕ್ಷೇಪ

↓

ಅಧಃಕ್ಷೇಪವನ್ನು ಬೇರ್ಪಡಿಸಿ ಚೆನ್ನಾಗಿ ತೊಳೆದ ನಂತರ ಬಿಸಿಮಾಡಲಾಗುವುದು.

↓

ಶುಷ್ಕವಾದ ಅಲ್ಯುಮಿನಾ ($Al_2O_3$)

**ವರ್ಕ್‌ಶೀಟ್ 7**

ಬಲಭಾಗಕ್ಕೆ

1. ಆವೆಮಣ್ಣು
3. ಪೆಲ್ವರೈಸೇಶನ್
4. ಕೇಥೋಡ್
5. ಆಲ್ನಿಕೊ
7. ಲಿಕ್ವೆಶನ್

ಕೆಳಭಾಗಕ್ಕೆ

1. ಕೆಲಾಮಿನ್
2. ನೊರೆಯಲ್ಲಿ ತೇಲಿಸುವುದು
4. ಕಾಲ್ಸಿನೇಶನ್
6. ನಿಕ್ರೋಂ

**ಮೌಲ್ಯಮಾಪನ**

1. ಅಲ್ಯುಮೀನಿಯಂನ ಉನ್ನತ ಉಷ್ಣ ವಾಹಕತ್ವ

   ತಾಮ್ರದ ಉನ್ನತ ಉಷ್ಣವಾಹಕತ್ವ ಹಾಗೂ ಕಾಠಿಣ್ಯ

   ಚಿನ್ನದ ಉನ್ನತ ತಂತುಶೀಲತ್ವ ಪತ್ರಶೀಲತ್ವ ಮತ್ತು ಕಡಿಮೆ ರಾಸಾಯನಿಕ ಕ್ರಿಯಾದರ

2. ಧಾರಾಳ ಲಭ್ಯವಿರಬೇಕು.

   ಸುಲಭವಾಗಿ ಲೋಹವನ್ನು ಬೇರ್ಪಡಿಸಲು ಸಾಧ್ಯವಾಗಬೇಕು. ಕಡಿಮೆ ವೆಚ್ಚದಲ್ಲಿ ಲೋಹವನ್ನು ಬೇರ್ಪಡಿಸಿ ತೆಗೆಯಲು ಸಾಧ್ಯವಾಗಬೇಕು.

   ಲೋಹದ ಪ್ರಮಾಣ ಹೆಚ್ಚಿರಬೇಕು.
   ಕಶ್ಮಲಗಳು ಕಡಿಮೆ ಇರುವಂಥದ್ದಾಗಿರಬೇಕು.

3. ಅದಿರುಗಳ ಸಾಂದ್ರೀಕರಣ (Concentration of Ores)

   ಸಾಂದ್ರೀಕರಿಸಿದ ಅದಿರಿನಿಂದ ಲೋಹದ ಬೇರ್ಪಡಿಸುವಿಕೆ (Extraction of Metal from Concentrated Ore)

   ಲೋಹ ಶುದ್ಧೀಕರಣ(Refining of Metals)

4. ದ್ರವೀಕರಿಸಿ ಬೇರ್ಪಡಿಸುವುದು (Liquation)

   ಭಟ್ಟಿ ಇಳಿಸುವಿಕೆ(Distillation)

   ವಿದ್ಯುದ್ವಿಶ್ಲೇಷಣೆ ಶುದ್ಧೀಕರಣ (Electrolytic Refining)

5. ಸಾಂದ್ರೀಕರಿಸಿದ ಹೆಮೆಟೈಟ್, ಸುಣ್ಣದ ಕಲ್ಲು, ಕೋಕ್ ಎಂಬಿವುಗಳು ಸೇರಿದ ಮಿಶ್ರಣವನ್ನು ಬ್ಲಾಸ್ಟ್ ಫರ್ನೆಸಿಗೆ ಹಾಕಿ ಬಿಸಿಮಾಡಲಾಗುವುದು. ಕೋಕ್ ಕಬ್ಬಿಣದ ಒಕ್ಸೈಡನ್ನು ಅಪಕರ್ಷಿಸಿ ಕಬ್ಬಿಣವಾಗಿ ಬದಲಾಯಿಸುವುದು. ಫರ್ನೆಸಿನ ಉನ್ನತ ಉಷ್ಣತೆಯಿಂದಾಗಿ ಸುಣ್ಣದಕಲ್ಲು ವಿಭಜನೆಹೊಂದಿ ಉಂಟಾಗುವ $CaO$ ಕಶ್ಮಲವಾದ $SiO_2$ ವನ್ನು $CaSiO_3$ ಎಂಬ ಸ್ಲೇಗ್ ಆಗಿ ಬದಲಾಯಿಸುವುದು. ದ್ರವೀಕರಿಸಲ್ಪಟ್ಟ ಕಬ್ಬಿಣವು ಫರ್ನೆಸಿನ ಅತ್ಯಂತ ಕೆಳಗೆ ದ್ರವರೂಪದಲ್ಲಿ ಸಂಗ್ರಹಿಸಲ್ಪಡುವುದು (ಇದಕ್ಕೆ ಸಂಬಂಧಿಸಿದ ರಾಸಾಯನಿಕ ಕ್ರಿಯೆಗಳಿಗೆ ಪಾಠಪುಸ್ತಕ ನೋಡಿರಿ.)

6. ಪಿಗ್ ಅಯರ್ನ್ ಇದರಲ್ಲಿ 4% ಕಾರ್ಬನ್ ಮತ್ತು ಇತರ ಕಶ್ಮಲಗಳಾದ ಫೋಸ್ಪರಸ್, ಸಿಲಿಕನ್, ಸಲ್ಫರ್,

ಮ್ಯಾಂಗನೀಸ್ ಎಂಬಿವುಗಳು ಅಡಕವಾಗಿರುವುದರಿಂದ ಇದೇ ರೀತಿಯಲ್ಲಿ ಉಪಯೋಗಿಸುವುದಿಲ್ಲ.

ಕಾಸ್ಟ್ ಅಯರ್ನ್ - ಸ್ಟೌವುಗಳು, ರೈಲ್ವೇಸ್ಲೀಪರ್‌ಗಳು, ಗಟ್ಟರ್ ಪೈಪುಗಳು ಆಟಿಕೆಗಳು ಎಂಬಿವುಗಳ ತಯಾರಿಕೆಗೆ.

- ರೋಟ್ ಅಯರ್ನ್, ಸ್ಟೀಲುಗಳ ತಯಾರಿಗೆ

ಅಲ್ನಿಕೋ - ಶಾಶ್ವತ ಕಾಂತಗಳನ್ನು ನಿರ್ಮಿಸುವುದಕ್ಕೆ

7. ಬೋಕ್ಸೈಟಿನಿಂದ ಅಲ್ಯುಮಿನಾ ತಯಾರಿಸುವುದು ಲೀಚಿಂಗ್ ವಿಧಾನದಲ್ಲಾಗಿದೆ. ಚೆನ್ನಾಗಿ ಹುಡಿಮಾಡಿದ ಬೋಕ್ಸೈಟನ್ನು ಉನ್ನತ ಒತ್ತಡದಲ್ಲಿ (35 – 36 ಬಾರ್) ಬಿಸಿಯಾದ (473 - 523 ಕೆಲ್ವಿನ್ ) ಪ್ರಬಲ NaOH ನೊಂದಿಗೆ ಸೇರಿಸಿದಾಗ ಅಲ್ಯುಮಿನಿಯಂ ಓಕ್ಸೈಡ್ ಸೋಡಿಯಂ ಅಲ್ಯುಮಿನೇಟಾಗಿ ($NaAlO_2$) ಅದರಲ್ಲಿ ವಿಲೀನವಾಗುವುದು. ಸೋಸಿ ತೆಗೆದ $Al(OH)_3$ ನ ಅಧಃಕ್ಷೇಪವನ್ನು ಬಿಸಿಮಾಡಿದಾಗ ಶುಷ್ಕವಾದ $Al_2O_3$ ಲಭಿಸುವುದು.

$$2Al(OH)_3(s) \rightarrow Al_2O_3 + 3\,H_2O\,(l)$$

8. ಸಾಂದ್ರೀಕರಿಸಿ ಲಭಿಸಿದ ಅಲ್ಯುಮಿನಾಕ್ಕೆ ($Al_2O_3$) ಕ್ರಯೋಲೈಟ್($Na_3AlF_6$) ಸೇರಿಸಿ ವಿದ್ಯುದ್ವಿಶ್ಲೇಷಣೆ ನಡೆಸುವರು. ಅಲ್ಯುಮಿನಾದ ದ್ರವೀಕರಣ ಬಿಂದುವನ್ನು ಕಡಿಮೆ ಮಾಡುವುದಕ್ಕೆ ಮತ್ತು ವಿದ್ಯುತ್ ವಾಹಕತ್ವವನ್ನು ಹೆಚ್ಚಿಸುವುದಕ್ಕೆ ಕ್ರಯೋಲೈಟ್ ಸೇರಿಸುವುದು. ಒಳಭಾಗದಲ್ಲಿ ಕಾರ್ಬನ್ ಲೈನಿಂಗ್ ಇರುವ ಟಾಂಕಿಯಲ್ಲಿ ಇಲೆಕ್ಟ್ರೋಲಿಸಿಸ್ ನಡೆಸುವರು. ಕಾರ್ಬನ್ ಲೈನಿಂಗ್ ಕೇಥೋಡಾಗಿ ವರ್ತಿಸುವುದು ಅಲ್ಯುಮಿನಾ ಮತ್ತು ಕ್ರಿಯೋಲೈಟಿನ ಮಿಶ್ರಣದಲ್ಲಿ ಅರ್ಧ ಮುಳುಗಿಸಿ ಇರಿಸಿದ ಕಾರ್ಬನ್ ದಂಡಗಳು ಏನೋಡಾಗಿ ವರ್ತಿಸುವುದು. ವಿದ್ಯುತ್ತನ್ನು ಹಾಯಿಸುವಾಗ ಈ ಮಿಶ್ರಣ ಬಿಸಿಯಾಗಿ ಕ್ರಿಯೋಲೈಟ್ ಕರಗುವುದು. ಇದರಲ್ಲಿ ಅಲ್ಯುಮಿನಾ ವಿಲೀನವಾಗುವುದು.

ಅಲ್ಯುಮಿನಾದಲ್ಲಿ $Al^{3+}$, $O^{2-}$ ಎಂಬ ಅಯೋನುಗಳಿವೆ.

ಕೇಥೋಡಿನಲ್ಲಿ : $Al^{3+}$ ಅಯೋನುಗಳು ಅಪಕರ್ಷಿಸಲ್ಪಟ್ಟು ಅಲ್ಯುಮೀನಿಯಂ ಉಂಟಾಗುವುದು.

$$Al^{3+}(melt) + 3e^- \rightarrow Al\,(l)$$

ಏನೋಡಿನಲ್ಲಿ : $O^{2-}$ ಅಯೋನುಗಳಿಗೆ ಉತ್ಕರ್ಷಣೆ ಉಂಟಾಗಿ $O_2$ ಉಂಟಾಗುವುದು.

$$2O^{2-}(melt) \rightarrow O_2 + 4e^-$$

ಏನೋಡಿನಲ್ಲಿ ಸ್ವತಂತ್ರಗೊಳ್ಳುವ ಓಕ್ಸಿಜನ್ ಏನೋಡಿನ ಕಾರ್ಬನಿನೊಂದಿಗೆ ವರ್ತಿಸಿ CO ಮತ್ತು $CO_2$ ಉಂಟಾಗುವುದು. ಈ ರೀತಿಯಲ್ಲಿ ಏನೋಡಿನಲ್ಲಿ ಪ್ರತಿಯೊಂದು ಕಿಲೋಗ್ರಾಂ ಅಲ್ಯುಮೀನಿಯಂ ಉಂಟಾಗುವಾಗಲೂ ಅರ್ಧ ಕಿಲೋಗ್ರಾಂ ಕಾರ್ಬನ್ ಏನೋಡ್ ಉರಿದು ಹೋಗುವುದು. ಆದುದರಿಂದ ಈ ಸೆಲ್ಲಿನ ಕಾರ್ಬನ್ ದಂಡಗಳನ್ನು ಆಗಾಗ ಬದಲಾಯಿಸಬೇಕಾಗುವುದು.

9. ವಿದ್ಯುದ್ವಿಶ್ಲೇಷಣೆ ರೀತಿಯಲ್ಲಿ ತಾಮ್ರದ ಶುದ್ಧೀಕರಣ ನಡೆಸುವಾಗ ಕಶ್ಮಲಗಳು ವಿದ್ಯುದ್ವಿಶ್ಲೇಷಣಾ ಸೆಲ್ಲಿನಲ್ಲಿ ಏನೋಡಿನ ಅಡಿಭಾಗದಲ್ಲಿ ತಂಗುವುದು. ಇದನ್ನು ಏನೋಡ್ ಮಡ್ ಎನ್ನುವರು. ಇದರಲ್ಲಿ ಚಿನ್ನವೂ ಸೇರಿದಂತೆ ಬೆಲೆಬಾಳುವ ಲೋಹಗಳು ಸೇರಿಕೊಂಡಿರುವುದು.

## ಮಕ್ಕಳ ಮೌಲ್ಯಮಾಪನ

| ಕ್ರ.ಸಂ. | ಸೂಚಕ | ಹೌದು | ಇಲ್ಲ |
|---|---|---|---|
| 1 | ಖನಿಜಗಳು, ಅದಿರುಗಳು, ಗೇಂಗ್ ಎಂಬಿವುಗಳನ್ನು ಗುರುತಿಸಲು ನನಗೆ ಸಾಧ್ಯವಿದೆ. | | |
| 2 | ಮೆಟಲರ್ಜಿಯ ವಿವಿಧ ಘಟ್ಟಗಳಲ್ಲಿ ನಡೆಯುವ ಕ್ರಿಯೆಗಳನ್ನು ವಿವರಿಸಲು ನನಗೆ ಸಾಧ್ಯವಿದೆ. | | |
| 3 | ಅದಿರಿನ ಸಾಂದ್ರೀಕರಣದ ವಿವಿಧ ರೀತಿಗಳಲ್ಲಿ ಯಾವ ಅದಿರಿಗೆ ಯಾವುದನ್ನು ಉಪಯೋಗಿಸೇಬೇಕೆಂದು ಸೂಚಿಸಲು ನನಗೆ ಸಾಧ್ಯವಿದೆ. | | |
| 4 | ಒಕ್ಸೈಡುಗಳನ್ನಾಗಿಸುವ ಕ್ರಿಯೆಯಲ್ಲಿ ಕಾಲ್ಸಿನೇಶನ್ ಮತ್ತು ರೋಸ್ಟಿಂಗ್‌ಗಳೊಳಗಿನ ವ್ಯತ್ಯಾಸವನ್ನೂ, ಇವುಗಳನ್ನು ಉಪಯೋಗಿಸಬೇಕಾದ ಅದಿರುಗಳ ವಿಶೇಷತೆಯನ್ನು ತಿಳಿದುಕೊಂಡು ಯೋಗ್ಯ ರೀತಿಯನ್ನು ಆಯ್ದುಕೊಳ್ಳಲು ನನಗೆ ಸಾಧ್ಯವಿದೆ. | | |
| 5 | ಲೋಹ ಶುದ್ಧೀಕರಣದ ವಿವಿಧ ವಿಧಾನಗಳಾದ ದ್ರವೀಕರಿಸಿ ಬೇರ್ಪಡಿಸುವುದು. ಭಟ್ಟಿ ಇಳಿಸುವಿಕೆ, ವಿದ್ಯುದ್ವಿಶ್ಲೇಷಣೆ ಎಂಬಿವುಗಳಿಂದ ಲೋಹ ಮತ್ತು ಕಶ್ಮಲಗಳ ಸ್ವಭಾವಗಳ ಆಧಾರದಲ್ಲಿ ಆಯ್ದುಕೊಳ್ಳಲು ನನಗೆ ಸಾಧ್ಯವಿದೆ. | | |
| 6 | ಬ್ಲಾಸ್ಟ್ ಫರ್ನೆಸ್ ಉಪಯೋಗಿಸಿ ಕೈಗಾರಿಕಾ ಮಟ್ಟದಲ್ಲಿ ಕಬ್ಬಿಣವನ್ನು ಉತ್ಪಾದಿಸುವ ವಿವಿಧ ಹಂತಗಳನ್ನು ವಿವರಿಸಲು ನನಗೆ ಸಾಧ್ಯವಿದೆ. | | |
| 7 | ವಿವಿಧ ಸ್ಟೀಲುಗಳ ವಿಶೇಷತೆಗಳನ್ನು ತಿಳಿದುಕೊಳ್ಳಲು ನನಗೆ ಸಾಧ್ಯವಿದೆ.. | | |
| 8 | ಅಲ್ಯುಮೀನಿಯಂ ಅದಿರಿನ ಸಾಂದ್ರೀಕರಣ ಮತ್ತು ಅಲ್ಯುಮೀನಿಯಂ ಉತ್ಪಾದನೆಯನ್ನು ವಿವರಿಸಲು ನನಗೆ ಸಾಧ್ಯವಿದೆ. | | |
| 9 | ವಿದ್ಯುದ್ವಿಶ್ಲೇಷಣೆ ಕ್ರಿಯೆಯ ಮೂಲಕ ತಾಮ್ರವನ್ನು ಶುದ್ಧೀಕರಿಸಲು ನನಗೆ ಸಾಧ್ಯವಿದೆ. | | |

## ಅಧ್ಯಾಪಕರ ಮೌಲ್ಯಮಾಪನ

| ನಂ | ಸೂಚಕ | ಉತ್ತಮವಾದುದು | ಸರಾಸರಿ | ಉತ್ತಮ ಗೊಳ್ಳಬೇಕಾದುದು. |
|---|---|---|---|---|
| 1 | ಖನಿಜಗಳು, ಅದಿರುಗಳು, ಗೇಂಗ್ ಇವುಗಳು ಏನೆಂದು ಮಕ್ಕಳು ತಿಳಿದಿರುತ್ತಾರೆ | | | |
| 2 | ಮೆಟಲರ್ಜಿಯ ವಿವಿಧ ಘಟ್ಟಗಲ್ಲಿ ನಡೆಯುವ ಕ್ರಿಯೆಗಳನ್ನು ಮಕ್ಕಳು ವಿವರಿಸುತ್ತಾರೆ. | | | |
| 3 | ಅದಿರಿನ ಸಾಂದ್ರೀಕರಣದ ವಿವಿಧ ರೀತಿಗಳಲ್ಲಿ ಯಾವ ಅದಿರಿಗೆ ಯಾವುದನ್ನು ಉಪಯೋಗಿಸಬೇಕೆಂದು ಕಂಡುಹಿಡಿದು ಮಕ್ಕಳು ವಿವರಿಸುತ್ತಾರೆ. | | | |
| 4 | ಒಕ್ಸೈಡುಗಳನ್ನಾಗಿಸುವ ಕ್ರಿಯೆಯಲ್ಲಿ ಕಾಲ್ಸಿನೇಶನ್ ಮತ್ತು ರೋಸ್ಟಿಂಗ್ ನಡುವಿನ ವ್ಯತ್ಯಾಸವನ್ನೂ, ಇವುಗಳನ್ನು ಉಪಯೋಗಿಸಬೇಕಾದ ಅದಿರುಗಳ ವಿಶೇಷತೆಯನ್ನು ತಿಳಿದುಕೊಂಡು ಯೋಗ್ಯವಾದ ರೀತಿಯನ್ನು ಮಕ್ಕಳು ಆಯ್ದುಕೊಳ್ಳುವರು. | | | |
| 5 | ಲೋಹ ಶುದ್ಧೀಕರಣದ ವಿವಿಧ ವಿಧಾನಗಳಾದ ದ್ರವೀಕರಿಸಿ ಬೇರ್ಪಡಿಸುವುದು, ಭಟ್ಟಿ ಇಳಿಸುವಿಕೆ, ವಿದ್ಯುದ್ವಿಶ್ಲೇಷಣೆ ಎಂಬಿವುಗಳಿಂದ ಲೋಹ ಮತ್ತು ಕಶ್ಮಲಗಳ ಸ್ವಭಾವಗಳ ಆಧಾರದಲ್ಲಿ ಮಕ್ಕಳು ಯೋಗ್ಯವಾದುದನ್ನು ಆಯ್ದುಕೊಳ್ಳುವರು. | | | |
| 6 | ಬ್ಲಾಸ್ಟ್‌ಫರ್ನೆಸ್ ಉಪಯೋಗಿಸಿ ಕೈಗಾರಿಕಾ ಮಟ್ಟದಲ್ಲಿ ಕಬ್ಬಿಣವನ್ನು ಉತ್ಪಾದಿಸುವ ವಿವಿಧ ಹಂತಗಳನ್ನು ಮಕ್ಕಳು ವಿವರಿಸುವರು. | | | |
| 7 | ವಿವಿಧ ರೀತಿಯ ಸ್ಟೀಲುಗಳ ವಿಶೇಷತೆಗಳನ್ನು ಮಕ್ಕಳು ತಿಳಿದಿರುತ್ತಾರೆ. | | | |
| 8 | ಅಲ್ಯುಮೀನಿಯಂ ಅದಿರಿನ ಸಾಂದ್ರೀಕರಣ ಮತ್ತು ಅಲ್ಯುಮೀನಿಯಂನ ಉತ್ಪಾದನೆಯನ್ನು ಮಕ್ಕಳು ವಿವರಿಸುತ್ತಾರೆ. | | | |
| 9 | ಮಕ್ಕಳು ವಿದ್ಯುದ್ವಿಶ್ಲೇಷಣೆ ಕ್ರಿಯೆಯ ಮೂಲಕ ತಾಮ್ರವನ್ನು ಶುದ್ಧೀಕರಿಸುವರು. | | | |

6

# ಸಾವಯವ ಯೌಗಿಕಗಳ ನಾಮಕರಣ

## *ಮುನ್ನುಡಿ*

*ಕಾರ್ಬನ್ ಎಂಬ ಮೂಲವಸ್ತುವಿನ ವಿಶೇಷತೆಗಳು, ಸಾವಯವ ಯೌಗಿಕಗಳು ಎಂಬಿವುಗಳ ಕುರಿತು ಮಕ್ಕಳು ಹಿಂದಿನ ತರಗತಿಯಲ್ಲಿ ಕಲಿತಿರುವರು. ಸಾವಯವ ಯೌಗಿಕಗಳ IUPAC ನಾಮಕರಣ, ಕಾರ್ಯವಿಧಾನ ಗುಂಪುಗಳು, ಐಸೋಮೆರಿಸಂ ಎಂಬಿವುಗಳ ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಣುಸೂತ್ರವನ್ನು ಕೊಟ್ಟಾಗ ರಚನಾ ಸೂತ್ರವನ್ನು ಬರೆಯಲು ಮತ್ತು IUPAC ಹೆಸರನ್ನು ಬರೆಯಲು ಮತ್ತು IUPAC ಹೆಸರು ಕೊಟ್ಟಾಗ ರಚನಾ ಸೂತ್ರ ಬರೆಯಲು ಸಾಧ್ಯವಾಗುವಂತಹ ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ಒಳಪಡಿಸಲಾಗಿದೆ. ಇದರೊಂದಿಗೆ ಒಂದೇ ಅಣುಸೂತ್ರವಿರುವ ಅನೇಕ ಸಾವಯವ ಯೌಗಿಕಗಳಿರಬಹುದೆಂಬ ಆಶಯ ಮಕ್ಕಳಿಗೆ ಸಿಗುವಂತಹ ಚಟುವಟಿಕೆಗಳನ್ನು ಒಳಪಡಿಸಬಹುದಾಗಿದೆ. ಸಾವಯವ ಯೌಗಿಕಗಳ ನಾಮಕರಣ, ವಿವಿಧ ಐಸೋಮರುಗಳ ರಚನಾ ಸೂತ್ರಗಳನ್ನು ಬರೆಯುವ ರೀತಿಯನ್ನು ಪರಿಚಯಿಸುವುದರ ಮೂಲಕ ರಸಾಯನ ಶಾಸ್ತ್ರದ ಕಲಿಕೆಯನ್ನು ಮತ್ತಷ್ಟು ಸಂತೋಷದಾಯಕವಾಗಿಸಲು ಸಾಧ್ಯವಾಗಬೇಕು. ನಿತ್ಯ ಜೀವನದಲ್ಲಿ ಸಾವಯವ ರಸಾಯನ ಶಾಸ್ತ್ರದ ಪ್ರಾಧಾನ್ಯವನ್ನು ತಿಳಿಯಲು ಮುಂದಿನ ಅಧ್ಯಾಯದಲ್ಲಿ ಮತ್ತು ಮುಂದಿನ ತರಗತಿಗಳಲ್ಲಿ ಅವಕಾಶವಿದೆ. ಸಾವಯವ ರಸಾಯನ ಶಾಸ್ತ್ರದ ಪ್ರಧಾನ ಆಶಯಗಳು ಹಾಗೂ ತಿಳುವಳಿಕೆಗಳನ್ನು ಮನದಟ್ಟುಮಾಡಲು ಈ ಅಧ್ಯಾಯದಲ್ಲಿ ಐ.ಸಿ.ಟಿ. ಸಾಧ್ಯತೆಗಳನ್ನು ಉಪಯೋಗಿಸಲಾಗಿದೆ. ಇಂತಹ ಚಟುವಟಿಕೆಗಳನ್ನು ಆಯೋಜಿಸಿ ಕಾರ್ಯಗತಗೊಳಿಸಲು ಪ್ರತ್ಯೇಕಗಮನ ನೀಡುವಿರಲ್ಲವೇ?*

# MODULE WISE PERIOD DISTRIBUTION

**ಒಟ್ಟು ಪೀರಿಯಡ್ 10**

## ಯೂನಿಟ್ 6

## ಸಾವಯವ ಯೌಗಿಕಗಳ ನಾಮಕರಣ

**ಮೋಡ್ಯೂಲ್ 1** **ಪೀರಿಯಡ್ 7**

- ವಿವಿಧ ಹೈಡ್ರೋಕಾರ್ಬನುಗಳ ರಚನಾ ಸೂತ್ರ.
- ಶಾಖೆಗಳಿರುವ ಹೈಡ್ರೋಕಾರ್ಬನುಗಳ ನಾಮಕರಣ.
- ಒಂದಕ್ಕಿಂತ ಹೆಚ್ಚು ಶಾಖೆಗಳು ಇರುವ ಹೈಡ್ರೋಕಾರ್ಬನುಗಳ ನಾಮಕರಣ.
- ಅಸಂತೃಪ್ತ ಹೈಡ್ರೋಕಾರ್ಬನುಗಳ ನಾಮಕರಣ
- ಕಾರ್ಯವಿಧಾನ ಗುಂಪುಗಳು

**ಮೋಡ್ಯೂಲ್ 2** **ಪೀರಿಯಡ್ 3**

- ಐಸೋಮೆರಿಸಂ
  - ಚೈನ್ ಐಸೋಮೆರಿಸಂ
  - ಕಾರ್ಯವಿಧಾನ ಗುಂಪು ಐಸೋಮೆರಿಸಂ
  - ಪೊಸಿಶನ್ ಐಸೋಮೆರಿಸಂ
- ಅಲಿಸೈಕ್ಲಿಕ್ ಯೌಗಿಕಗಳ ರಚನೆ, IUPAC ನಾಮಕರಣ

**ಯೂನಿಟ್ ಫ್ರೇಂ** **ಒಟ್ಟು ಪೀರಿಯಡ್ : 10**

| ಆಶಯಗಳು/ ತಿಳುವಳಿಕೆಗಳು/ ಪ್ರಕ್ರಿಯಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| **ಮೊಡ್ಯೂಲ್ 1 ಪೀರಿಯಡ್ 7**<br>• ವಿವಿಧ ಹೈಡ್ರೋಕಾರ್ಬನುಗಳ ರಚನಾ ಸೂತ್ರ. | • ಬೋಲ್ & ಸ್ಟಿಕ್ ಮಾದರಿಗಳು, ಯೋಗ್ಯವಾದ ಇತರ ಮೋಡೆಲ್‌ಗಳು ಐ.ಸಿ.ಟಿ. ಸಾಧ್ಯತೆಗಳು ಎಂಬಿವುಗಳನ್ನು ಉಪಯೋಗಿಸಿ ಹೈಡ್ರೋಕಾರ್ಬನುಗಳ ರಚನಾ ಸೂತ್ರ ರಚಿಸುವುದು. | • ವಿವಿಧ ಹೈಡ್ರೋಕಾರ್ಬನುಗಳ ಬೋಲ್‌ಸ್ಟಿಕ್ ಮಾದರಿ ರಚಿಸಲು ಸಾಧ್ಯವಾಗುವುದು. |
| • ಒಂದೇ ಅಣುಸೂತ್ರವಿರುವ ಯೌಗಿಕಗಳು ವಿವಿಧ ರಚನಾ ಸೂತ್ರದಲ್ಲಿ ಕಂಡುಬರುವುದು. | • ಸಮಾನ ಸಂಖ್ಯೆಯ ಕಾರ್ಬನ್ ಪರಮಾಣುಗಳನ್ನು ಉಪಯೋಗಿಸಿ ವಿವಿಧ ರೀತಿಯ ಯೌಗಿಕಗಳ ರಚನಾ ಸೂತ್ರವನ್ನು ಬರೆಯುವುದು. ಐ.ಸಿ.ಟಿ. ಪಟ್ಟಿ ಪೂರ್ತಿಗೊಳಿಸುವುದು. ಚರ್ಚೆ, ಕ್ರೋಡೀಕರಣ. | • ಒಂದೇ ಅಣುಸೂತ್ರವಿರುವ ಯೌಗಿಕಗಳ ವಿವಿಧ ರಚನಾ ಸೂತ್ರಗಳನ್ನು ಬರೆಯಲು ಸಾಧ್ಯವಾಗುವುದು. ಪೆಂಟೇನಿನ ವಿವಿಧ ರಚನೆಗಳನ್ನು ಬರೆಯುವರು. |
| • ಹೈಡ್ರೋಕಾರ್ಬನುಗಳ IUPAC ನಾಮಕರಣದ ಅವಶ್ಯಕತೆ, ಚೈನ್ ರೂಪದಲ್ಲಿರುವ ಹೈಡ್ರೋಕಾರ್ಬನುಗಳ IUPAC ನಾಮಕರಣ | • ಐ.ಸಿ.ಟಿ, ಪಟ್ಟಿಯನ್ನು ಪೂರ್ತಿಗೊಳಿಸುವುದು. | • ಕಾರ್ಬನ್ ಪರಮಾಣುಗಳ ಸಂಖ್ಯೆ ನೋಡಿ ತೆರೆದ ಸಂಕಲೆಯ ಹೈಡ್ರೋಕಾರ್ಬನುಗಳ IUPAC ನಾಮಕರಣ ಸಾಧ್ಯವಾಗುವುದು.<br>• ಒಂದು ಮೀಥೈಲ್ ಶಾಖೆಯಿರುವ ಆಲ್ಕೇನುಗಳ IUPAC ಹೆಸರು ಬರೆಯಲು ಸಾಧ್ಯವಾಗುವುದು. |
| • ಶಾಖೆಗಳಿರುವ ಹೈಡ್ರೋಕಾರ್ಬನುಗಳ IUPAC ನಾಮಕರಣ, ಶಾಖೆಯ ಸ್ಥಾನ, ಉದ್ದ ಹೆಚ್ಚಿರುವ ಶಾಖೆ ಇವುಗಳನ್ನು ಕಂಡುಹಿಡಿದು ಯೌಗಿಕಗಳ IUPAC ನಾಮಕರಣ | • ಐ.ಸಿ.ಟಿ, ಪಟ್ಟಿಯನ್ನು ಪೂರ್ತಿಗೊಳಿಸುವುದು.<br>• ಚರ್ಚೆ, ಪಟ್ಟಿ ಪೂರ್ತಿಗೊಳಿಸುವುದು. ರಚನಾ ಸೂತ್ರ ಕೊಟ್ಟಾಗ ಯೌಗಿಕಗಳ IUPAC ಹೆಸರು ಬರೆಯುವುದು. | • ಒಂದಕ್ಕಿಂತ ಹೆಚ್ಚು ಮೀಥೈಲ್ ಶಾಖೆಗಳಿರುವ ಹೈಡ್ರೋಕಾರ್ಬನುಗಳ IUPAC ಹೆಸರು ಬರೆಯಲು ಸಾಧ್ಯವಾಗುವುದು. |

**ಯೂನಿಟ್ ಫ್ರೇಂ** **ಒಟ್ಟು ಪೀರಿಯಡ್ 10**

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯ | ಕಲಿಕೆಯ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಶಾಖೆಗಳ ಹೆಸರನ್ನು ಅಕ್ಷರಮಾಲಾ ಕ್ರಮದಲ್ಲಿ ಬರೆದು IUPAC ನಾಮಕರಣ ಮಾಡುವ ರೀತಿ.<br>• IUPAC ಹೆಸರು ಕೊಟ್ಟಾಗ ರಚನಾ ಸೂತ್ರ ಬರೆಯುವ ರೀತಿ. | • ಈಥೈಲ್, ಮೀಥೈಲ್ ಶಾಖೆಗಳಿರುವ ಹೈಡ್ರೋಕಾರ್ಬನುಗಳ IUPAC ಹೆಸರನ್ನು ಪಟ್ಟಿ ಮಾಡುವುದು.<br>• IUPAC ಹೆಸರನ್ನುಪಯೋಗಿಸಿ ವಿವಿಧ ಯೌಗಿಕಗಳ ರಚನಾ ಸೂತ್ರ ಬರೆಯುವುದು. | • ಈಥೈಲ್, ಮೀಥೈಲ್ ಶಾಖೆಗಳಿರುವ ಹೈಡ್ರೋಕಾರ್ಬನುಗಳ IUPAC ಹೆಸರು ಬರೆಯುವರು.<br>• IUPAC ಹೆಸರು ಕೊಟ್ಟಾಗ ರಚನಾ ಸೂತ್ರ ಬರೆಯಲು ಸಾಧ್ಯವಾಗುವುದು. |
| • ದ್ವಿಬಂಧ, ತ್ರಿಬಂಧ ಇರುವ ಹೈಡ್ರೋಕಾರ್ಬನುಗಳ IUPAC ನಾಮಕರಣ. | • ಚರ್ಚೆ, ಮೋಡೆಲ್ ತಯಾರಿ. | • ಆಲ್ಕೇನು, ಆಲ್ಕೀನ್, ಆಲ್ಕೈನ್ ಇವುಗಳ IUPAC ಹೆಸರು ಬರೆಯಲು ಸಾಧ್ಯವಾಗುವುದು. |
| • -OH, -CHO, -CO-, -COOH, ಹೇಲೋಗುಂಪು, -OR, $-NH_2$ ಮುಂತಾದ ಕಾರ್ಯವಿಧಾನ ಗುಂಪುಗಳಿರುವ ಯೌಗಿಕಗಳ ರಚನೆಗಳು. | • ಐ.ಸಿ.ಟಿ., ಪಟ್ಟಿ ವಿಶ್ಲೇಷಣೆ, ಚರ್ಚೆ. | • ಕಾರ್ಯವಿಧಾನ ಗುಂಪು ಯಾವುದೆಂದು ತಿಳಿದು ಕೊಟ್ಟಿರುವ ಯೌಗಿಕದಲ್ಲಿರುವ ಕಾರ್ಯವಿಧಾನ ಗುಂಪನ್ನು ಗುರುತಿಸಲು ಸಾಧ್ಯವಾಗುವುದು. |
| **ಮೋಡ್ಯೂಲ್ 2** **ಪೀರಿಯಡ್ 3**<br>• ಐಸೋಮೆರಿಸಂ<br>• ಚೈನ್ ಐಸೋಮೆರಿಸಂ | • ಪಟ್ಟಿ ವಿಶ್ಲೇಷಣೆ, ಚರ್ಚೆ.<br>• ಚೈನ್ ಐಸೋಮೆರಿಸಂ, ವಿವಿಧ ಚೈನ್ ಐಸೋಮರುಗಳ ರಚನೆ ಗುಂಪು ಚರ್ಚೆ, ಐ.ಸಿ.ಟಿ. | • ಕೆಲವು ವಿಭಿನ್ನ ಯೌಗಿಕಗಳಿಗೆ ಒಂದೇ ಅಣು ಸೂತ್ರವಿರುವುದೆಂದು ತಿಳಿಯುವರು.<br>• ಒಂದೇ ಅಣುಸೂತ್ರವಿರುವ ಯೌಗಿಕಗಳನ್ನು ವಿವಿಧ ರಚನಾ ಸೂತ್ರಗಳನ್ನುಪಯೋಗಿಸಿ ಬರೆಯಲು ಸಾಧ್ಯವಾಗುವುದು. |

**ಯೂನಿಟ್ ಫ್ರೇಂ** **ಒಟ್ಟು ಪೀರಿಯಡ್ –8**

| ಆಶಯಗಳು/ತಿಳುವಳಿಕೆಗಳು/ಪ್ರಕ್ರಿಯಾ ಸಾಮರ್ಥ್ಯ | ಕಲಿಕೆಯ ಚಟುವಟಿಕೆಗಳು/ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಕಾರ್ಯವಿಧಾನ (ಗುಂಪು) ಐಸೋಮೆರಿಸಂ, ಕಾರ್ಯವಿಧಾನ ಗುಂಪು ಐಸೋಮರ್‌ಗಳ IUPAC ನಾಮಕರಣ | • -OH, -O-, -CHO, -CO- ಮುಂತಾದ ಕಾರ್ಯವಿಧಾನ ಗುಂಪುಗಳನ್ನೊಳಗೊಂಡ ಯೌಗಿಕಗಳ ಕಾರ್ಯವಿಧಾನ ಗುಂಪು ಐಸೋಮೆರಿಸಂನ್ನು ಚರ್ಚಿಸುವುದು. ಪಟ್ಟಿಯನ್ನು ಪೂರ್ತಿಗೊಳಿಸುವುದು. | • ಒಂದೇ ಅಣುಸೂತ್ರವಿರುವ ಯೌಗಿಕಗಳ ವಿಭಿನ್ನ ಕಾರ್ಯವಿಧಾನ ಗುಂಪುಗಳಿವೆಯೆಂದು ಕಂಡುಹಿಡಿದು ಅವುಗಳನ್ನು ಕಾರ್ಯವಿಧಾನ ಗುಂಪು ಐಸೋಮರ್‌ಗಳಾಗಿ ಬರೆಯಲು ಸಾಧ್ಯವಾಗುವುದು. ಕಾರ್ಯವಿಧಾನ ಗುಂಪು ಐಸೋಮರ್‌ಗಳ IUPAC ಹೆಸರನ್ನು ಬರೆಯಲು ಸಾಧ್ಯವಾಗುವುದು. |
| • ಪೊಸಿಷನ್ ಐಸೋಮೆರಿಸಂ, ಪೊಸಿಷನ್ ಐಸೋಮರ್‌ಗಳ ನಾಮಕರಣ | • ಪೊಸಿಷನ್ ಐಸೋಮೆರಿಸಂ ಚರ್ಚಿಸುವುದು, ಪೊಸಿಷನ್ ಐಸೋಮರ್‌ಗಳಿಗೆ ಉದಾಹರಣೆಗಳನ್ನು ಬರೆಯುವರು. ಪಟ್ಟಿಯನ್ನು ಭರ್ತಿಗೊಳಿಸುವುದು. | • ಒಂದೇ ಅಣುಸೂತ್ರ ಮತ್ತು ಒಂದೇ ಕಾರ್ಯವಿಧಾನ ಗುಂಪುಗಳು ಅಡಕವಾಗಿರುವ ಯೌಗಿಕಗಳಲ್ಲಿ ಕಾರ್ಯವಿಧಾನ ಗುಂಪಿನ ಸ್ಥಾನದಲ್ಲಿ ವ್ಯತ್ಯಾಸವಿದೆಯೆಂದು ಕಂಡುಹಿಡಿದು ಅವುಗಳನ್ನು 'ಪೊಸಿಷನ್' ಐಸೋಮರ್‌ಗಳಾಗಿ ಬರೆಯಲು ಸಾಧ್ಯವಾಗುವುದು. ಐಸೋಮರ್‌ಗಳ IUPAC ಹೆಸರುಗಳನ್ನು ಬರೆಯಲು ಸಾಧ್ಯವಾಗುವುದು. |
| • ಅಲಿಸೈಕ್ಲಿಕ್ ಯೌಗಿಕಗಳ ರಚನೆ, IUPAC ನಾಮಕರಣ | • ಚರ್ಚೆ, ರಚನೆಯನ್ನು ಚಿತ್ರಿಸುವುದು | • ಆಲ್ಕೀನುಗಳ ಐಸೋಮರ್‌ಗಳಾದ ಸೈಕ್ಲಿಕ್ ಯೌಗಿಕಗಳನ್ನು ಬರೆಯಲು ಸಾಧ್ಯವಾಗುವುದು |

## ಯೂನಿಟ್‌ನ ಕಡೆಗೆ...

### ಮೋಡ್ಯೂಲ್ 1

ಸಮಯ : 7 ಪೀರಿಯಡ್

- ಹೈಡ್ರೋಕಾರ್ಬನ್‌ಗಳ IUPAC ನಾಮಕರಣ
- ಕಾರ್ಯವಿಧಾನ ಗುಂಪುಗಳು
- ಕಾರ್ಯವಿಧಾನ ಗುಂಪುಗಳ ಆಧಾರದಲ್ಲಿ ಸಾವಯವ ಯೌಗಿಕಗಳ IUPAC ನಾಮಕರಣ

ಮಕ್ಕಳ ಪೂರ್ವಜ್ಞಾನವನ್ನು ಪರೀಕ್ಷಿಸಲು ಗುಂಪು/ವೈಯಕ್ತಿಕ ಚಟುವಟಿಕೆಗಳನ್ನು ನೀಡುವುದು ಯೋಗ್ಯವಾಗಬಹುದು. ಒಂದು ಗುಂಪು ಚಟುವಟಿಕೆಯ ಮಾದರಿಯನ್ನು ಕೆಳಗೆ ಕೊಡಲಾಗಿದೆ.

ಮಕ್ಕಳನ್ನು 4 ಗುಂಪುಗಳಾಗಿ ವಿಭಜಿಸಿರಿ

ಪ್ರತಿಯೊಂದು ಗುಂಪಿಗೂ ಒಂದೊಂದು ಕಾರ್ಡ್ ನೀಡಬೇಕು. ಒಂದು ಹೈಡ್ರೋಕಾರ್ಬನ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಪ್ರತಿಯೊಂದು ಕಾರ್ಡಿನಲ್ಲೂ ನೀಡಲಾಗಿದೆ. ಕೆಲವು ಪ್ರಶ್ನೆಗಳನ್ನೂ ನೀಡಲಾಗಿದೆ. ಅದರ ಉತ್ತರವನ್ನು ಪೂರ್ವಜ್ಞಾನದ ಆಧಾರದಲ್ಲಿ ಮಕ್ಕಳು ಕಂಡುಹಿಡಿಯಲಿ

**ಕಾರ್ಡ್ 1**

$CH_4$

- ಕೊಟ್ಟಿರುವ ಹೈಡ್ರೋಕಾರ್ಬನ್‌ನ ಹೆಸರೇನು?
- ಅದರ ರಚನೆಯನ್ನು ಚಿತ್ರಿಸಿರಿ.

**ಕಾರ್ಡ್ 2**

- ಕೊಟ್ಟಿರುವ ಹೈಡ್ರೋಕಾರ್ಬನ್‌ನ ಅಣುಸೂತ್ರವನ್ನು ಬರೆಯಿರಿ. ಅದರ ಹೆಸರೇನು?



**ಕಾರ್ಡ್ 3**

- ಕೊಟ್ಟಿರುವ ಹೈಡ್ರೋಕಾರ್ಬನ್‌ನ ಅಣುಸೂತ್ರ ಮತ್ತು ಹೆಸರನ್ನು ಕಂಡುಹಿಡಿಯಿರಿ.



**ಕಾರ್ಡ್ 4**

$CH_3—CH_2—CH_2—CH_3$

- ಕೊಟ್ಟಿರುವ ಹೈಡ್ರೋಕಾರ್ಬನಿನ ಅಣುಸೂತ್ರವೇನು? ಅದರ ಹೆಸರನ್ನು ಬರೆಯಿರಿ.

## ಕ್ರೋಢೀಕರಣ

**ಕಾರ್ಡ್ 1**

$CH_4$ ಮೀಥೇನ್ (Methane)



**ಕಾರ್ಡ್ 2**

$CH_3$ - $CH_3$ ಎಂದು ಬರೆದು ಅಣುಸೂತ್ರ $C_2H_6$ ಎಂದು ಕಂಡುಹಿಡಿಯಲಿ. ಈ ಹೈಡ್ರೋಕಾರ್ಬನ್‌ನ ಹೆಸರು ಈಥೇನ್ (Ethane).

**ಕಾರ್ಡ್ 3**

$CH_3$ - $CH_2$ - $CH_3$ ಎಂದು ಬರೆದು ಅಣುಸೂತ್ರ $C_3H_8$ ಎಂದು ಕಂಡುಹಿಡಿಯಲು ಮಕ್ಕಳಿಗೆ ನೆರವಾಗಬಹುದು.ಈ ಹೈಡ್ರೋಕಾರ್ಬನ್‌ನ ಹೆಸರು ಪ್ರೊಪೇನ್ (Propane).

**ಕಾರ್ಡ್ 4**

$C_4H_{10}$ ಬ್ಯೂಟೇನ್ (Butane).

ಮೀಥೇನ್, ಈಥೇನ್, ಪ್ರೊಪೇನ್ ಮತ್ತು ಬ್ಯೂಟೇನ್ ಎಂಬಿವುಗಳ ಅಣುಸೂತ್ರವನ್ನು ಮತ್ತು ರಚನಾ ಸೂತ್ರವನ್ನು ಬ್ಲಾಕ್‌ಬೋರ್ಡ್‌ನಲ್ಲಿ ಬರೆಯಲು ಅವಕಾಶವನ್ನು ನೀಡಬಹುದು.

ಸಂದರ್ಭಕ್ಕೆ ಹೊಂದಿಕೊಂಡು ತರಗತಿ ಕೋಣೆಯಲ್ಲಿ ಇಂತಹ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಲು ಯೋಜನೆ ರೂಪೀಕರಿಸಬಹುದಲ್ಲವೆ.

ಪಾಠ ಭಾಗದಲ್ಲಿ ಬ್ಯೂಟೇನ್ ಎಂಬ ಯೌಗಿಕದ ರಚನಾ ಸೂತ್ರವನ್ನು ಕೊಡಲಾಗಿದೆ. ಅದರ ಅಣುಸೂತ್ರವನ್ನು ಮಕ್ಕಳು ಬರೆಯಲಿ.

ಬ್ಯೂಟೇನ್‌ನ ಇನ್ನೊಂದು ರಚನಾಸೂತ್ರವನ್ನು ನೀಡಿರುವುದು ಮಕ್ಕಳು ಪರಿಚಯಿಸಲಿ.

ಪೆಂಟೇನ್($C_5H_{12}$) ಎಂಬ ಹೈಡ್ರೋಕಾರ್ಬನ್‌ನ ವಿವಿಧ ರಚನಾಸೂತ್ರವನ್ನು ಪರಿಚಯಿಸಲೂ ಇಲ್ಲಿ ಅಣುಸೂತ್ರಗಳು ಸಮಾನವಾಗಿದೆ ಎಂಬ ತಿಳುವಳಿಕೆಯನ್ನು ದೃಢೀಕರಿಸಲೂ ಪಟ್ಟಿ 6.1ರ ಚಟುವಟಿಕೆಯು ಸಹಾಯ ಮಾಡುವುದು.

Ball and stick model ನ್ನು ಉಪಯೋಗಿಸಿ ಇಂತಹ ವಿವಿಧ ಹೈಡ್ರೋಕಾರ್ಬನ್‌ನ ರಚನೆಗಳನ್ನು ನಿರ್ಮಿಸಲು ಮತ್ತು ಅವುಗಳ ಹೆಸರುಗಳನ್ನು ಕಂಡುಹಿಡಿಯಲೂ ಮಕ್ಕಳಿಗೆ ನೆರವಾಗಬೇಕು. ಅನಂತರ ಬರುವ ವಿವಿಧ ಹೈಡ್ರೋಕಾರ್ಬನ್‌ಗಳ IUPAC ನಾಮಕರಣದಲ್ಲೂ ಇಂತಹ ಮಾದರಿಗಳನ್ನು ಉಪಯೋಗಿಸಬಹುದು.

| ರಚನಾ ಸೂತ್ರ | ಅಣುಸೂತ್ರ |
|---|---|
| $CH_3—CH_2—CH_2—CH_2—CH_3$ | $C_5H_{12}$ |
|  | $C_5H_{12}$ |
|  | $C_5H_{12}$ |

ಪಟ್ಟಿ 6.1

ಪಟ್ಟಿ 6.1ರ ರಚನಾ ಸೂತ್ರಗಳಲ್ಲಿ ಒಂದನೇ ಯೌಗಿಕದ ಹೆಸರು ಪೆಂಟೇನ್ (Pentane) ಎಂದು ಮಕ್ಕಳು ಬರೆಯಬಹುದಲ್ಲವೇ.

ಆದರೆ ಎರಡನೆಯ ಮತ್ತು ಮೂರನೆಯ ಯೌಗಿಕಗಳು ಒಂದನೇ ಯೌಗಿಕದಿಂದ ಭಿನ್ನ ಗುಣಗಳಿರುವವುಗಳೆಂದೂ ಆದುದರಿಂದ ಅವುಗಳನ್ನು ಸರಿಯಾಗಿ ಗುರುತಿಸುವ ರೀತಿಯಲ್ಲಿ ವಿಭಿನ್ನ ಹೆಸರುಗಳನ್ನು ನೀಡಲಾಗುತ್ತದೆ ಎಂದೂ ಮಕ್ಕಳಿಗೆ ಅರ್ಥೈಸಲು ಸಾಧ್ಯವಾಗಬೇಕು.

ಮೇಲೆ ಹೇಳಿದ ಕಾರಣಗಳಿಂದ ಸಾವಯವ ಯೌಗಿಕಗಳು ಅಸಂಖ್ಯಾತ ಸಂಖ್ಯೆಯಲ್ಲಿ ಕಂಡುಬರುವುದರಿಂದ ಅವುಗಳಲ್ಲಿ ಪ್ರತಿಯೊಂದನ್ನು ಗುರುತು ಹಿಡಿಯುವ ರೀತಿಯಲ್ಲಿ ಹೆಸರುಗಳನ್ನು ನೀಡುವುದರ ಅಗತ್ಯವನ್ನು ಮಕ್ಕಳು ಅರ್ಥೈಸಬೇಕು. ಆದುದರಿಂದ ಅಧ್ಯಾಪಕರು, IUPAC ನಾಮಕರಣ IUPAC ನಿಯಮಗಳನ್ನು ಮಂಡಿಸುವುದು ಅತ್ಯಂತ ಶ್ರದ್ಧೆಯಿಂದ ಆಗಿರಬೇಕೆಂಬುದನ್ನು ಹೇಳಬೇಕೆಂದಿಲ್ಲವಲ್ಲವೆ ?

ಶಾಖೆಗಳಿಲ್ಲದ ತೆರೆದ ಸಂಕಲೆಯ ಹೈಡ್ರೋಕಾರ್ಬನ್‌ನ ಹೆಸರುಗಳನ್ನು ಹಿಂದಿನ ತರಗತಿಯಲ್ಲಿ ಮಕ್ಕಳು ಕಲಿತಿರುವರು. ಅವುಗಳನ್ನು recall ಮಾಡಲು ಸಹಾಯಕವಾಗುವ ರೀತಿಯಲ್ಲಿ ಚಟುವಟಿಕೆಗಳನ್ನು ಈ ಸಂದರ್ಭದಲ್ಲಿ ನೀಡಬೇಕು.

ಒಂದು ಮಾದರಿಯನ್ನು ಕೆಳಗೆ ಕೊಡಲಾಗಿದೆ.

| ಅಣುಸೂತ್ರ | ರಚನಾ ಸೂತ್ರ | IUPAC ಹೆಸರು |
|---|---|---|
| $C_3H_8$ | $CH_3 - CH_2 - CH_3$ | (a) |
| (b) | $CH_3 - CH_2 - CH_2 - CH_3$ | (c) |
| $C_6H_{14}$ | (d) | Hexane |
| (e) | (f) | Nonane |
| $C_5H_{12}$ | (g) | (h) |

**ಉತ್ತರಗಳು**

a. ಪ್ರೊಪೇನ್ (Propane)

b. $C_4H_{10}$

c. ಬ್ಯೂಟೇನ್ (Butane)

d. $CH_3 - CH_2 - CH_2 - CH_2 - CH_2 - CH_3$

e. $C_9H_{2O}$

f. $CH_3 - CH_2 - CH_2 - CH_2 - CH_2 - CH_2 - CH_2 - CH_2 - CH_3$

g. $CH_3 - CH_2 - CH_2 - CH_2 - CH_3$

h. Pentane

ಇಲ್ಲಿ ವಿವಿಧ ರಚನೆಗಳನ್ನು ಮಕ್ಕಳಿಗೆ ಬರೆಯಲು ಸಾಧ್ಯವಿದೆ. ಆದರೆ IUPAC ಹೆಸರನ್ನು ಬರೆಯಲು ಸಾಧ್ಯವಾಗಬೇಕೆಂದಿಲ್ಲ.

ಯೌಗಿಕಗಳ IUPAC ಹೆಸರನ್ನು ಕಂಡುಹಿಡಿಯುವ ಅಗತ್ಯದ ಕಡೆಗೆ ಮಕ್ಕಳನ್ನು ಒಯ್ಯಬೇಕು.

1ರಿಂದ 10ರ ವರೆಗೆ ಕಾರ್ಬನ್ ಪರಮಾಣುಗಳನ್ನೊಳಗೊಂಡ ಹೈಡ್ರೋಕಾರ್ಬನ್‌ಗಳ ನಾಮಕರಣ ಮಾಡುವಾಗ ಸೇರಿಸುವ ಪದಮೂಲವನ್ನು ಹಿಂದಿನ ತರಗತಿಗಳಲ್ಲಿ ಕಲಿತಿದ್ದಾರಲ್ಲವೆ. ಕಾರ್ಬನ್–ಕಾರ್ಬನ್ ಏಕಬಂಧವಿರುವವುಗಳಲ್ಲಿ 'ಯೇನ್' ಎಂಬ ಪ್ರತ್ಯಯವನ್ನು ಸೇರಿಸುವುದು ಮಕ್ಕಳಿಗೆ ತಿಳಿದಿದೆ. alk + ane = alkane ಹೆಚ್ಚಿನ ಚಟುವಟಿಕೆಗಳನ್ನು ನೀಡಿ ಪೂರ್ವಜ್ಞಾನವನ್ನು ದೃಢಗೊಳಿಸಬೇಕು.

ಉದಾ : ಯೋಗ್ಯವಾದವುಗಳನ್ನು ಹೊಂದಿಸಿ ಬರೆಯಿರಿ.

| ಹೈಡ್ರೋಕಾರ್ಬನ್‌ಗಳು | ಪದಮೂಲ | IUPAC ಹೆಸರು |
|---|---|---|
| $CH_4$ | ಈಥ್(Eth-) | ಬ್ಯೂಟೇನ್ (Butane) |
| $CH_3 - CH_2 - CH_3$ | ಬ್ಯೂಟ್(But-) | ಈಥೇನ್(Ethane) |
| $CH_3 - CH_2 - CH_2 - CH_3$ | ಮೀಥ್ (Meth-) | ಪ್ರೊಪೇನ್ (Propane) |
| $CH_3 - CH_3$ | ಪ್ರೋಪ್(Prop-) | ಮೀಥೇನ್ (Methane) |

ಉದಾ : 2. ಒಂದು ಸಾವಯವ ಯೌಗಿಕದ ಕುರಿತಾದ ಕೆಲವು ಸೂಚನೆಗಳನ್ನು ಕೆಳಗೆ ಕೊಡಲಾಗಿದೆ.

- ಇದು ಒಂದು ಹೈಡ್ರೋಕಾರ್ಬನ್ ಆಗಿದೆ.
- ಇದರಲ್ಲಿ 7 ಕಾರ್ಬನ್ ಪರಮಾಣುಗಳಿರುವ ಸಂಕಲೆ ಇದೆ.
- ಇದರಲ್ಲಿ ಕಾರ್ಬನ್–ಕಾರ್ಬನ್‌ಗಳ ನಡುವಿನ ಏಕಬಂಧವಿದೆ.

ಯೌಗಿಕದ ಅಣುಸೂತ್ರ ಮತ್ತು ರಚನಾಸೂತ್ರವನ್ನು ಬರೆಯಿರಿ.

ಈ ಯೌಗಿಕದ ಹೆಸರೇನು?

ಒಕ್ಟೈನ್, ಡೆಕೇನ್ ಎಂಬೀ ಯೌಗಿಕಗಳ ಅಣುಸೂತ್ರಗಳನ್ನು ಮತ್ತು ರಚನಾ ಸೂತ್ರಗಳನ್ನು ಬರೆದು ಪಾಠಪುಸ್ತಕದಲ್ಲಿರುವ ಪಟ್ಟಿ 6.2 ನ್ನು ಭರ್ತಿಗೊಳಿಸಲಿ.

| ಅಣು ಸೂತ್ರ | ರಚನಾ ಸೂತ್ರ |
|---|---|
| $C_8H_{18}$ | $CH_3 - CH_2 - CH_2 - CH_2 - CH_2 - CH_2 - CH_2 - CH_3$ |
| $C_{10}H_{22}$ | $CH_3 - CH_2 - CH_2 - CH_2 - CH_2 - CH_2 - CH_2 - CH_3 - CH_2 - CH_3$ |

### ಶಾಖೆಗಳಿರುವ ಹೈಡ್ರೋಕಾರ್ಬನ್‌ಗಳ ನಾಮಕರಣ

ಕಾರ್ಬನ್ ಸಂಕಲೆಯನ್ನು ನೀಡಿದರೆ ಹೈಡ್ರೋಜನ್ ಪರಮಾಣುಗಳನ್ನು ಸೇರಿಸಿ ಹೈಡ್ರೋಕಾರ್ಬನ್‌ಗಳ ರಚನಾ ಸೂತ್ರವನ್ನು ಪೂರ್ತಿಗೊಳಿಸುವ ರೀತಿಯನ್ನು ಮಕ್ಕಳು ಪರಿಚಯಿಸಿಕೊಳ್ಳಬೇಕು. ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

1 . 

2 . 

3 . 

4. 

5. 

5 ಕಾರ್ಬನ್ ಪರಮಾಣುಗಳಿರುವ ಹೈಡ್ರೋಕಾರ್ಬನ್‌ನ ಕಾರ್ಬನ್ ಸಂಕಲೆಯಲ್ಲಿ ಬದಲಾವಣೆಯನ್ನು ತಂದು ರಚನಾ ಸೂತ್ರ ಬರೆಯುವ ರೀತಿಯು ಮಕ್ಕಳಿಗೆ ತಿಳಿದಿದೆಯಲ್ಲವೆ?

IUPAC ನಿಯಮದ ಪ್ರಕಾರ ಅತ್ಯಂತ ಉದ್ದದ ಸಂಕಲೆಯನ್ನು ಪ್ರಧಾನ ಸಂಕಲೆಯಾಗಿ ಪರಿಗಣಿಸಿ ಅದರಲ್ಲಿರುವ ಕಾರ್ಬನ್ ಪರಮಾಣುಗಳಿಗೆ ನಂಬರ್ ನೀಡಿ ಶಾಖೆಗಳ ಸ್ಥಾನವನ್ನು ಕಂಡುಹಿಡಿಯುವ ರೀತಿ ಮಕ್ಕಳಲ್ಲಿ ದೃಢಗೊಳಿಸಬೇಕು. IUPAC ಹೆಸರು ಬರೆಯುವ ರೀತಿ ಮಕ್ಕಳಿಗೆ ಪರಿಚಯಿಸಬೇಕು. ಪಾಠಪುಸ್ತಕದಲ್ಲಿ ಪಟ್ಟಿ 6.3ನ್ನು ಭರ್ತಿಗೊಳಿಸಲಿ.

| ಯೌಗಿಕ | ಅತ್ಯಂತ ಉದ್ದದ ಸಂಕಲೆಯಲ್ಲಿರುವ ಕಾರ್ಬನ್ ಪರಮಾಣುಗಳಸಂಖ್ಯೆ | ಶಾಖೆಯ ಹೆಸರು | ಶಾಖೆಯ ಸ್ಥಾನ | IUPAC ಹೆಸರು |
|---|---|---|---|---|
|  | 5 | ಮೀಥೈಲ್ (Methyl) | 2 | 2-ಮೀಥೈಲ್ ಪೆಂಟೇನ್ (2-Methylpentane) |
|  | 4 | ಮೀಥೈಲ್ (Methyl) | 2 | 2-ಮೀಥೈಲ್ ಬ್ಯೂಟೇನ್ (2-Methylbutane) |
|  | 5 | ಈಥೈಲ್ (Ethyl) | 3 | 3-ಈಥೈಲ್ ಪೆಂಟೇನ್ (3-Ethylpentane) |
|  | 5 | ಮೀಥೈಲ್ (Methyl) | | 3-ಮೀಥೈಲ್ ಪೆಂಟೇನ್ (3-Methylpentane) |

ಪಟ್ಟಿ 6.3

## ಒಂದಕ್ಕಿಂತ ಹೆಚ್ಚು ಶಾಖೆಗಳಿರುವ ಹೈಡ್ರೋಕಾರ್ಬನ್‌ಗಳ ನಾಮಕರಣ

ಒಂದು ಕಾರ್ಬನ್ ಸಂಕಲೆಯಲ್ಲಿ ಒಂದೇ ಶಾಖೆಯು ಒಂದಕ್ಕಿಂತ ಹೆಚ್ಚು ಸಲ ಬಂದಾಗ ಶಾಖೆಗಳ ಸಂಖ್ಯೆಯನ್ನು ಸೂಚಿಸಲು ಡೈ, ಟ್ರೈ ಮುಂತಾದ ಪ್ರತ್ಯಯಗಳನ್ನು ಶಾಖೆಯ ಹೆಸರಿನ ಮೊದಲು ಸೇರಿಸಿ IUPAC ಹೆಸರನ್ನು ಬರೆಯುವ ರೀತಿಯನ್ನು ಮಕ್ಕಳಿಗೆ ಪರಿಚಯಿಸಬೇಕು.



ಎಂಬ ಹೈಡ್ರೋಕಾರ್ಬನಿನ ಪ್ರಧಾನ ಸಂಕಲೆಗೆ ಎರಡು ರೀತಿಯಲ್ಲಿ ನಂಬರ್ ನೀಡಬಹುದಲ್ಲವೆ? ಇಲ್ಲಿ ಮೀಥೈಲ್ ಗುಂಪು ಶಾಖೆಗಳಾಗಿ ಬಂದಿದೆ ಎಂದು ಮಗು ಗುರುತಿಸಬೇಕು. ಎಡಭಾಗದಿಂದ ಬಲಭಾಗಕ್ಕೆ ನಂಬರ್ ನೀಡುವಾಗ ಶಾಖೆಗಳ ಅಥವಾ ಮಿಥೈಲ್ ರೇಡಿಕಲ್‌ಗಳ ಸ್ಥಾನ ಸಂಖ್ಯೆಗಳು 2,4 ಎಂದು ಲಭಿಸುವುದಲ್ಲವೆ?

ಮೊದಲ ಶಾಖೆಯ (ಮೀಥೈಲ್ ರೇಡಿಕಲ್) ಸ್ಥಾನ ಸಂಖ್ಯೆ – 2

ಆದರೆ ಬಲಭಾಗದಿಂದ ಎಡಭಾಗಕ್ಕೆ ನಂಬರ್ ನೀಡುವಾಗ ಶಾಖೆಗಳಿಗೆ ಲಭಿಸುವ ಸ್ಥಾನ ಸಂಖ್ಯೆಗಳು 4,6 ಎಂದಾಗಿದೆಯಲ್ಲವೇ? ಅಂದರೆ ಮೊದಲ ಶಾಖೆಯ ಸ್ಥಾನ ಸಂಖ್ಯೆ 4. ಮೊದಲ ಶಾಖೆಗೆ 2,4 ಎಂಬ ಸ್ಥಾನ ಸಂಖ್ಯೆಗಳು ಲಭಿಸುವುದು. ಅದರಲ್ಲಿ ಸಣ್ಣ ಬೆಲೆಯ ಸಂಖ್ಯೆಯಾದ 2ನ್ನು ಸ್ಥಾನ ಸಂಖ್ಯೆಯಾಗಿ ಸ್ವೀಕರಿಸಬೇಕು. ಆದುದರಿಂದ ಎಡದಿಂದ ಬಲಭಾಗಕ್ಕೆ ನಂಬರ್ ನೀಡುವ ರೀತಿಯನ್ನು ಇಲ್ಲಿ ಆರಿಸಬೇಕು. ಇದರಿಂದಾಗಿ ನೀಡಿರುವ ಹೈಡ್ರೋಕಾರ್ಬನಿನ IUPAC ಹೆಸರು 2,4– ಡೈ ಮೀಥೈಲ್ ಹೆಪ್ಟೇನ್ (2, 4-Dimethylheptane) ಎಂದು ಲಭಿಸುವುದು.

ಪಾಠಭಾಗದಲ್ಲಿ ನೀಡಿದ ಉದಾಹರಣೆಯನ್ನು ಗಮನಿಸಿರಿ.



ಇದರಲ್ಲಿ ಪ್ರಧಾನ ಸಂಕಲೆಯ ಕಾರ್ಬನ್ ಪರಮಾಣುಗಳ ಸಂಖ್ಯೆ 5 ಎಂದೂ ಮೀಥೈಲ್ ರೇಡಿಕಲ್ ಶಾಖೆಗಳು ಅದರಲ್ಲಿರುವುದೆಂದೂ ಮಕ್ಕಳು ಕಂಡುಹಿಡಿಯಲಿ.

ಎಡಭಾಗದಿಂದ ಬಲಭಾಗಕ್ಕೂ ಅದರ ವಿರುದ್ಧವಾಗಿಯೂ ನಂಬರ್ ನೀಡುವಾಗ ಶಾಖೆಗಳ ಸ್ಥಾನ ಸಂಖ್ಯೆಗಳು 2,4 ಎಂದು ಲಭಿಸುವುದಿಲ್ಲವೇ? ಅಂದರೆ ಸ್ಥಾನ ಸಂಖ್ಯೆಗಳಲ್ಲಿ ಬದಲಾವಣೆ ಇಲ್ಲ.

ನೀಡಿರುವ ಹೈಡ್ರೋಕಾರ್ಬನಿನ IUPAC ಹೆಸರು 2,4– ಡೈಮೀಥೈಲ್ ಪೆಂಟೇನ್ (2, 4-Dimethylpentane) ಎಂದು ಲಭಿಸುವುದು.

ಅನಂತರ ನೀಡಿರುವ ಉದಾಹರಣೆಗಳಲ್ಲಿ ಶಾಖೆಗಳಿಗೆ 2,4 ಎಂದೂ 3,5 ಎಂದೂ ಸ್ಥಾನ ಸಂಖ್ಯೆಗಳು ಲಭಿಸುತ್ತದೆ ಎಂದೂ ಮಕ್ಕಳು ಕಂಡುಹಿಡಿಯಬೇಕು. ಅವುಗಳಲ್ಲಿ ಮೊದಲ ಶಾಖೆಗೆ 2 ಎಂಬ ಸಣ್ಣ ಸ್ಥಾನ ಸಂಖ್ಯೆ ಲಭಿಸುವ ರೀತಿಯನ್ನು ಆರಿಸಬೇಕೆಂದು ಮಕ್ಕಳು ತಿಳಿಯಬೇಕು.

ಅಂದರೆ ಈ ಹೈಡ್ರೋಕಾರ್ಬನಿನ IUPAC ಹೆಸರು 2,4 ಡೈಮೀಥೈಲ್ ಹೆಕ್ಸೇನ್ (2, 4-Dimethylhexane) ಎಂದು ಮಕ್ಕಳು ಬರೆಯಲಿ.

ಇದು ಪಾಠಭಾಗದಲ್ಲಿ ಕೊಟ್ಟಿರುವ ಇನ್ನೊಂದು ಉದಾಹರಣೆಯಲ್ಲವೇ?



ಈ ಹೈಡ್ರೋಕಾರ್ಬನಿನಲ್ಲಿ 3 ಶಾಖೆಗಳು ಇವೆಯೆಂದೂ ಅವುಗಳು ಮೀಥೈಲ್ ರೇಡಿಕಲ್‌ಗಳು ಆಗಿವೆಯೆಂದು ಮಕ್ಕಳು ಗುರುತಿಸಬೇಕು.

ಎಡದಿಂದ ಬಲಕ್ಕೆ ನಂಬರ್ ನೀಡುವಾಗ ಶಾಖೆಗಳಿಗೆ 2,4,5 ಎಂಬೀ ಸ್ಥಾನ ಸಂಖ್ಯೆಗಳು ಲಭಿಸಿದವು.

ಬಲದಿಂದ ಎಡಭಾಗಕ್ಕೆ ನಂಬರ್ ನೀಡುವಾಗ 2,3,5 ಎಂಬ ರೀತಿಯಲ್ಲವೇ ಸ್ಥಾನ ಸಂಖ್ಯೆಗಳು ಲಭಿಸುವುದು. ಎರಡು ರೀತಿಯಲ್ಲೂ ನಂಬರ್ ನೀಡುವಾಗ ಆರಂಭದ ಶಾಖೆಯ ಸ್ಥಾನ ಸಂಖ್ಯೆಯು 2 ಆಗಿದೆಯೆಂದು ಸ್ಪಷ್ಟವಲ್ಲವೇ? ಆದುದರಿಂದ ಇಲ್ಲಿ ಎರಡನೇ ಶಾಖೆಯ ಸ್ಥಾನ ಸಂಖ್ಯೆಯನ್ನು ಪರಿಗಣಿಸಬೇಕು. ಅಂದರೆ ಎರಡನೇ ಶಾಖೆಗೆ 4 ಮತ್ತು 3 ಎಂಬ ರೀತಿಯಲ್ಲಿ ಸ್ಥಾನ ಸಂಖ್ಯೆಗಳು ಲಭಿಸುವುದು.

ಇದರಲ್ಲಿ ಅತ್ಯಂತ ಸಣ್ಣ ಸಂಖ್ಯೆಯಾದ 3 ಯೋಗ್ಯವಾಗಿರುವುದು. ಆದುದರಿಂದ ಬಲದಿಂದ ಎಡಭಾಗಕ್ಕೆ ನಂಬರ್ ನೀಡುವಾಗ ಲಭಿಸುವ 2,3,5 ಎಂಬ ಸ್ಥಾನ ಸಂಖ್ಯೆಗಳನ್ನು IUPAC ನಾಮಕರಣಕ್ಕಾಗಿ ಆರಿಸಿಕೊಳ್ಳಬೇಕು. ಈ ಯೌಗಿಕದ IUPAC ಹೆಸರು 2,3,5– ಟ್ರೈ ಮೀಥೈಲ್ ಹೆಕ್ಸೇನ್ (2, 3, 5-Trimethylhexane) ಎಂದು ಬರೆಯಬಹುದು. ಅನಂತರ ನೀಡಿರುವ ಉದಾಹರಣೆಯಲ್ಲವೇ.



ಇಲ್ಲಿ ಎಡದಿಂದ ಬಲಕ್ಕೆ ನಂಬರ್ ನೀಡುವಾಗ 2,3,6 ಎಂದೂ ಬಲದಿಂದ ಎಡಕ್ಕೆ ನಂಬರ್ ನೀಡುವಾಗ 2,5,6 ಎಂದೂ ಲಭಿಸಬಹುದಲ್ಲವೇ. ಎರಡು ರೀತಿಯಲ್ಲಿ ನಂಬರ್ ನೀಡಿದರೂ ಮೊದಲ ಶಾಖೆಗೆ 2 ಎಂಬ ಸ್ಥಾನ ಸಂಖ್ಯೆ ಸಿಗುವುದು. ಆದುದರಿಂದ ಎರಡನೆ ಶಾಖೆಯ ಸಣ್ಣ ಸ್ಥಾನಸಂಖ್ಯೆಯನ್ನು ಪರಿಗಣಿಸಬೇಕು. ಅಂದರೆ 3 ಎಂಬ ಸ್ಥಾನಸಂಖ್ಯೆ ಲಭಿಸಬಹುದಲ್ಲವೆ. ಆದುದರಿಂದ 2,3,6 ಎಂಬ ಸ್ಥಾನ ಸಂಖ್ಯೆಯನ್ನು ಆರಿಸಬಹುದು. IUPAC ಹೆಸರು : 2,3,6 ಟ್ರೈ ಮೀಥೈಲ್ ಹೆಪ್ಟೇನ್ (2,3,6 - Trimethylheptane).

ಹೆಚ್ಚಿನ ಉದಾಹರಣೆಗಳನ್ನು ನೀಡಿ ಈ ರೀತಿಯಲ್ಲಿ ಮಕ್ಕಳಿಗೆ ತಿಳಿಸಬೇಕು.

ಪಾಠಭಾಗದಲ್ಲಿ ನೀಡಿರುವ ಇನ್ನೊಂದು ಉದಾಹರಣೆಯು



ಈ ಯೌಗಿಕದ ಪ್ರಧಾನ ಸಂಕಲೆಯಲ್ಲಿ 3 ಕಾರ್ಬನ್ ಪರಮಾಣುಗಳಿವೆ ಎಂದೂ ಒಂದೇ ಕಾರ್ಬನ್ ಪರಮಾಣುವಿನಲ್ಲಿ ಒಂದೇ ರೀತಿಯ ಶಾಖೆಗಳು (ಮೀಥೈಲ್ ರೇಡಿಕಲ್) ಬರುವುದು ಎಂದೂ ಮಕ್ಕಳು ಕಂಡುಹಿಡಿಯಲಿ. ಇಂತಹ ಸಂದರ್ಭಗಳಲ್ಲಿ ಶಾಖೆಯ ಸ್ಥಾನಸಂಖ್ಯೆಯನ್ನು ಎರಡು ಸಲ ಬರೆಯಬೇಕು. ಅಂದರೆ ಶಾಖೆಗಳು ಎರಡನೇ ಕಾರ್ಬನ್ ಪರಮಾಣುವಿನಲ್ಲಿ ಬರುವುದರಿಂದ ಈ ಯೌಗಿಕದ .IUPAC ಹೆಸರು 2,2– ಡೈ ಮಿಥೈಲ್ ಪ್ರೊಪೇನ್ (2, 2 - Dimethylpropane) ಎಂದಾಗಿದೆ.

ಎರಡು ಶಾಖೆಗಳು ಒಂದೇ ಕಾರ್ಬನ್ ಪರಮಾಣುವಿನಲ್ಲಿ ಬಂದು ಸೇರುವಾಗ ಆ ಕಾರ್ಬನ್‌ನಲ್ಲಿ ಹೈಡ್ರಜನ್ ಪರಮಾಣುಗಳು ಇರುವುದಿಲ್ಲ ಎಂದು ಮಕ್ಕಳು ತಿಳಿಯಬೇಕು. ಕಾರ್ಬನ್ ಸಂಯೋಜಕತೆಗಳ ಆಧಾರದಲ್ಲಿ ಅದರ ಕಾರಣವನ್ನು ಅವರು ಕಂಡುಹಿಡಿಯಲಿ.

ಇಂತಹ ಉದಾಹರಣೆಗಳನ್ನು ಹೆಚ್ಚಾಗಿ ನೀಡಬೇಕು. ಉದಾಹರಣೆಗಾಗಿ ಕೆಳಗೆ ನೀಡಲಾದ ಯೌಗಿಕದ ರಚನಾ ಸೂತ್ರವನ್ನು ಗಮನಿಸಿರಿ.



ಈ ಯೌಗಿಕದ IUPAC ಹೆಸರು 3,3,4 – ಟ್ರೈಮಿಥೈಲ್ ಹೆಕ್ಸೇನ್ (3, 3, 4-Trimethylhexane) ಎಂದು ಸ್ಪಷ್ಟವಲ್ಲವೇ?

ಇದುವರೆಗೂ ಒಂದೇ ಆಲ್ಕೈಲ್ ರೇಡಿಕಲ್ ಶಾಖೆಗಳಾಗಿ ಬರುವ ಯೌಗಿಕಗಳ IUPAC ಹೆಸರಾಗಿದೆ ಮಕ್ಕಳು ತಿಳಿದಿರುವುದು. ವಿಭಿನ್ನ ಆಲ್ಕೈಲ್ ರೇಡಿಕಲ್‌ಗಳು ಶಾಖೆಗಳಾಗಿ ಇದ್ದಲ್ಲಿ ಹೆಸರಿಸುವಾಗ ಶಾಖೆಗಳ ಹೆಸರನ್ನು ಇಂಗ್ಲಿಷ್ ಅಕ್ಷರಮಾಲಾ ಕ್ರಮದಲ್ಲಿ ಬರೆಯಬೇಕೆಂದು IUPAC ನಿಯಮವನ್ನು ಅವರಿಗೆ ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಬೇಕು. ಪಾಠಭಾಗದಲ್ಲಿ ಪೇಜ್ 107ರಲ್ಲಿ ನೀಡಿರುವ ಉದಾಹರಣೆಯನ್ನು ಗಮನಿಸಿರಿ.



ಈ ಯೌಗಿಕದ ಹೆಸರು, ಹೀಗೆ ಅಕ್ಷರಮಾಲಾ ಕ್ರಮವನ್ನು ಪಾಲಿಸುವಾಗ 4–ಈಥೈಲ್ – 3 ಮೀಥೈಲ್ ಹೆಪ್ಟೇನ್ (4-Ethyl-3-methylheptane) ಎಂದಾಗಿದೆಯಲ್ಲವೆ. ಅನಂತರ ನೀಡಿರುವ ಉದಾಹರಣೆಯಲ್ಲಿ ಶಾಖೆಗಳಾಗಿ ಈಥೈಲ್, ಮೀಥೈಲ್ ರೇಡಿಕಲ್‌ಗಳು ಬಂದಿರುವುದು.



ಈ ಯೌಗಿಕದ IUPAC ಹೆಸರು 4–ಈಥೈಲ್–3–ಮೀಥೈಲ್ ಒಕ್ಟೇನ್ (4-Ehyl-3-methyloctane) ಎಂದಾಗಿದೆ.

**IUPAC ಹೆಸರಿನಿಂದ ರಚನಾ ಸೂತ್ರದ ಕಡೆಗೆ**

ರಚನಾ ಸೂತ್ರವನ್ನು ಕೊಟ್ಟಾಗ ಆ ಯೌಗಿಕದ IUPAC ಹೆಸರು ಬರೆಯುವ ರೀತಿಯನ್ನು ಮಕ್ಕಳು ತಿಳಿದರು.

IUPAC ಹೆಸರನ್ನು ಕೊಟ್ಟಾಗ ಅದರ ರಚನಾ ಸೂತ್ರವನ್ನು ಬರೆಯಲು ಅವರಿಗೆ ಸಾಧ್ಯವಾಗಬೇಕು.

ಸಾವಯವ ಯೌಗಿಕಗಳ ರಚನೆ, IUPAC ನಿಯಮಗಳು ಎಂಬಿವುಗಳ ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನು ಪಡೆದರೆ ಮಾತ್ರ ಇಂತಹ ರಚನಾ ಸೂತ್ರಗಳನ್ನು ಸುಲಭದಲ್ಲಿ ತಪ್ಪಿಲ್ಲದೆ ಬರೆಯಲು ಸಾಧ್ಯವಿದೆ.

2,3 – ಡೈಮೀಥೈಲ್ ಬ್ಯೂಟೇನ್ ಎಂಬ ಯೌಗಿಕದ ಪ್ರಧಾನ ಸಂಕಲೆಯಲ್ಲಿ 4 ಕಾರ್ಬನ್ ಪರಮಾಣುಗಳಿವೆ. ಮೀಥೈಲ್ ರೇಡಿಕಲ್‌ಗಳು 2 ಮತ್ತು 3ರಲ್ಲಿ ಕಾರ್ಬನ್ ಪರಮಾಣುಗಳಿಗೆ ಬಂಧಿಸಲ್ಪಟ್ಟಿವೆ.

ಈ ಮಾಹಿತಿ ಆಧಾರದಲ್ಲಿ ಹೀಗೆ ಬರೆಯಲು ಸಾಧ್ಯವಿದೆ.



ಕಾರ್ಬನ್ ಪರಮಾಣುಗಳೊಂದಿಗೆ ಹೈಡ್ರಜನ್ ಪರಮಾಣುಗಳನ್ನು ಸೇರಿಸಿ ರಚನಾ ಸೂತ್ರವನ್ನು ಭರ್ತಿಗೊಳಿಸಿರಿ.



ಈ ರೀತಿ ಹೆಚ್ಚಿನ ಚಟುವಟಿಕೆಗಳನ್ನು ನೀಡಬೇಕು. ಪಾಠಪುಸ್ತಕದಲ್ಲಿರುವ ಪಟ್ಟಿ 6.4ನ್ನು ಭರ್ತಿಗೊಳಿಸುವ ಮೂಲಕ ಮಕ್ಕಳಿಗೆ ಹೆಚ್ಚು ಸ್ಪಷ್ಟತೆ ಲಭಿಸಬಹುದು.

| ಯೌಗಿಕ | IUPAC ಹೆಸರು |
|---|---|
|  | 2,4 – ಡೈಮೀಥೈಲ್ ಹೆಕ್ಸೇನ್ (2, 4-Dimethylhexane) |
|  | 2, 3, 3-ಟ್ರೈಮೀಥೈಲ್ ಪೆಂಟೇನ್ (2, 3, 3-Trimethylpentane) |
|  | 3,3-ಡೈ ಈಥೈಲ್ ಪೆಂಟೇನ್ (3,3-Diethylpentane) |
|  | 3-Ehyl-3-methylpentane<br>3-ಈಥೈಲ್ – 3– ಮೀಥೈಲ್ ಪೆಂಟೇನ್ |

ಪಟ್ಟಿ 6.4

**ಅಸಂತೃಪ್ತ ಹೈಡ್ರೋಕಾರ್ಬನುಗಳ ನಾಮಕರಣ**

ಮಕ್ಕಳು ಪಾಠಪುಸ್ತಕದಲ್ಲಿರುವ ಪಟ್ಟಿ 6.5ನ್ನು ಭರ್ತಿಗೊಳಿಸುವಾಗ ಅಸಂತೃಪ್ತ ಹೈಡ್ರೋಕಾರ್ಬನ್‌ಗಳ ಕುರಿತಾದ ಅವರ ಪೂರ್ವಜ್ಞಾನವನ್ನು ಪರಿಶೋಧಿಸಲು ಸಾಧ್ಯವಾಗುವುದು.

Alkane ($C_nH_{2n+2}$), Alkene ($C_nH_{2n}$), Alkyne ($C_nH_{2n-2}$)ಎಂಬ ಸಾಮಾನ್ಯ ಸೂತ್ರವಾಕ್ಯಗಳನ್ನು ನೀಡಿದ್ದಲ್ಲಿ ಪಟ್ಟಿ ಪೂರ್ತಿಗೊಳಿಸಲು ಸುಲಭವಾಗುವುದು.

| ಆಲ್ಕೇನ್ | ಆಲ್ಕೀನ್ | ಆಲ್ಕೈನ್ |
|---|---|---|
| $C_4H_{10}$ | $C_5H_{10}$ | $C_6H_{10}$ |
| $C_5H_{12}$ | $C_6H_{12}$ | $C_7H_{12}$ |
| $C_{10}H_{22}$ | $C_4H_8$ | $C_4H_6$ |

ಪಟ್ಟಿ 6.5

$C_2H_4$ ಎಂಬುದು ಒಂದು ಆಲ್ಕೀನ್ ಆಗಿದೆ ಎಂದು ಮಕ್ಕಳಿಗೆ ತಿಳಿದಿದೆ. ಅದರ ರಚನಾ ಸೂತ್ರವನ್ನು ಕೊಡಲಾಗಿದೆ.
$CH_2 = CH_2$

2 ಕಾರ್ಬನ್ ಪರಮಾಣುಗಳಿರುವ ಹೈಡ್ರೋಕಾರ್ಬನ್‌ನ ಪದಮೂಲವು ಈಥ್ (Eth) ಆಗಿದೆಯಲ್ಲವೇ. ಕೊಟ್ಟಿರುವ ಆಲ್ಕೀನ್‌ನ IUPAC ಹೆಸರು ಲಭಿಸುವುದಕ್ಕೆ ಈನ್ (ene) ಎಂಬ ಪ್ರತ್ಯಯವನ್ನು ಸೇರಿಸಿದರೆ ಸಾಕು.

ಅಂದರೆ,

Alk + ene = Alkene

$C_4H_8$ ರಚನಾ ಸೂತ್ರವನ್ನು $CH_2 = CH - CH_2 - CH_3$ ಎಂದು ಬರೆಯಲು ಸಾಧ್ಯವಿದೆ. ಕಾರ್ಬನ್ ಪರಮಾಣುಗಳಿಗೆ ಸ್ಥಾನ ಸಂಖ್ಯೆಗಳನ್ನು ನೀಡುವಾಗ ದ್ವಿಬಂಧದ ಮೂಲಕ ಏರ್ಪಟ್ಟಿರುವ ಕಾರ್ಬನ್ ಪರಮಾಣುಗಳಿಗೆ ಅತ್ಯಂತ ಸಣ್ಣ ಸ್ಥಾನಸಂಖ್ಯೆ ಸಿಗುವ ರೀತಿಯಲ್ಲಿ ಸಂಖ್ಯೆ ನೀಡಬೇಕು.

1 2 3 4
$CH_2 = CH - CH_2 - CH_3$ ಗಮನಿಸಿರಿ.

ದ್ವಿಬಂಧದ ಮೂಲಕ ಒಟ್ಟು ಸೇರಿರುವ ಕಾರ್ಬನ್ ಪರಮಾಣುಗಳ ಸ್ಥಾನ ಸಂಖ್ಯೆಗಳು 1,2 ಎಂದಲ್ಲವೇ. ಅತ್ಯಂತ ಸಣ್ಣ ಸ್ಥಾನ ಸಂಖ್ಯೆಯನ್ನು ಪರಿಗಣಿಸಬೇಕಾದುದು.

ಅಂದರೆ IUPAC ಹೆಸರು ಬ್ಯೂಟ್ –1– ಈನ್ (But-1-ene) ಎಂದು ಸಿಗುವುದು.

ಇದೇ ರೀತಿಯಲ್ಲಿ ಬ್ಯೂಟ್ –2– ಈನ್ ಎಂಬ ಯೌಗಿಕದ ರಚನಾ ಸೂತ್ರವನ್ನು ಬರೆಯಲು ಮಕ್ಕಳಿಗೆ ಸುಲಭವಾಗುವುದು.

$C - C = C - C$

ಹೈಡ್ರಜನ್ ಪರಮಾಣುಗಳನ್ನು ಸೇರಿಸಿ ಭರ್ತಿಗೊಳಿಸುವಾಗ $CH_3 - CH = CH - CH_3$ ಎಂದು ಸಿಗುವುದು.

ದ್ವಿಬಂಧವಿರುವ ಹೈಡ್ರೋಕಾರ್ಬನ್‌ನ IUPAC ಹೆಸರು ಬರೆಯುವಾಗ ಈ ರೀತಿ ಕ್ರೋಡೀಕರಿಸಬೇಕು.

**ಪದಮೂಲ + ದ್ವಿಬಂಧದ ಸ್ಥಾನ + ಪ್ರತ್ಯಯ**

$CH_3 - CH_2 - CH = CH - CH_3$ ಎಂಬ ಯೌಗಿಕದ IUPAC ಹೆಸರು ಪೆಂಟ್ –2– ಈನ್ ಎಂದಾಗಿರಬಹುದಲ್ಲವೇ.

ಪ್ರೊಪೀನ್‌ನ (Propene) ರಚನೆಯಲ್ಲಿ ಎಡದಿಂದ ಬಲಕ್ಕೆ ಬದಲಾಯಿಸಿ ನಂಬರ್ ನೀಡುವಾಗ ದ್ವಿಬಂಧದ ಮೂಲಕ ಏರ್ಪಟ್ಟಿರುವ ಕಾರ್ಬನ್ ಪರಮಾಣುಗಳಿಗೆ ಸಿಗುವ ಸ್ಥಾನ ಸಂಖ್ಯೆಗಳು 1, 2 ಎಂದಲ್ಲವೇ.

$CH_3 - CH = CH_2$

ಎಂದಾದರೆ Prop-1-ene ಎಂದು ಈ ಯೌಗಿಕವನ್ನು ಕರೆಯುವುದಿಲ್ಲ. Prop-2-ene ಎಂಬ ರಚನೆಗೆ ಸಾಧ್ಯತೆ ಇಲ್ಲವಲ್ಲವೇ. ಆದುದರಿಂದ ಈ ಯೌಗಿಕದ IUPAC ಹೆಸರು Propene ಎಂದಾಗಿದೆ. ಆದರೆ Butene ಎಂಬ ಆಲ್ಕೀನ್ But-1-ene, But-2-ene ಎಂಬ ಎರಡು ಯೌಗಿಕಗಳು ಅಸ್ತಿತ್ವದಲ್ಲಿವೆ ಎಂದು ಸ್ಪಷ್ಟವಲ್ಲವೇ. ಅಂದರೆ Butene ನ ಮುಂದಿರುವ Higher alkene ಗಳ IUPAC ಹೆಸರು ಬರೆಯುವಾಗ ಇಂತಹ ಸ್ಥಾನಸಂಖ್ಯೆಗಳನ್ನು ಸೂಚಿಸುವುದು ಅತೀ ಅಗತ್ಯವಾಗಿದೆ.

**ಹೆಚ್ಚಿನ ಮಾಹಿತಿಗಳಿಗಾಗಿ**

$CH_2 = CH - CH = CH_2$ ಎಂಬ ಯೌಗಿಕದಲ್ಲಿ ಎರಡು ದ್ವಿಬಂಧಗಳಿವೆಯಲ್ಲವೇ. ಇದರ IUPAC ಹೆಸರು ಬ್ಯೂಟ್ -1, 3-ಡೈಈನ್ (Buta-1, 3-diene) ಎಂದಾಗಿದೆ.

$CH_2 = CH - CH = CH_2$

ಇಲ್ಲಿ ದ್ವಿಬಂಧದಲ್ಲಿ ಏರ್ಪಟ್ಟಿರುವ ಕಾರ್ಬನ್ ಪರಮಾಣುಗಳ ಅತ್ಯಂತ ಸಣ್ಣ ಸ್ಥಾನಸಂಖ್ಯೆಗಳನ್ನು ಗಮನಿಸಿದಾಗ 1,3 ಎಂದು ಸಿಗುವುದು. ಎರಡು ದ್ವಿಬಂಧಗಳನ್ನು ಸೂಚಿಸಲು diene ಎಂಬ suffix ನ್ನು ಸೇರಿಸುವರು.

$CH_2 = CH - CH_2 - CH = CH_2$

ಎಂಬ ಯೌಗಿಕದ IUPAC ಹೆಸರು Penta-1, 4 - diene ಎಂದಾಗಿದೆ. ಎರಡು ದ್ವಿಬಂಧವಿರುವ ಇಂತಹ ಯೌಗಿಕಗಳನ್ನು Alkadiene ಎಂದು ಕರೆಯುವರು.

ಆಲ್ಕೈನುಗಳ ನಾಮಕರಣವನ್ನು ಮಾಡುವಾಗ IUPAC ಹೆಸರಿನಲ್ಲಿ ಪ್ರತ್ಯಯವಾಗಿ 'ಐನ್' ಸೇರಿಸುವುದು.

alk + yne = alkyne

$CH \equiv CH$ ಎಂಬ ಯೌಗಿಕದ IUPAC ಹೆಸರು Eth + yne = Ethyne .ಈಥೈನ್ ಎಂದಲ್ಲವೇ.

$C_4H_6$ ಎಂಬ ಯೌಗಿಕದ ತ್ರಿಬಂಧದ ಸ್ಥಾನವನ್ನು ಬದಲಾಯಿಸಿ ರಚನಾಸೂತ್ರಗಳನ್ನು ಹೀಗೆ ಬರೆಯಬಹುದು.

$CH \equiv C - CH_2 - CH_3$

ರಚನೆ A

$CH_3 - C \equiv C - CH_3$

ರಚನೆ B

ರಚನೆ A ಯಲ್ಲಿ ತ್ರಿಬಂಧದ ಮೂಲಕ ಒಟ್ಟು ಸೇರಿರುವ ಕಾರ್ಬನ್ ಪರಮಾಣುಗಳ ಅತ್ಯಂತ ಸಣ್ಣ ಸ್ಥಾನಸಂಖ್ಯೆ 1

ಈ ಯೌಗಿಕದ IUPAC ಹೆಸರು ಬ್ಯೂಟ್ –1–ಐನ್ (But-1-yne)

ರಚನೆ B ಯ IUPAC ಹೆಸರು ಬ್ಯೂಟ್–2–ಐನ್ (But-2-yne)

ಹೀಗೆ ಕ್ರೋಡೀಕರಿಸಬಹುದು.

**ಪದಮೂಲ + ತ್ರಿಬಂಧದ ಸ್ಥಾನ + ಪ್ರತ್ಯಯ**

**ಕಾರ್ಯವಿಧಾನ ಗುಂಪುಗಳು (Functional Groups)**

ಹೈಡ್ರೋಕಾರ್ಬನ್‌ಗಳು ಕಾರ್ಬನ್ ಪರಮಾಣುಗಳು ಮತ್ತು ಹೈಡ್ರಜನ್ ಪರಮಾಣುಗಳು ಮಾತ್ರವೇ ಒಳಗೊಂಡಿರುವ ಸಾವಯವ ಯೌಗಿಕಗಳಾಗಿವೆ ಎಂದು ಮಕ್ಕಳು ತಿಳಿದಿರುವರು. ಆದರೆ ಒಂದು ಹೈಡ್ರೋಕಾರ್ಬನ್‌ನಲ್ಲಿರುವ ಯಾವುದಾದರೂ ಒಂದು ಹೈಡ್ರಜನ್ ಪರಮಾಣುವಿನ ಬದಲಾಗಿ ಇತರ ಪರಮಾಣುಗಳೋ, ಪರಮಾಣು ಗುಂಪುಗಳೋ ಆ ಸ್ಥಾನದಲ್ಲಿ ಬಂದರೆ ಅದು ರಾಸಾಯನಿಕ ಮತ್ತು ಭೌತಿಕ ಗುಣಗಳಲ್ಲಿ ವ್ಯತ್ಯಾಸವಿರುವ ಇನ್ನೊಂದು ಯೌಗಿಕವಾಗಿ ಬದಲಾಗುವುದು. ಈ ಆಶಯವನ್ನು ಮಕ್ಕಳಿಗೆ ತಿಳಿಸಲು ಸಾಧ್ಯವಾಗುವ ರೀತಿಯ ಉದಾಹರಣೆಗಳನ್ನು ನೀಡಿ 'ಕಾರ್ಯವಿಧಾನ ಗುಂಪು' ತರಗತಿಯಲ್ಲಿ ಮಂಡಿಸಬೇಕು.

ಒಂದು ಉದಾಹರಣೆಯನ್ನು ಕೆಳಗೆ ಕೊಡಲಾಗಿದೆ.

$CH_3 - CH_3$ ಅಥವಾ 

ಇದು ಅನಿಲ ಸ್ಥಿತಿಯಲ್ಲಿರುವ ಯೌಗಿಕವಾದ ಈಥೇನ್‌ನ ರಚನೆಯಾಗಿದೆ. ಇದರಿಂದ ಒಂದು ಹೈಡ್ರಜನ್ ಪರಮಾಣುವಿನ ಸ್ಥಾನದ ಬದಲಾಗಿ –OH ಗುಂಪು ಬಂದಿರುವ ಯೌಗಿಕವನ್ನು ಗಮನಿಸಿರಿ.

$CH_3 - CH_2 - OH$ ಅಥವಾ 

ಇದು ಎಥೆನೋಲ್‌ನ ರಚನಾ ಸೂತ್ರವಾಗಿದೆ.

ಸಾಮಾನ್ಯ ಉಷ್ಣತೆಯಲ್ಲಿ ಎಥೆನೋಲ್ ದ್ರವಸ್ಥಿತಿಯಲ್ಲಿರುವುದು ಎಂದು ಮಕ್ಕಳು ತಿಳಿದಿರುವರು. ಅದರ ಕೆಲವು ರಾಸಾಯನಿಕ ಸ್ವಭಾವಗಳನ್ನೂ ವಿವರಿಸಬೇಕು. ಈಥೇನ್‌ನಿಂದ ಎಥನೋಲ್ ಭಿನ್ನವಾಗಿರಲು ಕಾರಣ ಅದರಲ್ಲಿರುವ –OH ಗುಂಪಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಎಥನೋಲ್‌ನ ರಾಸಾಯನಿಕ ಸ್ವಭಾವವನ್ನು ಪ್ರಧಾನವಾಗಿ ನಿರ್ಣಯಿಸುವುದು –OH ಗುಂಪಾಗಿದೆ ಎಂದೂ ಆದುದರಿಂದ ಇಂತಹ ಪರಮಾಣುಗಳನ್ನು ಮತ್ತು ಗುಂಪುಗಳನ್ನು ಕಾರ್ಯವಿಧಾನ ಗುಂಪುಗಳೆಂದು ಕರೆಯಬಹುದೆಂದೂ ತಿಳಿಸುವುದರೊಂದಿಗೆ ವಿವಿಧ ಕಾರ್ಯವಿಧಾನ ಗುಂಪುಗಳನ್ನು ಪರಿಚಯಿಸಬಹುದು.

### ಹೈಡ್ರೋಕ್ಸಿಲ್ ಗುಂಪು (– OH)

–OH ಗುಂಪುಗಳನ್ನು ಹೊಂದಿರುವ ಯೌಗಿಕಗಳಾದ ಆಲ್ಕೋಹಾಲ್‌ಗಳನ್ನು ನಾಮಕರಣ ಮಾಡುವ ರೀತಿಯನ್ನು ಪರಿಚಯಿಸಬೇಕು.

**Alkane - e + ol → Alkanol**

Ethane - e + ol → Ethanol ಎಥನೋಲ್

ಪಾಠಭಾಗದಲ್ಲಿ ನೀಡಿರುವ ಉದಾಹರಣೆಗಳನ್ನು ಗಮನಿಸಿರಿ.

$CH_3—OH$ ಮೆಥೆನೋಲ್ (Methanol)

$CH_3—CH_2—OH$ ಎಥನೋಲ್ (Ethanol)

$CH_3—CH_2—CH_2—OH$



ಎಂಬೀ ಯೌಗಿಕಗಳ ಅಣುಸೂತ್ರಗಳು ಸಮಾನವಾಗಿದೆಯೆಂದು ಮಕ್ಕಳು ಕಂಡುಹಿಡಿಯಲಿ. ಅಂದರೆ $C_3H_8O$. ಎಂಬ ಒಂದೇ ಅಣುಸೂತ್ರದಿಂದ ಇವುಗಳನ್ನು ಸೂಚಿಸುವುದಾದರೂ ಇವುಗಳಲ್ಲಿ ಕಾರ್ಯವಿಧಾನ ಗುಂಪಿನ ಸ್ಥಾನದಲ್ಲಿ ವ್ಯತ್ಯಾಸವಿದೆಯೆಂದು ಮಕ್ಕಳು ಗುರುತಿಸಿ ತಿಳಿಯಬೇಕು. ಇವುಗಳ IUPAC ಹೆಸರನ್ನು ಬರೆಯುವಾಗ ಕಾರ್ಯವಿಧಾನ

ಗುಂಪು ಹೊಂದಿರುವ ಕಾರ್ಬನ್ ಪರಮಾಣುವಿನ ಸ್ಥಾನಸಂಖ್ಯೆಯನ್ನು ಸೂಚಿಸಬೇಕಾದ ಆವಶ್ಯಕತೆಯನ್ನು ಮಕ್ಕಳು ಅರ್ಥೈಸಬೇಕು. ಅತ್ಯಂತ ಸಣ್ಣದಾದ ಸ್ಥಾನಸಂಖ್ಯೆಯನ್ನು ಈ ಕಾರ್ಬನ್ ಪರಮಾಣುವಿಗೆ ನೀಡಬೇಕೆಂದು ಮಕ್ಕಳಿಗೆ ಸ್ಪಷ್ಟಪಡಿಸಬೇಕು.

ಅಂದರೆ ಇವುಗಳನ್ನು

$CH_3—CH_2—CH_2—OH$ ಪ್ರೊಪಾನ್ –1– ಓಲ್ (Propan-1-ol)



ಪ್ರೊಪಾನ್ –2– ಓಲ್ (Propan-2-ol)

ಎಂದು ಕರೆಯಬಹುದು.

**ಹೆಚ್ಚಿನ ಮಾಹಿತಿಗಾಗಿ**

ಹೆಚ್ಚು ಉದಾಹರಣೆಗಳ ಮೂಲಕ ಆಲ್ಕೋಹಾಲ್‌ಗಳ IUPAC ನಾಮಕರಣ ರೀತಿಯನ್ನು Extended activity ಯಾಗಿ ನೀಡಬಹುದು.

ಕೆಲವು ಮಾದರಿಗಳನ್ನು ನೀಡಲಾಗಿದೆ.

$CH_3 — CH_2 — CH_2 — CH_2 — OH$ ಬ್ಯೂಟಾನ್ – 1– ಓಲ್ (Butan-1-ol)

$CH_3 — CH_2$ 

ಬ್ಯೂಟಾನ್ –2– ಓಲ್ (Butan-2-ol)

ಈ ಯೌಗಿಕಗಳ ಅಣುಸೂತ್ರವು $C_4H_{10}O$ ಎಂದು ಮಕ್ಕಳು ಕಂಡುಹಿಡಿಯಲಿ. ಆದರೆ — OH ಗುಂಪು ಹೊಂದಿರುವ ಕಾರ್ಬನ್ ಪರಮಾಣುವಿನ ಸ್ಥಾನ ಸಂಖ್ಯೆಯಲ್ಲಿ ಇರುವ ವ್ಯತ್ಯಾಸವು ಇವುಗಳನ್ನು ವಿಭಿನ್ನ ಯೌಗಿಕಗಳಾಗಿ ಬದಲಾಯಿಸುವುದೆಂದು ಮಕ್ಕಳು ಗುರುತಿಸಿ ತಿಳಿಯಬೇಕು.

ಕೆಳಗೆ ನೀಡಿರುವ ರಚನಾ ಸೂತ್ರವನ್ನು ಗಮನಿಸಿರಿ.




ಈ ಯೌಗಿಕದ ಅಣುಸೂತ್ರವೂ $C_4H_{10}O$ ಆಗಿದೆಯಲ್ಲವೆ ? ಇಲ್ಲಿ ಕಾರ್ಬನ್ ಸಂಕಲೆಯಲ್ಲಿ ವ್ಯತ್ಯಾಸ ಕಂಡುಬರುವುದು. ಅಂದರೆ ಒಂದು — $CH_3$ ರೇಡಿಕಲ್ ಶಾಖೆಯಾಗಿ ಬಂದಿರುವುದು. — OH ಗುಂಪು ಮತ್ತು — $CH_3$ ರೇಡಿಕಲ್ ಅಡಕವಾಗಿರುವ ಕಾರ್ಬನ್ ಪರಮಾಣುವಿನ ಸ್ಥಾನ ಸಂಖ್ಯೆ 2 ಎಂದು ಲಭಿಸುವುದಲ್ಲವೆ? ಅಂದರೆ ಈ ಯೌಗಿಕ IUPAC ಹೆಸರು 2–ಮಿಥೈಲ್ ಪ್ರೊಪಾನ್–2– ಓಲ್(2-Methylpropan-2-ol) ಎಂದಾಗಿರುವುದು.

ಇಂತಹ ಕೆಲವು ಯೌಗಿಕಗಳ ರಚನಾ ಸೂತ್ರವನ್ನು ಮತ್ತು ಅವುಗಳ IUPAC ಹೆಸರನ್ನು ಕೆಳಗೆ ಕೊಡಲಾಗಿದೆ.

$CH_3—CH_2—CH_2—CH_2—CH_2—OH$ ಪೆಂಟಾನ್ –1– ಓಲ್ text (Pentan-1-ol)


ಪೆಂಟಾನ್ –2– ಓಲ್ (Pentan-2-ol)


ಪೆಂಟಾನ್ –3– ಓಲ್ (Pentan-3-ol)



2-ಮೀಥೈಲ್ ಬ್ಯೂಟಾನ್ – 1 – ಓಲ್ (2-Methylbutan-1-ol)



3-ಮೀಥೈಲ್ ಬ್ಯೂಟಾನ್ –1– ಓಲ್ (3-Methylbutan-1-ol)

**2. ಆಲ್ಡಿಹೈಡ್ ಗುಂಪು** (  **ಅಥವಾ** —CHO )

— CHO ಕಾರ್ಯವಿಧಾನ ಗುಂಪುಗಳಿರುವ ಯೌಗಿಕಗಳಾದ ಆಲ್ಡಿಹೈಡುಗಳ IUPAC ಹೆಸರು ಆಲ್ (— al) ಎಂಬ ಪದದಿಂದ ಕೊನೆಗೊಳ್ಳುವುದು. **Alkane - e + al = Alkanal**

— CHO ಎಂಬುದು ಕಾರ್ಬನ್ ಪರಮಾಣು ಅಡಕವಾಗಿರುವ ಕಾರ್ಯವಿಧಾನ ಗುಂಪಾಗಿದೆ ಎಂದು ಮಕ್ಕಳು ಗುರುತಿಸಿ ತಿಳಿಯಬೇಕು.

ಕಾರ್ಬನ್ ಪರಮಾಣು ಅಡಕವಾಗಿರುವ ಕಾರ್ಯವಿಧಾನ ಗುಂಪುಗಳಿರುವ ಯೌಗಿಕಗಳನ್ನು IUPAC ನಾಮಕರಣ ಮಾಡುವಾಗ ಆ ಕಾರ್ಬನ್ ಪರಮಾಣುವನ್ನು ಪ್ರಧಾನ ಸಂಕಲೆಯ ಭಾಗವಾಗಿ ಪರಿಗಣಿಸುವುದರೊಂದಿಗೆ ಸಂಕಲೆಗೆ ನಂಬರ್ ನೀಡುವಾಗ ಅತ್ಯಂತ ಸಣ್ಣ ಸ್ಥಾನ ಸಂಖ್ಯೆ ಬರುವ ರೀತಿಯಲ್ಲಿ ಸಂಖ್ಯೆ ನೀಡಬೇಕು. ಆದುದರಿಂದ ಅವುಗಳನ್ನು ಹೆಸರಿಸುವಾಗ ಗಮನಿಸುವಿರಲ್ಲವೆ?

ಪಾಠಭಾಗದಲ್ಲಿ ನೀಡಿರುವುದಕ್ಕಿಂತ ಹೊರತಾಗಿ ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

1 .  2-ಮೀಥೈಲ್ ಪ್ರೊಪನಾಲ್ (2-Methylpropanal)

2 .  2-ಮೀಥೈಲ್ ಬ್ಯೂಟನಾಲ್ (2-Methylbutanal)

3 .  2, 2-ಡೈ ಮೀಥೈಲ್ ಬ್ಯೂಟನಾಲ್ (2, 2 Dimethylbutanal)

4.  3, 3- ಡೈ ಮೀಥೈಲ್ ಬ್ಯೂಟನಾಲ್

(3, 3-Dimethylbutanal)

**3. ಕೀಟೊಗುಂಪು (  ಅಥವಾ -CO-)**

'ಕೀಟೊ' ಗುಂಪನ್ನೊಳಗೊಂಡ ಸಾವಯವ ಯೌಗಿಕಗಳು ಕೀಟೋನುಗಳು (Ketones). ಕೀಟೋನುಗಳ IUPAC ಹೆಸರು ಓನ್ (—one) ಎಂದು ಕೊನೆಗೊಳ್ಳುವುದು.

**Alkane - e + one ⟶ Alkanone**

$CH_3—CO—CH_3$ ಪ್ರೊಪನೋನ್ (Propanone)

ಕೆಳಗೆ ನೀಡಿರುವ ಯೌಗಿಕಗಳ ರಚನಾ ಸೂತ್ರಗಳಲ್ಲಿ ಕಾರ್ಯವಿಧಾನ ಗುಂಪಿನ ಹೆಸರು IUPAC ನಾಮಕರಣದಲ್ಲಿ ಪರಿಗಣಿಸಿರುವುದು ಗಮನಿಸಿರಿ.

$CH_3 - CH_2 - CO - CH_3$ ಈ ಯೌಗಿಕದಲ್ಲಿ $- CO -$ ಗುಂಪನ್ನು ಹೊಂದಿರುವ ಕಾರ್ಬನಿನ ಸ್ಥಾನ ಸಂಖ್ಯೆಯು 2.

ಇದರ IUPAC ಹೆಸರು ಬ್ಯೂಟಾನ್ –2– ಓನ್ (Butan-2-one).

ಅದೇ ರೀತಿಯಲ್ಲಿ

$CH_3—CH_2—CH_2—CO—CH_3$ ಪೆಂಟಾನ್ –2– ಓನ್ (Pentan-2-one)

$CH_3—CH_2—CO—CH_2—CH_3$ ಪೆಂಟಾನ್ –3– ಓನ್ (Pentan-3-one)



3–ಮೀಥೈಲ್ ಪೆಂಟಾನ್ –2– ಓನ್

(3-Methylpentan-2-one)

**4. ಕಾರ್ಬೋಕ್ಸಿಲಿಕ್ ಗುಂಪು (  ಅಥವಾ —COOH )**

—COOH ಕಾರ್ಯವಿಧಾನ ಗುಂಪನ್ನು ಒಳಗೊಂಡ ಕಾರ್ಬೋಕ್ಸಿಲಿಕ್ ಏಸಿಡ್‌ಗಳ IUPAC ಹೆಸರು ಬರೆಯುವಾಗ ಪ್ರದಾನ ಸಂಕಲೆಯ ಹೆಸರಿನೊಂದಿಗೆ ಓಯಿಕ್ ಏಸಿಡ್ (-oic acid) ಎಂಬ ಪ್ರತ್ಯಯವನ್ನು ಸೇರಿಸಲಾಗುವುದು.

**Alkane - e + oic acid ⟶ Alkanoic acid.**

ಉದಾಹರಣೆಗೆ : $CH_3—COOH$ **Ethane - e + oic acid ⟶ Ethanoic acid**

$H-COOH$ ಮೆಥನೋಯಿಕ್ ಏಸಿಡ್ (Methanoic acid).

$CH_3-CH_2-COOH$ ಪ್ರೊಪನೊಯಿಕ್ ಏಸಿಡ್ (Propanoic acid)

ಇಲ್ಲಿಯೂ ಕಾರ್ಯವಿಧಾನ ಗುಂಪಿನಲ್ಲಿರುವ ಕಾರ್ಬನ್ ಪರಮಾಣುವನ್ನು ಪ್ರಧಾನ ಸಂಕಲೆಯ ಭಾಗವಾಗಿ ಪರಿಗಣಿಸಬೇಕೆಂದು ಮಕ್ಕಳಿಗೆ ಸ್ಪಷ್ಟಗೊಳಿಸಬೇಕು.

ಹೆಚ್ಚಿನ ಉದಾಹರಣೆಗಳು:

$CH_3-\underset{|}{\underset{CH_3}{CH}}-COOH$ 2-ಮೀಥೈಲ್ ಪ್ರೆಪನೊಯಿಕ್ ಏಸಿಡ್ (2-Methylpropanoicacid)

$CH_3-\underset{|}{\underset{CH_3}{CH}}-CH_2-COOH$ 3-ಮೀಥೈಲ್ ಬ್ಯೂಟನೋಯಿಕ್ ಏಸಿಡ್ (3-Methylbutanoicacid)

$CH_3-CH_2-\underset{|}{\underset{CH_3}{CH}}-COOH$ 2-ಮೀಥೈಲ್ ಬ್ಯೂಟನೋಯಿಕ್ ಏಸಿಡ್ (2-Methylbutanoicacid)

**5. ಹೇಲೋ ಗುಂಪು**

ಹೇಲೋ ಗುಂಪು ಹೊಂದಿರುವ ಯೌಗಿಕಗಳಾಗಿವೆ ಹೇಲೋ ಯೌಗಿಕಗಳು. ಅವುಗಳ IUPAC ನಾಮಕರಣದಲ್ಲಿ ಹೇಲೋ ಗುಂಪಿನ ಹೆಸರನ್ನು ಪ್ರತ್ಯಯವಾಗಿ ಸೇರಿಸುವುದೆಂದು ಗಮನಿಸುವಿರಲ್ಲವೇ.

ಹೇಲೋ ಗುಂಪಿನ ಸ್ಥಾನ - ಹೇಲೋ ಗುಂಪಿನ ಹೆಸರು + ಆಲ್ಕೇನಿನ ಹೆಸರು

ಉದಾ: $CH_3-CH_2-CH_2-CH_2-Br$ 1-ಬ್ರೋಮೋಬ್ಯೂಟೇನ್ (1-Bromobutane)

ಇತರ ಶಾಖೆಗಳಿದ್ದರೂ ಇಲ್ಲಿಯೂ ಕಾರ್ಯವಿಧಾನ ಗುಂಪು ಸೇರಿಕೊಂಡ ಕಾರ್ಬನ್ ಪರಮಾಣುವಿಗೆ ಸಣ್ಣ ಸ್ಥಾನ ಸಂಖ್ಯೆ ನೀಡಬೇಕು. ಅಂದರೆ,

$CH_3-CH_2-\underset{|}{\underset{CH_3}{CH}}-CH_2-I$ ಎಂಬ ಯೌಗಿಕದ IUPAC ಹೆಸರು.

1-Iodo-2-methylbutane ಎಂದಾಗಿದೆ.

ಹೆಚ್ಚಿನ ಉದಾಹರಣೆಗಳನ್ನು ನೀಡಬಹುದಲ್ಲವೆ.

**4. ಆಲ್ಕೋಕ್ಸಿ ಗುಂಪು ($-O-R$)**

ಈಥರುಗಳು $-O-R$ ಗುಂಪು ಒಳಗೊಂಡಿರುವ ಯೌಗಿಕಗಳಾಗಿವೆ. ಪಾಠಭಾಗದಲ್ಲಿ ನೀಡಿರುವ ಉದಾಹರಣೆಗಳನ್ನು ಮಕ್ಕಳಿಗೆ ಪರಿಚಯಿಸಬೇಕು. ಹೆಚ್ಚಿನ ಉದಾಹರಣೆಗಳನ್ನು ನೀಡಬಹುದು.

ಉದಾ : $CH_3-CH_2-CH_2-O-CH_3$ ಮಿಥೋಕ್ಸಿಪ್ರೊಪೇನ್ (Methoxypropane)

**5. ಅಮಿನೋ ಗುಂಪು ($-NH_2$)**

$-NH_2$ ಕಾರ್ಯವಿಧಾನ ಗುಂಪನ್ನು ಹೊಂದಿರುವ ಯೌಗಿಕಗಳನ್ನು ಅಮೀನುಗಳು ಎಂದು ಕರೆಯುವರು. Alkane ನ 'e' ಗೆ ಬದಲಾಗಿ 'amine' ಎಂದು ಸೇರಿಸುವರು.

ಪ್ರೊಪಾನ್ –2– ಅಮೀನ್ ಎಂಬ ಯೌಗಿಕದ ರಚನಾಸೂತ್ರವು.



ಕ್ಲೋರೋ (–Cl), ಬ್ರೋಮೋ (–Br), ನೈಟ್ರೋ (–$NO_2$) ಮೊದಲಾದ ಕಾರ್ಯವಿಧಾನ ಗುಂಪುಗಳಲ್ಲಿ ಕಾರ್ಯವಿಧಾನ ಗುಂಪಿನ ಹೆಸರನ್ನು ಸೂಚಿಸುವ ಪದವನ್ನು ಆರಂಭದಲ್ಲಿ ಪ್ರತ್ಯಯವಾಗಿ ಸೇರಿಸಲಾಗುವುದೆಂಬುದನ್ನು ಗಮನಿಸುವಿರಲ್ಲವೇ.

ಪಾಠ ಪುಸ್ತಕದಲ್ಲಿ ನೀಡಿರುವ ಪಟ್ಟಿ 6.6, 6.7 ಎಂಬಿವುಗಳನ್ನು ಮಕ್ಕಳು ಭರ್ತಿಗೊಳಿಸಲಿ.

| ಕಾರ್ಯ ವಿಧಾನ ಗುಂಪು | ಕಾರ್ಯವಿಧಾನ ಗುಂಪನ್ನು ಹೊಂದಿರುವ ಯೌಗಿಕ | IUPAC ಹೆಸರು |
|---|---|---|
| — OH | $CH_3—CH_2—CH_2—OH$ | ಪ್ರೊಪಾನ್ –1– ಓಲ್ (Propan-1-ol) |
| — COOH | $CH_3–CH_2–CH_2–COOH$ | ಬ್ಯೂಟನೋಯಿಕ್ ಆಸಿಡ್ (Butanoicacid) |
| — CO — | $CH_3—CO—CH_3$ | ಪ್ರೊಪನೋನ್ (Propanone) |
| —O—R | $CH_3—O—CH_3$ | ಮಿಥೋಕ್ಸಿಮಿಥೇನ್ (Methoxymethane) |

ಪಟ್ಟಿ 6.6

| ಯೌಗಿಕ | IUPAC ಹೆಸರು |
|---|---|
| $CH_3—CH_2—CH_2—CH_2—OH$ | ಬ್ಯೂಟಾನ್ – ಓಲ್ (Butan-1-ol) |
| $CH_3—CH_2—CH_2—COOH$ | ಬ್ಯೂಟನೋಯಿಕ್ ಆಸಿಡ್ (Butanoic acid) |
| $CH_3—CHO$ | ಎಥನಾಲ್ (Ethanal) |
| $CH_3—CO—CH_3$ | ಪ್ರೊಪನೋನ್ (Propanone) |

ಪಟ್ಟಿ 6.7

## ಮೋಡ್ಯೂಲ್ 2

**ಸಮಯ : 3 ಪೀರಿಯಡ್**

- ಐಸೋಮೆರಿಸಂ
- ಚೈನ್ ಐಸೋಮೆರಿಸಂ
- ಕಾರ್ಯವಿಧಾನ ಗುಂಪು ಐಸೋಮೆರಿಸಂ
- ಪೊಸಿಶನ್ ಐಸೋಮೆರಿಸಂ

### ಐಸೋಮೆರಿಸಂ

ಒಂದೇ ಅಣುಸೂತ್ರವನ್ನು ಹೊಂದಿರುವ ಎರಡು ಯೌಗಿಕಗಳು ರಚನೆಯಲ್ಲಿರುವ ವ್ಯತ್ಯಾಸದಿಂದ ರಾಸಾಯನಿಕ ಮತ್ತು ಭೌತಿಕ ಸ್ವಭಾವಗಳಲ್ಲಿ ಭಿನ್ನತೆಯನ್ನು ತೋರಿಸುವುದಾದರೆ ಅವುಗಳು ಐಸೋಮರ್‌ಗಳಾಗಿವೆ. ಈ ವಿದ್ಯಮಾನವೇ ಐಸೋಮೆರಿಸಂ.

ಸಾವಯವ ಯೌಗಿಕಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರಲು ಐಸೋಮೆರಿಸಂ ಒಂದು ಕಾರಣವಾಗಿದೆಯೆಂದು ಹಿಂದಿನ ತರಗತಿಗಳಲ್ಲಿ ಚರ್ಚಿಸಿದ್ದೇವೆ.

ಪ್ರೊಪಾನ್ –1–ಓಲ್, ಪ್ರೊಪಾನ್ –2– ಓಲ್ ಎಂಬೀ ಯೌಗಿಕಗಳ ರಚನೆಯನ್ನು ಚರ್ಚಿಸುವುದರ ಮೂಲಕ ಐಸೋಮೆರಿಸಂನ್ನು ಪಾಠಪುಸ್ತಕದಲ್ಲಿ ಪರಿಚಯಿಸುವುದು. ತರಗತಿ ಕೋಣೆಯಲ್ಲಿ ಇಂತಹ ಯೋಗ್ಯವಾದ ಯೌಗಿಕಗಳನ್ನು ಪರಿಚಯಿಸಿ ವಿವಿಧ ಐಸೋಮರ್‌ಗಳನ್ನು ಚರ್ಚಿಸಬಹುದು. ಚೈನ್ ಐಸೋಮೆರಿಸಂ, ಪೊಸಿಶನ್ ಐಸೋಮೆರಿಸಂ, ಕಾರ್ಯವಿಧಾನ ಗುಂಪು ಐಸೋಮೆರಿಸಂ ಇವುಗಳನ್ನು ಚರ್ಚಿಸುವುದು. ಸರಳವಾದ ಉದಾಹರಣೆಗಳ ಮೂಲಕ ವಿವಿಧ ರೀತಿಯ ಐಸೋಮರ್‌ಗಳನ್ನು ಮನೋಹರವಾಗಿ ತರಗತಿ ಕೋಣೆಯಲ್ಲಿ ಮಂಡಿಸಲು ಗಮನಿಸುವಿರಲ್ಲವೆ. ಹೆಚ್ಚಿನ ಉದಾಹರಣೆಗಳನ್ನು ಮೌಲ್ಯಮಾಪನ ಪ್ರಶ್ನೆಗಳಾಗಿಯೂ ಮುಂದುವರಿದ ಚಟುವಟಿಕೆಗಳಾಗಿಯೂ ನಂತರ ಚರ್ಚಿಸಲಾಗಿದೆ.

ಪಾಠಪುಸ್ತಕದಲ್ಲಿ ಕೊಟ್ಟಿರುವ ಉದಾಹರಣೆಗಳಲ್ಲಿ $C_3H_7Cl$ ಎಂಬ ಅಣುಸೂತ್ರವಿರುವ ಯೌಗಿಕಕ್ಕೆ ಸಾಧ್ಯವಾಗುವ ಎರಡು ಐಸೋಮರ್‌ಗಳನ್ನು ಕೆಳಗೆ ನೀಡಲಾಗಿದೆ.

ಅವುಗಳು $CH_3 - CH_2 - CH_2 - Cl$ (1-Chloropropane),

$CH_3 - CH(Cl) - CH_3$ (2-Chloropropane) ಎಂಬಿವುಗಳು

ಕೊಟ್ಟಿರುವ ಯೌಗಿಕಗಳು ಐಸೋಮರುಗಳಾಗಿವೆಯೇ ಎಂದು ಹೇಗೆ ಪರೀಕ್ಷಿಸಬಹುದೆಂದು ನೋಡೋಣ.

ಪ್ರತಿಯೊಂದು ಯೌಗಿಕದ ಅಣುಸೂತ್ರವನ್ನು ಬರೆಯಿರಿ.

ಒಂದೇ ಅಣುಸೂತ್ರವಿರುವ ಯೌಗಿಕಗಳು ಯಾವುದೆಂದು ಕಂಡುಹಿಡಿಯಿರಿ.

ಒಂದೇ ಅಣುಸೂತ್ರವಿರುವವುಗಳು ಐಸೋಮರ್‌ಗಳಾಗಿರುವುದು. ಇವುಗಳ ರಚನಾ ಸೂತ್ರಗಳನ್ನು ಪರಿಶೀಲಿಸಿದರೆ ಇವುಗಳು ಯಾವ ವಿಭಾಗಕ್ಕೆ ಸೇರಿದ ಐಸೋಮರುಗಳಾಗಿವೆ ಎಂದು ಕಂಡುಹಿಡಿಯಬಹುದು.

ಪಾಠಪುಸ್ತಕದ 125ನೇ ಪುಟದಲ್ಲಿ ಕೊಟ್ಟಿರುವ ಯೌಗಿಕಗಳ ಐಸೋಮರ್ ಜೋಡಿಗಳನ್ನು ಕೆಳಗೆ ನೀಡಲಾಗಿದೆ.

a. 1, 3 - ಚೈನ್ ಐಸೋಮರ್‌ಗಳು

b. 7, 8 - ಕಾರ್ಯವಿಧಾನ ಗುಂಪು ಐಸೋಮರುಗಳು.

ಅನಂತರ ನೀಡಲಾದ ಪ್ರಶ್ನೆಯಲ್ಲಿ $CH_3 - CH_2 - CH_2 - CH_2 - CH_2 - OH$ (Pentan-1-ol) ಎಂಬ ಯೌಗಿಕಕ್ಕೆ ಸಾಧ್ಯವಾದ ಇತರ ಎರಡು ಪೊಸಿಶನ್ ಐಸೋಮರುಗಳು. Pentan-2-ol, Pentan-3-ol ಎಂಬಿವುಗಳಾಗಿವೆ. ಇದಲ್ಲದೆ ಚೈನ್ ರಚನೆಯನ್ನು ಬದಲಾಯಿಸಿ ಹೆಚ್ಚಿನ ಐಸೋಮರುಗಳನ್ನು ಕಂಡುಹಿಡಿಯಬಹುದು.

ಆಲ್ಕೋಹಾಲಿನ ಕಾರ್ಯವಿಧಾನ ಗುಂಪು ಐಸೋಮರ್ ಆಲ್ಕೋಕ್ಸಿ ಗುಂಪನ್ನು ಹೊಂದಿದ ಯೌಗಿಕವಾದ ಈಥರ್.

$CH_3 - CH_2 - CH_2 - CH_2 - CH_2 - OH$ ($C_5H_{12}0$) ವಿನ ಕಾರ್ಯವಿಧಾನ ಗುಂಪು ಐಸೋಮರುಗಳನ್ನು ಕೆಳಗೆ ನೀಡಲಾಗಿದೆ.

$CH_3 - CH_2 - CH_2 - CH_2 - O - CH_3$ (Methoxybutane)

$CH_3 - CH_2 - CH_2 - O - CH_2 - CH_3$ (Ethoxypropane)

ಸಂಕಲೆಯಲ್ಲಿರುವ ಕಾರ್ಬನ್ ಪರಮಾಣುಗಳ ರಚನೆಯನ್ನು ಮತ್ತು ಸಂಖ್ಯೆಯನ್ನು ಬದಲಾಯಿಸಿ ಹೆಚ್ಚಿನ ಕಾರ್ಯವಿಧಾನ ಗುಂಪು ಐಸೋಮರುಗಳನ್ನು ಕಂಡುಹಿಡಿಯಬಹುದು.

ಉದಾ : $CH_3 - CH - O - CH_2 - CH_3$ (with $CH_3$ on the CH) 2-Ethoxypropane

$CH_3 - CH_2 - CH - O - CH_3$ (with $CH_3$ on the CH) 2-Methoxybutane

**ಹೆಚ್ಚಿನ ಮಾಹಿತಿಗಾಗಿ**

$C_5H_{12}O$ ವಿನ ಚೈನಿನ ಕಾರ್ಬನ್ ಪರಮಾಣುವಿನ ರಚನೆ (ಸ್ಥಾನ) ಮತ್ತು ಸಂಖ್ಯೆಯನ್ನು ಬದಲಾಯಿಸಿ ಚೈನ್ ಐಸೋಮರ್‌ಗಳನ್ನು ಬರೆಯಲು ಪ್ರಯತ್ನಿಸುವಿರಲ್ಲವೆ ?

ಉದಾ : : $CH_3 - CH_2 - CH_2 - CH_2 - CH_2 - OH$ Pentan-1-ol

$CH_3 - CH_2 - CH - CH_2 - OH$ (with $CH_3$ on the CH) 2-Methyl butan-1-ol

$CH_3 - CH - CH_2 - CH_2 - OH$ (with $CH_3$ on the CH) 3 Methyl butan-1-ol

$CH_3 - CH_2 - C - CH_3$ (with $CH_3$ and $OH$ on the C) 2 Methyl butan-2-ol

$CH_3 - CH - CH - CH_3$ (with $CH_3$ on the second C and $OH$ on the third C) 3 Methyl butan-2-ol

$CH_3 - C - CH_2 - OH$ (with two $CH_3$ on the C) 2, 2 - Dimethyl propan-1-ol

$CH_3-CH_2-CH_2-CH_2-CH_2-CH_3$ ($C_6H_{14}$) ಎಂಬ ಯೌಗಿಕಕ್ಕೆ ಸಾಧ್ಯವಾಗುವ ಚೈನ್ ಐಸೋಮರು (ಪಾಠಪುಸ್ತಕದ 126ನೇ ಪುಟ)

a. 2-Methylpentane

b. 3-Methylpentane

c. 2, 3-Dimethylbutane

d. 2, 2-Dimethylbutane

117 ನೇ ಪುಟದಲ್ಲಿ ನೀಡಿರುವ ನಂತರದ ಚಟುವಟಿಕೆಯಲ್ಲಿ

a. 1, 3 b. 2, 4 c. 5, 6

ಎಂಬಿವುಗಳು ಐಸೋಮರ್ ಜೋಡಿಗಳಾಗಿವೆ. ಕೊಟ್ಟಿರುವ ಯೌಗಿಕಗಳ IUPAC ಹೆಸರು ಮತ್ತು ಅವುಗಳ ಕಾರ್ಯವಿಧಾನ ಗುಂಪುಗಳನ್ನು ಮಕ್ಕಳು ಕಂಡುಹಿಡಿಯಲಿ.

$C_6H_{12}$ ಎಂಬುದು ಒಂದು ಆಲ್ಕೀನ್ ಆಗಿದೆಯಲ್ಲವೆ? ಇದರ IUPAC ಹೆಸರು hexene ಎಂದಾಗಿದೆ. ಅಣುವು cyclohexane ನಿನ ಅಣುಸೂತ್ರವು ಇದೇ ಆಗಿದೆ ಎಂಬುದನ್ನು ಮಕ್ಕಳು ತಿಳಿಯಲಿ. ಇನ್ನೂ ಹೆಚ್ಚು cycloalkane ಗಳನ್ನು ಮಕ್ಕಳಿಗೆ ಪರಿಚಯಿಸುವಿರಲ್ಲವೇ?

## ಮೌಲ್ಯಮಾಪನ ಮಾಡೋಣ

1. 



2. a. ಸರಿಯಾಗಿದೆ

b. ತಪ್ಪಾಗಿದೆ



c. ತಪ್ಪಾಗಿದೆ



d. ತಪ್ಪಾಗಿದೆ



3.

a. 

2-ಮೀಥೈಲ್ ಪೆಂಟೇನ್ (2-Methylpentane)

b. 

3-ಮೀಥೈಲ್ ಹೆಕ್ಸೇನ್ (3-Methylhexane)

c. $CH_3-CH_2-CH=CH-CH_2-CH_2-CH_3$

ಹೆಪ್ಟ್ –3– ಈನ್ (Hept-3-ene)

d. 

ಹೆಕ್ಸೇನ್ (Hexane)

e. 

2, 3-ಡೈಮೀಥೈಲ್ ಪೆಂಟೇನ್ (2, 3-Dimethylpentane)

f . 

2, 2, 4-ಟ್ರೈಮೀಥೈಲ್ ಪೆಂಟೇನ್ (2, 2, 4-Trimethylpentane)

g . $CH_3-CO-CH_2-CH_3$

ಬ್ಯೂಟಾನ್ –2– ಓನ್ (Butan-2-one)

h. 

ಪೆಂಟಾನ್ –3– ಓಲ್ (Pentan-3-ol)

i. $CH_3—CH_2—CH_2—CH_2—Cl$

1-ಕ್ಲೋರೋಬ್ಯುಟೇನ್(1-Chlorobutane)

j. $CH_3—CH_2—CH_2—COOH$

ಬ್ಯೂಟನೋಯಿಕ್ ಆಸಿಡ್(Butanoic acid)

4.

a . 

ರಚನೆ A

ಎಂದರೆ ಈ ಯೌಗಿಕದ ಕಾರ್ಬನ್ ಚೈನಿಗೆ ಕೆಳಗೆ ತೋರಿಸಿದ ರೀತಿಯಲ್ಲೂ ಮಕ್ಕಳು ನಂಬರ್ ನೀಡಲು ಸಾಧ್ಯವಿದೆ.



ರಚನೆ B

ಅಂದರೆ ಇಲ್ಲಿ  ಎಂಬ ರೇಡಿಕಲ್ ಶಾಖೆಯಾಗಿ ಲಭಿಸುವುದು. IUPAC ನಿಯಮದ ಪ್ರಕಾರ ಗರಿಷ್ಠ ಶಾಖೆಗಳು ಲಭಿಸುವ ಅತಿ ಉದ್ದದ ಕಾರ್ಬನ್ ಸಂಕಲೆಯನ್ನು ಆರಿಸಬೇಕು. ಅದಕ್ಕನುಸರಿಸಿ ರಚನೆ A ಯಲ್ಲಿ 2 ಶಾಖೆಗಳೂ, ರಚನೆ B ಯಲ್ಲಿ 1 ಶಾಖೆಯಲ್ಲಿಯು ಲಭಿಸುವುದು. ಅಂದರೆ ರಚನೆ A ಯಲ್ಲಿ ನಂಬರ್ ನೀಡಿದ ರೀತಿಯನ್ನು ಸ್ವೀಕರಿಸಬೇಕು. (ಅಗತ್ಯ ಬಂದರೆ ಹೆಚ್ಚಿನ ಉದಾಹರಣೆಗಳನ್ನು ಮಕ್ಕಳಿಗೆ ಪರಿಚಯಿಸಬೇಕು)

b . ಬ್ಯೂಟ್ –2 ಈನ್ $CH_3—CH=CH—CH_3$

5 . $C_5H_{10}$

$CH_3 - CH_2 - CH_2 - CH = CH_2$

ಪೆಂಟೀನ್ (Pentene)



or



ಸೈಕ್ಲೋ ಪೆಂಟೇನ್ (Cyclopentane)

## ಮುಂದುವರಿದ ಚಟುವಟಿಕೆಗಳು

1.  2-ಮೀಥೈಲ್ ಬ್ಯೂಟ್ –1– ಈನ್ (2-Methylbut-1-ene)

 2-ಮೀಥೈಲ್ ಬ್ಯೂಟ್ –2– ಈನ್ (2-Methylbut-2-ene)

(ಇಲ್ಲಿ ಕಾರ್ಬನ್ ಸಂಕಲೆಗೆ ನಂಬರ್ ನೀಡುವಾಗ ದ್ವಿಬಂಧವಿರುವ ಕಾರ್ಬನ್ ಪರಮಾಣುವಿಗೆ ಮತ್ತು ಶಾಖೆಯನ್ನೊಳಗೊಂಡ ಕಾರ್ಬನ್ ಪರಮಾಣುವಿಗೆ ಅತ್ಯಂತ ಸಣ್ಣ ಸ್ಥಾನ ಸಂಖ್ಯೆ ಲಭಿಸಿದುದು ಗಮನಿಸಿದಿರಲ್ಲವೆ.)

 3-ಮೀಥೈಲ್ ಬ್ಯೂಟ್ –1– ಈನ್ (3-Methylbut-1-ene)

2. a. 4-ಮೀಥೈಲ್ ಹೆಪ್ಟ್–1– ಈನ್ (4-Methylhept-1-ene)

   b. 3-ಈಥೈಲ್ 5– ಮಿಥೈಲ್ ಹೆಪ್ಟೇನ್ (3-Ethyl-5-Methylheptane)

   (ಇಲ್ಲಿ ಎಡದಿಂದ ಬಲಕ್ಕೆ ನಂಬರ್ ನೀಡುವಾಗ 3–ಮೀಥೈಲ್, 5– ಈಥೈಲ್ ಎಂದೂ ಇದರ ವಿರುದ್ಧ ನಂಬರ್ ನೀಡುವಾಗ 5 ಮೀಥೈಲ್ 3– ಈಥೈಲ್ ಎಂದೂ ಸಿಗುವುದಿಲ್ಲವೆ ? ಅಕ್ಷರ ಮಾಲೆಯ ಕ್ರಮದಲ್ಲಿ ಈಥೈಲ್ ರೇಡಿಕಲ್‌ನ್ನು ಮೊದಲು ಪರಿಗಣಿಸಬೇಕು.)

   c. 4-ಈಥೈಲ್ 2– ಮೀಥೈಲ್ ಹೆಕ್ಸೇನ್ (4-Ethyl-2-Methylhexane)

   d. ಪೆಂಟ್ –1– ಐನ್ (Pent-1-yne)

   e. ಪ್ರೊಪಾನ್ –1– ಓಲ್ (Propan-1-ol)

   f. ಮಿಥೋಕ್ಸಿ ಈಥೇನ್ (Methoxyethane)

   g. ಹೆಕ್ಸನೋಯಿಕ್ ಆಸಿಡ್ (Hexanoicacid)

3. $C_4H_{10}O$

   a. $CH_3—CH_2—CH_2—CH_2—OH$ ಬ್ಯೂಟಾನ್ –1– ಓಲ್ (Butan-1-ol)

   b.  ಬ್ಯೂಟಾನ್ –2– ಓಲ್ (Butan-2-ol)

   c. $CH_3—CH_2—O—CH_2—CH_3$ ಈಥೋಕ್ಸಿ ಈಥೇನ್ (Ethoxyethane)

   d. $CH_3—CH_2—CH_2—O—CH_3$ ಮಿಥೋಕ್ಸಿ ಪ್ರೊಪೇನ್ (Methoxypropane)

   e.  2-ಮಿಥೈಲ್ ಪ್ರೊಪಾನ್ –1– ಓಲ್ (2-Methyl Propan-1-ol)

f.  2- ಮಿಥೈಲ್ ಪ್ರೊಪಾನ್ –2– ಓಲ್ (2-Methylpropan-2-ol)

g. $CH_3-CH-O-CH_3$ 2-ಮಿಥೋಕ್ಸಿ ಪ್ರೊಪೇನ್ (2-Methoxy propane)

$|$

$CH_3$

**ಪೊಸಿಶನ್ ಐಸೋಮೆರಿಸಂ**

1. a, b  2. b, f  3. a, f

4. d, g (d, g ಎಂಬಿವುಗಳನ್ನು ಮೆಟಾಮರ್‌ಗಳು (Metamers) ಎಂದೂ ಕರೆಯಬಹುದು. ಪಾಠ ಪುಸ್ತಕದಲ್ಲಿ Metamerism ಸೇರಿಸದಿರುವ ಕಾರಣ ಇವುಗಳನ್ನೂ ಪೊಸಿಶನ್ ಐಸೋಮರ್‌ಗಳಾಗಿ ಪರಿಗಣಿಸಬಹುದು.

**ಕಾರ್ಯವಿಧಾನ ಗುಂಪು ಐಸೋಮೆರಿಸಂ**

1. a, c  2. a, d  3. a, g  4. b, c  5. b, d

6. b, g  7. e, c  8. e, d  9. e, g

**ಚೈನ್ ಐಸೋಮೆರಿಸಂ**

1. a, e  2. a, f

**ಹೆಚ್ಚಿನ ಮಾಹಿತಿಗಾಗಿ**

a, e ಎಂಬೀ ಯೌಗಿಕಗಳಲ್ಲಿ –OH ರೇಡಿಕಲ್ ಪ್ರೈಮರಿ ಕಾರ್ಬನ್ ಪರಮಾಣುವಿನಲ್ಲಿ ಸೇರಿಕೊಂಡಿರುವುದು. ಆದರೆ ಪ್ರಧಾನ ಸಂಕಲೆಯ ಕಾರ್ಬನ್ ಪರಮಾಣುಗಳ ಸಂಖ್ಯೆಗಳೊಳಗೆ ವ್ಯತ್ಯಾಸವಿರುವುದು. ಆದುದರಿಂದ ಇವುಗಳು ಚೈನ್ ಐಸೋಮರ್‌ಗಳಾಗಿವೆ. ಅಂದರೆ a, f ಎಂಬೀ ಯೌಗಿಕಗಳು ಪೊಸಿಶನ್ ಐಸೋಮರುಗಳಾಗಲು ಕಾರಣ ಅವುಗಳಲ್ಲಿ –OH ಗುಂಪು ಕ್ರಮವಾಗಿ primary, tertiary ಪರಮಾಣುವಿನಲ್ಲಿ ಒಳಗೊಂಡಿರುವುದರಿಂದಾಗಿದೆ. a, f ಎಂಬೀ ಯೌಗಿಕಗಳ ಕಾರ್ಬನ್ ಸಂಕಲೆಯಲ್ಲಿ ವ್ಯತ್ಯಾಸವಿರುವುದರಿಂದ ಅವುಗಳನ್ನು ಚೈನ್ ಐಸೋಮರ್‌ಗಳಾಗಿಯೂ ಪರಿಗಣಿಸಲಾಗುವುದು. ಇದುವೇ b, f ಜೊತೆಗಳು ಪೊಸಿಶನ್ ಐಸೋಮರ್‌ಗಳಾಗಲು ಕಾರಣ.

**ಹೆಚ್ಚಿನ ಮಾಹಿತಿಗಾಗಿ**

## $1^0$, $2^0$, $3^0$, $4^0$ ಕಾರ್ಬನ್ ಪರಮಾಣುಗಳು

ಒಂದು ಸಾವಯವ ಯೌಗಿಕದಲ್ಲಿ ಕಾರ್ಬನ್ ಪರಮಾಣುಗಳು ಪರಸ್ಪರ ಬಂಧಿಸಲ್ಪಟ್ಟಿವೆಯಲ್ಲವೆ ? ಒಂದು ಕಾರ್ಬನ್ ಪರಮಾಣು, ಇನ್ನೊಂದು ಕಾರ್ಬನ್ ಪರಮಾಣುವಿನೊಂದಿಗೆ ಮಾತ್ರವೇ ಬಂಧಿಸಲ್ಪಟ್ಟಿರುವುದಾದರೆ ಆ ಕಾರ್ಬನ್‌ನ್ನು primary ಕಾರ್ಬನ್ ($1^0$) ಎಂದು ತಿಳಿಯಲ್ಪಡುವುದು. ಎರಡು ಕಾರ್ಬನ್ ಪರಮಾಣುಗಳೊಂದಿಗೆ ಬಂಧಿಸಲ್ಪಟ್ಟಿರುವ ಕಾರ್ಬನ್‌ನ್ನು secondary ಕಾರ್ಬನ್ ($2^0$) ಎಂದು ಕರೆಯುವರು. ಅದೇ ರೀತಿಯಲ್ಲಿ 3 ಕಾರ್ಬನ್ ಪರಮಾಣುಗಳೊಂದಿಗೆ ಬಂಧಿಸಲ್ಪಟ್ಟಿರುವ ಕಾರ್ಬನ್‌ನ್ನು tertiary ಕಾರ್ಬನ್ ($3^0$) ಎಂದೂ 4 ಕಾರ್ಬನ್ ಪರಮಾಣುಗಳೊಂದಿಗೆ ಸೇರಿರುವ ಕಾರ್ಬನ್‌ನ್ನು quaternary ಕಾರ್ಬನ್($4^0$) ಎಂದೂ ಕರೆಯುವರು.

ಕೆಳಗೆ ನೀಡಿರುವ ಸಾವಯವ ಯೌಗಿಕದ ರಚನಾ ಸೂತ್ರದಲ್ಲಿ $1^0, 2^0, 3^0, 4^0$ ಕಾರ್ಬನ್ ಪರಮಾಣುಗಳನ್ನು ಗುರುತಿಸಿರುವುದನ್ನು ಗಮನಿಸಿರಿ.




4. a, d - ಪೊಸಿಶನ್ ಐಸೋಮೆರಿಸಂ

 a, e - ಕಾರ್ಯವಿಧಾನ ಗುಂಪು ಐಸೋಮೆರಿಸಂ

 d, e - ಕಾರ್ಯವಿಧಾನ ಗುಂಪು ಐಸೋಮೆರಿಸಂ

 b, c - ಚೈನ್ ಐಸೋಮೆರಿಸಂ

5. a. ಮಿಥೋಕ್ಸಿ ಈಥೇನ್ (Methoxy ethane)

 ಪ್ರೊಪಾನ್ –1– ಓಲ್ (Propan-1-ol)

 b. ಇಲ್ಲಿ ರಚನಾ ಸೂತ್ರವು $C_3H_8O$ ಎಂದಾಗಿದೆ. ಆದರೆ ಕಾರ್ಯವಿಧಾನ ಗುಂಪುಗಳಲ್ಲಿ ವ್ಯತ್ಯಾಸವಿದೆ.

 c. ಕಾರ್ಯವಿಧಾನ ಗುಂಪು ಐಸೋಮೆರಿಸಂ

6. a. 

or  ಸೈಕ್ಲೋಪೆಂಟೇನ್ (Cyclopentane)

 b. 

or  ಸೈಕ್ಲೋಬ್ಯೂಟೀನ್ (Cyclobutene)

# 7

# ಸಾವಯವ ಯೌಗಿಕಗಳ ರಾಸಾಯನಿಕ ಕ್ರಿಯೆಗಳು

## *ಪೀಠಿಕೆ*

*ವಿವಿಧ ರೀತಿಯ ಹೈಡ್ರೋಕಾರ್ಬನ್‌ಗಳನ್ನು ಹೆಸರಿಸುವ ರೀತಿಯನ್ನು ತಿಳಿದುಕೊಂಡಿರಲ್ಲವೆ. ಈ ರೀತಿಯ ಹೈಡ್ರೋಕಾರ್ಬನ್‌ಗಳಿಂದ ವಿಭಿನ್ನವಾದ ಸಾವಯವ ಯೌಗಿಕಗಳು ಉಂಟಾಗುವುವು. ನಿತ್ಯ ಜೀವನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಾವು ಉಪಯೋಗಿಸುವ ಅನೇಕ ಪದಾರ್ಥಗಳು ಸಾವಯವ ರಸಾಯನ ಶಾಸ್ತ್ರದ ಕೊಡುಗೆಯಾಗಿವೆ. ಕೈಗಾರಿಕಾ ಪ್ರಾಧಾನ್ಯವಿರುವ ಅನೇಕ ಯೌಗಿಕಗಳ ತಯಾರಿಗಾಗಿ ವಿವಿಧ ಸಾವಯವ ರಾಸಾಯನಿಕ ಕ್ರಿಯೆಗಳನ್ನು ಉಪಯೋಗಿಸಲಾಗುತ್ತದೆ.*

*ಹೈಡ್ರೋಕಾರ್ಬನ್‌ಗಳ ಪ್ರಧಾನ ರಾಸಾಯನಿಕ ಕ್ರಿಯೆಗಳಾದ ಆದೇಶ ರಾಸಾಯನಿಕ ಕ್ರಿಯೆ, ಸಂಕಲನ ರಾಸಾಯನಿಕ ಕ್ರಿಯೆ, ಪೋಲಿಮರೈಸೇಶನ್, ಉರಿಯುವಿಕೆ, ಉಷ್ಣದಿಂದ ವಿಭಜನೆ ಎಂಬಿವುಗಳನ್ನು ಈ ಯೂನಿಟಿನಲ್ಲಿ ವಿವರಿಸಲಾಗುವುದು. ಪ್ರಧಾನ ಸಾವಯವ ಯೌಗಿಕಗಳಾದ ಆಲ್ಕೊಹಾಲ್, ಕಾರ್ಬೋಕ್ಸಿಲಿಕ್ ಏಸಿಡ್, ಎಸ್ಟರ್ ಎರೋಮೆಟಿಕ್ ಯೌಗಿಕಗಳು ಎಂಬಿವುಗಳ ಕುರಿತು ಇಲ್ಲಿ ಪ್ರತಿಪಾದಿಸಲಾಗಿದೆ.*

*ಮೆಥೆನೋಲಿನ ತಯಾರಿ, ಎಥೆನೋಲಿನ ಕೈಗಾರಿಕಾ ಮಟ್ಟದ ತಯಾರಿ, ಎಥೆನೋಯಿಕ್ ಏಸಿಡ್‌ನ ಕೈಗಾರಿಕಾ ಮಟ್ಟದ ತಯಾರಿ ಎಂಬಿವುಗಳನ್ನು ಈ ಯೂನಿಟಿನಲ್ಲಿ ವಿವರಿಸಲಾಗುವುದು. ಬೆನ್ಸೀನಿನ ರಚನೆಯೊಂದಿಗೆ ವಿವಿಧ ಏರೋಮೇಟಿಕ್ ಯೌಗಿಕಗಳ ರಚನೆಯನ್ನೂ ವಿವರಿಸಲಾಗುವುದು.*

# MODULE WISE PERIOD DISTRIBUTION

**ಒಟ್ಟು ಪೀರಿಯಡ್ –10**

## ಯೂನಿಟ್ – 7

## ಸಾವಯವ ಯೌಗಿಕಗಳ ರಾಸಾಯನಿಕ ಕ್ರಿಯೆಗಳು

**ಮೊಡ್ಯೂಲ್ – 1** **ಪೀರಿಯಡ್ – 6**

- ಆದೇಶಿಸುವ ರಾಸಾಯನಿಕ ಕ್ರಿಯೆಗಳು
- ಸಂಕಲನ ರಾಸಾಯನಿಕ ಕ್ರಿಯೆಗಳು
- ಪೋಲಿಮರೈಸೇಶನ್
- ಹೈಡ್ರೋಕಾರ್ಬನುಗಳ ಉರಿಯುವಿಕೆ
- ಉಷ್ಣದಿಂದ ವಿಭಜನೆ

**ಮೊಡ್ಯೂಲ್ –2** **ಪೀರಿಯಡ್ –4**

- ಕೆಲವು ಪ್ರಧಾನ ಸಾವಯವ ಯೌಗಿಕಗಳು
  - ಆಲ್ಕೋಹಾಲ್‌ಗಳು
  - ಕಾರ್ಬೋಕ್ಸಿಲಿಕ್ ಏಸಿಡ್‌ಗಳು
  - ಎಸ್ಟರುಗಳು
- ಏರೋಮೇಟಿಕ್ ಯೌಗಿಕಗಳು.

ಯೂನಿಟ್ ಫ್ರೇಂ

ಒಟ್ಟು ಪಿರೀಡ್ 10

| ಆಶಯಗಳು/ತಿಳುವಳಿಕೆಗಳು /ಪ್ರಕ್ರಿಯಾ ಸಾಮರ್ಥ್ಯ | ಕಲಿಕೆಯ ಚಟುವಟಿಕೆಗಳು/ತಂತ್ರಗಳು | ಕಲಿಕಾ ಸಾಮರ್ಥ್ಯ |
|---|---|---|
| **ಮೋಡ್ಯೂಲ್ – 1**<br>• ಮೀಥೇನ್ ಈಥೇನ್ ಮುಂತಾದ ಹೈಡ್ರೋಕಾರ್ಬನ್‌ಗಳ ಆದೇಶ ರಾಸಾಯನಿಕ ಕ್ರಿಯೆಗಳು | • ಚಾರ್ಟಿನ ವಿಶ್ಲೇಷಣೆ<br>• ಐಸಿಟಿ ಸಾಧ್ಯತೆಗಳನ್ನು ಉಪಯೋಗಿಸುವುದು.<br>• ವಿವಿಧ ಯೌಗಿಕಗಳ ಆದೇಶ ರಾಸಾಯನಿಕ ಕ್ರಿಯೆಗಳ ಮೂಲಕ ಲಭಿಸುವ ಉತ್ಪನ್ನಗಳ ಮಾದರಿಗಳನ್ನು Ball and stick model ಉಪಯೋಗಿಸಿ ತಯಾರಿಸುವುದು. | • ಮೀಥೇನ್, ಈಥೇನ್ ಮುಂತಾದ ಹೈಡ್ರೋಕಾರ್ಬನುಗಳ ಆದೇಶ ರಾಸಾಯನಿಕ ಕ್ರಿಯೆಯ ರಾಸಾಯನಿಕ ಸಮೀಕರಣವನ್ನು ಬರೆಯುವುದು. |
| • ಅಸಂತೃಪ್ತ ಯೌಗಿಕಗಳು ಸಂಕಲನ ರಾಸಾಯನಿಕ ಕ್ರಿಯೆಗೆ ಒಳಗಾಗಿ ಸಂತೃಪ್ತ ಯೌಗಿಕಗಳಾಗಿ ಬದಲಾಗುವುದು. | • ಅಸಂತೃಪ್ತ ಹೈಡ್ರೋಕಾರ್ಬನ್‌ಗಳು ಸಂಕಲನ ರಾಸಾಯನಿಕ ಕ್ರಿಯೆಯ ಮೂಲಕ ಸಂತೃಪ್ತ ಹೈಡ್ರೋಕಾರ್ಬನ್‌ಗಳಾಗಿ ಬದಲಾಗುವ ಕ್ರಿಯೆಯನ್ನು ರಾಸಾಯನಿಕ ಸಮೀಕರಣದ ಮೂಲಕ ಚರ್ಚಿಸುವುದು.<br>• ಅಸಂತೃಪ್ತ ಹೈಡ್ರೋಕಾರ್ಬನ್‌ಗಳು ಮತ್ತು $Cl_2$, $Br_2$ ಗಳೊಳಗಿನ ಸಂಕಲನ ಕ್ರಿಯೆಯನ್ನು ಚರ್ಚಿಸುವುದು.<br>• ಐಸಿಟಿ ಉಪಯೋಗಿಸುವುದು. | • ಸಂಕಲನ ರಾಸಾಯನಿಕ ಕ್ರಿಯೆಗಳ ರಾಸಾಯನಿಕ ಸಮೀಕರಣಗಳನ್ನು ಬರೆಯುವರು. ಸಂಕಲನ ಕ್ರಿಯೆ ಜರಗಿದರೆ ಲಭಿಸುವ ಉತ್ಪನ್ನಗಳನ್ನು ಊಹಿಸುವರು. |
| • ಹೈಡ್ರೋಕಾರ್ಬನ್‌ಗಳು ಪೋಲಿಮರೈಸೇಶನ್ ಕ್ರಿಯೆಗಳಿಗೆ ಒಳಗಾಗುವುದು.<br>• ವಿವಿಧ ಪೋಲಿಮರೈಸೇಶನ್ ಕ್ರಿಯೆಗಳಿಗೆ ಉದಾಹರಣೆಗಳನ್ನು ಕಂಡುಹಿಡಿಯುವರು.<br>• ವಿವಿಧ ಪೊಲಿಮರ್‌ಗಳ ಮೋನೊಮರ್‌ಗಳನ್ನು ಕಂಡುಹಿಡಿಯುವರು. | • ಪೋಲಿಮರ್‌ಗಳು ನಿತ್ಯಜೀವನದಲ್ಲಿ – ಚರ್ಚೆ ವಿಶ್ಲೇಷಣೆ<br>• ಪೋಲಿಮರೈಸೇಶನ್ ರಾಸಾಯನಿಕ ಕ್ರಿಯೆಗಳು ಚರ್ಚೆ ವಿಶ್ಲೇಷಣೆ, ಐಸಿಟಿ<br>• ರಾಸಾಯನಿಕ ಸಮೀಕರಣಗಳನ್ನು ಬರೆಯುವರು. | • ಪಿವಿಸಿ, ಪೊಲಿಥಿನ್, ಟೆಫ್ಲೋನ್ ಎಂಬೀ ಪೋಲಿಮರುಗಳು ಉಂಟಾಗುವ ರಾಸಾ ಯನಿಕ ಕ್ರಿಯೆಯ ಸಮೀಕರಣಗಳನ್ನು ಬರೆಯುವರು.<br>• ಪಿವಿಸಿ ಪೊಲಿಥಿನ್ ಟೆಫ್ಲೋನ್ ಎಂಬೀ ಪೋಲಿಮರುಗಳ ಮೋನೋ ಮರುಗಳನ್ನು ಪಟ್ಟಿ ಮಾಡುವರು. |
| • ಹೈಡ್ರೋ ಕಾರ್ಬನುಗಳ ಉರಿಯುವಿಕೆಯ ಫಲವಾಗಿ ನೀರು ಮತ್ತು ಕಾರ್ಬನ್ ಡೈ ಓಕ್ಸೈಡ್ ಉಂಟಾಗುವುದು. | • ಹೈಡ್ರೋಕಾರ್ಬನ್‌ಗಳ ಉರಿಯುವಿಕೆ ಚರ್ಚೆ<br>• ಇಂಧನಗಳ ಮಿತಿಮೀರಿದ ಉಪಯೋಗವನ್ನು ನಿಯಂತ್ರಿಸಬೇಕಾದ ಅಗತ್ಯ –ಚರ್ಚೆ | • ಹೈಡ್ರೋಕಾರ್ಬನುಗಳ ಉರಿಯುವಿಕೆಯ ರಾಸಾಯನಿಕ ಸಮೀಕರಣಗಳನ್ನು ಬರೆಯುವುದು. |
| • ಉಷ್ಣದಿಂದ ವಿಭಜನೆ – ಅಣುವಿಕ ದ್ರವ್ಯರಾಶಿ ಹೆಚ್ಚಿರುವ ಉನ್ನತ ಹೈಡ್ರೋಕಾರ್ಬನುಗಳು ಅಣುವಿಕ ದ್ರವ್ಯರಾಶಿ ಕಡಿಮೆ ಇರುವ ಕೆಳವರ್ಗದ ಹೈಡ್ರೋಕಾರ್ಬನ್‌ಗಳಾಗಿ ಬದಲಾಗುವುದು. | • ಚರ್ಚೆ ಕ್ರೋಢೀಕರಣ ಐಸಿಟಿ ಉಪಯೋಗಿಸಿ ಉಷ್ಣದಿಂದ ವಿಭಜನೆಯನ್ನು ಚರ್ಚಿಸುವುದು.<br>• ರಾಸಾಯನಿಕ ಸಮೀಕರಣಗಳನ್ನು ಬರೆಯುವುದು | • ಉಷ್ಣದಿಂದ ವಿಭಜನೆಗೆ ಒಳಗಾಗುವ ಕ್ರಿಯೆಗಳಿಗೆ ಉದಾಹರಣೆಗಳನ್ನು ನೀಡಲು ಸಾಧ್ಯವಾಗುವುದು. |

ಯೂನಿಟ್ ಫ್ರೇಂ

| ಆಶಯಗಳು/ತಿಳುವಳಿಕೆಗಳು /ಪ್ರಕ್ರಿಯಾ ಸಾಮರ್ಥ್ಯ | ಕಲಿಕೆಯ ಚಟುವಟಿಕೆಗಳು/ತಂತ್ರಗಳು | ಕಲಿಕಾ ಸಾಮರ್ಥ್ಯ |
|---|---|---|
| **ಮೋಡ್ಯೂಲ್ –2**<br>• ಪ್ರಧಾನ ಸಾವಯವ ಯೌಗಿಕಗಳು<br>• ಆಲ್ಕೋಹಾಲ್‌ಗಳು<br>• ಮೆಥೆನೋಲಿನ ತಯಾರಿ<br>• ಮೊಲಾಸಸ್‌ನು ಹುಳಿಬರಿಸಿ (ಫರ್‌ಮಂಟೇಶನ್) ಕೈಗಾರಿಕಾ ಮಟ್ಟದಲ್ಲಿ ಎಥೆನೋಲನ್ನು ತಯಾರಿಸುವುದು.<br>• ಎಥೆನೋಲಿನ ದುರುಪಯೋಗವನ್ನು ತಡೆಯಲು ಡಿನೇರಿಂಗ್.<br>• ಎಬ್ಸಲ್ಯೂಟ್ ಆಲ್ಕೊಹಾಲ್ ಪವರ್ ಆಲ್ಕೋಹಾಲ್ | • ಮೆಥೆನೋಲ್, ಎಥೆನೋಲ್ – ತಯಾರಿ ಐಸಿಟಿ ಚರ್ಚೆ<br>• ಡೀ ನೇಚರ್ಡ್ ಸ್ಪಿರಿಟ್, ಎಬ್ಸಲ್ಯೂಟ್ ಆಲ್ಕೋಹಾಲ್ ಪವರ್ ಆಲ್ಕೋಹೋಲ್ ಇವುಗಳ ಕುರಿತು ಟಿಪ್ಪಣಿ ತಯಾರಿಸುವುದು. | • ಮೆಥೆನೋಲಿನ ಕೈಗಾರಿಕಾ ಮಟ್ಟದ ತಯಾರಿಯಲ್ಲಿ ಉಪಯೋಗಿಸುವ ಪ್ರವರ್ತಕಗಳನ್ನು ಗುರುತಿಸಿ ಸಮೀಕರಣಗಳನ್ನು ಬರೆಯುವುದು.<br>• ಮೆಥೆನೋಲಿನ ಮತ್ತು ಎಥೆನೋಲಿನ ಉಪಯೋಗಗಳನ್ನು ಪಟ್ಟಿ ಮಾಡುವುದು.<br>• ಎಥೆನೋಲಿನ ಕೈಗಾರಿಕಾ ಮಟ್ಟದ ತಯಾರಿಯ ವಿವಿಧ ಘಟ್ಟಗಳನ್ನು ಬರೆಯುವರು.<br>• ರಾಸಾಯನಿಕ ಸಮೀಕರಣಗಳನ್ನು ಬರೆಯುವರು.<br>• ಡೀ ನೇಚರ್ಡ್ ಸ್ಪಿರಿಟ್ ಮತ್ತು ಪವರ್ ಆಲ್ಕೋಹಾಲ್‌ಗಳನ್ನು ಸ್ಪಷ್ಟಪಡಿಸುವುದು. |
| • ಕಾರ್ಬೋಕ್ಸಿಲಿಕ್ ಏಸಿಡ್‌ಗಳು, ಉದಾಹರಣೆಗಳು, ಅವುಗಳ IUPAC ಹೆಸರು. | • ಏಸಿಡುಗಳು–ಅದರ ಕಾರ್ಯ ವಿಧಾನ ಗುಂಪುಗಳು ಚರ್ಚೆ ಐಸಿಟಿ | • ಎಥೆನೋಯಿಕ್ ಏಸಿಡಿನ ಕೈಗಾರಿಕಾ ಮಟ್ಟದ ತಯಾರಿಯಲ್ಲಿ ವಿವಿಧ ಹಂತಗಳನ್ನು ಪಟ್ಟಿ ಮಾಡುವುದು. |
| • ಎಸ್ಟರಿಫಿಕೇಶನ್ –ಸಾವಯವ ಆಮ್ಲಗಳು ಮತ್ತು ಆಲ್ಕೋಹಾಲ್‌ಗಳು ಪರಸ್ಪರ ವರ್ತಿಸಿ ಎಸ್ಟರುಗಳು ಉಂಟಾಗುವುದು.<br>• ಎಸ್ಟರುಗಳಿಗೆ ಹಣ್ಣುಗಳ ಮತ್ತು ಹೂವುಗಳ ಪರಿಮಳವಿದೆ. | • ಎಸ್ಟರಿಫಿಕೇಶನ್ ರಾಸಾಯನಿಕ ಕ್ರಿಯೆಗಳು–ಚರ್ಚೆ<br>• ರಾಸಾಯನಿಕ ಕ್ರಿಯೆಗಳನ್ನು ಬರೆಯುವುದು. | • ಎಸ್ಟರಿಫಿಕೇಶನ್ ರಾಸಾಯನಿಕ ಸಮೀಕರಣಗಳನ್ನು ಬರೆಯುವುದು. |
| • ಎರೋಮೆಟಿಕ್ ಯೌಗಿಕಗಳು – ಬೆನ್ಸೀನಿನ ರಚನೆ. | • ಬೆನ್ಸೀನ್‌ನ ರಚನೆ–ಚರ್ಚೆ<br>• ಐಸಿಟಿ | • ಬೆನ್ಸೀನ್, ನೈಟ್ರೊಬೆನ್ಸೀನ್, ಕ್ಲೋರೊ ಬೆನ್ಸೀನ್ ಬೆನ್ಸೋಯಿಕ್ ಏಸಿಡ್, ಮಿಥೈಲ್ ಬೆನ್ಸೀನ್ ಮುಂತಾದವುಗಳ ರಚನೆಯನ್ನು ಬರೆಯುವರು. |

## ಯೂನಿಟಿನ ಕಡೆಗೆ

### ಮೊಡ್ಯೂಲ್ –1

**ಸಮಯ : 6 ಪೀರಿಯಡ್**

### ಆದೇಶ ರಾಸಾಯನಿಕ ಕ್ರಿಯೆಗಳು

ಸಂತೃಪ್ತ ಹೈಡ್ರೋಕಾರ್ಬನುಗಳು ಆದೇಶ ರಾಸಾಯನಿಕ ಕ್ರಿಯೆಗಳಲ್ಲಿ ಏರ್ಪಡುವುದು ಹೈಡ್ರೋಕಾರ್ಬನಿನಲ್ಲಿರುವ ಹೈಡ್ರಜನ್ ಪರಮಾಣುವನ್ನು ಕ್ಲೋರಿನ್, ಬ್ರೋಮಿನ್, ಫ್ಲೋರಿನ್ ಮುಂತಾದ ಪರಮಾಣುಗಳು ಆದೇಶಿಸುವುದು. ಕ್ಲೋರಿನ್, ಬ್ರೋಮಿನ್ ಮುಂತಾದವುಗಳೊಂದಿಗೆ ನಡೆಯುವ ಆದೇಶಿಸುವ ರಾಸಾಯನಿಕ ಕ್ರಿಯೆಗಳು ಸೂರ್ಯಪ್ರಕಾಶದ ಸಾನ್ನಿಧ್ಯದಲ್ಲಿ ನಡೆಯುವುದು. $CH_4$ ನ ball and stick model ತಯಾರಿಸಿ ಆದೇಶಿಸುವ ರಾಸಾಯನಿಕ ಕ್ರಿಯೆಯ ವಿವಿಧ ಹಂತಗಳನ್ನು ಮಕ್ಕಳಿಗೆ ಸ್ವಯಂ ಮಾಡಲು ಅವಕಾಶವನ್ನು ನೀಡುವುದು. ಪ್ರತಿಯೊಂದು ಯೌಗಿಕದ ರಚನೆಯನ್ನು ಬರೆಯುವುದು. ಇದೇ ರೀತಿಯಲ್ಲಿ ಈಥೇನ್‌ನಲ್ಲಿ ಜರಗುವ ಆದೇಶ ರಾಸಾಯನಿಕ ಕ್ರಿಯೆಯ ಸಮೀಕರಣಗಳನ್ನು ಮಕ್ಕಳು ಬರೆಯಲಿ. ಲಭಿಸುವ ಪ್ರತಿಯೊಂದು ಯೌಗಿಕದ IUPAC ಹೆಸರನ್ನು ಮಕ್ಕಳಿಗೆ ಬರೆಯಲು ಸಾಧ್ಯವಿದೆ.

$C_2H_6 + Cl_2 \rightarrow C_2H_5Cl + HCl$

$C_2H_5Cl + Cl_2 \rightarrow C_2H_4Cl_2 + HCl$

$C_2H_4Cl_2 + Cl_2 \rightarrow C_2H_3Cl_3 + HCl$

$C_2H_3Cl_3 + Cl_2 \rightarrow C_2H_2Cl_4 + HCl$

$C_2H_2Cl_4 + Cl_2 \rightarrow C_2HCl_5 + HCl$

$C_2HCl_5 + Cl_2 \rightarrow C_2Cl_6 + HCl$

### ಸಂಕಲನ ರಾಸಾಯನಿಕ ಕ್ರಿಯೆಗಳು

ಈಥೇನ್ ಮತ್ತು ಈಥೀನ್ ಎಂಬೀ ಯೌಗಿಕಗಳ ರಚನಾಸೂತ್ರಗಳನ್ನು ಬರೆಯಲು ಮಕ್ಕಳಿಗೆ ಸಾಧ್ಯವಾಗುವುದು.

$CH_3 - CH_3$, $CH_2 = CH_2$ ಈ ಎರಡೂ ಯೌಗಿಕಗಳ ರಾಸಾಯನಿಕ ಬಂಧದ ವೈಶಿಷ್ಟ್ಯಗಳನ್ನು ತರಗತಿಯಲ್ಲಿ ಚರ್ಚಿಸಬಹುದು.

ಈಥೀನಿನ ಕಾರ್ಬನ್–ಕಾರ್ಬನ್ ದ್ವಿಬಂಧವನ್ನು ಕಾರ್ಬನ್–ಕಾರ್ಬನ್ ಏಕಬಂಧವಾಗಿ ಬದಲಾಯಿಸಲು ಅದರ ಪ್ರತಿಯೊಂದು ಕಾರ್ಬನ್‌ಗೂ ಒಂದೊಂದು ಹೈಡ್ರಜನ್ ಪರಮಾಣುಗಳು ಸೇರಿಕೊಂಡರೆ ಸಾಕಾಗುವುದು. ನಿಕ್ಕೆಲ್ ಪ್ರೇರಕದ ಸಾನ್ನಿಧ್ಯದಲ್ಲಿ ಸಾಮಾನ್ಯ $140\,^0C$ ಉಷ್ಣತೆಯಲ್ಲಿ ಹೈಡ್ರಜನ್ ಪರಮಾಣುಗಳ ಸಂಕಲನ ಕ್ರಿಯೆಯು ನಡೆಯುವುದು.

ಇದೇ ರೀತಿಯಲ್ಲಿ ಪ್ರೊಪೀನ್ ಅಣುವಿಗೆ ಒಂದು $Cl_2$ ಅಣುವನ್ನು ಸಂಕಲನ ಕ್ರಿಯೆಯ ಮೂಲಕ ಸೇರಿಸಲು ಸಾಧ್ಯವಿದೆ. ಸಂಕಲನ ರಾಸಾಯನಿಕ ಕ್ರಿಯೆಯ ಮೂಲಕ ಉಂಟಾಗುವ ಉತ್ಪನ್ನಗಳು ಸಂತೃಪ್ತ ಸಾವಯವ ಯೌಗಿಕಗಳಾಗಿರಬಹುದು.

$CH_2 = CH_2 + Cl_2 \rightarrow CH_2Cl - CH_2Cl$ 1, 2–ಡೈಕ್ಲೋರೋ ಈಥೇನ್

$CH_2 = CH_2 + HCl \rightarrow CH_3 - CH_2Cl$ ಕ್ಲೋರೋ ಈಥೇನ್

$CH_3 - CH = CH_2 + H_2 \rightarrow CH_3 - CH_2 - CH_3$ ಪ್ರೊಪೇನ್

$CH_3 - CH = CH - CH_3 + HBr \rightarrow CH_3 - CHBr - CH_2 - CH_3$ 2-ಬ್ರೋಮೋ ಬ್ಯೂಟೇನ್

$CH \equiv CH + 2H_2 \rightarrow CH_3 - CH_3$ ಈಥೇನ್

ಮಕ್ಕಳಿಗೆ ಸುಲಭದಲ್ಲಿ ಅರ್ಥವಾಗಲು ಎರಡು ಹಂತಗಳಾಗಿ ಈ ಸಂಕಲನ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ನೀಡಲಾಗಿದೆ.

$CH \equiv CH + H_2 \rightarrow CH_2 = CH_2$ ಈಥೀನ್

$CH_2 = CH_2 + H_2 \rightarrow CH_3 - CH_3$ ಈಥೇನ್

**ಸಂಕಲನ ಕ್ರಿಯೆಗೆ ಸಂಬಂಧಿಸಿದ ಕೆಲವು ಹೆಚ್ಚಿನ ಮಾಹಿತಿಗಳು**

$CH_3 - CH = CH_2$ ಎಂಬ ಆಲ್ಕೀನ್ HCl, HBr, HI ಎಂಬಿವುಗಳೊಂದಿಗೆ ಸಂಕಲನ ಕ್ರಿಯೆಗೆ ಒಳಗಾಗುವುದು. ಉದಾ: HCl ನೊಂದಿಗೆ ವರ್ತಿಸಿ ಎರಡು ರೀತಿಯ ಉತ್ಪನ್ನಗಳನ್ನು ಉಂಟುಮಾಡಲು ಸಾಧ್ಯವಿದೆ.

1. $CH_3 - CH = CH_2 + HCl \rightarrow CH_3 - CH_2 - CH_2Cl$

2. $CH_3 - CH = CH_2 + HCl \rightarrow CH_3 - CHCl - CH_3$

Markovnikov rule ಉಪಯೋಗಿಸಿ ಈ ವಿಧದ ಆಲ್ಕೀನುಗಳ ಸಂಕಲನ ಕ್ರಿಯೆಯನ್ನು ವಿವರಿಸಲಾಗುವುದು. ದ್ವಿಬಂಧದ ಇಕ್ಕಡೆಗಳಲ್ಲಿರುವ ಕಾರ್ಬನ್ ಪರಮಾಣುಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದರೆ ಅವುಗಳನ್ನು Unsymmetrical ಆಲ್ಕೀನುಗಳೆಂದು ಕರೆಯುವರು. ಇವುಗಳು HCl ನೊಂದಿಗೆ ಸಂಕಲನ ಕ್ರಿಯೆಗೆ ಒಳಗಾಗುವಾಗ ಮುಖ್ಯವಾಗಿ ಹೈಡ್ರಜನ್ ಪರಮಾಣುಗಳು ಹೆಚ್ಚಿರುವ ಅಸಂತೃಪ್ತ ಕಾರ್ಬನಿಗೆ ಪುನಃ ಹೈಡ್ರಜನ್ ಸೇರಿಕೊಳ್ಳುವುದು.

$CH_3 - CH = CH_2 + HCl \rightarrow CH_3 - CHCl - CH_3$

ಇದು ಕಾರ್ಬೋನಿಯಂ ಅಯೋನುಗಳ ಸ್ಥಿರತೆಗೆ ಸಂಬಂಧಿಸಿ ವಿವರಿಸಲಾಗುವುದು.

$2^0$ ಕಾರ್ಬೋಕೇಟಯೋನಿಗೆ $(CH_3 - \overset{\oplus}{C}H - CH_3)$ $1^0$ ಕಾರ್ಬೋಕೇಟಯೋನಿಗಿಂತ $(CH_3 - CH_2 - \overset{\oplus}{C}H_2)$ ಸ್ಥಿರತೆ ಇರುವುದರಿಂದ

$$CH_3 - \underset{\displaystyle Cl}{\underset{|}{CH}} - CH_3$$

ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುವುದು. ಎರಡೂ ರೀತಿಯ ಕಾರ್ಬೋಕೇಟಯೋನುಗಳು ಇರುವುದರಿಂದ ಸಣ್ಣ ಪ್ರಮಾಣದಲ್ಲಿ $CH_3 - CH_2 - CH_2 - Cl$ ವು ಉಂಟಾಗುವುದು.

ಆದರೆ ಬೆನ್ಸೊಯಿಲ್ ಪೆರೋಕ್ಸೈಡ್

$$C_6H_5 - \overset{\overset{\displaystyle O}{||}}{C} - O - O - \overset{\overset{\displaystyle O}{||}}{C} - C_6H_5$$

ಗಳಂತ ಸಾವಯವ ಪೆರೋಕ್ಸೈಡಿನ ಸಾನ್ನಿಧ್ಯದಲ್ಲಿ HBr ಸಂಕಲನ ಕ್ರಿಯೆಯಲ್ಲಿ ಏರ್ಪಡುವಾಗ Markovnikov rule ಗೆ ವಿರುದ್ಧವಾದ ರೀತಿಯಲ್ಲಿ ಸಂಕಲನ ಕ್ರಿಯೆ ಜರಗುವುದು. (Anti - Markovnikov's addition). ಈ ಕ್ರಿಯೆಯು Kharasch effect/ Peroxide effect ಎಂದು ತಿಳಿಯಲಾಗಿದೆ.

$CH_3 - CH = CH_2 + HBr \rightarrow CH_3 - CH_2 - CH_2Br$ ಪೆರೋಕ್ಸೈಡಿನ ಸಾನ್ನಿಧ್ಯದಲ್ಲಿ ಫ್ರೀ ರೇಡಿಕಲ್ ಮೆಕಾನಿಸಂನ ಮೂಲಕ HBr ನ ಕ್ರಿಯೆಯು ನಡೆಯುವುದು $2^0$ ಫ್ರೀ ರೇಡಿಕಲ್‌ಗಳಿಗೆ $(CH_3 - \overset{*}{C}H - CH_2 - Br)$ ಸ್ಥಿರತೆ ಹೆಚ್ಚಿರುವುದರಿಂದ $CH_3 - CH_2 - CH_2 - Br$ ಹೆಚ್ಚಾಗಿ ಉಂಟಾಗುತ್ತದೆ.

## ಪೋಲಿಮರೈಸೇಶನ್

ನಿತ್ಯ ಜೀವನದಲ್ಲಿ ಪರಿಚಿತವಿರುವ ಕೆಲವು ಪೋಲಿಮರ್‌ಗಳನ್ನು ಪರಿಚಯಿಸುವುದರ ಮೂಲಕ ಉಪಯೋಗವನ್ನು ಪಟ್ಟಿ ಮಾಡಲು ಸಾಧ್ಯ. ಪೋಲಿಮರ್‌ಗಳು ಹೇಗೆ ಉಂಟಾಗುತ್ತವೆ ಎಂದು ಪೋಲಿಥೀನ್‌ನ ರಚನೆಯನ್ನುಪಯೋಗಿಸಿ ವಿವರಣೆ ನೀಡಲು ಸಾಧ್ಯವಾಗಬೇಕು. ವಿನೈಲ್ ಕ್ಲೋರೈಡ್ ಪೋಲಿವಿನೈಲ್ ಕ್ಲೋರೈಡ್ ಆಗಿ ಬದಲಾಗುವ ರಚನಾ ಸಮೀಕರಣಗಳನ್ನು ಬರೆಯಲು ಮಕ್ಕಳಿಗೆ ಸಾಧ್ಯವಾಗಬೇಕು.

ಸರಳವಾದ ಅನೇಕ ಅಣುಗಳು ಅನುಕೂಲ ಸಂದರ್ಭದಲ್ಲಿ ಸಂಯೋಜಿಸಿ ಸಂಕೀರ್ಣವಾದ ಅಣುಗಳು ಉಂಟಾಗುವ ಚಟುವಟಿಕೆಯೇ ಪೋಲಿಮರೈಸೇಶನ್. ಹೀಗೆ ಉಂಟಾಗುವ ಅಣುಗಳೇ ಪೋಲಿಮರ್‌ಗಳು. ಹೀಗೆ ಸಂಯೋಜಿಸಲ್ಪಡುವ ಸರಳ ಅಣುಗಳೇ ಮನೋಮರ್‌ಗಳು.

ಸಾಧಾರಣವಾಗಿ ನಾವು ಉಪಯೋಗಿಸುವ ಪಿ.ವಿ.ಸಿ. ಯಂತಹ ಕೆಲವು ಉತ್ಪನ್ನಗಳ ಹೆಸರುಗಳನ್ನು ಪಟ್ಟಿ ಮಾಡಲು ಸಾಧ್ಯವೇ ಎಂದು ಪರಿಶೋಧಿಸುವಿರಲ್ಲವೇ? ಉದಾಹರಣೆಯಾಗಿ ಪೋಲಿಥೀನ್, ಟೆಫ್ಲೋನ್, ರಬ್ಬರ್, ಪ್ರೋಟೀನ್.

ಪಿ.ವಿ.ಸಿ.ಯ ರಚನೆ, ವಿನೈಲ್ ಕ್ಲೋರೈಡ್‌ನ ಸಂಕಲನ ಕ್ರಿಯೆಯು ಪರಿಣಾಮವಾಗಿ ಉಂಟಾಗುವ ಯೌಗಿಕವಾಗಿ ಬರೆಯಲು ಮಕ್ಕಳಿಗೆ ಸಾಧ್ಯವಾಗಬೇಕು. ಅದೇ ರೀತಿ ಟೆಟ್ರಾಫ್ಲೂರೋ ಈಥೀನ್ ಅಣುಗಳು ಟೆಫ್ಲೋನ್ ಆಗುವ ರೀತಿಯನ್ನು ಸಮೀಕರಣ ರೂಪದಲ್ಲಿ ಬರೆಯುವುದು ಹೇಗೆಂದು ತರಗತಿಯಲ್ಲಿ ಚರ್ಚಿಸುವಿರಲ್ಲವೆ ? ಪಾಠ ಪುಸ್ತಕದ 7.2ನ್ನು ಪೂರ್ತಿಗೊಳಿಸುವಿರಲ್ಲವೆ ? ಇದಕ್ಕೆ ಹೆಚ್ಚಿನ ಪೋಲಿಮರ್‌ಗಳನ್ನು ಸೇರಿಸಲು ಸಾಧ್ಯವೆ ಎನ್ನುವುದನ್ನೂ ಪರಿಶೋಧಿಸಿರಿ.

## ಹೈಡ್ರೋಕಾರ್ಬನ್‌ಗಳ ಉರಿಯುವಿಕೆ

ಹೈಡ್ರೋಕಾರ್ಬನ್‌ಗಳನ್ನು ಸಾಧಾರಣವಾಗಿ ಇಂಧನಗಳಾಗಿ ಉಪಯೋಗಿಸುತ್ತಾರಲ್ಲವೆ ? ಇಂಧನಗಳು ಉರಿಯುವಾಗ ವಾಯುವಿನಲ್ಲಿರುವ ಓಕ್ಸಿಜನಿನೊಂದಿಗೆ ವರ್ತಿಸುತ್ತವೆ. ಹೀಗೆ ಉರಿಯುವಾಗ ಯಾವೆಲ್ಲ ಉತ್ಪನ್ನಗಳು ಲಭಿಸುತ್ತವೆ ಎಂಬ ಚರ್ಚೆಯಲ್ಲಿ ಇಂಧನಗಳ ಅಮಿತ ಉಪಯೋಗದಿಂದ ವಾತಾವರಣದ ಕಾರ್ಬನ್‌ಡೈ ಓಕ್ಸೈಡಿನ ಪ್ರಮಾಣ ಹೆಚ್ಚಾಗುತ್ತದೆ ಎಂಬುದನ್ನು ಚರ್ಚಿಸುವಿರಲ್ಲವೆ? ಉರಿಯುವಿಕೆ ಉಷ್ಣ ವಿಸರ್ಜಕ ಕ್ರಿಯೆಯಾಗಿದೆ ಎಂದೂ ಇದು ಇಂಧನಗಳಾಗಿ ಹೈಡ್ರೋಕಾರ್ಬನ್‌ಗಳನ್ನೂ ಉಪಯೋಗಿಸುವುದರ ಕಾರಣವೆಂದೂ ಸೂಚಿಸಬೇಕು. ಮೀಥೇನ್ ಉರಿಯುವಾಗ ನಡೆಯುವ ಕ್ರಿಯೆಯ ಸಮೀಕರಣವು$CH_4 + 2\ O_2 \rightarrow CO_2 + 2\ H_2O$ ಆಗಿದೆಯಲ್ಲವೆ.

| ಮೋನೋಮರ್ | ಪೋಲಿಮರ್ | ಉಪಯೋಗ |
|---|---|---|
| ವಿನೈಲ್ ಕ್ಲೋರೈಡ್ | PVC | ಪೈಪುಗಳು, ಇಲೆಕ್ಟ್ರೋನಿಕ್ ಉಪಕರಣಗಳು<br>ಬಕೆಟುಗಳು ಎಂಬಿವುಗಳ ನಿರ್ಮಾಣ |
| ಈಥೀನ್ | ಪೋಲಿಥೀನ್ | ಚೀಲಗಳು, ರೈನ್ ಕೋಟ್, ಬ್ಯಾಗುಗಳು |
| ಐಸೋಪ್ರೀನ್ | ಪ್ರಾಕೃತಿಕ ರಬ್ಬರ್ (ಪೋಲಿ ಐಸೋಪ್ರೀನ್) | ಟಯರ್, ಚಪ್ಪಲಿ ಮುಂತಾದ ಹಲವಾರು ಉತ್ಪನ್ನಗಳನ್ನು ತಯಾರಿಸುವುದು. |

ಇದೇ ರೀತಿ,

$C_4H_{10}$ ಉರಿಯುವಾಗ ನಡೆಯುವ ರಾಸಾಯನಿಕ ಸಮೀಕರಣವನ್ನು ಬರೆಯಿರಿ.

$C_4H_{10} + O_2 \rightarrow CO_2 + H_2O$

ಕಾರ್ಬನ್ ಮತ್ತು ಹೈಡ್ರಜನ್ ಪರಮಾಣುಗಳನ್ನು ಬ್ಯಾಲೆನ್ಸ್ ಮಾಡೋಣವೆ?

$C_4H_{10} + O_2 \rightarrow 4\ CO_2 + 5\ H_2O$

ಉತ್ಪನ್ನಗಳ ಕಡೆಯಲ್ಲಿರುವ ಓಕ್ಸಿಜನ್ ಪರಮಾಣುಗಳ ಸಂಖ್ಯೆ ಮತ್ತು ಪ್ರವರ್ತಕಗಳ ಕಡೆಯಲ್ಲಿರುವ ಓಕ್ಸಿಜನ್ ಪರಮಾಣುಗಳ ಸಂಖ್ಯೆಯನ್ನು ಸಮಾನವಾಗಿಸುವ.

$$C_4H_{10} + \frac{13}{2}O_2 \rightarrow 4\ CO_2 + 5\ H_2O$$

ಅಂದರೆ

$2\ C_4H_{10} + 13\ O_2 \rightarrow 8\ CO_2 + 10\ H_2O$

ಆಲ್ಕೈನುಗಳ ದಹನದ ಸಮತೋಲನಗೊಳಿಸಿದ ಸಮೀಕರಣವನ್ನು ಬರೆಯಲು ಕೆಳಗೆ ನೀಡಲಾದ ಸಾಮಾನ್ಯ ಸೂತ್ರವನ್ನು ಉಪಯೋಗಿಸಬಹುದಾಗಿದೆ.

$$C_nH_{2n+2} + \frac{(3n+1)}{2}O_2 \rightarrow nCO_2 + (n+1)\ H_2O$$

ಇಲ್ಲಿ 'n' ಎಂಬುವುದು ಪೂರ್ಣ ಸಂಖ್ಯೆಯಾಗಿದೆ (ಆಲ್ಕೇನುಗಳ ಕಾರ್ಬನ್ ಪರಮಾಣುಗಳ ಸಂಖ್ಯೆ)

**ಉಷ್ಣದಿಂದ ವಿಭಜನೆ**

ವಾಯುವಿನ ಅಸಾನ್ನಿಧ್ಯದಲ್ಲಿ ಬಿಸಿ ಮಾಡುವಾಗ ಅಣುವಿಕ ದ್ರವ್ಯರಾಶಿ ಹೆಚ್ಚಿರುವ ಕೆಲವು ಹೈಡ್ರೋಕಾರ್ಬನ್‌ಗಳು ವಿಭಜನೆ ಹೊಂದಿ ಅಣುವಿಕ ದ್ರವ್ಯರಾಶಿ ಕಡಿಮೆ ಇರುವ ಹೈಡ್ರೋಕಾರ್ಬನ್‌ಗಳಾಗಿ ಬದಲಾಗುತ್ತವೆ.

ಕೆಲವು ಉದಾಹರಣೆಗಳನ್ನು ಗಮನಿಸಿರಿ.

$CH_3 - CH_2 - CH_3 \rightarrow CH_4 + CH_2 = CH_2$

$CH_3 - CH_2 - CH_2 - CH_3 \rightarrow CH_4 + CH_3 - CH = CH_2$

ಉಷ್ಣದಿಂದ ವಿಭಜನೆ ನಡೆಯುವಾಗ ಉತ್ಪನ್ನಗಳಲ್ಲಿ ಒಂದು ಸಂತೃಪ್ತ ಹೈಡ್ರೋಕಾರ್ಬನ್ ಆಗಿರುವುದು ಯಾಕೆಂದು ತಿಳಿಯಲು ಮಕ್ಕಳು ಈ ಯೌಗಿಕದ ರಚನೆಯನ್ನು ಚಿತ್ರಿಸಿ ಚರ್ಚಿಸುವಿರಲ್ಲವೆ ? ಐ.ಸಿ.ಟಿ.ಯನ್ನು ಇಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಲು ಸಾಧ್ಯ.

ಉಷ್ಣದಿಂದ ವಿಭಜನೆಯ ಪರಿಣಾಮವಾಗಿ ಯಾವೆಲ್ಲ ಉತ್ಪನ್ನಗಳು ಉಂಟಾಗುತ್ತವೆ ಎಂದು ವಿಭಜನೆಗೆ ಒಳಗಾಗುವ ಹೈಡ್ರೋಕಾರ್ಬನ್‌ಗಳ ಸ್ವಭಾವ, ಉಷ್ಣತೆ ಒತ್ತಡ ಎಂಬಿವುಗಳನ್ನು ಆಶ್ರಯಿಸಿರುತ್ತದೆ. ಅಡುಗೆ ಅನಿಲವಾದ ಬ್ಯೂಟೇನನ್ನು ಹೀಗೆ ಉನ್ನತ ಹೈಡ್ರೋಕಾರ್ಬನುಗಳ ಉಷ್ಣ ವಿಭಜನೆಯ ಮೂಲಕ ಉತ್ಪಾದಿಸಲು ಸಾಧ್ಯವಿದೆ.

ಹೈಡ್ರೋಕಾರ್ಬನ್ ಪೋಲಿಮರ್‌ಗಳಾದ ಪ್ಲಾಸ್ಟಿಕ್‌ಗಳನ್ನೂ ಉಷ್ಣ ವಿಭಜನೆಗೆ ಒಳಪಡಿಸಿ ಸರಳ ಹೈಡ್ರೋಕಾರ್ಬನ್‌ಗಳಾಗಿ ಬದಲಾಯಿಸಲು ಸಾಧ್ಯವಾಗುವುದು. ಉಷ್ಣದಿಂದ ವಿಭಜನೆ ರಾಸಾಯನಿಕ ಕ್ರಿಯೆಗಳ ಪ್ರಧಾನವಾದ ಒಂದು ಉಪಯೋಗವಾಗಿದೆ. ಇದನ್ನು ತರಗತಿಯಲ್ಲಿ ಚರ್ಚೆಗೆ ಒಳಪಡಿಸಬಹುದು.

ಹೈಡ್ರೋಕಾರ್ಬನ್‌ಗಳ ರಾಸಾಯನಿಕ ಕ್ರಿಯೆಗಳಿಗೆ ಸಂಬಂಧಿಸಿ, ಪಾಠಪುಸ್ತಕದ ಪಟ್ಟಿ 7.3, 7.4 ಎಂಬಿವುಗಳನ್ನು ಭರ್ತಿ ಮಾಡಿ ತರಗತಿಯಲ್ಲಿ ಚರ್ಚಿಸುವುದು ಹೈಡ್ರೋಕಾರ್ಬನ್‌ಗಳ ರಾಸಾಯನಿಕ ಕ್ರಿಯೆಗಳ ಒಂದು ಕ್ರೋಡೀಕರಣದಂತೆ ಆಗಬಹುದು.

## ಪ್ರಧಾನವಾದ ಕೆಲವು ಸಾವಯವ ಯೌಗಿಕಗಳು

### ಆಲ್ಕೋಹಾಲ್‌ಗಳು

ಮೆಥನೋಲ್, ಇಥನೋಲ್ ಎಂಬ ಯೌಗಿಕಗಳ ರಚನಾ ಸೂತ್ರಗಳನ್ನು ಮಕ್ಕಳಿಗೆ ಬರೆಯಲು ಸಾಧ್ಯವಿದೆ. ಪ್ರೇರಕದ ಸಾನ್ನಿಧ್ಯದಲ್ಲಿ ಕಾರ್ಬನ್ ಮೋನೋಕ್ಸೈಡ್ ಹೈಡ್ರಜನಿನೊಂದಿಗೆ ಸೇರಿದಾಗ ಮೆಥನೋಲ್ ಲಭಿಸುವುದು.

ಸಾವಯವ ಯೌಗಿಕಗಳ ತಯಾರಿ, ಮದ್ಯ, ಪೈಂಟ್, ಇಂಧನ, ಔಷಧಿಗಳ ದ್ರಾವಕವಾಗಿ, ಎಸ್ಟರುಗಳ ತಯಾರಿ ಮುಂತಾದ ವಿವಿಧ ಅಗತ್ಯಗಳಿಗೆ ಎಥೆನೋಲನ್ನು ಉಪಯೋಗಿಸುತ್ತಾರೆ ಎಂಬ ತಿಳುವಳಿಕೆಯು ಮಕ್ಕಳಲ್ಲಿ ಮೂಡಬೇಕು.

$$CH \equiv CH + H_2 \longrightarrow CH_2 = CH_2$$

$$CH_3Cl + Cl_2 \longrightarrow CH_2Cl_2 + HCl$$

$$nCH_2 = CH_2 \longrightarrow -[CH_2-CH_2]_n-$$

$$CH_4 + 2O_2 \longrightarrow CO_2 + 2H_2O$$

$$CH_2 = CH_2 + H_2 \longrightarrow CH_3-CH_3$$

| ಪ್ರವರ್ತಕಗಳು | ಉತ್ಪನ್ನಗಳು | ರಾಸಾಯನಿಕ ಕ್ರಿಯೆಯ ಹೆಸರು |
|---|---|---|
| $CH_3-CH_3 + Cl_2$ | $CH_3-CH_2Cl + HCl$ | ಆದೇಶ ರಾಸಾಯನಿಕ ಕ್ರಿಯೆ |
| $C_2H_6 + O_2$ | $CO_2 + H_2O$ | ಉರಿಯುವಿಕೆ |
| $nCH_2 = CH_2$ | $-[CH_2-CH_2]_n-$ | ಪೋಲಿಮರೈಸೇಶನ್ |
| $CH_3-CH_2-CH_3$ | $CH_2 = CH_2 + CH_4$ | ಉಷ್ಣದಿಂದ ವಿಭಜನೆ |
| $CH \equiv CH + H_2$ | $CH_2 = CH_2$ | ಸಂಕಲನ ಕ್ರಿಯೆ |

## ಮೋಡ್ಯೂಲ್ 2

**ಸಮಯ : 4 ಪಿರೀಡ್**

### ಇಥೆನೋಲಿನ ಕೈಗಾರಿಕಾ ಮಟ್ಟದ ತಯಾರಿ

ಮೊಲಾಸಸನ್ನು ಹುಳಿಬರಿಸುವಿಕೆಗೆ ಒಳಪಡಿಸಿ ಎಥೆನೋಲನ್ನು ತಯಾರಿಸುತ್ತಾರೆ. ಯೀಸ್ಟನ್ನು ಬೆರೆಸಿ ನಡೆಯುವ ಕ್ರಿಯೆಯೇ ಹುಳಿ ಬರಿಸುವಿಕೆ. ಸಕ್ಕರೆಯ ತಯಾರಿಯ ಸಂದರ್ಭದಲ್ಲಿ ಸಕ್ಕರೆಯನ್ನು ಬೇರ್ಪಡಿಸಿದ ಬಳಿಕ ಲಭಿಸುವ ದ್ರಾವಣವೇ ಮೊಲಾಸಸ್.

ಹುಳಿ ಬರಿಸುವಿಕೆ (ಫರ್ಮಂಟೇಶನ್) ನಡೆಯುವ ನಿತ್ಯಜೀವನದ ಕೆಲವು ಸಂದರ್ಭಗಳನ್ನು ಇಲ್ಲಿ ಸೂಚಿಸಬಹುದು. ದೋಸೆ ಹಿಟ್ಟು ಹುಳಿ ಬರುವುದು ಮತ್ತು ಬೇಕರಿಗಳಲ್ಲಿ ಕೆಲವು ತಿಂಡಿಗಳನ್ನು ತಯಾರಿಸುವುದು ಇದಕ್ಕೆ

ಉದಾಹರಣೆಯಾಗಿ ಹೇಳಬಹುದು.

$$C_{12}H_{22}O_{11} + H_2O \xrightarrow{\text{ಇನ್‌ವರ್ಟೇಸ್}} C_6H_{12}O_6 + C_6H_{12}O_6$$

ಮೊಲಾಸೆಸ್ ಸಕ್ಕರೆ — ಗ್ಲುಕೋಸ್ ಫ್ರಕ್ಟೋಸ್

$$C_6H_{12}O_6 \xrightarrow{\text{ಝೈಮೇಸ್}} 2\,C_2H_5\text{-}OH + 2\,CO_2$$

ಗ್ಲುಕೋಸ್ — ಎಥನೋಲ್

ಎಥೆನೋಲಿನ ಕೈಗಾರಿಕಾ ಮಟ್ಟದ ತಯಾರಿಯನ್ನು ಐ.ಸಿ.ಟಿ. ಸಾಧ್ಯತೆಗಳನ್ನು ಉಪಯೋಗಿಸಿ ಚೆನ್ನಾಗಿ ಮನವರಿಕೆ ಮಾಡಿಕೊಡಬಹುದು.

ಎಥೆನೋಲಿನ ಕೈಗಾರಿಕಾ ಮಟ್ಟದ ತಯಾರಿಯನ್ನು ವಿವರಿಸುವ ಸಂದರ್ಭದಲ್ಲಿ ಮದ್ಯಪಾನಕ್ಕೆ ಇಥೆನೋಲನ್ನು ದುರುಪಯೋಗಪಡಿಸುವುದರ ಕುರಿತು ತರಗತಿಯಲ್ಲಿ ಚರ್ಚೆ ಮಾಡಬಹುದು. ಮದ್ಯಪಾನದ ದೋಷ ಪರಿಣಾಮಗಳನ್ನೂ ಕ್ರೋಡೀಕರಿಸಬಹುದು.

ವಾಶ್, ರೆಕ್ಟಿಫೈಡ್ ಸ್ಪಿರಿಟ್, ಅಬ್ಸಲ್ಯೂಟ್ ಆಲ್ಕೋಹಾಲ್, ಪವರ್ ಆಲ್ಕೋಹಾಲ್‌ಗಳು ಏನೆಂಬುದನ್ನು ವಿವರಿಸಲು ಮಕ್ಕಳಿಗೆ ಸಾಧ್ಯವಾಗಬೇಕು.

## ಕಾರ್ಬೋಕ್ಸಿಲಿಕ್ ಏಸಿಡ್‌ಗಳು

ಇವು ಕಾರ್ಬೋಕ್ಸಿಲಿಕ್ ಕಾರ್ಯವಿಧಾನ ಗುಂಪು ($-COOH$ )ಒಳಗೊಂಡಿರುವ ಯೌಗಿಕಗಳಾಗಿವೆ. $CH_3-COOH$, $CH_3-CH_2-COOH$ ಎಂಬೀ ಯೌಗಿಕಗಳ IUPAC ಹೆಸರುಗಳು ಅನುಕ್ರಮವಾಗಿ ಎಥೆನೋಯಿಕ್ ಏಸಿಡ್, ಪ್ರೊಪೆನೋಯಿಕ್ ಏಸಿಡ್ ಆಗಿದೆ ಎಂದು ಮಕ್ಕಳಿಗೆ ತಿಳಿದಿದೆ.

5-8% ಪ್ರಬಲತೆ ಇರುವ ಎಥೆನೋಯಿಕ್ ಏಸಿಡ್ ವಿನೀಗರ್ ಆಗಿದೆ. ಎಥೆನೋಯಿಕ್ ಏಸಿಡ್ ($CH_3-COOH$), ಫೋರ್ಮಿಕ್ ಏಸಿಡ್ ($H-COOH$) ಮುಂತಾದ ಓರ್ಗಾನಿಕ್ ಏಸಿಡುಗಳನ್ನು ಪರಿಚಯ ಮಾಡಬೇಕು. ಕೆಲವು ಸಾವಯವ ಯೌಗಿಕಗಳ ರಚನೆಯನ್ನು ಕೆಳಗೆ ಕೊಡಲಾಗಿದೆ.

ಟಾರ್ಟಾರಿಕ್ ಏಸಿಡ್

CH(OH)COOH
|
CH(OH)COOH

ಸಿಟ್ರಿಕ್ ಏಸಿಡ್

$CH_2COOH$
|
C(OH) COOH
|
$CH_2$ COOH

ಲ್ಯಾಕ್ಟಿಕ್ ಏಸಿಡ್

$CH_3$ CH(OH)COOH

ಓಕ್ಸಾಲಿಕ್ ಎಸಿಡ್ $\begin{array}{l} COOH \\ | \\ COOH \end{array}$

ಮಾಲಿಕ್ ಎಸಿಡ್ $\begin{array}{l} CH(OH)\ COOH \\ | \\ CH_2\ COOH \end{array}$

ಕಾರ್ಬೋಕ್ಸಿಲಿಕ್ ಎಸಿಡುಗಳನ್ನು ಅವುಗಳಲ್ಲಿ ಅಡಕವಾಗಿರುವ ಕಾರ್ಬೋಕ್ಸಿಲಿಕ್ ಗುಂಪುಗಳ ಆಧಾರದಲ್ಲಿ ಮೋನೋ ಕಾರ್ಬೋಕ್ಸಿಲಿಕ್ ಎಸಿಡ್, ಡೈ ಕಾರ್ಬೋಕ್ಸಿಲಿಕ್ ಎಸಿಡ್ ಎಂಬ ರೀತಿಯಲ್ಲಿ ವರ್ಗೀಕರಿಸಬಹುದು.

**ಎಥೆನೋಯಿಕ್ ಎಸಿಡಿನ ತಯಾರಿ**

ಎಥೆನೋಲನ್ನು ಉತ್ಕರ್ಷಿಸಿ ಎಥೆನೋಯಿಕ್ ಎಸಿಡನ್ನು ತಯಾರಿಸಬಹುದು.

$$CH_3 - CH_2 - OH \xrightarrow[{[O]}]{K_2Cr_2O_7/H^+} CH_3 - CHO \xrightarrow{[O]} CH_3COOH$$

ಇಥೆನೋಯಿಕ್ ಎಸಿಡ್‌ನ್ನು ತಯಾರಿಸಲು ಇತರ ಅನೇಕ ವಿಧಾನಗಳಿವೆ.

$$C_2H_5\,OH + O_2 \xrightarrow[{[O]}]{\text{Acetobactor bacteria}} CH_3 - COOH$$

ಪ್ರೇರಕದ ಸಹಾಯದಿಂದ ಎಥೆನೋಲನ್ನು ಹುಳಿ ಬರಿಸುವಂತೆ ಮಾಡಿದಾಗ ದುರ್ಬಲವಾದ ಎಥೆನೋಯಿಕ್ ಎಸಿಡ್ (ವಿನೀಗರ್) ಲಭಿಸುತ್ತದೆ. ಎಥೆನೋಯಿಕ್ ಎಸಿಡಿಗೆ ವಿವಿಧ ಉಪಯೋಗಗಳಿವೆ.

**ಎಸ್ಟರುಗಳು**

ಆಲ್ಕೋಹಾಲ್‌ಗಳು ಮತ್ತು ಸಾವಯವ ಎಸಿಡುಗಳು ಪರಸ್ಪರ ವರ್ತಿಸಿದಾಗ ಎಸ್ಟರುಗಳು ಲಭಿಸುತ್ತವೆ. ಎಸ್ಟರುಗಳಿಗೆ ಹಣ್ಣುಗಳ ಮತ್ತು ಹೂಗಳ ಪರಿಮಳವಿದೆ.

ಎಥೆನೋಯಿಕ್ ಎಸಿಡ್ ಮತ್ತು ಎಥೆನೋಲ್‌ಗಳ ನಡುವೆ ರಾಸಾಯನಿಕ ಕ್ರಿಯೆ ಜರಗಿದಾಗ ಈಥೈಲ್ ಎಥೆನೋಯೇಟ್ ಎಂಬ ಎಸ್ಟರ್ ಉಂಟಾಗುವ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಮಕ್ಕಳಿಗೆ ಬರೆಯಲು ಸಾಧ್ಯವಾಗಬೇಕು.

ಎಸ್ಟರುಗಳ ಸಾಮಾನ್ಯ ಸೂತ್ರವನ್ನು $R - COO - R^1$ $(R - C - O - R^1)$ ಎಂದು ಸೂಚಿಸಬಹುದು. ಇಲ್ಲಿ $R, R^1$ ಎಂಬಿವುಗಳು ಒಂದೇ ರೀತಿಯ ಅಥವಾ ವಿಭಿನ್ನ ರೀತಿಯ alkyl/aryl ಗುಂಪುಗಳನ್ನು ಸೂಚಿಸುತ್ತವೆ.

$-\overset{\overset{O}{||}}{C}-O-$ ಅಥವಾ $-COO-$ ಎಂಬುವುದನ್ನು ಎಸ್ಟರಿನ ಕಾರ್ಯವಿಧಾನ ಗುಂಪಾಗಿ ಪರಿಗಣಿಸಬಹುದು. ಎಸ್ಟರುಗಳಿಗೆ IUPAC ಹೆಸರುಗಳನ್ನು ನೀಡುವಾಗ $-COOR^1$ ಕಾರ್ಯವಿಧಾನ ಗುಂಪಾಗಿ ಪರಿಗಣಿಸಿ ಆಲ್ಕೈಲ್ ಆಲ್ಕನೋಯೇಟ್ ಎಂದು ಹೆಸರಿಸಲಾಗುವುದು.

$$CH_3-CO\boxed{OH+H}O-CH_2-CH_3 \rightarrow CH_3-COO-CH_2-CH_3+H_2O$$

(ಈಥೈಲ್ ಇಥೆನೋಯೇಟ್)

ಎಸ್ಟರುಗಳು ಉಂಟಾಗುವ ಸಂದರ್ಭದಲ್ಲಿ ಏಸಿಡ್ ಗುಂಪಿನ – OHಮತ್ತು ಆಲ್ಕೋಹಾಲಿನ –H ಸೇರಿ ನೀರಿನ ಅಣು ಉಂಟಾಗುತ್ತದೆ.

ಸುಗಂಧ ದ್ರವ್ಯಗಳು, ಹಣ್ಣಿನ ರಸ ಎಂಬಿವುಗಳ ತಯಾರಿಯಲ್ಲಿ ಹಾಗೂ ಆಹಾರ ವಸ್ತುಗಳಿಗೆ ರುಚಿ ಹಾಗೂ ಪರಿಮಳವನ್ನೂ ನೀಡಲು ಎಸ್ಟರುಗಳನ್ನು ಪ್ರಧಾನವಾಗಿ ಉಪಯೋಗಿಸುತ್ತಾರೆ.

**ಕೆಲವು ಎಸ್ಟರುಗಳು ಮತ್ತು ಅವುಗಳ ಪರಿಮಳ**


3-Methylbutylethanate (bananas)


Octylacetate (oranges)


Ethylbutyrate (pineapple)


Methylbutyrate (apple)


Methylenthranilate (grape)


Pentylbutyrate (apricot, strawberry)


Pentylacetate (pears)


Methylsalicylate (wintergreen)

ಪಾಠಪುಸ್ತಕದಲ್ಲಿ ನೀಡಲಾದ ರಚನಾ ಸೂತ್ರಗಳಿಂದ $CH_3-CH_2-COO-CH_3$, $CH_3-CH_2-CH_2-COO-CH_3$ ಎಂಬಿವುಗಳು ಎಸ್ಟರುಗಳನ್ನೂ ಸೂಚಿಸುತ್ತವೆ ಎಂದು ಮಕ್ಕಳು ಮನಗಾಣಲಿ.

ಎಸ್ಟರುಗಳ ತಯಾರಿಗೆ ಅಗತ್ಯವಾದ ರಾಸಾಯನಿಕ ವಸ್ತುಗಳನ್ನು ಕಂಡುಕೊಳ್ಳಲಿರುವ ಚಟುವಟಿಕೆಗಳಲ್ಲಿ ಹೆಚ್ಚಿನ ಸ್ಪಷ್ಟತೆ ನೀಡಲು ಗಮನಿಸಬೇಕು.

ಕೆಲವು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ.

ಉದಾ: 1 $CH_3 - CH_2 - COO - CH_3$ ಎಂಬ ಎಸ್ಟರ್ ಲಭಿಸಲಿರುವ ರಾಸಾಯನಿಕ ಕ್ರಿಯೆಯ ಸಮೀಕರಣವು .

$$CH_3 - CH_2 - COOH + HO - CH_3 \rightarrow CH_3 - CH_2 - COO - CH_3$$

ಪ್ರೊಪೊನೋಯಿಕ್ ಏಸಿಡ್ ಮೆಥೆನೋಲ್ ಮೀಥೈಲ್ ಪ್ರೊಪೆನೋಯೇಟ್

ಉದಾ: 2 $CH_3 - CH_2 - CH_2 - COOH + HO - CH_3 \rightarrow CH_3 - CH_2 - CH_2 - COO - CH_3$

ಬೂಟೆನೋಯಿಕ್ ಏಸಿಡ್ ಮೆಥೆನೋಲ್ ಮೀಥೈಲ್ ಬ್ಯೂಟೆನೋಯೇಟ್

ಉದಾ: 1ರಲ್ಲಿ ಕೊಟ್ಟಿರುವ $CH_3 - CH_2 - COO - CH_3$ ನಿಂದ ವಿಭಿನ್ನವಾದ ಎಸ್ಟರ್ $CH_3 - CH_2 - OOC - CH_3$ ಆಗಿದೆಯೆಂದು ಕೆಳಗೆ ನೀಡಲಾದ ರಾಸಾಯನಿಕ ಸಮೀಕರಣದಿಂದ ಸ್ಪಷ್ಟವಲ್ಲವೆ?

ಉದಾ : 3 $CH_3 - CH_2 - OH + HOOC - CH_3 \rightarrow CH_3 - CH_2 - OOC - CH_3$

ಎಥೆನೋಲ್ ಎಥೆನೋಯಿಕ್ ಏಸಿಡ್ ಈಥೈಲ್ ಇಥೆನೋಯೇಟ್

ಉದಾ: 4 ಗಮನಿಸಿರಿ

$$CH_3 - OH + HOOC - CH_2 - CH_3 \rightarrow CH_3 - OOC - CH_2 - CH_3$$

